ವಿಶ್ವವಾಣಿ
ವಿಶ್ವಾಸವೇ ವಿಶ್ವ

ದಾರಿದೀಪೋಕ್ತಿ

ನಿಮ್ಮ ಸೋಲನ್ನು ಹಿನ್ನಡೆ ಎಂದು ಭಾವಿಸಬೇಕಿಲ್ಲ. ಆದರೆ ಅದನ್ನು ನೀವು ನಿಮ್ಮ ಜೀವನದ ಬಹು ದೊಡ್ಡ ಪಾಠ ಎಂದು ಪರಿಗಣಿಸಿದರೆ, ಅದರಿಂದ ಕಲಿಯುವುದು, ಗಳಿಸುವುದು ಬೆಟ್ಟದಷ್ಟು. ಹೀಗಾಗಿ ಪ್ರತಿ ಸೋಲೂ ಅಂದು ಕಲಿಕೆಯ ಅನುಭವ.

ವಕ್ರತುಂಡೋಕ್ತಿ

ತಡವಾಗಿ ಹೋಗುವುದೆಂದರೆ ನಮ್ಮ ಆಗಮನವನ್ನು ಎದುರು ನೋಡುವವರಿಗಿಂತ ನಮ್ಮ ಸಮಯವೇ ಅಮೂಲ್ಯ ಎಂದು ಭಾವಿಸಿದಂತೆ

ಪುಟ ತೆರೆದಂತೆ...

ಪಕ್ಷದಲ್ಲಿ ತಾಳಮೇಳ ತರುವವರ್‍ಯಾರು?
ಅಶ್ವತ್ಥಕಟ್ಟೆ
ರಂಜಿತ್ ಎಚ್. ಅಶ್ವತ್ಥ
ಸಂ.ಪುಟ | 6

ತ್ಯಾಗ, ಕರುಣೆಯ ಮಹಾಸಾಗರ ತಾಯಿ
ವಾತ್ಸಲ್ಯ
ಪ್ರೊ. ಸಿ. ಶಿವರಾಜು
ಸಂ.ಗಮ | 7

ಮಾತಂದ್ರೆ ಮಾತು

ಕುಡಿಯುವ ನೀರು ಜನರ ಮೂಲಭೂತ ಹಕ್ಕು. ನೀರಿನ ಸಮಸ್ಯೆಯಿಂದ ಬೆಂಗಳೂರಿನ ಜನರು ತತ್ತರಿಸಿದ್ದಾರೆ. ಅವರ ಸಮಸ್ಯೆ ಬಗೆಹರಿಸುವುದು ನಮ್ಮ ಕರ್ತವ್ಯ. ಹನಿ ನೀರಾವರಿ ಮೂಲಕ ಮಧ್ಯ ಕರ್ನಾಟಕದ ಜಿಲ್ಲೆಗಳಿಗೆ ನೀರುಣಿಸುವ ಭದ್ರಾ ಮೇಲ್ದಂಡೆ ಯೋಜನೆಯನ್ನು ರಾಷ್ಟ್ರೀಯ ಯೋಜನೆಯನ್ನಾಗಿ ಘೋಷಿಸಬೇಕು. ಅಗತ್ಯ ಅನುದಾನ ನೀಡಬೇಕು.

-ದೇವೇಗೌಡ
ರಾಜ್ಯಸಭೆಯಲ್ಲಿ ಮಾಜಿ ಪ್ರಧಾನಿ ಭಾಷಣ

ಕೇಂದ್ರ ಅನುಮತಿ ಕೊಟ್ಟರೆ ಮೇಕೆದಾಟು ಜಾರಿ: ಸಿದ್ದು

ಕಾವೇರಿ, ಕಬಿನಿ ಜಲಾಶಯಗಳಿಗೆ ಸಿಎಂ, ಡಿಸಿಎಂ ಬಾಗಿನ

ತ.ನಾಡು ಜತೆ ಚರ್ಚೆಗೆ ಸಿದ್ಧ

ವಿಶ್ವವಾಣಿ ವರದಿ ಮಂಡ್ಯ/ಮೈಸೂರು

ಮೇಕೆದಾಟು ಯೋಜನೆ ಜಾರಿ ಕುರಿತು ತಮಿಳುನಾಡು ಜೊತೆ ಮಾತುಕತೆ ನಡೆಸಲು ತಮ್ಮ ಸರಕಾರ ಸಿದ್ಧವಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟಪಡಿಸಿದ್ದಾರೆ.

ಕಾವೇರಿ ಜಲಾನಯನ ಪ್ರದೇಶದಲ್ಲಿ ಉತ್ತಮ ಮಳೆಯಾದ ಹಿನ್ನೆಲೆಯಲ್ಲಿ ಭರ್ತಿಯಾದ ಮಂಡ್ಯ ಜಿಲ್ಲೆಯ ಕೃಷ್ಣರಾಜ ಸಾಗರ ಜಲಾಶಯಕ್ಕೆ ಡಿಸಿಎಂ ಡಿ.ಕೆ ಶಿವಕುಮಾರ್ ಹಾಗೂ ಸಂಪುಟದ ಸಚಿವರು, ಶಾಸಕರೊಂದಿಗೆ ಸೋಮವಾರ ಸಿಎಂ ಬಾಗಿನ ಅರ್ಪಿಸಿದರು. ಈ ವೇಳೆ ಮಾತನಾಡಿದ ಅವರು, ಮೇಕೆದಾಟು ಜಾರಿ ವಿಷಯದಲ್ಲಿ ಸೌಹಾರ್ದಯುತ ಚರ್ಚೆಗೆ ಸರಕಾರ ಸಿದ್ಧ. ಆದರೆ ಈ ಯೋಜನೆಯಿಂದ ನೆರೆ ರಾಜ್ಯದ ಹಿತಾಸಕ್ತಿಗೆ ಧಕ್ಕೆಯಾಗುವುದಿಲ್ಲವಾದರೂ ತಮಿಳುನಾಡು ಸರಕಾರವೇ ಮುಂದೆ ಬರುತ್ತಿಲ್ಲ. ಕೇಂದ್ರ ಸರ್ಕಾರ ಮಂಜೂರಾತಿ ಕೊಟ್ಟರೆ ಯೋಜನೆಯನ್ನು ಅನುಷ್ಠಾನಗೊಳಿಸುವುದು ಖಚಿತ ಎಂದು ಭರವಸೆ ನೀಡಿದರು.

ತಮಿಳುನಾಡು ಅಡ್ಡಗಾಲು: ತಮಿಳುನಾಡು ಪ್ರತಿ ಬಾರಿಯೂ ಕಾವೇರಿ ನೀರಿಗೆ ತಗಾದೆ ತೆಗೆಯುತ್ತದೆ. → 4

ಕಬಿನಿ ಮರ್ಯಾದೆ ಉಳಿಸಿದೆ

ಮೈಸೂರು ಜಿಲ್ಲೆಯ ಎಚ್.ಡಿ.ಕೋಟೆ ತಾಲೂಕಿನಲ್ಲಿರುವ ಕಬಿನಿ ಜಲಾಶಯಕ್ಕೂ ಸಿಎಂ ಸಿದ್ದರಾಮಯ್ಯ ಬಾಗಿನ ಅರ್ಪಿಸಿದರು. ಎಚ್.ಡಿ ಕೋಟೆ ತಾಲ್ಲೂಕಿನ ಬೀಚನಹಳ್ಳಿಯಲ್ಲಿರುವ ಕಬಿನಿ ಜಲಾಶಯಕ್ಕೆ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ ಒಟ್ಟಾಗಿ ಬಾಗಿನ ಸಮರ್ಪಿಸಿದರು. ಈ ವೇಳೆ ಮಾತನಾಡಿದ ಡಿಸಿಎಂ ಶಿವಕುಮಾರ, ಕಬಿನಿ ಜಲಾಶಯ ನಮ್ಮೆಲ್ಲರ ಮರ್ಯಾದೆ ಉಳಿಸಿದೆ . ರಾಜ್ಯ ಸರ್ಕಾರ ತಮಿಳುನಾಡಿಗೆ ನೀರು ಬಿಡಬೇಕಿತ್ತು. ಕಬಿನಿ ಡ್ಯಾಂ ತುಂಬಿದ್ದರಿಂದ ತಮಿಳುನಾಡಿಗೆ ನೀರು ಬಿಡಲು ಅನುಕೂಲವಾಯಿತು ಎಂದರು.ಈ ವೇಳೆ ಸಚಿವರಾದ ಮಹಾದೇವಪ್ಪ, ಚೆಲುವರಾಯಸ್ವಾಮಿ, ಕೆ. ವೆಂಕಟೇಶ್, ಶಾಸಕರಾದ ಅನಿಲ್‌ಕುಮಾರ್, ರವಿಶಂಕರ್, ಎ.ಆರ್. ಕೃಷ್ಣಮೂರ್ತಿ, ಹರೀಶ್‌ಗೌಡ, ನರೇಂದ್ರ ಸ್ವಾಮಿ ಉಪಸ್ಥಿತರಿದ್ದರು.

ದೇವೇಗೌಡರಿಗೂ ಮುಡಾ ನಿವೇಶನ

ಕೆಆರ್‌ಎಸ್ ಮತ್ತು ಕಬಿನಿ ಜಲಾಶಯಗಳಿಗೆ ಬಾಗಿನ ಸಮರ್ಪಣೆಗೆ ಮೊದಲು ಮೈಸೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಸಿಎಂ ಸಿದ್ದರಾಮಯ್ಯ ಅವರು, ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡರೂ ಮುಡಾ ನಿವೇಶನದ ಫಲಾನುಭವಿ ಎಂದು ಹೊಸ ಬಾಂಬ್ ಸಿಡಿಸಿದರು. ಪುಟ್ಟಯ್ಯ ಸಿಐಟಿಬಿ ಅಧ್ಯಕ್ಷರಾಗಿದ್ದಾಗ ದೇವೇಗೌಡರು ತಮ್ಮ ಕುಟುಂಬಕ್ಕೆ ಎಷ್ಟು ಸೈಟ್ ಬರೆಸಿಕೊಂಡಿದ್ದಾರೆ. ಪಟ್ಟಿ ಕೊಡಲೇ ಎಂದು ಹೇಳುವ ಮೂಲಕ ಸಿಎಂ ತಮ್ಮ ಮೇಲಿನ ಆರೋಪಕ್ಕೆ ತಿರುಗೇಟು ನೀಡಿದರು. ದೇವೇಗೌಡರಿಗೆ ಎಷ್ಟು ಸೈಟ್ ಹೋಗಿದೆ ಗೊತ್ತಾ? ಎಂದು ಹೇಳಿ ಎಲ್ಲರನ್ನೂ ಚಕಿತಗೊಳಿಸಿದರು. ಕುಮಾರಸ್ವಾಮಿ 40 ವರ್ಷದ ಹಿಂದೆ ಮುಡಾ ಸೈಟ್ ಪಡೆದಿದ್ದಾರೆ, ಅದರ ಸ್ವಾಧೀನ ಪತ್ರವನ್ನು ಪಡೆದುಕೊಂಡಿದ್ದಾರೆ. ಈಗ ಇಲ್ಲ ಎಂದು ಸುಳ್ಳು ಹೇಳಿದರೆ ಹೇಗೆ ಎಂದು ಪ್ರಶ್ನಿಸಿದರು.

ತುಂಬಿದ ಕಾವೇರಿ: ಸಿಎಂ ಸಿದ್ದರಾಮಯ್ಯ ಹರ್ಷ

ಕಾವೇರಿ ನದಿ ನಮ್ಮೆಲ್ಲರ ಜೀವನದಿ. ಇಂದು ತುಂಬಿ ಹರಿಯುತ್ತಿದೆ. ಒಂದು ಲಕ್ಷ ಕ್ಯುಸೆಕ್‌ಗೂ ಹೆಚ್ಚು ನೀರು ಹೋಗುತ್ತಿದೆ. 49.452 ಟಿಎಂಸಿ ಸಾಮರ್ಥ್ಯದ ಕನ್ನಂಬಾಡಿ ಕಟ್ಟೆ ಪೂರ್ಣ ತುಂಬಿದೆ. ಕಳೆದ ವರ್ಷ ತುಂಬಿರಲಿಲ್ಲ. ಇಂದು ಅತ್ಯಂತ ಸಂತೋಷದಿಂದ ಕಾವೇರಿ ಮಾತೆಗೆ ಪೂಜೆ ಸಲ್ಲಿಸಿ ಬಾಗಿನ ಅರ್ಪಣೆ ಮಾಡಿದ್ದೇವೆ. ಪ್ರತಿವರ್ಷ ಇದೇ ರೀತಿ ತುಂಬಲಿ ಎಂದು ಪ್ರಾರ್ಥನೆಯನ್ನೂ ಮಾಡಿದ್ದೇವೆ. ಕೆಲವು ವರ್ಷ ಪ್ರಕೃತಿಯ ವೈಪರೀತ್ಯದಿಂದ ಜಲಾಶಯಗಳು ತುಂಬಿಲ್ಲ. ನಾನು 3 ನೇ ಬಾರಿ ಬಾಗಿನ ಅರ್ಪಿಸಿದ್ದೇನೆ. ಕೆಲವು ಸಾರಿ ನಮ್ಮ ನಿರೀಕ್ಷೆಯಷ್ಟು ಮಳೆ ಬಾರದಿದ್ದಾಗ ಜಲಾಶಯ ತುಂಬಿಲ್ಲ ಎಂದರು.

ಮತ್ತೊಂದು ಪದಕದತ್ತ ಮನು-ಸರಬ್‌ಜೋತ್ ಚಿತ್ತ

ಪ್ಯಾರಿಸ್: ಫ್ರಾನ್ಸ್‌ನಲ್ಲಿ ನಡೆಯುತ್ತಿರುವ ಒಲಿಂಪಿಕ್ಸ್‌ನಲ್ಲಿ ಭಾರತಕ್ಕೆ ಸೋಮವಾರ ಮಿಶ್ರ ಫಲ ದೊರೆತಿದೆ. ಭಾನುವಾರ ನಡೆದಿದ್ದ 10ಮೀ. ಶೂಟಿಂಗ್‌ನಲ್ಲಿ ಕಂಚು ಗೆದ್ದುಕೊಟ್ಟಿದ್ದ ಮನು ಭಾಕರ್ ಅವರು ಇನ್ನೋರ್ವ ಶೂಟರ್ ಸರಬ್‌ಜೋತ್ ಅವರೊಂದಿಗೆ ಮಿಶ್ರ ವಿಭಾಗದ 10 ಮೀ. ಶೂಟಿಂಗ್‌ನಲ್ಲಿ ಕಂಚು ಸುತ್ತಿಗೆ ಲಗ್ಗೆ ಇಟ್ಟಿದ್ದಾರೆ. ಆ ಮೂಲಕ ಶೂಟಿಂಗ್‌ನಲ್ಲಿ ಇನ್ನೊಂದು ಪದಕದ ಆಸೆ ಮೂಡಿಸಿದ್ದಾರೆ.

ಅರ್ಜುನ್‌ಗೆ ನಿರಾಶೆ

ಶೂಟಿಂಗ್‌ನ ಇನ್ನೊಂದು ಸ್ಪರ್ಧೆಯಲ್ಲಿ ಫೈನಲ್‌ಗೇರಿದ್ದ ಅರ್ಜುನ್ ಬುಬಾಟ್ ಅವರು ಕೂದಲೆಳೆಯಲ್ಲಿ ಪದಕ ಕಳೆದುಕೊಂಡಿದ್ದಾರೆ. ಅವರು 4ನೇ ಸ್ಥಾನಕ್ಕೆ ತಲುಪಿದರೆ, ಇನ್ನೋರ್ವ ಫೈನಲಿಸ್ಟ್ ರಮಿತಾ ಜಿಂದಾಲ್ 7ನೇ ಸ್ಥಾನಕ್ಕೆ ತೃಪ್ತಿಪಟ್ಟಿದ್ದಾರೆ.

ಸಾತ್ವಿಕ್-ಚಿರಾಗ್ ಕ್ವಾ. ಫೈನಲ್‌ಗೆ

ಬ್ಯಾಡ್ಮಿಂಟನ್‌ನಲ್ಲಿ ಸಾತ್ವಿಕ್-ಚಿರಾಗ್ ಜೋಡಿ ಎದುರಾಳಿಯ ಗಾಯದಿಂದ ಪಂದ್ಯ ರದ್ದುಗೊಂಡ ನಂತರ ನೇರವಾಗಿ ಕ್ವಾರ್ಟರ್ ಫೈನಲ್‌ಗೆ ಲಗ್ಗೆ ಇಟ್ಟಿದ್ದಾರೆ. ಇನ್ನೊಂದೆಡೆ ಲಕ್ಷ್ಯ ಸೇನ್ ಅವರು ಕರಾಗ್ಗಿ ಅವರೊಂದಿಗೆ ಗೆಲ್ಲುವ ಮೂಲಕ ಮುನ್ನಡೆ ಸಾಧಿಸಿದ್ದಾರೆ.

ಹಾಕಿ: ಅರ್ಜೆಂಟೀನಾ ವಿರುದ್ಧ ಡ್ರಾ

ಹಾಕಿ ವಿಭಾಗದಲ್ಲಿ ಕೊನೆಯಲ್ಲಿ ಗಳಿಸಿದ ಗೋಲಿನ ನಂತರ ಭಾರತ ಅರ್ಜೆಂಟೀನಾ ವಿರುದ್ಧ ಡ್ರಾ ಸಾಧಿಸಿದೆ. ಉಳಿದಂತೆ ಆರ್ಚರಿ ವಿಭಾಗದಲ್ಲಿ ಭಾರತದ ಮಹಿಳೆಯರು ಹಾಗೂ ಪುರುಷರು ಸೋಲನುಭವಿಸಿದ್ದಾರೆ. ಟೆನಿಸ್ ವಿಭಾಗದಲ್ಲಿ ಭಾರತೀಯ ಪುರುಷರ ಪಯಣ ಅಂತ್ಯಗೊಂಡಿದೆ.

ಟೆನಿಸ್ ಹಿರಿಯಣ್ಣ ನಿವೃತ್ತಿ

ಕನ್ನಡಿಗ ರೋಹನ್ ಬೋಪಣ್ಣ ಟೆನಿಸ್‌ಗೆ ನಿವೃತ್ತಿ ಘೋಷಿಸಿದ್ದಾರೆ. ಪ್ಯಾರಿಸ್ ಒಲಿಂಪಿಕ್ಸ್ ಸಿಂಗಲ್ಸ್ ಮತ್ತು ಡಬಲ್ಸ್‌ನಲ್ಲಿ ಮೊದಲ ಸುತ್ತಿನಲ್ಲಿಯೇ ಸೋತ ಬಳಿಕ ಟೆನಿಸ್ ಹಿರಿಯಣ್ಣ ಬೋಪಣ್ಣ ಅವರು ಈ ನಿರ್ಧಾರಕ್ಕೆ ಬಂದಿದ್ದಾರೆ.

ಕಮಲ ಚಕ್ರವ್ಯೂಹದಲ್ಲಿ ದೇಶ ಬಂಧಿ: ರಾಹುಲ್ ವಾಗ್ದಾಳಿ

ಕುರುಕ್ಷೇತ್ರ ಉಲ್ಲೇಖಿಸಿ ಲೋಕಸಭೆಯಲ್ಲಿ ಭಾಷಣ

ದೆಹಲಿ: ಲೋಕಸಭೆಯಲ್ಲಿನ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ ಸೋಮವಾರ ಸಂಸತ್‌ನಲ್ಲಿ 'ಕುರುಕ್ಷೇತ್ರ ಯುದ್ಧದಲ್ಲಿನ ಚಕ್ರವ್ಯೂಹ' ಉಲ್ಲೇಖಿಸಿ ಪ್ರಧಾನಿ ನರೇಂದ್ರ ಮೋದಿ, ಎನ್‌ಡಿಎ ಸರಕಾರ, ಕೇಂದ್ರ ಬಜೆಟ್ ವಿರುದ್ಧ ವಾಗ್ದಾಳಿ ನಡೆಸಿದರು.

ಕುರುಕ್ಷೇತ್ರದಲ್ಲಿ 'ಪದ್ಮವ್ಯೂಹ' ರಚಿಸಲಾಗಿತ್ತು. ಆದರೆ, ಇಲ್ಲಿ ಮೋದಿ ಅಂಥದೇ ವ್ಯೂಹ ರಚಿಸಿದ್ದಾರೆ. ಅದನ್ನು ಪದ್ಮ ಬದಲು 'ಕಮಲ'ವ್ಯೂಹ ಎನ್ನಬಹುದು. ಆ ವ್ಯೂಹದಲ್ಲಿ ಸಿಲುಕಿ ಭಾರತ ನಲುಗುತ್ತಿದೆ, ಜನತೆ ಭಯದಲ್ಲಿ ಬದುಕುತ್ತಿದ್ದಾರೆ ಎಂದು ಗಂಭೀರ ಆರೋಪ ಮಾಡಿದರು. ಕೇಂದ್ರ ಬಜೆಟ್ ಬಗ್ಗೆ ಮಾತನಾಡಿದ ರಾಹುಲ್, ಮಹಾಭಾರತದಲ್ಲಿ ಬರುವ ಕುರುಕ್ಷೇತ್ರ ಯುದ್ಧದಲ್ಲಿ ಚಕ್ರವ್ಯೂಹಕ್ಕೆ 'ಪದ್ಮವ್ಯೂಹ' ಎಂಬ ಹೆಸರೂ ಇತ್ತು. ಪ್ರಧಾನಿ ಮೋದಿ ಸದಾ ತಮ್ಮ ಎದೆ ಮೇಲೆ ಧರಿಸುವ ಕಮಲವೂ ಅದೇ 'ವ್ಯೂಹ'ವನ್ನು ಪ್ರತಿನಿಧಿಸುತ್ತದೆ. ಈ ವ್ಯೂಹದ ಮೂಲಕ ದೇಶದ ಜನರನ್ನು ಬಂಧನದಲ್ಲಿ ಇರಿಸಲಾಗಿದೆ. 21ನೇ ಶತಮಾನದಲ್ಲಿ ಈ ಕಮಲವ್ಯೂಹ ಭಾರತವನ್ನು ಹಿಡಿದಿಟ್ಟುಕೊಂಡಿದೆ ಎಂದು ಟೀಕಿಸಿದರು. → 4

ಆಧುನಿಕ ಚಕ್ರವ್ಯೂಹ

ಆಧುನಿಕ ಯುಗದಲ್ಲಿ ನಿರುದ್ಯೋಗ ಮತ್ತು ನೀಟ್ ಪ್ರಶ್ನೆಪತ್ರಿಕೆ ಸೋರಿಕೆ ಚಕ್ರವ್ಯೂಹದಲ್ಲಿ

ಯುವಕರು ಸಿಲುಕಿದ್ದಾರೆ. ಸಾಲದ ಚಕ್ರಚ್ಯೂಹದಲ್ಲಿ ರೈತರು, ತೆರಿಗೆ ಚಕ್ರವ್ಯೂಹದಲ್ಲಿ ಮಧ್ಯಮ ವರ್ಗ, ತೆರಿಗೆ ಭಯೋತ್ಪಾದನೆ ಚಕ್ರವ್ಯೂಹದಲ್ಲಿ ಮಧ್ಯಮ, ಸಣ್ಣ, ಸೂಕ್ಷ್ಮ ಉದ್ಯಮಗಳು (ಎಂಎಸ್‌ಎಂಇ), ಅಗ್ನಿಪಥ್ ಚಕ್ರವ್ಯೂಹದಲ್ಲಿ ಯೋಧರು, ಅನ್ಯಾಯದ ಚಕ್ರವ್ಯೂಹದಲ್ಲಿ ಎಸ್‌ಸಿ-ಎಸ್‌ಟಿ, ಒಬಿಸಿ, ಅಲ್ಪಸಂಖ್ಯಾತರು ಸಿಲುಕಿ ನರಳುತ್ತಿದ್ದಾರೆ ಎಂದು ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ ಕೇಂದ್ರ ಸರಕಾರದ ವಿರುದ್ಧ ಕಿಡಿಕಾರಿದರು.

ಸಿಎಂ ಸಿದ್ದು, ಡಿಸಿಎಂ ಡಿಕೆಶಿ ಇಂದು ದೆಹಲಿಗೆ

ಬೆಂಗಳೂರು: ಕೇಂದ್ರ ಸರಕಾರದ ವಿರುದ್ಧ ಸಮರ ಸಾರಿರುವ ಕಾಂಗ್ರೆಸ್ ಇದೀಗ, ಕಾಂಗ್ರೆಸ್ ಆಡಳಿತದಲ್ಲಿರುವ ಎಲ್ಲ ರಾಜ್ಯಗಳಲ್ಲಿ ಕೇಂದ್ರ ಸರಕಾರದ ವಿರುದ್ಧ ಜನಾಂದೋಲನ ಮೂಡಿಸಲು ಮುಂದಾಗಿದೆ. ಈ ನಿಟ್ಟಿನಲ್ಲಿ ಎಐಸಿಸಿ ವರಿಷ್ಠರು, ಕಾಂಗ್ರೆಸ್ ಆಡಳಿತದ ಮುಖ್ಯಮಂತ್ರಿಗಳ ಸಭೆಯನ್ನು ಮಂಗಳವಾರ ದೆಹಲಿಯಲ್ಲಿ ಕರೆದಿದ್ದಾರೆ. ಸಭೆಯಲ್ಲಿ ಭಾಗವಹಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಮಂಗಳವಾರ ಬೆಳಗ್ಗೆ ದೆಹಲಿಗೆ ತೆರಳಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಅತ್ಯಾಚಾರ ಪ್ರಕರಣ: ಹೈಕೋರ್ಟ್ ಆದೇಶ

ಬೆಂಗಳೂರು: ಅತ್ಯಾಚಾರಕ್ಕೆ ಒಳಗಾದ ಸಂತ್ರಸ್ತೆಯರ ಖಾಸಗಿತನದ ಹಕ್ಕನ್ನು ರಕ್ಷಣೆ ಮಾಡಬೇಕಾಗಿದ್ದು, ಆಸ್ಪತ್ರೆಗಳಲ್ಲಿ ಮಹಿಳಾ ವೈದ್ಯರಿಂದಲೇ ವೈದ್ಯಕೀಯ ಪರೀಕ್ಷೆ ನಡೆಸುವ ಕುರಿತಂತೆ ಭಾರತೀಯ ನಾಗರಿಕ ಸುರಕ್ಷಾ ಸಂಹಿತೆಯ(ಬಿಎನ್‌ಎಸ್‌ಎಸ್) ಸೆಕ್ಷನ್ 184ನ್ನು ತಿದ್ದುಪಡಿ ತರಲು ಹೈಕೋರ್ಟ್ ಕೇಂದ್ರ ಸರಕಾರಕ್ಕೆ ನಿರ್ದೇಶನ ನೀಡಿದೆ. ಅತ್ಯಾಚಾರ ಮತ್ತು ಕೊಲೆ ಯತ್ನ ಆರೋಪ ಎದುರಿಸುತ್ತಿರುವ ಅಜಯ್ ಕುಮಾರ್ ಭೇರಾ ಎಂಬುವರು ಸಲ್ಲಿಸಿದ್ದ ಜಾಮೀನು ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ಜಿ.ಉಮಾ ಅವರಿದ್ದ ನ್ಯಾಯಪೀಠ ಈ ಸೂಚನೆ

6 ಬಾರಿ ಡೈವೋರ್ಸ್ ವಿಚ್ಛೇದನವೇ ಜೀವನ

ಬೆಂಗಳೂರು: ಮದುವೆಯಾದ ಬಳಿಕ ಪತಿ-ಪತ್ನಿ ನಡುವಿನ ವಿರಸಕ್ಕೆ ರೋಸಿ ವಿಚ್ಛೇದನ ಪಡೆಯುವುದು ಸಹಜ. ಆದರೆ ಇಲ್ಲೊಬ್ಬ ಮಹಿಳೆಯ ಕಥೆ ವಿಚ್ಛೇದನಕ್ಕಾಗಿಯೇ ಮದುವೆಯಾದ ಎಂಬಂತಿದೆ.

- ವಿಚ್ಛೇದನಕ್ಕಾಗಿಯೇ ಮದುವೆ ಆಗುತ್ತಿದ್ದ ಮಹಿಳೆ ಏಳನೇ ಪ್ರಕರಣದಲ್ಲಿ ಲಾಕ್

ಬರೋಬ್ಬರಿ ಆರು ಬಾರಿ ಡೈವೋರ್ಸ್ ಏಳನೇ ಬಾರಿ ವಿಚ್ಛೇದನ ಕೋರಿ ಅರ್ಜಿ ಸಲ್ಲಿಸಿದ್ದ ಮಹಿಳೆಯೊಬ್ಬರ ಅರ್ಜಿ ನೋಡಿದ ನ್ಯಾಯಾ ಧೀಶರೇ ಆಘಾತಗೊಂಡಿ ದ್ದಾರೆ. ಹಿಂದಿನ ಪ್ರಕರಣಗಳ ಬಗ್ಗೆ ಮಾಹಿತಿ ನೀಡುವಂತೆ ಸೂಚಿಸಿ ವಿಚಾರಣೆಯನ್ನು ಮುಂದೂಡಿದ್ದಾರೆ.

ಕಳೆದ ಆರು ವಿಚ್ಛೇದನ ಪ್ರಕರಣಗಳಲ್ಲಿ ಈ ಮಹಿಳೆ ಮಾಜಿ ಪತಿಗಳಿಂದ ನಿರ್ವಹಣಾ ವೆಚ್ಚ ಪಡೆಯುತ್ತಿದ್ದಾಳೆ. ಇದೀಗ 7ನೇ ಪತಿ ವಿರುದ್ಧವೂ ಪ್ರಕರಣ ದಾಖಲಿಸಿದ್ದಾಳೆ. ಈ ಮಹಿಳೆ ವರ್ಷಕ್ಕೆ ಒಂದರಂತೆ ಗಂಡಂದಿರನ್ನು ಬದಲಾಯಿಸಿದ್ದಾಳೆ. ಮದುವೆಯಾದ ಬಳಿಕ 6 ತಿಂಗಳು ಸಂಸಾರ ನಡೆಸಿ ನಂತರ ಪತಿ ವಿರುದ್ಧ ದೈಹಿಕ ಹಾಗೂ ಮಾನಸಿಕ ಹಿಂಸೆ, ಕ್ರೌರ್ಯ ಸೇರಿದಂತೆ ಸೆಕ್ಷನ್ 498ಎ ಅಡಿ ಪ್ರಕರಣ ದಾಖಲಿಸಿ ಕಠಿಣ ಶಿಕ್ಷೆಗೆ ಆಗ್ರಹಿಸಿದ್ದಾಳೆ. ಆರು ಪ್ರಕರಣಗಳಲ್ಲಿಯೂ ಗಂಡಂದಿರಿಂದ ದುಬಾರಿ ಮೊತ್ತವನ್ನು ಪಡೆದಿದ್ದಾಳೆ. ಇದೀಗ ಈ ಮಹಿಳೆಯ ವಂಚನೆಯನ್ನು ಬಯಲಿಗೆಳೆಯಲು ಏಳನೇ ಪತಿ ಮುಂದಾಗಿದ್ದಾನೆ. ಹೀಗಾಗಿ ಪತ್ನಿಯ ವಿರುದ್ಧವೇ ಈತ ಪ್ರಕರಣ ದಾಖಲಿಸಿದ್ದಾನೆ. ಈ ಅರ್ಜಿಯ ಕೈಗೆತ್ತಿಕೊಂಡ ನ್ಯಾಯಾಧೀಶರು ಮಹಿಳೆಯ ಕಥೆ ಕೇಳಿ ಬೆಚ್ಚಿಬಿದ್ದಿದ್ದಾರೆ. → 4

ಬಾಲ್ಯವಿವಾಹ ನಿಷೇಧ: ಎಲ್ಲಾ ಧರ್ಮಕ್ಕೂ ಅನ್ವಯ

ಕೊಚ್ಚಿ: ಬಾಲ್ಯವಿವಾಹ ನಿಷೇಧ ಕಾಯಿದೆಯು ದೇಶದ ಎಲ್ಲಾ ನಾಗರಿಕರಿಗೂ ಅನ್ವಯವಾಗಲಿದ್ದು ಇದಕ್ಕೆ ಯಾವ ಧರ್ಮವೂ ಹೊರತಾಗಿಲ್ಲ ಎಂದು ಕೇರಳ ಹೈಕೋರ್ಟ್ ಸೋಮವಾರ ಮಹತ್ವದ ತೀರ್ಪನ್ನು ನೀಡಿದೆ. ಕಾನೂನುಗಳ ಜಾರಿ ವಿಚಾರದಲ್ಲಿ ದೇಶದ ನಾಗರಿಕ ಎಂಬುದಷ್ಟೇ ಮುಖ್ಯವಾಗುತ್ತದೆ. ಧರ್ಮ ಎಂಬ ಅಂಶಕ್ಕೆ ನಂತರದ ಸ್ಥಾನ ಎಂದು ನ್ಯಾ.ಪಿ.ವಿ.ಕುಂಞಿಕೃಷ್ಣನ್ ಅವರ ಪೀಠ ಸ್ಪಷ್ಟವಾಗಿ ಹೇಳಿದೆ.

ನೆರೆ ವೀಕ್ಷಣೆಗೆ ಬಿಜೆಪಿ ಟೀಮ್

ಬೆಂಗಳೂರು: ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಕಾಣಿಸಿ ಕೊಂಡಿರುವ ಪ್ರವಾಹ ಪರಿಸ್ಥಿತಿ ಬಗ್ಗೆ ಅಧ್ಯಯನ ನಡೆಸಲು ಬಿಜೆಪಿ ನಾಯಕರು ರಾಜ್ಯಾದ್ಯಂತ ಪ್ರವಾಸ ಕೈಗೊಳ್ಳಲು ತೀರ್ಮಾನಿಸಿದ್ದಾರೆ. ಬಿಜೆಪಿ ನಾಯಕರ 6 ತಂಡಗಳು ಪ್ರವಾಹಪೀಡಿತ ಪ್ರದೇಶಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಲಿವೆ.

ದೋಸ್ತಿ ಪಾದಯಾತ್ರೆ ಸೂತ್ರಧಾರ ಎಚ್ಡಿಕೆ?

ಉಪ ಚುನಾವಣೆಗೆ ಹಳೇ ಮೈಸೂರು ಭಾಗದಲ್ಲಿ ಪಕ್ಷ ಸಂಘಟನೆ ಬಲಪಡಿಸಲು ತಂತ್ರ

ರಂಜಿತ್ ಎಚ್. ಅಶ್ವತ್ಥ ಬೆಂಗಳೂರು

ರಾಜ್ಯದಲ್ಲಿ ಭಾರಿ ಸದ್ದುಮಾಡಿರುವ ಮುಡಾ, ವಾಲ್ಮೀಕಿ ಹಗರಣ ಮುಂದಿಟ್ಟುಕೊಂಡು ಪಾದಯಾತ್ರೆ ಮಾಡಲು ಬಿಜೆಪಿ ಸಿದ್ಧತೆ ನಡೆಸಿಕೊಂಡಿದೆ. ಆದರೆ ಈ ಪಾದಯಾತ್ರೆ ಮೇಲ್ನೋಟಕ್ಕೆ ಬಿಜೆಪಿ ಪ್ರಾಯೋಜಿತ ಎನ್ನಲಾಗುತ್ತಿದೆಯಾದರೂ, ಇಡೀ ಪಾದಯಾತ್ರೆಯ ಹಿಂದೆ ಎಚ್.ಡಿ. ಕುಮಾರಸ್ವಾಮಿ ಅವರ 'ತಂತ್ರಗಾರಿಕೆ' ಇದೆ ಎನ್ನಲಾಗಿದೆ.

ರಾಜ್ಯ ಸರಕಾರದ ವಿರುದ್ಧ ಕೇಳಿ ಬಂದಿರುವ ಗಂಭೀರ ಆರೋಪಗಳನ್ನು ಮುಂದಿಟ್ಟುಕೊಂಡು, ಹಗರಣಗಳನ್ನು ತಾರ್ತಿಕ ಅಂತ್ಯಕ್ಕೆ ತೆಗೆದುಕೊಂಡು ಹೋಗುವ ಮಾತುಗಳನ್ನು ಬಿಜೆಪಿ ಆಡುತ್ತಿದೆ. ಸದನದ ಹೊರಗೆ ಪ್ರತಿಭಟನೆ ನಡೆಸಲು ಮುಂದಾಗಿದೆ. ಆದರೆ ಪಾದಯಾತ್ರೆಯ ಐಡಿಯಾ ಸುತ್ತ ಕುಮಾರಸ್ವಾಮಿ ಅವರಿದ್ದಾರೆ ಎನ್ನುವ ಮಾತುಗಳು ಕೇಳಿಬರುತ್ತಿದೆ.

ಇದು ಜೆಡಿಎಸ್ ಆಲೋಚನೆಯಾಗಿರುವುದರಿಂದಲೇ ಪಾದಯಾತ್ರೆಯನ್ನು ಹಳೇ ಮೈಸೂರು ಭಾಗಕ್ಕೆ ಕೇಂದ್ರೀಕರಿಸಲಾಗಿದೆ. ಒಂದು ವೇಳೆ ಬಿಜೆಪಿಯ ಪ್ಲ್ಯಾನ್ ಆಗಿದ್ದರೆ, ಪಾದಯಾತ್ರೆಯನ್ನು ಮಧ್ಯ ಕರ್ನಾಟಕ ಭಾಗದಿಂದ ಮೈಸೂರು ಅಥವಾ ಬೆಂಗಳೂರಿಗೆ ಹಮ್ಮಿಕೊಳ್ಳುತ್ತಿದ್ದರು. ಹಳೇ ಮೈಸೂರು ಭಾಗದಲ್ಲಿ ಬಿಜೆಪಿ ಬೆಳೆಯುತ್ತಿದೆಯಾದರೂ, ಜೆಡಿಎಸ್ ಪ್ರಾಬಲ್ಯ ಹೆಚ್ಚಿದೆ. → 4

ಚನ್ನಪಟ್ಟಣಕ್ಕೆ ನಿಖಿಲ್?

ಇನ್ನು ಕುಮಾರಸ್ವಾಮಿ ಅವರ ರಾಜೀನಾಮೆಯಿಂದ ತೆರವಾಗಿರುವ ಚನ್ನಪಟ್ಟಣಕ್ಕೆ ಕೆಲವೇ ತಿಂಗಳಲ್ಲಿ ಉಪ ಚುನಾವಣೆ ನಡೆಯಲಿದೆ. ಈ ಕ್ಷೇತ್ರವನ್ನು ಜೆಡಿಎಸ್‌ಗೆ ಬಿಟ್ಟು ಕೊಡುವುದು ಬಹುತೇಕ ಖಚಿತವಾಗಿದೆ.

ಆದ್ದರಿಂದ ಕುಮಾರಸ್ವಾಮಿ ಅವರ ರಾಜೀನಾಮೆಯಿಂದ ತೆರವಾದ ಸ್ಥಾನಕ್ಕೆ ನಿಖಿಲ್ ಕುಮಾರಸ್ವಾಮಿ ಅವರನ್ನು ಕೂರಿಸುವ ಲೆಕ್ಕಾಚಾರಗಳು ಗೌಡರ ಕುಟುಂಬದಲ್ಲಿ ನಡೆಯುತ್ತಿದೆ.

ಮುಡಾ, ವಾಲ್ಮೀಕಿ ಸೇರಿದಂತೆ ವಿವಿಧ ಪ್ರಕರಣವನ್ನು ವಿರೋಧಿಸಿ ಬಿಜೆಪಿ-ಜೆಡಿಎಸ್ ಪಕ್ಷಗಳು ನಡೆಸುವ ಪಾದಯಾತ್ರೆಗೆ ಅನುಮತಿ ನೀಡುವುದಿಲ್ಲ. ಅವರು ಬೇಕಿದ್ದರೆ ಪಾದಯಾತ್ರೆ ಮಾಡಿಕೊಳ್ಳಲಿ. ಆದರೆ ಅಧಿಕೃತವಾಗಿ ಅನುಮತಿ ನೀಡುವುದಿಲ್ಲ. ಈ ಹಿಂದೆ ನಾವು ಪಾದಯಾತ್ರೆ ಮಾಡುವಾಗಲೂ ಅವರು ಅನುಮತಿ ನೀಡಿರಲಿಲ್ಲ. ಆದರೆ ಪಾದಯಾತ್ರೆಗೆ ತಡೆ ನೀಡುವುದಿಲ್ಲ.

- ಡಾ.ಜಿ. ಪರಮೇಶ್ವರ್ ಗೃಹ ಸಚಿವ

ಭ್ರಷ್ಟ ಕಾಂಗ್ರೆಸ್ ಸರಕಾರಕ್ಕೆ ನಮ್ಮ ಈ ಹೋರಾಟ ತಡೆಯಲು ಸಾಧ್ಯವಿಲ್ಲ. ಕೋವಿಡ್ ಸಂದರ್ಭದಲ್ಲಿ ಕಾಂಗ್ರೆಸ್ಸಿಗರು ಮೇಕೆದಾಟು ಪಾದಯಾತ್ರೆ ಮಾಡಿದ್ದಾರಲ್ಲವೇ? ನಮಗೆ ಪಾದಯಾತ್ರೆಗೆ ಏಕೆ ಅವಕಾಶ ನೀಡುವುದಿಲ್ಲ? ಸದನದಲ್ಲಿ ಮುಡಾ ಬಗ್ಗೆ ಏಕೆ ಚರ್ಚೆ ಮಾಡದೇ ಮುಖ್ಯಮಂತ್ರಿಗಳು ಸುದ್ದಿಗೋಷ್ಠಿಯಲ್ಲಿ ಏಕೆ ಉತ್ತರ ಕೊಡುತ್ತಾರೆ?

- ವಿಜಯೇಂದ್ರ ಬಿಜೆಪಿ ರಾಜ್ಯಾಧ್ಯಕ್ಷ

ಸಮಾಚಾರ ಸಣ್ಣದಲ್ಲ

ರಾಶಿಗಟ್ಟಲೆ ಮೊಳೆ ಹೆಕ್ಕಿತೆಗೆದ ಪೊಲೀಸರು

ಬೆಂಗಳೂರು: ಬೆಂಗಳೂರಿನ ಬೀದಿಬೀದಿಗಳಲ್ಲಿ ರಾಶಿಗಟ್ಟಲೆ ಮೊಳೆ ಬಿಸಾಡಿ ವಾಹನಗಳ ಟಯರ್ ಪಂಕ್ಚರ್ ಆಗುವಂತೆ ಮಾಡಿ ದುಡ್ಡುಮಾಡುವ ಮಾಫಿಯಾ ಕಾರ್ಯಪ್ರವೃತ್ತವಾಗಿದೆಯೇ ಎಂಬ ಅನುಮಾನ ಶುರುವಾಗಿದೆ. ಜಾಲಹಳ್ಳಿಯ ಕುವೆಂಪು ವೃತ್ತದ ಕೆಳಸೇತುವೆಯಲ್ಲಿ ಮುಷ್ಟಿಗಟ್ಟಲೆ ಮೊಳೆಗಳು ಒಂದೆಡೆಯೇ ಪತ್ತೆಯಾಗಿದ್ದು, ಸ್ವತಃ ಸಂಚಾರ ನಿಯಂತ್ರಣ ಪೊಲೀಸರೇ ಇವುಗಳನ್ನು ಸ್ಥಳದಿಂದ ತೆಗೆದು ಹಾಕಿದ್ದಾರೆ. ರಸ್ತೆ ಮಧ್ಯದಲ್ಲಿ ಮೊಳೆಗಳನ್ನು ಎಸೆದು ವಾಹನಗಳ ಪಂಕ್ಚರ್ ಮಾಡಿಸಲಾಗುತ್ತಿದೆ ಎಂಬ ವದಂತಿ ಮೊದಲಿನಿಂದಲೂ ಇದೆ. ಇದೀಗ ಸ್ವತಃ ಸಂಚಾರ ನಿಯಂತ್ರಣ ಪೊಲೀಸರಿಂದಲೇ ರಾಶಿಗಟ್ಟಲೆ ಮೊಳೆಗಳ ಸಂಗ್ರಹ ನಡೆದಿದ್ದು, ಸಂಶಯ ದೃಢಪಟ್ಟಿದೆ. ನಗರದಲ್ಲಿ ಎಲ್ಲೆಂದರಲ್ಲಿ ವಾಹನಗಳು ಪಂಕ್ಚರ್ ಆಗುತ್ತಿದ್ದು, ಸಮೀಪದಲ್ಲಿರುವ ಪಂಕ್ಚರ್ ಅಂಗಡಿಗಳಿಗೆ ಸಾಕಷ್ಟು ವ್ಯಾಪಾರವಂತೂ ಆಗುತ್ತಿದೆ. ಕುವೆಂಪು ವೃತ್ತದ ಅಂಡರ್‌ಪಾಸ್‌ನಲ್ಲಿ ರಾಶಿಗಟ್ಟಲೆ ಮೊಳೆಗಳನ್ನು ಪತ್ತೆಹಚ್ಚಿದ ಪೊಲೀಸರು ಅವುಗಳನ್ನು ಸ್ವಚ್ಛಗೊಳಿಸಿದರು. ಬೆಂಗಳೂರು ಸಂಚಾರ ನಿಯಂತ್ರಣ ಪೊಲೀಸ್ ಅಧಿಕಾರಿಗಳು ಕುವೆಂಪು ಸರ್ಕಲ್ ಅಂಡರ್‌ಪಾಸ್‌ನಲ್ಲಿ ರಸ್ತೆಯನ್ನು ಗುಡಿಸುವ ವಿಡಿಯೊವನ್ನು ಟ್ವಿಟರ್‌ನಲ್ಲಿ ಹಂಚಿಕೊಂಡಿದ್ದಾರೆ.

ದಾಸನಿಗೆ ಮನೆಯೂಟ ಕೋರಿದ ಅರ್ಜಿ ವಾಪಸ್

ಬೆಂಗಳೂರು: ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಬಂಧನವಾಗಿರುವ ನಟ ದರ್ಶನ್‌ಗೆ ಸದ್ಯಕ್ಕೆ ಮನೆ ಯೂಟ ತಿನ್ನುವ ಭಾಗ್ಯ ಸಿಗುವಂತಿಲ್ಲ. ಮನೆಯೂಟ ನೀಡುವಂತೆ ಕೋರಿ ಸಲ್ಲಿಸಿದ್ದ ಅರ್ಜಿಯನ್ನು ಮ್ಯಾಜಿಸ್ಟ್ರೇಟ್ ಕೋರ್ಟ್ ವಜಾಗೊಳಿಸಿದ ಬೆನ್ನಲ್ಲೇ ಇದೀಗ ಹೈಕೋರ್ಟ್‌ಗೆ ಸಲ್ಲಿಸಿದ್ದ ಅರ್ಜಿಯನ್ನು ದರ್ಶನ್ ಪರ ವಕೀಲರು ವಾಪಸ್ ಪಡೆದಿದ್ದಾರೆ. ಅರ್ಜಿ ವಾಪಸ್ ಪಡೆಯಲು ದರ್ಶನ್ ಪರ ವಕೀಲರಿಂದ ಹೈಕೋರ್ಟ್‌ಗೆ ಮೆಮೋ ಸಲ್ಲಿಸಲಾಗಿದೆ. ಈ ಹಿಂದೆ ಮನೆಯೂಟ ಕೋರಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಲಾಗಿತ್ತು. ಆದರೆ, ಮ್ಯಾಜಿಸ್ಟ್ರೇಟ್ ಕೋರ್ಟ್‌ನಿಂದ ಅನುಮತಿ ಪಡೆಯಲು ಹೈಕೋರ್ಟ್ ಸೂಚಿಸಿತ್ತು. ಹೀಗಾಗಿ ಜು.25ರಂದು ವಿಚಾರಣೆ ನಡೆಸಿದ್ದ ಆರ್ಥಿಕ ಅಪರಾಧಗಳ ವಿಶೇಷ ಕೋರ್ಟ್ ಅರ್ಜಿ ವಜಾಗೊಳಿಸಿತ್ತು. ಆದರೆ, ಇದೀಗ ತಾಂತ್ರಿಕ ಕಾರಣದಿಂದ ನಟ ದರ್ಶನ್ ಪರ ವಕೀಲರು ಅರ್ಜಿಯನ್ನು ವಾಪಸ್ ಪಡೆದಿದ್ದಾರೆ. ರಾಜ್ಯ ಬಂದೀಖಾನೆ ನಿಯಮಗಳ ಪ್ರಕಾರ, ಕೊಲೆ ಆರೋಪಿಗೆ ಮನೆಯೂಟಕ್ಕೆ ಅವಕಾಶ ಇಲ್ಲ.

ಕೇಂದ್ರ ಸರಕಾರಕ್ಕೆ ಆಗ್ರಹಿಸಿದ ಸಿಎಂ ಸಿದ್ದರಾಮಯ್ಯ | ಬಿಜೆಪಿ ಲೆಕ್ಕಾಚಾರವೇ ನಿರ್ಮಲಾ ಅವರಿಗೆ ಗೊತ್ತಿಲ್ಲ

ನಿರ್ಮಲಾ ರಾಜೀನಾಮೆ ಪಡೆಯಿರಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಬಜೆಟ್ ಲೆಕ್ಕಾಚಾರದ ಮೂಲಪಾಠವೇ ಗೊತ್ತಿಲ್ಲದ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರನ್ನು ತಕ್ಷಣ ಸಂಪುಟದಿಂದ ಕೈಬಿಡಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರಧಾನಿ ನರೇಂದ್ರ ಮೋದಿ ಅವರನ್ನು ಒತ್ತಾಯಿಸಿದ್ದಾರೆ.

ಬೆಂಗಳೂರಿನಲ್ಲಿ ಭಾನುವಾರ ಸುದ್ದಿಗೋಷ್ಠಿ ನಡೆಸಿ ರಾಜ್ಯ ಸರಕಾರದ ವಿರುದ್ಧ ಟೀಕಿಸಿದ್ದ ನಿರ್ಮಲಾ ಅವರ ಆರೋಪಕ್ಕೆ ಸುದೀರ್ಘ ಉತ್ತರ ನೀಡಿರುವ ಸಿದ್ದರಾಮಯ್ಯ ಅವರು ಈ ಸಂಬಂಧ ಪತ್ರಿಕಾ ಪ್ರಕಟಣೆ ಬಿಡುಗಡೆಗೊಳಿಸಿದ್ದಾರೆ. ಕರ್ನಾಟಕಕ್ಕೆ ಆಗುತ್ತಿರುವ ಅನ್ಯಾಯವನ್ನು ಮರೆಮಾಚುವ ಹತಾಶ ಪ್ರಯತ್ನ ಮಾಡಿರುವ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ತಾವೇ ಹೆಣೆದ ಬಲೆಯಲ್ಲಿ ಸಿಕ್ಕಿ ಹಾಕಿಕೊಂಡಿರುವುದು ದುರಂತ ಎಂದು ಟೀಕಿಸಿದ್ದಾರೆ.

ನಿರ್ಮಲಾ ಸೀತಾರಾಮನ್ ಅವರ ಪ್ರಕಾರ ಹಿಂದಿನ ಯುಪಿಎ ಸರಕಾರ ಕರ್ನಾಟಕಕ್ಕೆ ನೀಡಿರುವ ಅನುದಾನ 60,779 ಕೋಟಿ. ಎನ್‌ಡಿಎ ಹತ್ತು ವರ್ಷಗಳ ಅವಧಿಯಲ್ಲಿ ನೀಡಿದ್ದ ಹಣ 2,36,955 ಕೋಟಿ ನೀಡಿದೆ. ಆದರೆ ಹತ್ತು ವರ್ಷಗಳ ಅವಧಿಯಲ್ಲಿ ಕೇಂದ್ರ ಸರಕಾರದ ಬಜೆಟ್ ಗಾತ್ರ ಎಷ್ಟು ಪಟ್ಟು ಹೆಚ್ಚಾಗಿದೆ ಎನ್ನುವುದನ್ನು ಅವರು ಮರೆತಿದ್ದಾರೆ. ಇದು ಅವರ ಅಜ್ಞಾನವೋ, ಇಲ್ಲವೇ ಜನತೆಯ ದಾರಿ ತಪ್ಪಿಸುವ ಹುನ್ನಾರವೋ? ಎಂಬುದನ್ನು ಅವರೇ ಸ್ಪಷ್ಟಪಡಿಸಬೇಕು. 2013-14ರ ಕೇಂದ್ರ ಸರಕಾರದ ಬಜೆಟ್ 16,06 ಲಕ್ಷ ಕೋಟಿ. ಆಗ ಕರ್ನಾಟಕಕ್ಕೆ ಅನುದಾನದ ರೂಪದಲ್ಲಿ 16,428 ಕೋಟಿ ಮತ್ತು ತೆರಿಗೆ ಹಂಚಿಕೆಯಲ್ಲಿ 15,005 ಕೋಟಿ ಹೀಗೆ ಒಟ್ಟು 31,483 ಕೋಟಿ ನೀಡಲಾಗಿತ್ತು. ಆದರೀಗ ಕೇಂದ್ರ ಸರಕಾರದ ಬಜೆಟ್ ಗಾತ್ರ 48.02 ಲಕ್ಷ ಕೋಟಿಯಾಗಿದೆ. ಈ ಅವಧಿಯಲ್ಲಿ ನಮಗೆ ಕೇಂದ್ರ ಅನುದಾನದ ರೂಪದಲ್ಲಿ 15,229 ಕೋಟಿ ಮತ್ತು ತೆರಿಗೆ ಹಂಚಿಕೆಯಲ್ಲಿ 44.485 ಕೋಟಿ ನೀಡಲಾಗುತ್ತದೆ. ಇದು ಒಟ್ಟು ಬಜೆಟ್ ಗಾತ್ರದ ಶೇ. 1.2 ರಷ್ಟಾಗುತ್ತದೆ.

ನಿರ್ಮಲಾ ಸೀತಾರಾಮನ್ ಅವರು ಉಂಡ ಮನೆಗೆ ಎರಡು ಬಗೆದಿದ್ದಾರೆ. ತಮ್ಮನ್ನು ರಾಜ್ಯಸಭೆಗೆ ಆರಿಸಿ ಕಳಿಸಿದ ಕರ್ನಾಟಕಕ್ಕೆ ಅನ್ಯಾಯ ಮಾಡಿರುವ ನಿರ್ಮಲಾ ಸೀತಾರಾಮನ್ ಅವರಿಗೆ ರಾಜ್ಯದ ಹಣಕಾಸು ವ್ಯವಸ್ಥೆ ಬಗ್ಗೆ ಮಾತನಾಡುವ ಯಾವ ನೈತಿಕ ಅಧಿಕಾರ ಇದೆ?

-ಸಿದ್ದರಾಮಯ್ಯ, ಮುಖ್ಯಮಂತ್ರಿ

ಸಚಿವೆ ನಿರ್ಮಲಾ ಸೀತಾರಾಮನ್ ಅವರು ಸುಳ್ಳಿನ ದಾರಿಯಲ್ಲಿ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಕೇಂದ್ರ ಸರಕಾರದಿಂದ ಕರ್ನಾಟಕಕ್ಕೆ ಬರುವ ತೆರಿಗೆ ಹಂಚಿಕೆಯಲ್ಲಿ ವೃದ್ಧಿಯಾಗಿದೆ ಎನ್ನುವ ದಾರಿ ತಪ್ಪಿಸುವ ಹೇಳಿಕೆ ನೀಡಿದ್ದಾರೆ. ಅವರ ಪ್ರಕಾರ ಯುಪಿಎ ಸರಕಾರದ ಕಾಲದಲ್ಲಿ ತೆರಿಗೆ ಹಂಚಿಕೆಯಲ್ಲಿ ರಾಜ್ಯಕ್ಕೆ ಸಿಕ್ಕಿದ್ದ ಪಾಲು 81,791 ಕೋಟಿ ಮಾತ್ರ. 2014-24ರ ಅವಧಿಯ ಎನ್‌ಡಿಎ ಸರಕಾರದ ಅವಧಿಯಲ್ಲಿ ಕರ್ನಾಟಕ ಪಡೆದಿರುವುದು 2.9 ಲಕ್ಷ ಕೋಟಿ. ಹದಿನಾಲ್ಕನೇ ಹಣಕಾಸು ಆಯೋಗ ಕರ್ನಾಟಕದ ತೆರಿಗೆ ಪಾಲು ಶೇ 4.72 ಎಂದು ನಿಗದಿಪಡಿಸಿತ್ತು, ಈಗಿನ 15ನೇ ಹಣಕಾಸು ಆಯೋಗ ಈ ಪಾಲನ್ನು ಕಡಿಮೆಗೊಳಿಸಿ ಶೇ 3.64ಕ್ಕೆ ಇಳಿಸಿತು. ಇದರಿಂದ ಕಳೆದ ಐದು ವರ್ಷಗಳಲ್ಲಿ ತೆರಿಗೆ ಪಾಲಿನಲ್ಲಿ ಅಂದಾಜು 62,098 ಕೋಟಿಯನ್ನು ಕರ್ನಾಟಕ ಕಳೆದುಕೊಂಡಿದೆ. ಇದನ್ನು ನಿರ್ಮಲಾ ಸೀತಾರಾಮನ್ ಜಾಣತನದಿಂದ ಮರೆಮಾಚಲು ಪ್ರಯತ್ನಿಸಿದ್ದಾರೆ ಎಂದು ಟೀಕಿಸಿದ್ದಾರೆ.

ಕಳೆದ ಆರು ವರ್ಷದ ಅವಧಿಯಲ್ಲಿ ಕೇಂದ್ರ ಸರಕಾರದ ಬಜೆಟ್ ಸರಿಸುಮಾರು ದುಪ್ಪಟ್ಟಾಗಿದೆ. 2018-19ರಲ್ಲಿ ಕೇಂದ್ರ ಬಜೆಟ್ ಗಾತ್ರ 24,42,213 ಕೋಟಿ ಇತ್ತು. ಆಗ ಕೇಂದ್ರದಿಂದ ರಾಜ್ಯಕ್ಕೆ ದೊರೆಯುತ್ತಿದ್ದ ತೆರಿಗೆ ಪಾಲು 35,895 ಕೋಟಿ ಹಾಗೂ 16,082 ಕೋಟಿ ಅನುದಾನ ಸೇರಿ ಒಟ್ಟು 46,288 ಕೋಟಿ ಲಭ್ಯವಾಗಿತ್ತು. ಆದರೆ, 2023-24ರಲ್ಲಿ ಕೇಂದ್ರದ ಬಜೆಟ್ ಗಾತ್ರ 45,03,097 ಕೋಟಿಗೆ ಏರಿಕೆಯಾಗಿದೆ. ವಿಪರ್ಯಾಸವೆಂದರೆ, ಕರ್ನಾಟಕ್ಕೆ ಕೇಂದ್ರದಿಂದ ತೆರಿಗೆ ಪಾಲು ಹಾಗೂ ಅನುದಾನಗಳೆರಡೂ ಸೇರಿ ಸಿಕ್ಕಿರುವುದು 50,257 ಕೋಟಿ ಮಾತ್ರ. ಅಂದರೆ ಐದು ವರ್ಷದ ಅವಧಿಯಲ್ಲಿ ಬಜೆಟ್ ದುಪ್ಪಟ್ಟಾದರೂ ರಾಜ್ಯಕ್ಕೆ ದೊರೆಯುತ್ತಿರುವ ಪಾಲಿನಲ್ಲಿ ಯಾವುದೇ ಬದಲಾವಣೆ ಆಗಿಲ್ಲ ಎಂದು ಟೀಕಿಸಿದ್ದಾರೆ.

ಕೇಂದ್ರದಿಂದ ತಾರತಮ್ಯ ಧೋರಣೆ

ಕೇಂದ್ರ ಸರಕಾರದ ಈ ತಾರತಮ್ಯ ನೀತಿ, ಮಲತಾಯಿ ಧೋರಣೆಯಿಂದಾಗಿ ಕರ್ನಾಟಕವು 2017-18ರಿಂದ ಈವರೆಗೆ ತನಗೆ ಸೇರಬೇಕಾದ ನ್ಯಾಯಯುತ ಪಾಲಾದ 1,87,867 ಕೋಟಿ ಹಣದಿಂದ ವಂಚಿತವಾಗಿದೆ. ಅಂದರೆ, ಕರ್ನಾಟಕದ ಪರಿಷ್ಕೃತ ಆಯವ್ಯಯದ ಗಾತ್ರ 3.24 ಲಕ್ಷ ಕೋಟಿಯ ಹೋಲಿಕೆಯಲ್ಲಿ ಅದರ ಅರ್ಧಕ್ಕಿಂತಲೂ ಹೆಚ್ಚು ಹಣ, ನಿಖರವಾಗಿ ಹೇಳಬೇಕೆಂದರೆ ಪ್ರಸಕ್ತ ಸಾಲಿನ ಬಜೆಟ್ನ ಶೇ.57ರಷ್ಟು ಗಾತ್ರದ ಹಣ ಬಿಜೆಪಿ ನೇತೃತ್ವದ ಕೇಂದ್ರ ಸರಕಾರ ಅಧಿಕಾರಕ್ಕೆ ಬಂದ ನಂತರ ರಾಜ್ಯಕ್ಕೆ ನಷ್ಟವಾಗಿದೆ. ನರೇಂದ್ರ ಮೋದಿಯವರು ಮತ್ತು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಕೂಡಿಕೊಂಡು ಕಳೆದ ಹತ್ತು ವರ್ಷಗಳ ಅವಧಿಯಲ್ಲಿ ದೇಶದ ವಿರೋಧಪಕ್ಷಗಳ ಸರಕಾರ ಇರುವ ಪ್ರತಿ ಯೊಂದು ರಾಜ್ಯಗಳಿಗೆ ತೆರಿಗೆ ಮತ್ತು ಅನುದಾನದ ಹಂಚಿಕೆಯಲ್ಲಿ ಅನ್ಯಾಯ ಮಾಡಿದ್ದಾರೆ ಎಂದು ಟೀಕಸಿದ್ದಾರೆ.

ಕಾವೇರಿ ನದಿಗೆ ಅಸ್ಥಿ ವಿಸರ್ಜನೆ; ಸರಕಾರಕ್ಕೆ ಹೈಕೋರ್ಟ್ ನೋಟಿಸ್

ಬೆಂಗಳೂರು: ಕಾವೇರಿ ನದಿಗೆ ಅಸ್ಥಿ ವಿಸರ್ಜನೆ ಸೇರಿ ಇತರೆ ಮಾಲಿನ್ಯಕಾರಕ ಚಟುವಟಿಕೆಗಳನ್ನು ನಿಯಂತ್ರಿಸುವುದು ಮತ್ತು ಈ ಸಂಬಂಧ ಮಾರ್ಗಸೂಚಿಗಳನ್ನು ರಚನೆ ಮಾಡುವಂತೆ ನಿರ್ದೇಶನ ನೀಡುವಂತೆ ಕೋರಿ ಸಲ್ಲಿಸಲಾಗಿರುವ ಅರ್ಜಿ ಕುರಿತು ಹೈಕೋರ್ಟ್ ಸರಕಾರಕ್ಕೆ ನೋಟಿಸ್ ಜಾರಿಗೊಳಿಸಿದೆ.

ಬೆಂಗಳೂರು ವಕೀಲ ಕುಶಾಲ್ ಕುಮಾರ್ ಕೌಶಿಕ್ ಸೇರಿ ಆರು ಮಂದಿ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಎನ್. ವಿ ಅಂಜಾರಿಯಾ ಹಾಗೂ ನ್ಯಾ. ಕೆ. ವಿ ಅರವಿಂದ ಅವರಿದ್ದ ವಿಭಾಗೀಯ ಸರಕಾರದ ಮುಖ್ಯ ಕಾರ್ಯದರ್ಶಿ, ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಮಂಡ್ಯ ಜಿಲ್ಲಾಧಿಕಾರಿ, ಮಂಡ್ಯ ಉಪ ವಿಭಾಗಾಧಿಕಾರಿ, ಶ್ರೀರಂಗಪಟ್ಟಣ ತಹಶೀಲ್ದಾರ್, ಶ್ರೀರಂಗಪಟ್ಟಣ ನಗರಸಭೆಗೆ ನೋಟಿಸ್ ಜಾರಿಮಾಡಿ ಆಕ್ಷೇಪಣೆ ಸಲ್ಲಿಸುವಂತೆ ಸೂಚನೆ ನೀಡಿ ವಿಚಾರಣೆ ಮುಂದೂಡಿತು.

ವಿಚಾರಣೆ ವೇಳೆ ಅರ್ಜಿದಾರರು ಖುದ್ದು ವಾದ ಮಂಡಿಸಿ, ಅಸ್ಥಿ ವಿಸರ್ಜನೆ ಕ್ರಿಯೆಗೆ ನಮ್ಮ ವಿರೋಧವಿಲ್ಲ. ಆದರೆ, ಅದಕ್ಕೊಂದು ನಿಗದಿತ ಸ್ಥಳ ನಿಗದಿ ಮಾಡಬೇಕು. ನಿರ್ದಿಷ್ಟ ಮಾರ್ಗಸೂಚಿಗಳು ಇರಬೇಕು.

ಅವುಗಳನ್ನು ಕಡ್ಡಾಯವಾಗಿ ಪಾಲಿಸುವಂತಾಗಬೇಕು ಎಂಬುದಷ್ಟೇ ನಮ್ಮ ಕಾಳಜಿ. ಏಕೆಂದರೆ, ಕಾವೇರಿ ನದಿ ತೀರದಲ್ಲಿ ಮಾಲಿನ್ಯ ವಿಪರೀತವಾಗಿ ಹೆಚ್ಚಳವಾಗಿದೆ. ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ ವರದಿಯಲ್ಲಿ ಕಾವೇರಿ ನದಿ ತೀರದಲ್ಲಿ ಮಾಲಿನ್ಯ ಹೆಚ್ಚಾಗುವುದಕ್ಕೆ ಕಾರಣಗಳನ್ನು ಉಲ್ಲೇಖಿಸಲಾಗಿದೆ.

ಅಸ್ಥಿ ವಿಸರ್ಜಿಸಲು ಮಾರ್ಗಸೂಚಿ ರೂಪಿಸಬೇಕು: ಇದನ್ನು ಪರಿಗಣಿಸಿ ನದಿ ತೀರದಲ್ಲಿ ಅಸ್ಥಿ ವಿಸರ್ಜನೆಗೆ ಮಾರ್ಗಸೂಚಿ ರೂಪಿಸಬೇಕು.

ಕಾವೇರಿ ನದಿಯನ್ನು ಜ್ಯುರಿಸ್ಟಿಕ್ ಪರ್ಸನ್' (ಕಾನೂನಾತ್ಮಕ ವ್ಯಕ್ತಿ - ವಾಸ್ತವ ವ್ಯಕ್ತಿಯಲ್ಲದ ಆದರೆ ಕಾನೂನಿನನ್ವಯ ಮಾನ್ಯ ಮಾಡಲಾದ ಸಂಘ -ಸಂಸ್ಥೆಗಳು, ನಿಸರ್ಗದ ಭಾಗಗಳನ್ನು ವ್ಯಕ್ತಿಗಳ ರೀತಿಯಲ್ಲಿ ಕಾನೂನಾತ್ಮಕವಾಗಿ ಪರಿಗಣಿಸುವುದು) ಎಂದು ಘೋಷಿಸಬೇಕು ಎಂದು ನ್ಯಾಯಪೀಠಕ್ಕೆ ಮನವಿ ಮಾಡಿದರು.

ಶುಕ್ರವಾರ ಹೊರತುಪಡಿಸಿ ಉಳಿದ ದಿನ ಸಂಚಾರಕ್ಕಿಲ್ಲ ನಿರ್ಬಂಧ

ಪೀಣ್ಯ ಸೇತುವೆ ಸಂಚಾರಕ್ಕೆ ಮುಕ್ತ

ಬೆಂಗಳೂರು: ಪೀಣ್ಯ ಸೇತುವೆ ಸೋಮವಾರದಿಂದ ಭಾರೀ ವಾಹನ ಸೇರಿದಂತೆ ಎಲ್ಲಾ ವಾಹನಗಳ ಓಡಾಟಕ್ಕೆ ಅವಕಾಶ ನೀಡಲಾಗಿದ್ದು, ಶುಕ್ರವಾರದಂದು ಮಾತ್ರ ಭಾರೀ ವಾಹನಗಳ ಸಂಚಾರವನ್ನು ನಿರ್ಬಂಧಿಸಲಾಗಿದೆ.

ಸೇತುವೆ ವಿಶೇಷ ದುರಸ್ತಿ ಕಾಮಗಾರಿ ಇನ್ನೂ ಪ್ರಗತಿಯಲ್ಲಿರುವುದರಿಂದ ಪ್ರತಿ ಶುಕ್ರವಾರ ಬೆಳಗ್ಗೆ 6 ಗಂಟೆಯಿಂದ ಶನಿವಾರ ಬೆಳಗ್ಗೆ 6 ಗಂಟೆವರೆಗೂ ಭಾರಿ ವಾಹನಗಳ ಓಡಾಟ ನಿಷೇಧಿಸಲಾಗಿದೆ. ಉಳಿದ ದಿನ ಎಲ್ಲಾ ವಾಹನಗಳು ಫ್ಲೈ ಓವರ್ ಮೇಲೆ ಸಂಚಾರ ನಡೆಸಬಹುದು. ಆದರೆ, ಭಾರಿ ವಾಹನಗಳು ಮಾತ್ರ ಸೇತುವೆ ಎಡಪಥದಲ್ಲಿ ಗರಿಷ್ಠ 40 ಕಿ.ಮೀ ವೇಗ ಮಿತಿಯಲ್ಲಿ ಸಂಚರಿಸಬೇಕು ಎಂದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಸೂಚಿಸಿದೆ.

ನಗರದ ತುಮಕೂರು ರಸ್ತೆಯಲ್ಲಿರುವ 15 ಮೀಟರ್ ಅಗಲದ, 4.2 ಕಿಮೀ ಉದ್ದದ ಸೇತುವೆಯಲ್ಲಿ 2021ರ ಡಿಸೆಂಬರ್‌ನಿಂದ ಬಸ್‌ಗಳು ಮತ್ತು ಟ್ರಕ್‌ಗಳಂತಹ ಭಾರೀ ವಾಹನಗಳ ಸಂಚಾರ ನಿರ್ಬಂಧಿಸಲಾಗಿತ್ತು. ಫ್ಲೈಓವರ್‌ನಲ್ಲಿ ಪ್ರಿಸ್ಟ್ರೆಸ್ಡ್ ಕೇಬಲ್‌ಗಳು ತುಕ್ಕು ಹಿಡಿದ ಹಿನ್ನೆಲೆ ರಿಪೇರಿ ಮಾಡುವ ಅಗತ್ಯವಿತ್ತು. ಹೀಗಾಗಿ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದಿಂದ 38.5 ಕೋಟಿ ರು. ವೆಚ್ಚದಲ್ಲಿ ಹೊಸದಾಗಿ ಕೇಬಲ್‌ಗಳ ಅಳವಡಿಕೆ ಕಾರ್ಯ ನಡೆದಿದೆ.

ಜನವರಿಯಲ್ಲಿ, 240 ಪ್ರಿಸ್ಟ್ರೆಸ್ಡ್ ಕೇಬಲ್‌ಗಳಲ್ಲಿ ಲೋಡ್ ಪರೀಕ್ಷೆಗಳನ್ನು ನಡೆಸಲು ಎನ್‌ಎಚ್‌ಎಐ 60 ಗಂಟೆಗಳ ಕಾಲ ಫ್ಲೈಓವರ್ ಮುಚ್ಚಿತ್ತು. ಸಮಿತಿಯ ಲೋಡ್ ಪರೀಕ್ಷೆಯ ಫಲಿತಾಂಶಗಳು ತೃಪ್ತಿಕರವಾಗಿದೆ ಎಂದು ತಜ್ಞರ ಸಮಿತಿಯ ಮುಖ್ಯಸ್ಥ, ಐಐಎಸ್‌ಸಿ ಸಿವಿಲ್ ಎಂಜಿನಿಯರಿಂಗ್ ವಿಭಾಗದ ಪ್ರೊ. ಚಂದ್ರ ಕಿಶನ್ ಹೇಳಿದ್ದರು.

ದುರಸ್ತಿ ಕಾರ್ಯ ಬಹುತೇಕ ಪೂರ್ಣ

ಮಾರ್ಚ್‌ನಲ್ಲಿ, ಎನ್‌ಎಚ್‌ಎಐ 1,243 ಪ್ರಿಸ್ಟ್ರೆಸ್ಡ್‌ಕೇಬಲ್‌ಗಳನ್ನು ಬದಲಾಯಿಸಲು ಪ್ರಾರಂಭಿಸಿತ್ತು. ಸದ್ಯ ದುರಸ್ತಿ ಕಾರ್ಯ ಬಹುತೇಕ ಪೂರ್ಣಗೊಂಡಿದ್ದರಿಂದ ಏಷ್ಯಾದ ಅತಿ ದೊಡ್ಡ ಕೈಗಾರಿಕಾ ಪ್ರದೇಶಗಳಲ್ಲಿ ಒಂದಾದ ಪೀಣ್ಯದಲ್ಲಿರುವ ಸೇತುವೆ ಮೇಲೆ ಭಾರಿ ವಾಹನಗಳ ಸಂಚಾರಕ್ಕೆ ಎನ್‌ಎಚ್‌ಎಐ ಗ್ರೀನ್ ಸಿಗ್ನಲ್ ನೀಡಿದೆ. ಫ್ಲೈಓವರ್ ನಿರ್ಬಂಧದಿಂದ ಕಳೆದ ಮೂರು ವರ್ಷಗಳಿಂದ ಕೆಳಗಿನ ರಸ್ತೆಯಲ್ಲಿ ವಾಹನಗಳ ದಟ್ಟಣೆ ಹೆಚ್ಚಾಗಿದೆ. ದಿನ ನಿತ್ಯದ ವಾಹನ ದಟ್ಟಣೆಯಿಂದ ವಾಹನ ಸವಾರರು ಪರದಾಡುತ್ತಿದ್ದಾರೆ. ಎನ್‌ಎಚ್‌ಎಐ ಕಳೆದ ವರ್ಷ 38.5 ಕೋಟಿ ರುಪಾಯಿಯಲ್ಲಿ ರಿಪೇರಿ ಕಾರ್ಯವನ್ನು ಪ್ರಾರಂಭಿಸಿತು. ಪ್ರತಿ ಸ್ಪ್ಯಾನ್‌ನಲ್ಲಿ ಎರಡು ಕೇಬಲ್‌ಗಳನ್ನು ಹೆಚ್ಚುವರಿ ಸ್ಲಾಟ್‌ಗಳಲ್ಲಿ ಸೇರಿಸಲು ಮತ್ತು ಸೇತುವೆಯನ್ನು ಬಲಪಡಿಸಲು ಒತ್ತು ನೀಡಿತ್ತು.

ಕರ್ನಾಟಕ ಬ್ಯಾಂಕ್ ಲಿಮಿಟೆಡ್

ನಿಮ್ಮ ಕುಟುಂಬದ ಬ್ಯಾಂಕ್. ಭಾರತದಾದ್ಯಂತ.

ಆಸ್ತಿ ವಸೂಲಾತಿ ನಿರ್ವಹಣಾ ಶಾಖೆ,
ಕರ್ನಾಟಕ ಬ್ಯಾಂಕ್ ಕಟ್ಟಡ, ಮೊದಲ ಮಹಡಿ,
ವಾರ್ಡ್ ನಂ.29, ಮರಳೂರು ಎಕ್ಸ್‌ಟೆನ್ಷನ್, ಸದಾಶಿವನಗರ,
ತುಮಕೂರು-572105

ದೂರವಾಣಿ: 0816 - 2294913
ಇ-ಮೇಲ್: tum.arm@ktkbank.com
ವೆಬ್‌ಸೈಟ್: www.karnatakabank.com
CIN: L85110KA1924PLC001128

ಸ್ವಾಧೀನತೆಯ ಪ್ರಕಟಣೆ (ಸ್ಥಿರಾಸ್ತಿಗಳಿಗೆ ಸಂಬಂಧಿಸಿದಂತೆ)

ಕರ್ನಾಟಕ ಬ್ಯಾಂಕ್ ಲಿಮಿಟೆಡ್‌ನ ಅಧಿಕೃತ ಅಧಿಕಾರಿಯವರು ಸೆಕ್ಯೂರಿಟೈಜೇಷನ್ ಅಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಶಿಯಲ್ ಅಸೆಟ್ಸ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟ್ರೆಸ್ಟ್ ಆಕ್ಟ್ 2002ರಂತೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸೆಕ್ಷನ್ 13(12) ನಿಯಮ 3 ಸೆಕ್ಯೂರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮ 2002ರಂತೆ ಈ ಕೆಳಗೆ ತಿಳಿಸಿದ ದಿನಾಂಕದಂದು ಈ ಕೆಳಕಂಡ ಸಾಲಗಾರರು/ ಅಡಮಾನುದಾರರು/ ಜಾಮೀನುದಾರರು/ಸಹ-ಬಾಧ್ಯತಾದಾರರಿಗೆ ಈ ಕೆಳಗೆ ತಿಳಿಸಿದಂತೆ ತಗಾದೆ ನೋಟೀಸನ್ನು ನೀಡಲಾಗಿತ್ತು. ಈ ಕೆಳಗೆ ತಿಳಿಸಿದ ನೋಟೀಸ್ ತಲುಪಿದ **60 ದಿನಗಳ** ಒಳಗಾಗಿ ಬಾಕಿ ಮೊತ್ತವನ್ನು ಹಾಗೂ ಇತರೆ ವೆಚ್ಚಗಳನ್ನು ಮರುಪಾವತಿಸಲು ತಿಳಿಸಲಾಗಿತ್ತು.

1. ಸಾಲಗಾರರ / ಅಡಮಾನದಾರರು / ಜಾಮೀನುದಾರರ/ ಸಹ-ಬಾಧ್ಯತಾದಾರರ ಹೆಸರು ಮತ್ತು ವಿಳಾಸ : (1) **ಶ್ರೀ ಪ್ರಭಾಕರ್ ಬಿ ಕೆ,** ಬಿನ್ ಶ್ರೀ.ಕರೀಗೌಡ, (2) **ಶ್ರೀಮತಿ. ಕೋಮಲಾ** ಕೋಂ ಶ್ರೀ.ಪ್ರಭಾಕರ್ ಬಿ ಕೆ, ಇವರಿಬ್ಬರ ವಿಳಾಸ : ನಂ.53, ಪಂತರಪಾಳ್ಯ, ನಾಯಂಡಹಳ್ಳಿ, ಬೆಂಗಳೂರು ಉತ್ತರ, ಬೆಂಗಳೂರು ಗ್ರಾಮಾಂತರ, ಬೆಂಗಳೂರು-560039.

ಶಾಖೆಯ ಹೆಸರು : ಬೂದಿಹಾಳ ಜಿಪಿ **ಡಿಮ್ಯಾಂಡ್ ನೋಟೀಸ್ ದಿನಾಂಕ : 12.04.2024**

ಬೇಡಿಕೆಯ ಮೊತ್ತ : **ಟಿಎಲ್ ಖಾತೆ ಸಂಖ್ಯೆ : 9537001600003201 ರ ಅಡಿಯಲ್ಲಿ ರೂ. 61,93,375.11 (ರೂಪಾಯಿ ಅರವತ್ತೊಂದು ಲಕ್ಷದ ತೊಂಭತ್ತಮೂರು ಸಾವಿರದ ಮುನ್ನೂರ ಎಪ್ಪತ್ತೈದು ಮತ್ತು ಹನ್ನೊಂದು ಪೈಸೆ ಮಾತ್ರ) ಜೊತೆಗೆ ದಿನಾಂಕ: 03.04.2024 ರಿಂದ ಕ್ರಮವಾಗಿ ಮುಂದಿನ ಬಡ್ಡಿ ಹಾಗೂ ಇತರೆ ವೆಚ್ಚಗಳನ್ನು ಪಾವತಿಸಬೇಕಾಗುವುದು.**

ಸ್ವಾಧೀನಪಡಿಸಿಕೊಂಡ ದಿನಾಂಕ : 26.07.2024

ಸ್ವಾಧೀನಪಡಿಸಿಕೊಂಡ ದಿನಾಂಕದಂದು ಬಾಕಿ ಉಳಿದಿರುವ ಮೊತ್ತ : **ಟಿಎಲ್ ಖಾತೆ ಸಂಖ್ಯೆ : 9537001600003201 ರ ಅಡಿಯಲ್ಲಿ ರೂ. 60,49,229.11 (ರೂಪಾಯಿ ಅರವತ್ತು ಲಕ್ಷದ ನಲವತ್ತೊಂಭತ್ತು ಸಾವಿರದ ಇನ್ನೂರ ಇಪ್ಪತ್ತೊಂಭತ್ತು ಮತ್ತು ಹನ್ನೊಂದು ಪೈಸೆ ಮಾತ್ರ) ಜೊತೆಗೆ ದಿನಾಂಕ: 03.07.2024 ರಿಂದ ಕ್ರಮವಾಗಿ ಮುಂದಿನ ಬಡ್ಡಿ ಹಾಗೂ ಇತರೆ ವೆಚ್ಚಗಳನ್ನು ಪಾವತಿಸಬೇಕಾಗುವುದು.**

ಸ್ಥಿರಾಸ್ತಿ ವಿವರ : **ಶ್ರೀ. ಪ್ರಭಾಕರ್.ಬಿ.ಕೆ.** ರವರಿಗೆ ಸೇರಿದ ಎಲ್ಲಾ ಭಾಗ ಮತ್ತು ವಿಭಾಗಗಳ **ಸ್ವತ್ತಿನ ನಿವೇಶನ ನಂ. 9, ಹೊಸ ಖಾತಾ ನಂ. 50/1, ಹಳೆ ಖಾತಾ ನಂ. 50, ವಿಸ್ತೀರ್ಣ 1480 ಚದರ ಅಡಿ,** ಜೊತೆಗೆ ಕಟ್ಟಡವನ್ನು ನಿರ್ಮಿಸಲಾಗಿದ್ದು, ಈ ಆಸ್ತಿಯು 3ನೇ ಕ್ರಾಸ್, ದೊಡ್ಡಗೊಲ್ಲರಹಟ್ಟಿ, ಸರ್ಕಾರಿ ಸ್ಕೂಲ್ ಹತ್ತಿರ, ನಾಗದೇವನಹಳ್ಳಿ ಗ್ರಾಮ, ಕೆಂಗೇರಿ ಹೋಬಳಿ, ಬೆಂಗಳೂರಿನಲ್ಲಿದೆ. **ಚಕ್ಕುಬಂದಿ : ಪೂರ್ವಕ್ಕೆ:** ಸ್ವತ್ತಿನ ನಿವೇಶನನಂ. 10, **ಪಶ್ಚಿಮಕ್ಕೆ:** ರಸ್ತೆ, **ಉತ್ತರಕ್ಕೆ:** ಸ್ವತ್ತಿನ ನಿವೇಶನ ನಂ. 7, **ದಕ್ಷಿಣಕ್ಕೆ:** ರಸ್ತೆ.

2. ಸಾಲಗಾರರ / ಅಡಮಾನದಾರರು / ಜಾಮೀನುದಾರರ/ ಸಹ-ಬಾಧ್ಯತಾದಾರರ ಹೆಸರು ಮತ್ತು ವಿಳಾಸ : (1) **ಮೆ॥ ಸಂಕಲ್ಪ ಕಾಯರ್ ಇಂಡಸ್ಟ್ರೀಸ್, ಪ್ರತಿನಿಧಿಸುವ ಮಾಲೀಕರು: ಶ್ರೀಮತಿ ರೂಪ ಕೆ ವಿ,** ಸರ್ವೆ ನಂ.69, ಖಾತಾ ನಂ.263 263 69, ಅಜ್ಜಗೊಂಡನಹಳ್ಳಿ ಗ್ರಾಮ, ಬೆಳವಿ ಹೋಬಳಿ, ಎನ್ ಆರ್ ಕೋರಾ ಬಾರ್ಡರ್, ತುಮಕೂರು-572107, ತುಮಕೂರು ಜಿಲ್ಲೆ, ಕರ್ನಾಟಕ. (2) **ಶ್ರೀಮತಿ.ರೂಪ ಕೆ ವಿ,** ಕೋಂ ಶ್ರೀ. ನಟರಾಜ್.ಆರ್, ಗಂಗಾ ನಿಲಯ, 1ನೇ ಮೇನ್, 7ನೇ ಕ್ರಾಸ್, ಶ್ರೀನಗರ, ತುಮಕೂರು-572103, ತುಮಕೂರು ಜಿಲ್ಲೆ, ಕರ್ನಾಟಕ. (3) **ಶ್ರೀಮತಿ.ಸುಜಾತಾ ಕೆ,** ಕೋಂ ಶ್ರೀ.ಚಂದ್ರಶೇಖರ್ ಬಿ, 730, ಗಣಿಬೈರವೇಶ್ವರ ಕೃಪಾ, 9ನೇ ಅಡ್ಡರಸ್ತೆ, 3ನೇ ಲಿಂಕ್ ರಸ್ತೆ, ಎಸ್‌ಐಟಿ ಎಕ್ಸ್‌ಟೆನ್ಷನ್, ತುಮಕೂರು-572103, ತುಮಕೂರು ಜಿಲ್ಲೆ, ಕರ್ನಾಟಕ.

ಶಾಖೆಯ ಹೆಸರು : ತುಮಕೂರು- ಎಸ್‌ಐಟಿ ಕ್ಯಾಂಪಸ್ **ಡಿಮ್ಯಾಂಡ್ ನೋಟೀಸ್ ದಿನಾಂಕ : 12.09.2023**

ಬೇಡಿಕೆಯ ಮೊತ್ತ : **ಪಿಎಸ್‌ಟಿಎಲ್ ಖಾತೆ ಸಂಖ್ಯೆ : 7687001800004101 ರ ಅಡಿಯಲ್ಲಿ ರೂ. 44,80,491.98 (ರೂಪಾಯಿ ನಲವತ್ತನಾಲ್ಕು ಲಕ್ಷದ ಎಂಭತ್ತು ಸಾವಿರದ ನಾಲ್ಕುನೂರ ತೊಂಭತ್ತೊಂದು ಮತ್ತು ತೊಂಭತ್ತೆಂಟು ಪೈಸೆ ಮಾತ್ರ) ಜೊತೆಗೆ ದಿನಾಂಕ: 20.08.2023 ರಿಂದ ಕ್ರಮವಾಗಿ ಮುಂದಿನ ಬಡ್ಡಿ ಹಾಗೂ ಇತರೆ ವೆಚ್ಚಗಳನ್ನು ಪಾವತಿಸಬೇಕಾಗುವುದು.**

ಸ್ವಾಧೀನಪಡಿಸಿಕೊಂಡ ದಿನಾಂಕ : 26.07.2024

ಸ್ವಾಧೀನಪಡಿಸಿಕೊಂಡ ದಿನಾಂಕದಂದು ಬಾಕಿ ಉಳಿದಿರುವ ಮೊತ್ತ : **ಪಿಎಸ್‌ಟಿಎಲ್ ಖಾತೆ ಸಂಖ್ಯೆ : 7687001800004101 ರ ಅಡಿಯಲ್ಲಿ ರೂ. 51,45,068.98 (ರೂಪಾಯಿ ಐವತ್ತೊಂದು ಲಕ್ಷದ ನಲವತ್ತೈದು ಸಾವಿರದ ಅರವತ್ತೆಂಟು ಮತ್ತು ತೊಂಭತ್ತೆಂಟು ಪೈಸೆ ಮಾತ್ರ) ಜೊತೆಗೆ ದಿನಾಂಕ: 20.07.2024 ರಿಂದ ಕ್ರಮವಾಗಿ ಮುಂದಿನ ಬಡ್ಡಿ ಹಾಗೂ ಇತರೆ ವೆಚ್ಚಗಳನ್ನು ಪಾವತಿಸಬೇಕಾಗುವುದು.**

ಸ್ಥಿರಾಸ್ತಿಗಳ ವಿವರ : ಶ್ರೀಮತಿ. ಸುಜಾತ ರವರಿಗೆ ಸೇರಿದ ಎಲ್ಲಾ ಭಾಗ ಮತ್ತು ವಿಭಾಗಗಳ ಸ್ವತ್ತಿನ **ವಾಸಯೋಗ್ಯ ಸ್ವತ್ತಿನ ನಿವೇಶನ ನಂ. 519, ವಿಸ್ತೀರ್ಣ 2325 ಚದರ ಅಡಿ, ಈ ಆಸ್ತಿಯು 8ನೇ ಬ್ಲಾಕ್, 9ನೇ ಮುಖ್ಯರಸ್ತೆ, ಬನಶಂಕರಿ 6ನೇ ಹಂತ, ಬೆಂಗಳೂರು-560062 ರಲ್ಲಿದೆ. ಚಕ್ಕುಬಂದಿ : ಪೂರ್ವಕ್ಕೆ:** ರಸ್ತೆ, **ಪಶ್ಚಿಮಕ್ಕೆ:** ನಿವೇಶನ ನಂ. 544, **ಉತ್ತರಕ್ಕೆ:** ನಿವೇಶನ ನಂ. 518, **ದಕ್ಷಿಣಕ್ಕೆ:** ನಿವೇಶನ ನಂ.520.

3. ಸಾಲಗಾರರ / ಅಡಮಾನದಾರರು / ಜಾಮೀನುದಾರರ/ ಸಹ-ಬಾಧ್ಯತಾದಾರರ ಹೆಸರು ಮತ್ತು ವಿಳಾಸ : (1) **ಶ್ರೀ.ಪರಮಶಿವಯ್ಯ** ಬಿನ್ ಲೇಟ್.ಮಲ್ಲಯ್ಯ (2) **ಶ್ರೀ.ಅವಿನಾಶ್ ಜೆ ಪಿ,** ಬಿನ್ ಶ್ರೀ ಪರಮಶಿವಯ್ಯ (3) **ಶ್ರೀಮತಿ.ರುದ್ರಾಣಮ್ಮ** ಕೋಂ ಶ್ರೀ. ಪರಮಶಿವಯ್ಯ, ಇವರೆಲ್ಲರ ವಿಳಾಸ : ನಂ.94, ಜಾಲಮಂಗಲ ಅಂಚೆ, ಕೂಟಗಲ್ ಹೋಬಳಿ, ಜಾಲಮಂಗಲ, ರಾಮನಗರ-562159, ಕರ್ನಾಟಕ.

ಶಾಖೆಯ ಹೆಸರು : ರಾಮನಗರ **ಡಿಮ್ಯಾಂಡ್ ನೋಟೀಸ್ ದಿನಾಂಕ : 22.02.2024**

ಬೇಡಿಕೆಯ ಮೊತ್ತ : **ಟಿಎಲ್ ಖಾತೆ ಸಂಖ್ಯೆ: 6527001600033801 ರ ಅಡಿಯಲ್ಲಿ ರೂ. 27,78,525.50/- (ರೂಪಾಯಿ ಇಪ್ಪತ್ತೇಳು ಲಕ್ಷದ ಎಪ್ಪತ್ತೆಂಟು ಸಾವಿರದ ಐದುನೂರ ಇಪ್ಪತ್ತೈದು ಮತ್ತು ಐವತ್ತು ಪೈಸೆ ಮಾತ್ರ) ಜೊತೆಗೆ 13.02.2024 ರಿಂದ ಕ್ರಮವಾಗಿ ಮುಂದಿನ ಬಡ್ಡಿ ಹಾಗೂ ಇತರೆ ವೆಚ್ಚಗಳನ್ನು ಪಾವತಿಸಬೇಕಾಗುವುದು.**

ಸ್ವಾಧೀನಪಡಿಸಿಕೊಂಡ ದಿನಾಂಕ : 26.07.2024

ಸ್ವಾಧೀನಪಡಿಸಿಕೊಂಡ ದಿನಾಂಕದಂದು ಬಾಕಿ ಉಳಿದಿರುವ ಮೊತ್ತ : **ಟಿಎಲ್ ಖಾತೆ ಸಂಖ್ಯೆ: 6527001600033801 ರ ಅಡಿಯಲ್ಲಿ ರೂ. 28,88,405.72 (ರೂಪಾಯಿ ಇಪ್ಪತ್ತೆಂಟು ಲಕ್ಷದ ಎಂಭತ್ತೆಂಟು ಸಾವಿರದ ನಾಲ್ಕುನೂರ ಐದು ಮತ್ತು ಎಪ್ಪತ್ತೆರಡು ಪೈಸೆ ಮಾತ್ರ) ಜೊತೆಗೆ 13.07.2024 ರಿಂದ ಕ್ರಮವಾಗಿ ಮುಂದಿನ ಬಡ್ಡಿ ಹಾಗೂ ಇತರೆ ವೆಚ್ಚಗಳನ್ನು ಪಾವತಿಸಬೇಕಾಗುವುದು.**

ಸ್ಥಿರಾಸ್ತಿ ವಿವರ : **ಶ್ರೀ.ಪರಮಶಿವಯ್ಯ** ರವರಿಗೆ ಸೇರಿದ ಎಲ್ಲಾ ಭಾಗ ಮತ್ತು ವಿಭಾಗಗಳ **ವಾಸಯೋಗ್ಯ ಸ್ವತ್ತಿನ ನಿವೇಶನ ನಂ. 22, ಹೊಸ ಮುನಿಸಿಪಲ್ ಖಾತಾ ನಂ. 891/891/22, ಹಳೆ ನಂ. 891/22, ಅಸೆಸ್‌ಮೆಂಟ್ ನಂ. 891/22, ಪಿಐಡಿ ನಂ.31-1-536-212, ನಿವೇಶನದ ವಿಸ್ತೀರ್ಣ 1200 ಚದರ ಅಡಿ** ಮತ್ತು ಮನೆಯನ್ನು ನಿರ್ಮಿಸಲಾಗಿರುತ್ತದೆ. ಈ ಆಸ್ತಿಯು ವಾರ್ಡ್ ನಂ. 31, ಬ್ಲಾಕ್-1, 14ನೇ ಮೇನ್, ಅರ್ಚಕರಹಳ್ಳಿ, 1ನೇ ಹಂತ, ರಾಮನಗರ ಟೌನ್ ಮತ್ತು ರಾಮನಗರ ಜಿಲ್ಲೆಯಲ್ಲಿದೆ. **ಚಕ್ಕುಬಂದಿ : ಪೂರ್ವಕ್ಕೆ:** 40 ಅಡಿ ರಸ್ತೆ, **ಪಶ್ಚಿಮಕ್ಕೆ:** ನಿವೇಶನ ನಂ. 29, **ಉತ್ತರಕ್ಕೆ:** 30 ಅಡಿ ರಸ್ತೆ, **ದಕ್ಷಿಣಕ್ಕೆ:** ನಿವೇಶನ ನಂ. 21.

ಸಾಲಗಾರರು/ಅಡಮಾನುದಾರರು/ಜಾಮೀನುದಾರರು/ಸಹ-ಬಾಧ್ಯತಾದಾರರು ಹಣವನ್ನು ಮರುಪಾವತಿಸಲು ವಿಫಲರಾದ್ದರಿಂದ ಮೇಲೆ ತಿಳಿಸಿದ ಕಾಯ್ದೆಯ ಸೆಕ್ಷನ್ 13(4) ಹಾಗೂ ಮೇಲೆ ತಿಳಿಸಿದ ನಿಯಮದ ನಿಯಮ 8ರ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕೆಳಸಹಿದಾರರು **ಈ ಮೇಲೆ ವಿವರಿಸಿದ ಸ್ಥಿರಾಸ್ತಿಯನ್ನು ದಿನಾಂಕ: 26.07.2024 ರಂದು ಸ್ವಾಧೀನಪಡಿಸಿಕೊಂಡಿರುತ್ತಾರೆಂದು** ಸಾಲಗಾರರು / ಅಡಮಾನುದಾರರು / ಜಾಮೀನುದಾರರು/ ಸಹ-ಬಾಧ್ಯತಾದಾರರು ಹಾಗೂ ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸಿದೆ.

ಸಾಲಗಾರರು/ಅಡಮಾನದಾರರು/ಜಾಮೀನುದಾರರು/ಸಹ-ಬಾಧ್ಯತಾದಾರರು ಹಾಗೂ ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ ಈ ಮೇಲೆ ವಿವರಿಸಿದ ಸ್ವತ್ತುಗಳೊಂದಿಗೆ ಯಾರು ವ್ಯವಹರಿಸಕೂಡದು, ವ್ಯವಹರಿಸಿದ್ದೇ ಆದಲ್ಲಿ **ಕರ್ನಾಟಕ ಬ್ಯಾಂಕ್ ಲಿ.,** ನ ಮೇಲೆ ತಿಳಿಸಿದ ಶಾಖೆಗಳ ಸಾಲದ ಖಾತೆಗಳ ಬಾಕಿ ಮೊತ್ತ ಹಾಗೂ ಅದರ ಮೇಲಿನ ಬಡ್ಡಿ ಮತ್ತು ಇತರೆ ಖರ್ಚು ವೆಚ್ಚಗಳನ್ನು ಇವರಿಗೆ ಪಾವತಿಸಬೇಕಾಗುವುದು.

[ಭದ್ರತಾ ಸ್ವತ್ತನ್ನು ಹಿಂದಕ್ಕೆ ಪಡೆಯಲು ಕಾಯ್ದೆಯ ಉಪವಿಭಾಗ 13(8)ರ ಅಡಿಯಲ್ಲಿ ನಮೂದಿಸಿದ ಸಮಯದ ಒಳಗೆ ಅವಕಾಶವಿರುವುದಾಗಿ ಈ ಮೂಲಕ ಸಾಲಗಾರರ/ಅಡಮಾನದಾರರ/ಜಾಮೀನುದಾರರ/ಸಹ-ಬಾಧ್ಯತಾದಾರರ ಗಮನಕ್ಕೆ ತರಲಾಗಿದೆ].

ಸ್ಥಳ: ಬೆಂಗಳೂರು/ರಾಮನಗರ
ದಿನಾಂಕ: 26.07.2024

ಸಹಿ/- ಮುಖ್ಯ ವ್ಯವಸ್ಥಾಪಕರು & ಅಧಿಕೃತ ಅಧಿಕಾರಿ
ಕರ್ನಾಟಕ ಬ್ಯಾಂಕ್ ಲಿ.,

ಅತ್ಯಾಚಾರ ಪ್ರಕರಣ: ಕಾಯಿದೆ ತಿದ್ದುಪಡಿಗೆ ಸೂಚನೆ

ಬೆಂಗಳೂರು: ಅತ್ಯಾಚಾರಕ್ಕೆ ಒಳಗಾದ ಸಂತ್ರಸ್ತೆಯರ ಖಾಸಗಿತನದ ಹಕ್ಕನ್ನು ರಕ್ಷಣೆ ಮಾಡಬೇಕಾಗಿದ್ದು, ಆಸ್ಪತ್ರೆಗಳಲ್ಲಿ ಮಹಿಳಾ ವೈದ್ಯರಿಂದಲೇ ವೈದ್ಯಕೀಯ ಪರೀಕ್ಷೆ ನಡೆಸುವ ಕುರಿತಂತೆ ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ ಯ(ಬಿಎನ್‌ಎಸ್‌ಎಸ್) ಸೆಕ್ಷನ್

184ನ್ನು ತಿದ್ದುಪಡಿ ತರಲು ಕೇಂದ್ರ ಸರಕಾರಕ್ಕೆ ಹೈಕೋರ್ಟ್ ನಿರ್ದೇಶನ ನೀಡಿದೆ.

ಅತ್ಯಾಚಾರ ಮತ್ತು ಕೊಲೆ ಯತ್ನ ಆರೋಪ ಎದುರಿಸುತ್ತಿರುವ ಅಜಯ್ ಕುಮಾರ್ ಭೇರಾ ಸಲ್ಲಿಸಿದ್ದ ಜಾಮೀನು ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ಜಿ.ಉಮಾ ಅವರಿದ್ದ ನ್ಯಾಯಪೀಠ ಈ ಸೂಚನೆ ನೀಡಿದೆ. ಅಲ್ಲದೆ, ಅರ್ಜಿಯನ್ನು ವಜಾಗೊಳಿಸಿದೆ.

ಅತ್ಯಾಚಾರ ಸಂತ್ರಸ್ತೆಯರ ವೈದ್ಯಕೀಯ ಪರೀಕ್ಷೆಯನ್ನು ನೋಂದಾಯಿತ ಮಹಿಳಾ ವೈದ್ಯಕೀಯ ಅಧಿಕಾರಿಗಳು ಅಥವಾ ಅಂತಹ ಅಧಿಕಾರಿಗಳ ಮೇಲ್ವಿಚಾರಣೆಯಲ್ಲಿ ಮಾತ್ರ ನಡೆಸಬೇಕು ಎಂಬುದನ್ನು ರಾಜ್ಯ ಮತ್ತು ಕೇಂದ್ರ ಸರಕಾರಗಳು ಖಚಿತಪಡಿಸಿಕೊಳ್ಳಬೇಕು. ಅತ್ಯಾಚಾರಕ್ಕೊಳಗಾದ ಸಂತ್ರಸ್ತೆಯರ ಕುರಿತಂತೆ ಪರಿಶೀಲನೆ ಮತ್ತು ವಿಚಾರಣೆಗೊಳಪಡಿಸುವ ಪೊಲೀಸ್ ಅಧಿಕಾರಿಗಳು, ಪ್ರಾಸಿಕ್ಯೂಟರ್‌ಗಳು, ವೈದ್ಯರು ಹಾಗೂ ಇತರ ವೈದ್ಯಕೀಯ ಸಿಬ್ಬಂದಿಗೆ ಈ ಕುರಿತ ಸೂಕ್ಷ್ಮತೆ ಮತ್ತು ಅರಿವು ಮೂಡಿಸಬೇಕು ಎಂದು ನ್ಯಾಯಪೀಠ ಸೂಚಿಸಿದೆ.

ವಿಚಾರಣೆ ವೇಳೆ ದಾಖಲೆ ಪರಿಶೀಲಿಸಿದ ನ್ಯಾಯಪೀಠ, ಪ್ರಕರಣದಲ್ಲಿ ಸಂತ್ರಸ್ತೆಯನ್ನು ಆರು ತಾಸುಗಳ ಕಾಲ ವೈದ್ಯಕೀಯ ಅಧಿಕಾರಿಗಳು ಪರಿಶೀಲನೆ ನಡೆಸಿದ್ದಾರೆ. ಆದರೆ, ಘಟನೆ ಸಂಬಂಧ ಯಾವುದೇ ವಿವರಣೆ ಮತ್ತು ಅಭಿಪ್ರಾಯ ವ್ಯಕ್ತಪಡಿಸಿಲ್ಲ ಎಂದು ಬೇಸರ ವ್ಯಕ್ತಪಡಿಸಿದ ಪೀಠ, ಅತ್ಯಾಚಾರಕ್ಕೊಳಗಾದ ಸಂತ್ರಸ್ತೆಯನ್ನು ಪರಿಶೀಲಿಸುವ ವೇಳೆ ಸಂತ್ರಸ್ತೆಯ ಸ್ನೇಹಿಯಾಗಿರಬೇಕು. ಸಂತ್ರಸ್ತೆಯೂ ಗೌಪ್ಯತೆಯ ಹಕ್ಕನ್ನು ಹೊಂದಿರುತ್ತಾರೆ. ಹೀಗಾಗಿ ಆಕೆಯನ್ನು ಅತ್ಯಂತ ಸೂಕ್ಷ್ಮವಾಗಿ ವಿಚಾರಣೆ, ಪರಿಶೀಲನೆ ನಡೆಸುವ ಕಾರ್ಯ ನಡೆಯಬೇಕು ಎಂದು ಪೀಠ ಹೇಳಿದೆ. ಸಿಆರ್‌ಪಿಸಿ 164-ಎ ಅಡಿಯಲ್ಲಿ ಯಾವುದೇ (ಪುರುಷ-ಮಹಿಳೆ) ನೋಂದಾಯಿತ ವೈದ್ಯರು ಸಂತ್ರಸ್ತೆಯನ್ನು ಪರೀಕ್ಷಿಸಬಹುದಾಗಿದೆ ಎಂಬುದಾಗಿ ವಿವರಿಸಿತ್ತು. ಅದನ್ನು ಇದೀಗ ಬಿಎನ್‌ಎಸ್‌ಎಸ್ 184 ಅಡಿಯಲ್ಲಿ ಯಥಾವತ್ತಾಗಿ ಉಲ್ಲೇಖಿಸಲಾಗಿದೆ. ಇದರಿಂದ ಲೈಂಗಿಕ ದೌರ್ಜನ್ಯಕ್ಕೆ ಒಳಗಾದ ಸಂತ್ರಸ್ತೆಯರಿಗೆ ದೊಡ್ಡ ಅನ್ಯಾಯ ಮತ್ತು ಮುಜುಗರಕ್ಕೆ ಕಾರಣವಾಗಲಿದೆ ಎಂದು ಪೀಠ ತಿಳಿಸಿದೆ.

ಚಿನ್ನ -ಬೆಳ್ಳಿ ಕಳ್ಳತನ

ಬೆಂಗಳೂರು: ಜಮೀನ್ದಾರರೊಬ್ಬರ ಮನೆಗೆ ನುಗ್ಗಿರುವ ದುಷ್ಕರ್ಮಿಗಳು ನಗದು ಸೇರಿ ಕೋಟ್ಯಂತರ ಮೌಲ್ಯದ ಚಿನ್ನ ಬೆಳ್ಳಿ ಆಭರಣಗಳನ್ನು ದೋಚಿ ಪರಾರಿಯಾಗಿರುವ ದುರ್ಘಟನೆ ಎಚ್‌ಎಎಲ್ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ. ಎಚ್‌ಎಎಲ್‌ನ ನವೀನ್ ರೆಡ್ಡಿ ಎಂಬುವರ ಮನೆಗೆ ಮುಂಬಾಗಿಲ ಬೀಗ ಮುರಿದು ಒಳ ನುಗ್ಗಿರುವ ದುಷ್ಕರ್ಮಿಗಳು 10 ಸಾವಿರ ನಗದು,1 ಕೆಜಿ 750 ಗ್ರಾಂ ಚಿನ್ನ ಕೆಜಿಗಟ್ಟಲೆ ಬೆಳ್ಳಿ ಲೂಟಿಮಾಡಿ ಪರಾರಿಯಾಗಿದ್ದಾರೆ. ನವೀನ್ ರೆಡ್ಡಿ ವರ್ತೂರ್ ನಲ್ಲಿರುವ ಫಾರಂ ಹೌಸ್‌ಗೆ ಹೋಗಿದ್ದ ಸಮಯ ಸಾಧಿಸಿ ಕಳ್ಳತನ ಮಾಡಲಾಗಿದೆ.

ಮಖ್ನಾ ಕಾಡಾನೆ ಸೆರೆ ಹಿಡಿಯುವಲ್ಲಿ ಯಶಸ್ವಿ

ಆನೇಕಲ್: ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನದ ಕಾಡಂಚಿನಲ್ಲಿ ಓಡಾಡಿಕೊಂಡಿದ್ದ ಮಖ್ನಾ ಆನೆಯನ್ನು ಸೆರೆ ಹಿಡಿಯುವಲ್ಲಿ ಅಧಿಕಾರಿಗಳು ಯಶಸ್ವಿಯಾಗಿದ್ದಾರೆ.

ಭಾನುವಾರದಿಂದಲೇ ಸೀಗೆಕಟ್ಟೆಯಲ್ಲಿ ಬೀಡು ಬಿಟ್ಟಿದ್ದ, ದುಬಾರೆ ಮತ್ತು ಗುಪ್ಪೆ ಕೇಂದ್ರದಿಂದ ಬಂದ ಭೀಮ, ಮಹೇಂದ್ರ ಸಾಕಾನೆಗಳ ಸಹಾಯದೊಂದಿಗೆ ಸೋಮವಾರ ಮುಂಜಾನೆ ಮಕನಾ ಆನೆ ಸೆರೆಹಿಡಿಯಲು ಅಧಿಕಾರಿಗಳು ಹೊರಟರು. ಬಿಎನ್‌ಪಿ ವ್ಯಾಪ್ತಿಯ ತಟ್ಟಗುಪ್ಪೆ ಪ್ರದೇಶದಲ್ಲಿ ನಿಂತಿದ್ದ ಆನೆಯ ಸುಳಿವನ್ನು ಡ್ರೋನ್ ಮೂಲಕ ತಿಳಿದು, ಎರಡು ಆನೆ, ಮಾವುತರು ಹಾಗೂ ಎಂಟು ಸಿಬ್ಬಂದಿ ತಂಡ

ಆನೆಯನ್ನು ಸೆರೆಹಿಡಿಯುವಲ್ಲಿ ಯಶಸ್ವಿಯಾದರು.

ಆನೆ ಹಾಗೂ ಅಧಿಕಾರಿಗಳು ನೋಡುತ್ತಿದ್ದಂತೆ ಆನೆ ಘೀಳಿಟ್ಟು ದಾಳಿಮಾಡಲು ಮುಂದಾಯಿತು. ಒಂಟಿ ಆನೆಯ ಸ್ವಭಾವ ಅರಿತಿದ್ದ ವೈದ್ಯರ ತಂಡ ಶಾಪ್ ಶೂಟರ್‌ಗಳಿಂದ ಅರಿವಳಿಕೆ ಪ್ರಯೋಗಿ ಸಿದರು. ಬಳಿಕ, ಭೀಮ ಹಾಗೂ ಮಹೇಂದ್ರ ಆನೆಗಳು ಮಕನಾ ಆನೆಯನ್ನು ಅಟ್ಟಿಸಿಕೊಂಡು ಓಡಿದವು. ಒಂದು ಕಿಮೀ ದೂರ ಕ್ರಮಿಸಿದ ಆನೆ ಅರಿವಳಿಕೆ ಪ್ರಭಾವದಿಂದ ನಿತ್ರಾಣಗೊಂಡು ನೆಲಕ್ಕುರುಳಿತು. ಬಳಿಕ ಆನೆಯನ್ನು ಬನ್ನೇರು ಘಟ್ಟಕ್ಕೆ ಸ್ಥಳಾಂತರಿಸಲಾಗಿದ್ದು, ಮಂಗಳವಾರ ವೈದ್ಯರ ತಂಡ ಆರೋಗ್ಯ ತಪಾಸಣೆ ನಡೆಸಲಿದ್ದಾರೆ.

ಮಾನ್ಯ ಪ್ರಧಾನ ಕಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ರಾಮನಗರ
ಸಿ.ಮಿಸ್.ನಂ. 78 /2024

ಅರ್ಜಿದಾರರು: 1) ಶ್ರೀ ಮಂಟನಿಂಗಯ್ಯ ಬಿನ್ ಲೇಟ್ ಜೋಗಯ್ಯ @ಬೋರಯ್ಯ ವಯಸ್ಸು ಸುಮಾರು 69 ವರ್ಷ 2) ಗಿರೀಶ್ ಟಿ.ಎಂ ಬಿನ್ ಮಂಟನಿಂಗಯ್ಯ ವಯಸ್ಸು ಸುಮಾರು 34 ವರ್ಷ 1 ಮತ್ತು 2 ರವರ ವಾಸ: ವಿಳಾಸ: ತಡಿಕವಾಗಿಲು ಗ್ರಾಮ, ಕೂಟಗಲ್ ಹೋಬಳಿ, ರಾಮನಗರ ತಾಲ್ಲೂಕು, ರಾಮನಗರ ಜಿಲ್ಲೆ. 3) ಶ್ರೀಮತಿ ಉಮಾ ಬಿನ್ ಮಂಟನಿಂಗಯ್ಯ ಕೋಂ ಲೇಟ್ ಆರ್.ಪುಟ್ಟಸ್ವಾಮಿ ವಯಸ್ಸು ಸುಮಾರು 39 ವರ್ಷ ನಂ. 30, ಶ್ರೀನಿವಾಸಪುರ ಕಾಲೋನಿ, ಜೆ.ಎಸ್.ಎಸ್. ಸ್ಕೂಲ್ ಹತ್ತಿರ, ಕೆಂಗೇರಿ, ಬೆಂಗಳೂರು ದಕ್ಷಿಣ ತಾಲ್ಲೂಕು.

ವಿರುದ್ಧ

ಪ್ರತಿ ಅರ್ಜಿದಾರರು: 1. ಶ್ರೀ ರವಿಕುಮಾರ್ ಬಿನ್ ಲೇಟ್ ಚಿಕ್ಕಣ್ಣ ಮತ್ತು ಲೇಟ್ ಜಯಮ್ಮ ವಯಸ್ಸು ಸುಮಾರು 45 ವರ್ಷ ವಾಸ: ಅರಳಕುಪ್ಪೆ ಗ್ರಾಮ, ಮಾಗಡಿ ತಾಲ್ಲೂಕು, ರಾಮನಗರ ಜಿಲ್ಲೆ 2. ತಹಸೀಲ್ದಾರ್, ರಾಮನಗರ, ಮತ್ತು ಜನನ ಮತ್ತು ಮರಣ ನೊಂದಣಾಧಿಕಾರಿಗಳು, ರಾಮನಗರ.

ಪ್ರಕಟಣೆ

ಈ ಮೇಲ್ಕಂಡ ಪ್ರಕರಣದಲ್ಲಿ ಮಾನ್ಯ ಘನ ನ್ಯಾಯಾಲಯವು ಎದುರುದಾರರಿಗೆ ನಿರ್ದೇಶನ ನೀಡಿ, ಅರ್ಜಿದಾರರ ತಂದೆ ಮತ್ತು 2 ಮತ್ತು 3ನೇ ಅರ್ಜಿದಾರರ ಹಾಗೂ 1ನೇ ಪ್ರತಿವಾದಿಯ ತಾತನವರ ಜೋಗಯ್ಯ @ ಬೋರಯ್ಯನವರು ದಿನಾಂಕ: 22/06/1970 ರಲ್ಲಿ ಮರಣ ಹೊಂದಿದ್ದು, ಸದರಿ ಪ್ರತಿವಾದಿ ಕಛೇರಿಯ ನೋಂದಣಿ ಮಾಡಿಕೊಂಡು ಅರ್ಜಿದಾರರಿಗೆ ಅವರ ತಂದೆಯವರ ಮರಣ ಸಮರ್ಥನಾ ಪತ್ರ ನೀಡುವಂತೆ ಸದರಿ ಪ್ರತಿ ಅರ್ಜಿದಾರರಿಗೆ ಆದೇಶ ಮಾಡಬೇಕೆಂದು ಕೇಳಿಕೊಳ್ಳುತ್ತಿದ್ದಾರೆ, ಸದರಿ ಪ್ರಕರಣದ ವಿಚಾರಣೆಯು ಘನ ನ್ಯಾಯಾಲಯದಲ್ಲಿ ದಿನಾಂಕ: 17-09-2024 ರಂದು ಬೆಳಿಗ್ಗೆ 11-00 ಗಂಟೆಗೆ ನಿಗಧಿಯಾಗಿರುತ್ತದೆ. ಸದರಿ ದಿನಾಂಕದಂದು ಈ ಪ್ರಕರಣದಲ್ಲಿ ಹಿತಾಸಕ್ತಿಯುಳ್ಳ ಅಥವಾ ತಕರಾರು ಉಳ್ಳವರು ಯಾರೇ ಆಗಲೀ ಖುದ್ದಾಗಿ ಆಗಲೀ ಅಥವಾ ವಕೀಲರ ಮುಖಾಂತರವಾಗಲೀ ದಾಖಲತಿಗಳೊಂದಿಗೆ ಹಾಜರಾಗಿ ತಮ್ಮ ಸಮರ್ಥನೆಯನ್ನು ದಾಖಿಲಿಸತಕ್ಕದ್ದು, ತಪ್ಪಿದ್ದಲ್ಲಿ, ಅಂತಹ ಯಾವುದೇ ತಕರಾರು ಇಲ್ಲವೆಂದು ಪರಿಗಣಿಸಿ, ಪ್ರಕರಣವನ್ನು ಲಭ್ಯ ದಾಖಲಾತಿಗಳ ಮೇಲೆ ಇತ್ಯರ್ಥಪಡಿಸಲಾಗುವುದು ಎಂದು ತಿಳಿಯುವುದು. 27/07/2024 ರಂದು ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ನೀಡಲಾಗಿದೆ.

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಮಾನ್ಯ ಪ್ರಧಾನ ಕಿರಿಯ ಸಿವಿಲ್, ನ್ಯಾಯಾಧೀಶರು
ನ್ಯಾಯಾಲಯ, ಕನಕಪುರ

ಅರ್ಜಿದಾರರ ಪರ ವಕೀಲರು
ಜೆ.ಕೆ.ರಂಗಸ್ವಾಮಿ, ವಕೀಲರು
ಸ್ಥಳ: ರಾಮನಗರ

ಬಿಬಿಎಂಪಿ ಕಸದ ಲಾರಿಗೆ ಇಬ್ಬರು ಟೆಕ್ಕಿಗಳು ಬಲಿ

ಬೆಂಗಳೂರು: ಬಿಬಿಎಂಪಿ ಕಸದ ಲಾರಿ ದ್ವಿಚಕ್ರ ವಾಹನಕ್ಕೆ ಡಿಕ್ಕಿ ಹೊಡೆದ ಪರಿಣಾಮ ಇಬ್ಬರು ಸವಾರರು ಮೃತಪಟ್ಟ ಘಟನೆ ಭಾನುವಾರ ರಾತ್ರಿ ಕೆ.ಆರ್.ಸರ್ಕಲ್ ಬಳಿ ನಡೆದಿದೆ.

ಬಾಣಸವಾಡಿಯ ಪ್ರಶಾಂತ್ (25), ಶಿಲ್ಪಾ (27) ಮೃತ ದುರ್ದೈವಿಗಳು. ಇಬ್ಬರು ಬೈಕ್‌ನಲ್ಲಿ ಮೆಜೆಸ್ಟಿಕ್‌ನಿಂದ ಕೆ.ಆರ್.ವೃತ್ತದ ಕಡೆ ಬರುತ್ತಿದ್ದ ವೇಳೆ ವೇಗವಾಗಿ ಬಂದ ಬಿಬಿಎಂಪಿ ಕಸದ ಲಾರಿ ಬೈಕ್‌ಗೆ ಡಿಕ್ಕಿ ಹೊಡೆದಿದೆ. ಡಿಕ್ಕಿಯ ರಭಸಕ್ಕೆ ಕೆಳಗೆ ಬಿದ್ದ ಇವರ ಮೇಲೆ ಲಾರಿ ಹರಿದಿದೆ. ಲಾರಿ ಚಾಲಕ ಪರಾರಿಯಾಗಿದ್ದಾನೆ. ತೀವ್ರ ಗಾಯಗೊಂಡ ಯುವಕ-ಯುವತಿಯನ್ನು ಆಸ್ಪತ್ರೆಗೆ ಸಾಗಿಸುವಾಗ ಮಾರ್ಗಮಧ್ಯೆ ಮೃತಪಟ್ಟಿದ್ದಾರೆ. ಸ್ಥಳಕ್ಕೆ ಹಲಸೂರು ಗೇಟ್ ಸಂಚಾರ ಪೊಲೀಸರು ಭೇಟಿನೀಡಿದ್ದರು.

ಈ ಇಬ್ಬರ ಮೃತದೇಹಗಳನ್ನು ಮಾರ್ಥಾಸ್ ಆಸ್ಪತ್ರೆಯಲ್ಲಿಡಲಾಗಿತ್ತು. ಆಸ್ಪತ್ರೆ ಮುಂದೆ ಪೋಷಕರ ಆಕ್ರಂದನ ಮುಗಿಲು ಮುಟ್ಟಿತ್ತು. ಇನು, ಮೊಮ್ಮಗನ ಸಾವಿನ ವಿಚಾರ ತಿಳಿದು ಅಜ್ಜಿ ಕುಸಿದು ಬಿದ್ದ ಘಟನೆ ನಡೆದಿದೆ.

ನ್ಯಾಯ ಒದಗಿಸುವಂತೆ ತಂದೆ ಲೋಕೇಶ್ ಆಗ್ರಹ: ಕಸದ ವಾಹನ ಡಿಕ್ಕಿಯಾಗಿ ನನ್ನ ಮಗ, ಯುವತಿ ಮೃತಪಟ್ಟಿದ್ದಾರೆ. ಇಬ್ಬರೂ ಟಿಸಿಎಸ್‌ನಲ್ಲಿ ಕೆಲಸ ಮಾಡುತ್ತಿದ್ದರು. ಅಪಘಾತ ಎಸಗಿದ ಲಾರಿ ಚಾಲಕನನ್ನು ಕೂಡಲೇ ಬಂಧಿಸಬೇಕು. ನಮಗೆ ನ್ಯಾಯ ಒದಗಿಸಬೇಕು. ಇಲ್ಲದಿದ್ದರೆ ನಾನು, ನನ್ನ ಕುಟುಂಬ ಆತ್ಮಹತ್ಯೆ ಮಾಡಿಕೊಳ್ಳುತ್ತೇವೆ ಎಂದು ಪೊಲೀಸರ ಬಳಿ ಮೃತ ಪ್ರಶಾಂತ್ ತಂದೆ ಲೋಕೇಶ್ ಕಣ್ಣೀರು ಹಾಕಿದ್ದಾರೆ. ನನ್ನ ಮಗ ಇದೇ ಮಾರ್ಥಾಸ್ ಆಸ್ಪತ್ರೆಯಲ್ಲಿ ಜನಿಸಿದ್ದ. ಈಗ ಇದೇ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾನೆಂದು ಲೋಕೇಶ್ ಅಳಲು ತೋಡಿಕೊಂಡ ವೇಳೆ, ನೆರೆದವರ ಕಣ್ಣುಗಳು ಒದ್ದೆಯಾದವು.

ಬಿಬಿಎಂಪಿ ಕಸದ ಲಾರಿ ಅಪಘಾತದಲ್ಲಿ ಭಾನುವಾರ ರಾತ್ರಿ ಇಬ್ಬರು ಮೃತಪಟ್ಟ ಘಟನೆ ನಡೆದಿದೆ. ಬಿಬಿಎಂಪಿ ಮೃತರ ಕುಟುಂಬಗಳಿಗೆ ನೆರವು ಕೊಡಲಿದೆ. ಇದು ದುರದೃಷ್ಟಕರ ಘಟನೆ.

-ಪರಮೇಶ್ವರ್, ಗೃಹ ಸಚಿವ



ರಸ್ತೆಮೇಲೆ ಚೆಲ್ಲಾಡಿದ ರಕ್ತ: ಮೃತರ ಮೇಲೆ ಹರಿದ ಕಸದ ಲಾರಿ 10 ಮೀಟರ್‌ನಷ್ಟು ದೂರ ದೇಹಗಳನ್ನು ಎಳೆದೊಯ್ದಿದೆ. ರಸ್ತೆ ಮೇಲೆ ರಕ್ತ ಚೆಲ್ಲಾಡಿದೆ ಎಂದು ಪ್ರತ್ಯಕ್ಷದರ್ಶಿಗಳು ವಿವರಿಸಿದ್ದಾರೆ. ಅಪಘಾತದ ಬಳಿಕ ಕಸದ ಲಾರಿ ಚಾಲಕ ಪರಾರಿಯಾಗಿದ್ದಾನೆ. ಕೂಡಲೇ ಅಪಘಾತಕ್ಕೊಳಗಾದವರನ್ನು ಬೌರಿಂಗ್ ಆಸ್ಪತ್ರೆಗೆ ಕೊಂಡೊಯ್ಯಲಾದರೂ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾರೆ. ಹಲಸೂರು ಗೇಟ್ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪತಿ ಅಕ್ರಮ ನಂಟು ವಿಡಿಯೊ ಮಾಡಿ ಪತ್ನಿ ಆತ್ಮಹತ್ಯೆ

ಬೆಂಗಳೂರು: ಗಂಡನ ಅಕ್ರಮ ಸಂಬಂಧಕ್ಕೆ ಬೇಸತ್ತು ವಿವಾಹಿತ ಮಹಿಳೆಯೊಬ್ಬರು ಆತ್ಮಹತ್ಯೆಗೆ ಶರಣಾಗಿರುವ ಘಟನೆ ಅಂದ್ರಹಳ್ಳಿ ನಡೆದಿದೆ. ಮಾನಸ(25)ಆತ್ಮಹತ್ಯೆಗೆ ಶರಣಾದ ಮಹಿಳೆ. ಗಂಡನ ಮನೆಯಲ್ಲಿ ವಾಸವಿದ್ದ ಮಾನಸ ಭಾನುವಾರ ಸಂಜೆ 4 ಗಂಟೆಯ ವೇಳೆಗೆ ಫ್ಯಾನಿಗೆ ನೇಣು ಬಿಗಿದು ಆತ್ಮಹತ್ಯೆಗೆ ಶರಣಾಗಿದ್ದಾರೆ.

ಫ್ಯಾನಿನಲ್ಲಿ ನೇತಾಡುವ ಮುನ್ನ ಮೊಬೈಲ್ ನಲ್ಲಿ ವಿಡಿಯೊ ಮಾಡಿದ್ದಾರೆ. 6 ವರ್ಷದ ಹಿಂದೆ ದಿಲೀಪ್ ಜತೆ ಮಾನಸ ವಿವಾಹ ನಡೆದಿತ್ತು. ದಂಪತಿಗೆ 5 ವರ್ಷದ ಹೆಣ್ಣು ಮಗು ಇದೆ. ಕಳೆದ ಒಂದೂವರೆ ವರ್ಷದಿಂದ ದಿಲೀಪ್ ಬೇರೊಂದು ಮಹಿಳೆಯ ಸಹವಾಸ ಮಾಡಿದ್ದಾನೆ. ಈ ವಿಚಾರಕ್ಕೆ ಪತಿ, ಪತ್ನಿ ಮಧ್ಯೆ ಆಗಾಗ ಗಲಾಟೆ ನಡೆಯುತ್ತಿತ್ತು. ಇದರಿಂದ ಬೇಸತ್ತ ಮಾನಸ ಆತ್ಮಹತ್ಯೆಗೆ ಶರಣಾಗಿದ್ದಾಳೆ ಎಂದು ಪೋಷಕರು ಆರೋಪಿಸಿದ್ದಾರೆ. ಬ್ಯಾಡರಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸಮಾಚಾರ ಸಣ್ಣದಲ್ಲ

ಗ್ರಾ.ಪಂ.ಗೆ ರಾಹುಲ್ ಅವಿರೋಧ ಆಯ್ಕೆ

ಬೆಂಗಳೂರು: ಯಲಹಂಕ ಕ್ಷೇತ್ರದ ಜಾಲ ಹೋಬಳಿಯ ಮಾರೇನಹಳ್ಳಿ ಗ್ರಾ.ಪಂ.ಅಧ್ಯಕ್ಷರಾಗಿ ಅದೇ ಗ್ರಾಮದ ಪಿ.ರಾಹುಲ್ ಸೋಮವಾರ ಆಯ್ಕೆಯಾಗಿದ್ದಾರೆ.

ಮಾರೇನಹಳ್ಳಿ ಗ್ರಾ.ಪಂ.ಯಲ್ಲಿ ಒಟ್ಟು 20 ಸದಸ್ಯರಿದ್ದು, ಅಧ್ಯಕ್ಷರಾಗಿದ್ದ ಚೊಕ್ಕನಹಳ್ಳಿ ನಂಜೇಗೌಡ ರವರಿಂದ ತೆರವಾದ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಯಾವುದೇ ಪ್ರತಿಸ್ಪರ್ಧಿಗಳು ಸ್ಪರ್ಧಾ ಕಣದಲ್ಲಿ ಇಲ್ಲದ ಕಾರಣ ಪಿ.ರಾಹುಲ್ ಅಧ್ಯಕ್ಷರಾಗಿ ಆಯ್ಕೆಯಾದರು. ನಂತರ ಮಾತನಾಡಿದ ಅವರು ನನ್ನ ಮೇಲೆ ಎಲ್ಲಾ ಸದಸ್ಯರು ವಿಶ್ವಾಸ ವಿಟ್ಟು ಬೆಂಬಲಿಸಿ ಅಧ್ಯಕ್ಷನನ್ನಾಗಿ ಆಯ್ಕೆ ಮಾಡಿರುವುದು ಸಂತೋಷ ಉಂಟು ಮಾಡಿದೆ. ಸದಸ್ಯರು ನನ್ನ ಮೇಲೆ ಇಟ್ಟಿರುವ ವಿಶ್ವಾಸ ಮತ್ತು ನಿರೀಕ್ಷೆಗಳನ್ನು ಹುಸಿ ಮಾಡದೆ, ಪ್ರಾಮಾಣಿಕ ಮತ್ತು ಅಭಿವೃದ್ಧಿ ಪರವಾದ ಆಡಳಿತ ನೀಡುವ ಮೂಲಕ ಗ್ರಾ.ಪಂ.ವ್ಯಾಪ್ತಿಯ ಗ್ರಾಮಗಳ ಅಭಿವೃದ್ಧಿಗೆ ಶ್ರಮಿಸುವು ದಾಗಿ ತಿಳಿಸಿದರು. ನೂತನ ಗ್ರಾ.ಪಂ.ಅಧ್ಯಕ್ಷ ಪಿ.ರಾಹುಲ್ ರವರನ್ನು ಹಲವು ಮುಖಂಡರು, ಸ್ನೇಹಿತರು, ಹಿತೈಷಿಗಳು ಸನ್ಮಾನಿಸಿ ಗೌರವಿಸಿದರು.

ಇಂದು ಕೆಂಪೇಗೌಡರ ಜಯಂತಿ

ಬೆಂಗಳೂರು: ಕರ್ನಾಟಕ ಪ್ರತಿಭಾವರ್ಧಕ ಅಕಾಡೆಮಿ ವತಿಯಿಂದ ನಾಡಪ್ರಭು ಕೆಂಪೇಗೌಡರ 515ನೇ ಜಯಂತಿ ಮಂಗಳವಾರ ಆಚರಿಸಲಾಗುತ್ತಿದೆ. ರವೀಂದ್ರ ಕಲಾ ಕ್ಷೇತ್ರದಲ್ಲಿ ಸಂಜೆ 6 ಗಂಟೆಗೆ ಹಮ್ಮಿಕೊಳ್ಳಲಾಗಿದೆ. ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಕೆ.ಎಚ್.ಮುನಿಯಪ್ಪ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಪುಷ್ಪಾರ್ಚನೆ ಮಾಡಲಿದ್ದಾರೆ. ಅವಧೂತ ವಿನಯ್ ಗುರೂಜಿ ಆಶೀರ್ವಚನ ನೀಡಲಿದ್ದಾರೆ. ಗೌರವಾನ್ವಿತ ನ್ಯಾಯಮೂರ್ತಿ ಗೋಪಾಲ ಗೌಡರು ಗಣ್ಯರಿಗೆ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಶಾಸಕ ಎಂ.ಕೃಷ್ಣಪ್ಪ ಅಧ್ಯಕ್ಷತೆ ವಹಿಸಲಿದ್ದಾರೆ. ಡಾ.ಮನು ಬಳಿಗಾರ್ ಎಸ್ಎಸ್ಎಲ್‌ಸಿ/ಪಿಯುಸಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ವಿತರಿಸಲಿದ್ದಾರೆ. ಕರ್ನಾಟಕ ನಾಟಕ ಅಕಾಡೆಮಿಯ ಕೆ.ವಿ.ನಾಗರಾಜ್ ಉಪಸ್ಥಿತರಿರಲಿದ್ದಾರೆ. ಕಾರ್ಯಕ್ರಮದಲ್ಲಿ 100ಕ್ಕೂ ಹೆಚ್ಚಿನ ಭರತನಾಟ್ಯ ಕಲಾವಿದರಿಂದ ನಾಟ್ಯ ಸಿಂಚನ ನಾಟ್ಯ ಪ್ರದರ್ಶಿಸಲಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಒಪಿಎಸ್ ಮತ್ತೆ ಜಾರಿಗೆ ಆಗ್ರಹ

ಬೆಂಗಳೂರು: ಹೊಸ ಪಿಂಚಣಿ ಯೋಜನೆಯನ್ನು ರದ್ದುಗೊಳಿಸಿ ಹಳೆಯ ಪಿಂಚಣಿ ಯೋಜನೆಯನ್ನು ಅನುಷ್ಠಾನಗೊಳಿಸುವುದೂ ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ 515 ಭೂಸೇನಾ ಕಾರ್ಯಾಗಾರದ ಕಾರ್ಮಿಕರ ಸಂಘ ಕೇಂದ್ರ ಸರಕಾರವನ್ನು ಒತ್ತಾಯಿಸಿದೆ. ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ಅಧ್ಯಕ್ಷ ಸಮೀವುಲ್ಲಾ ಖಾನ್, ಕೇಂದ್ರ ಸರಕಾರಿ ನೌಕರರ ವೇತನ ಮತ್ತು ಭತ್ಯೆಗಳನ್ನು ಪರಿಷ್ಕರಿಸಲು ಎಂಟನೇ ವೇತನ ಆಯೋಗವನ್ನು ರಚಿಸಬೇಕು. ಕೇಂದ್ರದ ವಿವಿಧ ಇಲಾಖೆ ಹಾಗೂ ಸಂಸ್ಥೆಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡದಿದ್ದರೆ, ಇಲಾಖೆಗಳ ದಕ್ಷತೆಯ ಮೇಲೆ ಪರಿಣಾಮ ಬೀರುತ್ತದೆ' ಎಂದು ಹೇಳಿದರು. ಏಳನೇ ವೇತನ ಆಯೋಗದ ಶಿಫಾರಸುಗಳ ಪ್ರಕಾರ ಕೇಂದ್ರ ನೌಕರರ ಗುಂಪು ವಿಮಾ ಯೋಜನೆ 1980 ಅನ್ನು ಪರಿಷ್ಕರಿಸಬೇಕು. ವಿಮಾ ಮೊತ್ತವನ್ನು ಕನಿಷ್ಠ 15 ಲಕ್ಷಕ್ಕೆ ನಿಗದಿಪಡಿಸಬೇಕು. ಪಿಂಚಣಿ ಕಮ್ಯುಟೇಶನ್ ಅನ್ನು 15 ವರ್ಷಗಳ ಬದಲಿಗೆ 12 ವರ್ಷಕ್ಕೆ ನಿಗದಿಪಡಿಸಬೇಕು. ಡಿಆರ್‌ಡಿಒ ಪುನರುಜ್ಜೀವನದ ಕುರಿತು ಪ್ರೊ.ಕೆ. ವಿಜಯ ರಾಘವನ್ ಸಮಿತಿಯು ನೌಕರರ ಹಾಗೂ ಸಂಸ್ಥೆಗಳ ವಿರುದ್ಧದ ಶಿಫಾರಸುಗಳ ರದ್ದುಗೊಳಿಸಬೇಕು' ಎಂದು ಒತ್ತಾಯಿಸಿದರು.

ಆ.3, 4ಕ್ಕೆ ಬೆಂಗಳೂರು ಕಾವ್ಯ ಉತ್ಸವ

ಬೆಂಗಳೂರು: ಆಟ-ಗಲಾಟ ಸಂಸ್ಥೆ ವತಿಯಿಂದ 3 ಮತ್ತು 4ಕ್ಕೆ ಬೆಂಗಳೂರು ಕಾವ್ಯ ಉತ್ಸವದ ಎಂಟನೇ ಆವೃತ್ತಿಯನ್ನು ಹಳೆ ಮದ್ರಾಸ್ ರಸ್ತೆಯಲ್ಲಿರುವ ಗೋಪಾಲನ್ ಮಾಲ್‌ನಲ್ಲಿ ಹಮ್ಮಿಕೊಂಡಿದೆ . ಉತ್ಸವದಲ್ಲಿ ಕಾವ್ಯ ಮತ್ತು ಸಂಗೀತದ ನಡುವಿನ ಸಂಪರ್ಕ ಪರಿಶೋಧನೆಗೆ ಸಹಾಯವಾಗಲಿದೆ. ಬಹುಭಾಷಾ ಕವಿಗಳು, ಗೀತ ರಚನೆಕಾರರು, ಹಾಡುಗಾರರು, ಸಂಗೀತಗಾರರು ಭಾಗವಹಿಸಲಿದ್ದಾರೆ. ಉತ್ಸವವು ಕವಿತೆ ವಾಚನ, ಸಂವಾದ, ಭಾಷಣ ಹಾಗೂ ಕಾರ್ಯಾಗಾರ ಒಳಗೊಂಡಿದೆ. ಕಾವ್ಯವು ಗಡಿಗಳನ್ನು ಮೀರಿ ಎಲ್ಲರನ್ನೂ ಸಂಪರ್ಕಿಸುವ ಶಕ್ತಿಯನ್ನು ಹೊಂದಿದೆ' ಎಂದು ಗೋಪಾಲನ್ ಮಾಲ್‌ನ ಪ್ರಧಾನ ವ್ಯವಸ್ಥಾಪಕ ಶ್ರೀರಾಮ್ ಶೆಟ್ಟಿ ಹೇಳಿದ್ದಾರೆ. ದಿ ಮ್ಯೂಸಿಕಲ್ ಮೇವರಿಕ್- ಶಂಕರ್ ಮಹಾದೇವನ್ ಪುಸ್ತಕದ ಲೇಖಕ ಆಶಿಶ್ ಘಟಕ್ ಅವರೊಂದಿಗೆ ಸಂವಾದ ನಡೆಯಲಿದೆ.

{ ಚಲುವರಾಯಸ್ವಾಮಿ } ಸಚಿವ

ಬಿಜೆಪಿ-ಜೆಡಿಎಸ್‌ನವರು ಏಕೆ ಪಾದಯಾತ್ರೆ ಮಾಡುತ್ತಾರೋ ಗೊತ್ತಿಲ್ಲ. 150 ಜನರ ಹಗರಣದ ಪಟ್ಟಿಯನ್ನು ಸಿಎಂ ಬಿಡುಗಡೆ ಮಾಡಿದ್ದಾರೆ. ಎರಡೂ ಪಕ್ಷಗಳ ನಾಯಕರು ಅನಧಿಕೃತವಾಗಿ ನಿವೇಶನ ಪಡೆದಿದ್ದಾರೆ. ಹೀಗಾಗಿ ಅವರು ಯಾರ ವಿರುದ್ಧ ಹೋರಾಟ ಮಾಡುತ್ತಾರೋ....ಅವರೇ ಉತ್ತರಿಸಬೇಕು. ತನಿಖೆಯಿಂದ ಸತ್ಯಾಂಶ ಹೊರಬರಲಿ.

ಆ.3ರ ಬೆಳಗ್ಗೆ ಪಾದಯಾತ್ರೆ ಉದ್ಘಾಟನೆ | ಸರಕಾರಕ್ಕೆ ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಸವಾಲು

ಗೊಡ್ಡು ಬೆದರಿಕೆಗೆ ಹೋರಾಟ ನಿಲ್ಲದು

ಬೆಂಗಳೂರು: ವಿರೋಧ ಪಕ್ಷಗಳಿಗೆ ಗೊಡ್ಡು ಬೆದರಿಕೆ ಹಾಕುವ ಮೂಲಕ ನಮ್ಮ ಹೋರಾಟವನ್ನು, ಪಾದ ಯಾತ್ರೆಯನ್ನು ಹತ್ತಿಕ್ಕಲು ಸಾಧ್ಯವಿಲ್ಲ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಸವಾಲು ಹಾಕಿದರು.

ಮೈಸೂರು ಪಾದಯಾತ್ರೆಯ ಪೂರ್ವಭಾವಿ ಸಭೆ ಯಲ್ಲಿ ಮಾತನಾಡಿದ ಅವರು, ಕಾಂಗ್ರೆಸಿನವರ ಗೊಡ್ಡು ಬೆದರಿಕೆಗೆ ನಮ್ಮ ಕಾರ್ಯಕರ್ತರು ಅಂಜುವುದಿಲ್ಲ. ಇಡೀ ರಾಜ್ಯದ ಪರಿಶಿಷ್ಟ ಜಾತಿ, ಪಂಗಡಗಳ ಪರವಾಗಿ ನಮ್ಮ ಹೋರಾಟ ನಿರಂತರವಾಗಿರಲಿದೆ. ಪರಿಶಿಷ್ಟರ ಸಮುದಾಯದ ಹಣ ಲೂಟಿ ಮಾಡಿದ್ದಾರೆ. ಸಾವಿರಾರು ಕೋಟಿಯ ಭ್ರಷ್ಟಾಚಾರ ನಡೆಸಿದ್ದಾರೆ. ಇವುಗಳ ವಿರುದ್ಧ ಹೋರಾಟ ನಡೆಸದೆ ಇದ್ದರೆ ಭಗವಂತನೂ ನಮ್ಮನ್ನು ಕ್ಷಮಿಸುವುದಿಲ್ಲ ಎಂದು ಟೀಕಿಸಿದರು.

ಹಗರಣ ನಡೆದಿರುವುದನ್ನು ಕಾಂಗ್ರೆಸ್ ಸರಕಾರ ಒಪ್ಪಿಕೊಂಡಿದೆ. ಆದರೆ, ಮುಡಾ ಹಗರಣದ ಕುರಿತು ಚರ್ಚಿಸಲು ಧೈರ್ಯ ತೋರದ ಕಾಂಗ್ರೆಸ್ ಸರಕಾರ ಮತ್ತು ಮುಖ್ಯಮಂತ್ರಿಗಳು ಸದನವನ್ನು ಮೊಟಕು ಗೊಳಿಸಿ ಪಲಾಯನವಾದ ಮಾಡಿದ್ದಾರೆ. ಇದನ್ನು ವಿರೋಧಿಸಿ ಬಿಜೆಪಿ- ಜೆಡಿಎಸ್ ಪಕ್ಷಗಳು ಮೈಸೂರಿಗೆ ಪಾದಯಾತ್ರೆ ನಡೆಸಲಿವೆ. ಇದಕ್ಕೆ ಪೂರ್ವಭಾವಿಯಾಗಿ ಇವತ್ತು ಪ್ರಮುಖರ ಸಭೆ ನಡೆಸಿದ್ದೇವೆ. ಭ್ರಷ್ಟ ಕಾಂಗ್ರೆಸ್ ಸರಕಾರದ ಹಗರಣಗಳ ವಿರುದ್ಧ ನಡೆಸುವ ಪಾದಯಾತ್ರೆ, ಹೋರಾಟದ ಕುರಿತು ಚರ್ಚಿಸಲಾಗಿದೆ ಎಂದರು. ಕಾರ್ಯಕರ್ತರಲ್ಲಿ ರಣೋತ್ಸಾಹ ಮೂಡಿದೆ. ಆ. 3ರಂದು ಬೆಳಗ್ಗೆ 8.30ಕ್ಕೆ ಪಾದಯಾತ್ರೆಯ ಉದ್ಘಾಟನೆ ನೆರವೇರಲಿದೆ. ರಾಜ್ಯದ ಹಿರಿಯ ನಾಯಕ ಬಿ.ಎಸ್.ಯಡಿಯೂರಪ್ಪ, ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ, ಜೆಡಿಎಸ್ ಅಧ್ಯಕ್ಷ ಎಚ್.ಡಿ.ಕುಮಾರಸ್ವಾಮಿ, ಎರಡೂ ಪಕ್ಷಗಳ ಹಿರಿಯ ಮುಖಂಡರು ಭಾಗವಹಿಸುತ್ತಾರೆ ಎಂದು ತಿಳಿಸಿದರು. ಸಭೆಯಲ್ಲಿ ಪ್ರತಿಪಕ್ಷ ನಾಯಕ ಆರ್. ಅಶೋಕ್, ಛಲವಾದಿ ನಾರಾಯಣಸ್ವಾಮಿ, ಮಾಜಿ ಮುಖ್ಯಮಂತ್ರಿ ಡಿ.ವಿ.ಸದಾನಂದಗೌಡ, ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ಸುನೀಲ್‌ಕುಮಾರ್, ಪ್ರೀತಂ ಗೌಡ, ಕುಡಚಿ ರಾಜೀವ್, ನಂದೀಶ್ ರೆಡ್ಡಿ, ಮಾಜಿ ಸಚಿವ ಬೈರತಿ ಬಸವರಾಜ್ ಸೇರಿದಂತೆ ಹಲವರಿದ್ದರು.



ಮೈಸೂರು ಪಾದಯಾತ್ರೆಯ ಪೂರ್ವಭಾವಿ ಸಭೆಯ ಪ್ರಯುಕ್ತ ನಡೆದ ಸಭೆಯನ್ನು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಉದ್ಘಾಟಿಸಿದರು.

ಪ್ರಜಾಪ್ರಭುತ್ವದಲ್ಲಿ ಪ್ರಜೆಗಳೇ ಪ್ರಭುಗಳು. ಅವರಿಗೆ ಸತ್ಯದ ಮನವರಿಕೆ ಮಾಡಿಕೊಡುವ ದೃಷ್ಟಿಯಿಂದ ಬೆಂಗಳೂರಿನಿಂದ ಮೈಸೂರುವರೆಗೆ ಎನ್‌ಡಿಎ ವತಿಯಿಂದ ಪಾದಯಾತ್ರೆ ಮಾಡುತ್ತೇವೆ. ವಿವಿಧ ಹಗರಣಗಳ ಕುರಿತು ಸರಕಾರವು ನಮಗೆ ವಿಧಾನಮಂಡಲದಲ್ಲಿ ಚರ್ಚೆ ನಡೆಸಲು ಅವಕಾಶ ಕೊಟ್ಟಿಲ್ಲ. ಸರಕಾರಕ್ಕೆ ಸತ್ಯವನ್ನು ಎದುರಿಸುವ ಧಮ್ ಇದ್ದಿದ್ದರೆ ಅವರು ವಿಧಾನಮಂಡಲದಲ್ಲಿ ಚರ್ಚೆಗೆ ಅವಕಾಶ ಕೊಡುತ್ತಿದ್ದರು.

- ಸಿ.ಟಿ. ರವಿ, ವಿಧಾನಪರಿಷತ್ ಸದಸ್ಯ

ಎಲ್ಲ ಕ್ಷೇತ್ರದ ಕಾರ್ಯಕರ್ತರು ಭಾಗಿ

ಎಲ್ಲ 224 ಕ್ಷೇತ್ರಗಳ ಕಾರ್ಯಕರ್ತರು ಭಾಗವಹಿಸುತ್ತಾರೆ. ಮೊದಲ ದಿನ ಯಶವಂತಪುರ, ದಾಸರ ಹಳ್ಳಿ, ಆರ್‌ಆರ್. ನಗರ, ವಿಜಯನಗರ, ಶಿವಾಜಿ ನಗರ, ದೊಡ್ಡಬಳ್ಳಾಪುರ, ಮಾಗಡಿ, ಪದ್ಮನಾಭನಗರ, ರಾಜಾಜಿನಗರ ವಿಧಾನಸಭಾ ಕ್ಷೇತ್ರಗಳ ಜನಪ್ರತಿನಿಧಿಗಳು, ಕಾರ್ಯಕರ್ತರು ಬರಲಿದ್ದಾರೆ. ಕೋಲಾರ-ಕಲಬುರಗಿಯ ಕಾರ್ಯಕರ್ತರೂ ಭಾಗವಹಿಸುವರು. ಯುವಮೋರ್ಚಾದವರು ತಮ್ಮನ್ನು ಜೋಡಿಸಿಕೊಳ್ಳುತ್ತಾರೆ. ರಾಜ್ಯದ ಪ್ರತಿ ಜಿಲ್ಲೆಯಿಂದ ಕನಿಷ್ಠ 200 ಜನರು ಬರಲಿದ್ದು ಎಲ್ಲ ದಿನಗಳಲ್ಲಿ ಇರುತ್ತಾರೆ. ವಸತಿ ವ್ಯವಸ್ಥೆ ಸೇರಿ ಎಲ್ಲವನ್ನೂ ಯೋಜಿಸಲಾಗಿದೆ. ಜೆಡಿಎಸ್‌ನವರೂ ಪಾಲ್ಗೊಳ್ಳಲಿದ್ದು, ಬಿಜೆಪಿ- ಜೆಡಿಎಸ್ ಪಕ್ಷಗಳ ಸಮನ್ವಯ ಸಮಿತಿ ರಚಿಸುತ್ತೇವೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ವಿವರಿಸಿದರು.

ಹಿಂದೆ ಕಾಂಗ್ರೆಸ್ ಪಾದಯಾತ್ರೆಗೆ ಅನುಮತಿ ನೀಡಿರಲಿಲ್ಲ

ಬಿಜೆಪಿ ಪಾದಯಾತ್ರೆಗೆ ಅನುಮತಿ ಇಲ್ಲ

ಬೆಂಗಳೂರು: ಮುಡಾ, ವಾಲ್ಮೀಕಿ ಸೇರಿದಂತೆ ವಿವಿಧ ಪ್ರಕರಣವನ್ನು ವಿರೋಧಿಸಿ ಬಿಜೆಪಿ-ಜೆಡಿಎಸ್ ಪಕ್ಷಗಳು ನಡೆಸುವ ಪಾದಯಾತ್ರೆಗೆ ಅನುಮತಿ ನೀಡುವುದಿಲ್ಲ ಎಂದು ಗೃಹಸಚಿವ ಡಾ.ಜಿ.ಪರಮೇಶ್ವರ್ ಸ್ಪಷ್ಟಪಡಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಅವರು ಪಾದಯಾತ್ರೆ ಮಾಡಿಕೊಳ್ಳಲಿ. ಆದರೆ ಅಧಿಕೃತವಾಗಿ ನಾವು ಅನುಮತಿ ನೀಡುವುದಿಲ್ಲ, ಈ ಹಿಂದೆ ನಾವು ಪಾದಯಾತ್ರೆ ಮಾಡುವಾಗಲೂ ಅವರು ಅನುಮತಿ ನೀಡಿರಲಿಲ್ಲ. ಅವರ ಪಾದಯಾತ್ರೆಗೆ ತಡೆ ಮಾಡುವುದಿಲ್ಲ. ಅಗತ್ಯವಾದ ವ್ಯವಸ್ಥೆ ಮಾಡಿಕೊಡುತ್ತೇವೆ ಎಂದು ತಿಳಿಸಿದರು. ಜೆಡಿಎಸ್-ಬಿಜೆಪಿಗೆ ಪ್ರತಿಯಾಗಿ ಕಾಂಗ್ರೆಸ್‌ನಿಂದ ಹೋರಾಟ ನಡೆಸುವ ಬಗ್ಗೆ ಕೆಪಿಸಿಸಿ ಅಧ್ಯಕ್ಷರು ರಣನೀತಿ ರೂಪಿಸುತ್ತಾರೆ. ರಾಜಕೀಯವಾಗಿ ನಾವೂ ಕೂಡ ಉತ್ತರ ನೀಡಲೇಬೇಕಿದೆ.ನಾವು ರಾಜಕೀಯವಾಗಿಯೇ ಮಾತನಾಡುತ್ತೇವೆ. ಮುಡಾ ನಿವೇಶನ ಹಂಚಿಕೆ ಕಾನೂನು ಪ್ರಕಾರವಾಗಿಯೇ ನಡೆದಿದೆ. ಸೈಟುಗಳ ಹಂಚಿಕೆಯಲ್ಲಿ ನಿಯಮ ಪಾಲನೆಯಾಗಿಲ್ಲ ಎಂಬ ಅಭಿಪ್ರಾಯ ಬಂದಿದ್ದರಿಂದಲೇ ತನಿಖೆಗೆ ನ್ಯಾಯಾಂಗ ಆಯೋಗ ರಚಿಸಲಾಗಿದೆ. ವರದಿಯ ಬಳಿಕ ಕ್ರಮ ಕೈಗೊಳ್ಳಲಾಗುವುದು ಎಂದರು.

ರೈಲ್ವೆ ನಿಲ್ದಾಣದಲ್ಲಿ ಪತ್ತೆಯಾದ ಮಾಂಸದ ಮಾದರಿಯನ್ನು ಪಡೆದು ಪ್ರಯೋಗಾಲಯದಲ್ಲಿ ಪರಿಶೀಲನೆ ನಡೆಸಲಾಗಿದೆ. ಅದು ನಾಯಿ ಮಾಂಸ ಅಲ್ಲ ಎಂದು ವರದಿ ಬಂದಿದೆ. ಸುಳ್ಳು ಆರೋಪ ಮಾಡಿದ ಪುನೀತ್ ಕೆರೇಹಳ್ಳಿ ಹಾಗೂ ಸಂಗಡಿಗರ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ. ರಾಜಸ್ಥಾನದಿಂದ ಮಾಂಸ ತರಿಸಿಕೊಂಡಿರುವವರು ತಪ್ಪು ಮಾಡಿದ್ದು ಸಾಬೀತಾದರೆ ಅವರ ವಿರುದ್ಧವೂ ಕ್ರಮ ಕೈಗೊಳ್ಳುತ್ತೇವೆ.

- ಡಾ.ಜಿ. ಪರಮೇಶ್ವರ್, ಗೃಹ ಸಚಿವ

ಅನುದಾನ ಹಂಚಿಕೆ ಸಮಾನವಾಗಿರಲಿ

ಕೇಂದ್ರ ಸರಕಾರ ತನ್ನ ಬಜೆಟ್‌ನಲ್ಲಿ ರಾಜ್ಯಕ್ಕೆ ನೆರವು ನೀಡದೇ ಅನ್ಯಾಯ ಮಾಡಿದೆ. ಆಂಧ್ರ ಪ್ರದೇಶಕ್ಕೆ 15 ಸಾವಿರ ಕೊಟ್ಟಿದೆ. ಇದಕ್ಕೆ ನಮ್ಮ ವಿರೋಧವಿಲ್ಲ. ಆದರೆ ಅನುದಾನ ಹಂಚಿಕೆ ಸಮಾನಾಂತರವಾಗಿರಬೇಕು. ನಮ್ಮ ಪಾಲಿಗಾಗಿ ಸುಪ್ರೀಂಕೋರ್ಟ್ ಮೆಟ್ಟಿಲೇರುವ ಪರಿಸ್ಥಿತಿ ಬಂದಿತ್ತು. ಭದ್ರಾ, ಮೇಲ್ದಂಡೆ ಸೇರಿದಂತೆ ಯಾವುದಕ್ಕೂ ಅನುದಾನ ನೀಡದೇ ಮಲತಾಯಿ ಧೋರಣೆ ಅನುಸರಿಸಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ನೀತಿ ಆಯೋಗ ಸಭೆಯನ್ನು ಬಹಿಷ್ಕರಿಸಿದ ಬಗ್ಗೆ ಪ್ರತಿಕ್ರಿಯಿಸಿ, ರಾಜ್ಯ ಮತ್ತು ಕೇಂದ್ರ ಸರಕಾರಗಳ ನಡುವೆ ಸಂಬಂಧ ಚೆನ್ನಾಗಿರಬೇಕು. ಕೇಂದ್ರ ಸರಕಾರ ಆಡಳಿತವನ್ನು ಸೌಹಾರ್ದಯುತವಾಗಿ ನಡೆಸಿಕೊಡಬೇಕು. ಮಮತಾ ಬ್ಯಾನರ್ಜಿ ನೀತಿ ಆಯೋಗದ ಸಭೆಗೆ ಹೋಗಿ ಸಭಾತ್ಯಾಗ ಮಾಡಿದ್ದಾರೆ. ನಾವು ಭಾಗವಹಿಸಿದ್ದರೂ ಅದೇ ರೀತಿ ಮಾಡಬೇಕಿತ್ತೆ? ಎಂದು ಪ್ರಶ್ನಿಸಿದರು.

ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅವರನ್ನು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ನಾಡೋಜ ಡಾ. ಮಹೇಶ್ ಜೋಶಿ ಅವರು ಭೇಟಿ ಮಾಡಿ ಪರಿಷತ್ತಿನ ದತ್ತಿ ಪ್ರಶಸ್ತಿ ಪ್ರದಾನ ಸಮಾರಂಭಕ್ಕೆ ಆಹ್ವಾನಿಸಿದರು. ಈ ವೇಳೆ, ಮಂಡ್ಯದಲ್ಲಿ ನಡೆಯುವ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಅತಿಥಿಗಳಾಗಿ ಭಾಗವಹಿಸಲೂ ಮನವಿ ಮಾಡಿದರು. ಈ ವೇಳೆ ಪರಿಷತ್ತಿನ ಗೌರವ ಕಾರ್ಯದರ್ಶಿಗಳಾದ ನೇ ಭ ರಾಮಲಿಂಗ ಶೆಟ್ಟಿ, ಡಾ. ಪದ್ಮಿನಿ ನಾಗರಾಜು ಗೌರವ ಕೋಶಾಧ್ಯಕ್ಷ ಬಿ ಎಂ ಪಟೇಲ್ ಪಾಂಡು ಹಾಜರಿದ್ದರು

ದೇವಾಲಯದಲ್ಲಿ ಆನ್‌ಲೈನ್ ಸೇವೆಗೆ ವಿರೋಧ

ಬೆಂಗಳೂರು:'ಎ' ಮತ್ತು ಬಿ' ವರ್ಗದ ಮುಜರಾಯಿ ದೇವಸ್ಥಾನಗಳಲ್ಲಿ ಆನ್‌ಲೈನ್ ಸೇವೆ ಬೇಡ ಎಂದು ಅಖಿಲ ಕರ್ನಾಟಕ ಹಿಂದೂ ದೇವಾಲಯಗಳ ಅರ್ಚಕರ, ಆಗಮಿಕರ ಮತ್ತು ಉಪಾಧಿವಂತರ ಒಕ್ಕೂಟ ಆಗ್ರಹಿಸಿದೆ. ಧಾರ್ಮಿಕ ದತ್ತಿ ಆಯುಕ್ತರಿಗೆ ಮನವಿ ಸಲ್ಲಿಸಿರುವ ಒಕ್ಕೂಟ ಆನ್‌ಲೈನ್ ಸೇವೆಯಿಂದ ಅರ್ಚಕರಿಗೆ ಭಾರಿ ತೊಂದರೆಯಾಗಿದೆ ಎಂದು ತಿಳಿಸಿದೆ.

ಹಿಂದಿನ ದಿನ ಸಂಜೆ ಆನ್‌ಲೈನ್‌ನಲ್ಲಿ ಕಾಯ್ದಿರಿಸಿ ಮರುದಿನ ಬೆಳಗ್ಗೆ ದೇವಸ್ಥಾನಕ್ಕೆ ಬಂದಿರುತ್ತಾರೆ. ಅವರಿಗೆ ಸೇವೆ ನೀಡಲು ಕಷ್ಟವಾಗುತ್ತದೆ. ಕೆಲವರು ಅಭಿಷೇಕ, ಪೂಜೆಗಳನ್ನು ಬುಕ್ ಮಾಡದೇ ಕೇವಲ ಪ್ರಸಾದ ಮಾತ್ರ ಕಾಯ್ದಿರಿಸುತ್ತಾರೆ. ಒಂದು ಕೆ.ಜಿ. ಪುಳಿಯೋಗರೆ, 1 ಕೆ.ಜಿ. ಪೊಂಗಲ್ ಎಂದು ಹಿಂದಿನ ದಿನ ಆನ್‌ಲೈನ್ ತಿಳಿಸಿದರೆ, ರಾತ್ರಿ ಸಾಮಗ್ರಿ ತಂದು ಬೆಳಿಗ್ಗೆ ಅಷ್ಟು ಬೇಗ ಮಾಡಿ ಕೊಡುವುದು ಹೇಗೆ? ಅಲ್ಲದೇ ಇದು ದೇವಸ್ಥಾನದ ಪಾವಿತ್ರ್ಯಕ್ಕೂ ಧಕ್ಕೆ ಉಂಟು ಮಾಡುತ್ತಿದೆ' ಎಂದು ಮನವಿಯಲ್ಲಿ ತಿಳಿಸಲಾಗಿದೆ. ಕುಕ್ಕೆ ಸುಬ್ರಹ್ಮಣ್ಯ, ಚಾಮುಂಡೇಶ್ವರಿ ಬೆಟ್ಟ, ನಂಜನಗೂಡು, ಮೇಲುಕೋಟೆ ಮುಂತಾದ ಪ್ರಸಿದ್ಧ ದೇವಸ್ಥಾನಗಳಲ್ಲಿ ಉಗ್ರಾಣದ ವ್ಯವಸ್ಥೆ ಇರುತ್ತದೆ. ಅಲ್ಲಿ ತೊಂದರೆಯಾಗದೇ ಇರಬಹುದು. ಏನೂ ವ್ಯವಸ್ಥೆ ಇಲ್ಲದ ಅನೇಕ ದೇವಸ್ಥಾನಗಳಲ್ಲಿ ಆನ್ಲೈನ್ ವ್ಯವಸ್ಥೆ ತೊಂದರೆ ನೀಡುತ್ತಿದೆ ಎಂದು ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಕೆ.ಎಸ್.ಎನ್. ದೀಕ್ಷಿತ್ ದೂರಿದರು.

ಎಮಿಷನ್ ದರ ಏರಿಕೆ ಸಾಧ್ಯತೆ

ಬೆಂಗಳೂರು : ರಾಜ್ಯದಲ್ಲಿ ವಾಹನಗಳ ಮಾಲಿನ್ಯ ನಿಯಂತ್ರಣ ಪ್ರಮಾಣ ಪತ್ರದ ದರ ಏರಿಕೆಯಾಗುವ ಸಾಧ್ಯತೆಯಿದೆ ಎನ್ನುವ ಮಾತುಗಳು ಕೇಳಿ ಬಂದಿದೆ. ರಾಜ್ಯ ಎಮಿಷನ್ ಪರೀಕ್ಷಾ ಕೇಂದ್ರಗಳ ಮಾಲೀಕರ ಸಂಘಗಳು ಇತ್ತೀಚೆಗೆ ಸಾರಿಗೆ ಸಚಿವ ರಾಮಲಿಂಗಾರೆಡ್ಡಿಯವರನ್ನು ಭೇಟಿಯಾಗಿ ಬಾಡಿಗೆ ವೆಚ್ಚ, ಎಮಿಷನ್ ಚೆಕ್ ಉಪಕರಣಗಳು, ವೇತನ ಮತ್ತು ಓವರ್ ಹೆಡ್‌ಗಳ ಹೆಚ್ಚಳದ ಬಗ್ಗೆ ತಿಳಿಸಲಾಗಿದ್ದು, ದರ ಪರಿಷ್ಕರಿಸಲು ಮನವಿ ಮಾಡಿದೆ.

ಮೂರು ವರ್ಷಗಳ ಹಿಂದೆ ದರ ಹೆಚ್ಚಳ ಮಾಡಲಾಗಿದ್ದು, ಸದ್ಯಕ್ಕೆ ಮಾಲಿನ್ಯ ನಿಯಂತ್ರಣ ಪ್ರಮಾಣ ಪತ್ರಕ್ಕೆ ದ್ವಿಚಕ್ರ ವಾಹನಗಳಿಗೆ 65 ರು., ಆಟೋಗಳಿಗೆ 75 ರು. ನಾಲ್ಕು ಚಕ್ರದ ಪೆಟ್ರೋಲ್ ವಾಹನಗಳಿಗೆ 115 ರು. ಡೀಸೆಲ್ ವಾಹನಗಳಿಗೆ 160 ರು.ವಿಧಿಸಲಾಗುತ್ತಿದೆ. ಇದೀಗ ದ್ವಿಚಕ್ರ ವಾಹನಗಳ ಎಮಿಷನ್ ದರವನ್ನು 110 ರು.ಗಳಗೆ ಆಟೋಗಳಿಗೆ 100 ರು. ನಾಲ್ಕು ಚಕ್ರದ ಪೆಟ್ರೋಲ್ ವಾಹನಗಳಿಗೆ ಮತ್ತು ಸಿಎನ್‌ಜಿ ವಾಹನಗಳ ದರವನ್ನು 200 ರು.ಗೆ ಮತು ಡೀಸೆಲ್ ವಾಹನಗಳ ಎಮಿಷನ್ ದರವನ್ನು 250 ರು.ಗೆ ಹೆಚ್ಚಿಸಲು ಸರಕಾರವನ್ನು ಒತ್ತಾಯಿಸಿದೆ.

ವಿಕ್ಟೋರಿಯಾಗೆ ಆಸ್ಪತ್ರೆಗೆ ಲೋಕಾಯುಕ್ತರ ಭೇಟಿ

ಬೆಂಗಳೂರು: ಸಾಕಷ್ಟು ದೂರುಗಳು ಬಂದಿದ್ದ ಹಿನ್ನೆಲೆ ನಗರದ ವಿಕ್ಟೋರಿಯಾ ಆಸ್ಪತ್ರೆಗೆ ಸೋಮವಾರ ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್.ಪಾಟೀಲ್ ಹಾಗೂ ಉಪ ಲೋಕಾಯುಕ್ತ ನ್ಯಾ.ಫಣೀಂದ್ರ ಮತ್ತು ನ್ಯಾ.ವೀರಪ್ಪ ಭೇಟಿ ನೀಡಿದ್ದಾರೆ.

ವಿಕ್ಟೋರಿಯಾ ಆಸ್ಪತ್ರೆಯ ಪ್ರತಿಯೊಂದು ಕಟ್ಟಡಕ್ಕೆ ಭೇಟಿ ನೀಡಿ ಪರಿಶೀಲನೆ ಮಾಡಿದ್ದು, ಅವ್ಯವಸ್ಥೆ ಅನಾವರಣವಾಗಿದೆ. ಜತೆಗೆ ರೋಗಿಗಳ ಸಮಸ್ಯೆಯನ್ನು ಆಲಿಸಿದ್ದಾರೆ. ಭೇಟಿ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್. ಪಾಟೀಲ್, ರೋಗಿಯೊಬ್ಬರು ಬಿದ್ದು ನರಳುತ್ತಿದ್ದರೂ ಯಾರು ಚಿಕಿತ್ಸೆ ನೀಡುತ್ತಿರಲಿಲ್ಲ. ರೋಗಿಗಳಿಗೆ ಚಿಕಿತ್ಸೆ ನೀಡದೆ ವೈದ್ಯರು ಸ್ಪಂದಿಸದ ಬಗ್ಗೆ ದೂರು ಬಂದಿದ್ದವು. ಈ ಬಗ್ಗೆ ಸಾಕಷ್ಟು ದೂರುಬಂದ ಹಿನ್ನೆಲೆ ದಿಢೀರ್ ಭೇಟಿ ನೀಡಲಾಗಿತ್ತು. ಎಂದು ಹೇಳಿದ್ದಾರೆ. ಔಷಧಿ ಕೊಟ್ಟಿರುವ ಬಗ್ಗೆ ರಿಜಿಸ್ಟರ್‌ನಲ್ಲಿ ನಮೂದಿಸುತ್ತಿರಲಿಲ್ಲ. ಮೂವರನ್ನು ಡಾಟಾ ಎಂಟ್ರಿ ಆಪರೇಟರ್ ನೇಮಕ ಮಾಡಿಕೊಂಡಿದ್ದಾರೆ. ನಾವು ಭೇಟಿ ನೀಡಿದ ವೇಳೆ ತುರ್ತು ಔಷಧಿ ಇಲ್ಲ ಎಂದಿದ್ದಾರೆ. ಔಷಧ ಪೂರೈಕೆ ಮಾಡುವ ಗುತ್ತಿಗೆದಾರರ ಹಣ ಪಾವತಿ ಮಾಡಿಲ್ಲ ಎಂದಿದ್ದಾರೆ. ಹೊರರೋಗಿಗಳ ವಿಭಾಗದಲ್ಲಿ ಎಲ್ಲಾ ವೈದ್ಯರು ಇರಲಿಲ್ಲ. ಪಿಜಿ ವೈದ್ಯರು ಮಾತ್ರ ಇದ್ದಾರೆ. ಸೂಪರಿಂಡೆಂಟ್ ಅವರನ್ನು ಕರೆಸಲಾಗಿತ್ತು. ಆಸ್ಪತ್ರೆಯ ಕೆಲ ವೈದ್ಯಾಧಿಕಾರಿಗಳು ಬಂದರು. ಇನ್ನೂ ಕೆಲವರು ರಜೆಯಲ್ಲಿದ್ದಾರೆ ಎಂದು ಸೂಪರಿಂಡೆಂಟ್ ಹೇಳಿದರು. ರೋಗಿಗಳಿಗೆ ಆಸ್ಪತ್ರೆಯಲ್ಲಿ ಸರಿಯಾದ ಮಾರ್ಗದರ್ಶನ ಸಿಗಬೇಕು ಎಂದು ಹೇಳಿದ್ದಾರೆ.

ಕಾಂಗ್ರೆಸ್ ಆಡಳಿತ ರಾಜ್ಯಗಳ ಸಿಎಂಗಳೊಂದಿಗೆ ಎಐಸಿಸಿ ಸಭೆ

ಇಂದು ದೆಹಲಿಗೆ ಸಿಎಂ, ಡಿಸಿಎಂ

ಬೆಂಗಳೂರು: ಕೇಂದ್ರ ಸರಕಾರದ ವಿರುದ್ಧ ಸಮರ ಸಾರಿರುವ ಕಾಂಗ್ರೆಸ್ ಇದೀಗ, ಕಾಂಗ್ರೆಸ್ ಆಡಳಿತದಲ್ಲಿರುವ ಎಲ್ಲ ರಾಜ್ಯ ಗಳಲ್ಲಿ ಕೇಂದ್ರ ಸರಕಾರದ ವಿರುದ್ಧ ಜನಾಂದೋಲನ ಮೂಡಿಸಲು ಮುಂದಾಗಿದೆ.

ಈ ನಿಟ್ಟಿನಲ್ಲಿ ದೆಹಲಿಯಲ್ಲಿ ಮಂಗಳವಾರ ಸಭೆ ಕರೆದಿರುವ ಎಐಸಿಸಿ ವರಿಷ್ಠರು, ಕಾಂಗ್ರೆಸ್ ಆಡಳಿತವಿರುವ ಮುಖ್ಯಮಂತ್ರಿಗಳ ಸಭೆ ಯನ್ನು ಕರೆದಿದ್ದಾರೆ. ಈ ಸಭೆಯಲ್ಲಿ ಭಾಗವಹಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಮಂಗಳವಾರ ಬೆಳಗ್ಗೆ ದೆಹಲಿಗೆ ತೆರಳಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಕರ್ನಾಟಕದಲ್ಲಿ ಈಗಾಗಲೇ ನೀಟ್ ಸೇರಿದಂತೆ ಕೇಂದ್ರದ ಪ್ರಮುಖ ತೀರ್ಮಾನಗಳ ವಿರುದ್ಧ ನಿರ್ಣಯ ಕೈಗೊಳ್ಳಲಾಗಿದೆ. ಇದರೊಂದಿಗೆ ಬಜೆಟ್‌ನಲ್ಲಿ ತಾರತಮ್ಯ ಖಂಡಿಸಿ ಪ್ರತಿಭಟನೆ ನಡೆಸಲಾಗಿದೆ. ಕರ್ನಾಟಕದ ಮಾದರಿಯಲ್ಲಿಯೇ ವಿವಿಧ ರಾಜ್ಯಗಳಲ್ಲಿಯೂ ಕೇಂದ್ರದ ವಿರುದ್ಧ ಹೋರಾಟ ನಡೆಸಲು ರೂಪುರೇಷೆ ಬಗ್ಗೆ ಚರ್ಚಿಸಲು ಸಭೆ ಕರೆಯಲಾಗಿದೆ ಎಂದು ಮೂಲಗಳು ತಿಳಿಸಿವೆ. ಮುಂದಿನ ದಿನದಲ್ಲಿ ಕೇಂದ್ರ ಬಿಜೆಪಿ ಸರಕಾರದ ವಿರುದ್ಧ ಯಾವ ರೀತಿ ಹೋರಾಟ ನಡೆಸಬೇಕು ಎನ್ನುವ ಬಗ್ಗೆ ಸಭೆಯಲ್ಲಿ ಒಮ್ಮತದ ತೀರ್ಮಾನ ಕೈಗೊಳ್ಳುವ ಸಾಧ್ಯತೆಯಿದೆ. ತೀರ್ಮಾನದ ಬಳಿಕ, ಆಯಾ ರಾಜ್ಯ ಸರಕಾರಗಳು ಕೇಂದ್ರದ ವಿರುದ್ಧ ನಿರ್ಣಯಗಳನ್ನು ಕೈಗೊಳ್ಳಲಿವೆ ಎಂದು ತಿಳಿದುಬಂದಿದೆ.

ಹಗರಣಗಳ ಬಗ್ಗೆ ಚರ್ಚೆ

ಈ ಸಭೆಯ ಬಳಿಕ ಅನೌಪಚಾರಿಕವಾಗಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ರಾಹುಲ್ ಗಾಂಧಿ ಅವರನ್ನು ಭೇಟಿಯಾಗಲಿರುವ ಸಿದ್ದರಾಮಯ್ಯ ಹಾಗೂ ಡಿಕೆಶಿವಕುಮಾರ್ ಅವರು, ಮುಡಾ, ವಾಲ್ಮೀಕಿ ಹಗರಣದ ಬಗ್ಗೆ ಮಾಹಿತಿ ನೀಡಲಿದ್ದಾರೆ. ಈ ವಿಷಯವನ್ನು ಮುಂದಿಟ್ಟುಕೊಂಡು ಪಾದಯಾತ್ರೆ ನಡೆಸಲು ಬಿಜೆಪಿ-ಜೆಡಿಎಸ್ ಮುಂದಾಗಿರುವುದರಿಂದ ಈ ಡ್ಯಾಮೇಜ್ ಕಂಟ್ರೋಲ್‌ಗೆ ಯಾವ ರೀತಿ ಕ್ರಮವಹಿಸಲು ಕಾಂಗ್ರೆಸ್ ಸಜ್ಜಾಗಿದೆ ಎನ್ನುವ ಬಗ್ಗೆ ಮಾಹಿತಿ ನೀಡಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಸರ್ವರ ಒಳಿತೇ ಧರ್ಮದ ಆಶಯ



ಭಾರತಿನಗರದಲ್ಲಿ ವೀರಶೈವ ಲಿಂಗವಂತ ಸಮಾಜ ಆಯೋಜಿಸಿದ್ದ ಇಷ್ಟಲಿಂಗಪೂಜೆ ಹಾಗೂ ಧರ್ಮ ಜಾಗೃತಿ ಸಮಾರಂಭದಲ್ಲಿ ಬಾಳೆಹೊನ್ನೂರು ಶ್ರೀ ರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರುಗಳು ಆಶೀರ್ವಚನ ನೀಡಿದರು.

ಬೆಂಗಳೂರು: ಭಾರತ ಧರ್ಮ ಪ್ರಧಾನವಾಗಿರುವ ದೇಶ. ಈ ದೇಶದಲ್ಲಿ ಹಲವಾರು ಧರ್ಮ, ಪರಂಪರೆಗಳು ಬೆರೆತುಕೊಂಡಿವೆ. ಈ ಎಲ್ಲದರ ಗುರಿ ಸರ್ವರಿಗೂ ಒಳಿತನ್ನು ಮಾಡುವುದಷ್ಟೇ ಆಗಿದೆ ಎಂದು ಬಾಳೆಹೊನ್ನೂರು ಶ್ರೀ ರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರುಗಳು ಅಭಿಪ್ರಾಯ ಪಟ್ಟರು.

ಭಾರತಿನಗರದಲ್ಲಿ ವೀರಶೈವ ಲಿಂಗವಂತ ಸಮಾಜ ಆಯೋಜಿಸಿದ್ದ ಇಷ್ಟಲಿಂಗಪೂಜೆ ಹಾಗೂ ಧರ್ಮ ಜಾಗೃತಿ ಸಮಾರಂಭದಲ್ಲಿ ಆಶೀರ್ವಚನ ನೀಡಿದ ಅವರು, ಮಾನವ ಜನ್ಮದ ಉನ್ನತಿ ಮತ್ತು ಶ್ರೇಯಸ್ಸಿಗೆ ಧರ್ಮವೇ ಮೂಲ. ಸತ್ಯಂ ವಧ, ಧರ್ಮಂ ಚರ ಎಂಬ ವಾಕ್ಯದಂತೆ ಸತ್ಯವನ್ನು ಮಾತಾಡುವುದು, ಧರ್ಮದಂತೆ ನಡೆಯುವುದನ್ನು ಎಲ್ಲರೂ ರೂಢಿಸಿಕೊಳ್ಳಬೇಕು. ವೀರಶೈವ ಧರ್ಮ ಸರ್ವರಿಗೂ ಒಳಿತನ್ನೇ ಬಯಸುತ್ತದೆ. ಜಗದ್ಗುರು ರೇಣುಕಾದಿ ಪಂಚಾಚಾರ್ಯರು ಅಹಿಂಸಾದಿ ದಶ ಧರ್ಮಸೂತ್ರಗಳನ್ನು ಬೋಧಿಸಿ ಮಾನವ ಜನಾಂಗವನ್ನು ಉದ್ಧರಿಸಿದ್ದಾರೆ. ಜಾತಿಗಿಂತ ನೀತಿ, ತತ್ವಕ್ಕಿಂತ ಆಚರಣೆ, ಮಾತಿಗಿಂತ ಕೃತಿ, ಬೋಧನೆಗಿಂತ ಸಾಧನೆ, ದಾನಕ್ಕಿಂತ ದಾಸೋಹ, ಚರಿತ್ರೆಗಿಂತ ಚಾರಿತ್ರ್ಯಕ್ಕೆ ಒತ್ತುಕೊಟ್ಟಿದ್ದು ವೀರಶೈವ ಧರ್ಮ, ಜಾತಿ, ಧರ್ಮದ ಹೆಸರಿನಲ್ಲಿ ದ್ವೇಷ ಭಾವನೆ ಬೆಳೆಯಬಾರದು. ವೈಚಾರಿಕತೆ ಹೆಸರಿನಲ್ಲಿ ಧರ್ಮ-ಸಂಸ್ಕೃತಿ ನಾಶವಾಗಬಾರದು ಎಂದರು.

ಮಾಜಿ ಸಚಿವ ಲಿಂಬಾವಳಿ ನೇತೃತ್ವದಲ್ಲಿ ನಡೆದ ಯಶಸ್ವಿ ಉದ್ಯೋಗ ಮೇಳ

700ಕ್ಕೂ ಹೆಚ್ಚು ಯುವಜನರಿಗೆ ಉದ್ಯೋಗ ಭಾಗ್ಯ

ಮಹದೇವಪುರ: ನಿರುದ್ಯೋಗ ಸಮಸ್ಯೆಯನ್ನು ನಿರ್ಮೂಲನೆ ಮಾಡುವ ಉದ್ದೇಶದಿಂದ ಯುವಕರಿಗೆ ಉದ್ಯೋಗ ಕೊಡಿಸುವ ಕಾರ್ಯಕ್ಕೆ ಮುಂದಾಗಿದ್ದು, ಇದಕ್ಕಾಗಿ ಉದ್ಯೋಗ ಮೇಳ ಹಮ್ಮಿಕೊಳ್ಳಲಾಗಿದೆ ಎಂದು ಮಾಜಿ ಸಚಿವ ಅರವಿಂದ ಲಿಂಬಾವಳಿ ತಿಳಿಸಿದರು.

ವೈಟ್ ಫೀಲ್ಡ್ ಸಮೀಪದ ಚನ್ನಸಂದ್ರದ ಸರಕಾರಿ ಪಾಲಿಟೆಕ್ನಿಕ್ ಕಾಲೇಜಿನ ಆವರಣದಲ್ಲಿ ಆಯೋಜಿಸಿದ್ದ ಬೃಹತ್ ಉದ್ಯೋಗ ಮೇಳ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮಹದೇವಪುರ ವಿಧಾನಸಭಾ ಕ್ಷೇತ್ರ ಸಿಲಿಕಾನ್ ವ್ಯಾಲಿ, ಇಲ್ಲಿ ಸುಮಾರು 500ಕ್ಕೂ ಹೆಚ್ಚು ಸಾಫ್ಟ್‌ವೇರ್ ಕಂಪನಿಗಳಿವೆ. ಸಾಫ್ಟ್‌ವೇರ್‌ಗೆ ಸಂಬಂಧಿಸಿದ ಅನೇಕ ವಾಣಿಜ್ಯ ವ್ಯವಹಾರಗಳು ನಡೆಯುತ್ತವೆ. ಗೂಗಲ್, ಐಫೋನ್ ತಯಾರಕ ಕಂಪನಿಗಳು ಸೇರಿದಂತೆ ನೂರಕ್ಕೂ ಹೆಚ್ಚು ಕಾರ್ಪೊರೇಟ್ ಕಂಪನಿಗಳೂ ಇಲ್ಲಿವೆ. ಹಾಗಾಗಿ ಅವಕಾಶಗಳು ಜಾಸ್ತಿಯಿದ್ದು, ಜೊತೆಗೆ ಬೇರೆ ರಾಜ್ಯಗಳ ಕಂಪನಿಗಳನ್ನೂ ಕರೆದಿದ್ದು, ಉತ್ತಮ ಅವಕಾಶ ಇದ್ದರೆ ಅಲ್ಲಿಯೂ ತೆರಳಬಹುದಾಗಿದೆ ಎಂದರು.

ಪ್ರತಿಭೆಗೆ ತಕ್ಕಂತೆ ಕೆಲಸ, ಕಂಪನಿ ಬದಲಿಸುವವರಿಗೂ ಅವಕಾಶ ಒದಗಿಸಲಾಗಿದೆ. ಉದ್ಯೋಗ ಸೃಷ್ಟಿ ಕಂಪನಿಗಳು ಮಾಡಿದೆ, ಉದ್ಯೋಗಾಕಾಂಕ್ಷಿಗಳು ಇಲ್ಲಿ ನೆರೆದಿದ್ದೀರಿ ಇಬ್ಬರನ್ನು ಸಂಪರ್ಕಿಸಲು ಈ ವೇದಿಕೆಯನ್ನು ಕಲ್ಪಿಸಲಾಗಿದೆ. ಅದೇ ರೀತಿಯಲ್ಲಿ ಮುಂದಿನ ಕೆಲವೇ ತಿಂಗಳಲ್ಲಿ ಮತ್ತೊಮ್ಮೆ ಉದ್ಯೋಗ ಮೇಳ ಆಯೋಜಿಸಲಾಗುವುದು ಎಂದು ತಿಳಿಸಿದರು.

ಈ ಉದ್ಯೋಗ ಮೇಳದಲ್ಲಿ ಸುಮಾರು 700ರಷ್ಟು ಅಭ್ಯರ್ಥಿಗಳಿಗೆ ಸ್ಥಳದಲ್ಲಿಯೇ ಉದ್ಯೋಗ ನೇಮಕ ಪತ್ರ ನೀಡಲಾಯಿತು. ಇನ್ನುಳಿದ ಅಭ್ಯರ್ಥಿಗಳಿಗೆ ಎರಡನೇ ಮತ್ತು ಮೂರನೇ ಸುತ್ತಿನ ಸಂದರ್ಶನದ ಬಳಿಕ ನೇಮಕ ಪತ್ರ ವಿತರಿಸಲಾಗುವುದು. ಇದು ನಮ್ಮ ಮಹದೇವಪುರ ವಿಧಾನಸಭಾ ಕ್ಷೇತ್ರದಲ್ಲಿ ಯಶಸ್ವಿಯಾಗಿ ನಡೆದ ಐದನೇ ಉದ್ಯೋಗ ಮೇಳವಾಗಿದ್ದು ಇದರ ಯಶಸ್ಸಿಗಾಗಿ ಶ್ರಮವಹಿಸಿದ ಮಹದೇವಪುರ ಟಾಸ್ಕ್ ಫೋರ್ಸ್‌ನ ಸ್ವಯಂಸೇವಕರಿಗೆ ಹಾಗೂ ವಿವಿಧ ಕಂಪನಿಗಳ ಮಾನವ ಸಂಪನ್ಮೂಲ ಮುಖ್ಯಸ್ಥರಿಗೆ ಧನ್ಯವಾದ ತಿಳಿಸಿದರು.

ಈ ವೇಳೆ ಉದ್ಯೋಗ ಮೇಳದ ಮುಖ್ಯ ಸಂಯೋಜಕ ಕಿರಣ್, ರೆಡ್ ಕ್ರಾಸ್ ಸಂಸ್ಥೆಯ ಮುಖ್ಯಸ್ಥ ಶೆಟ್ಟಿ, ಸಾಮಾಜಿಕ ಸಬಲೀಕರಣ ಟಾಸ್ಕ್ ಫೋರ್ಸ್‌ನ ಅಧ್ಯಕ್ಷ ಪಾಪಣ್ಣ, ಬಿಜೆಪಿ ಬೆಂಗಳೂರು ಕೇಂದ್ರ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮಹೇಂದ್ರ ಮೋದಿ, ಕ್ಷೇತ್ರ ಗ್ರಾಮಾಂತರ ಮಂಡಳ ಅಧ್ಯಕ್ಷ ನಟರಾಜ್, ನಗರ ಮಂಡಲ ಅಧ್ಯಕ್ಷ ಮನೋಹರರೆಡ್ಡಿ, ಪ್ರಧಾನ ಕಾರ್ಯದರ್ಶಿ ಎಲ್.ರಾಜೇಶ್ ಇದ್ದರು.

ವೈಟ್ ಫೀಲ್ಡ್ ಸಮೀಪದ ಚನ್ನಸಂದ್ರದ ಸರಕಾರಿ ಪಾಲಿಟೆಕ್ನಿಕ್ ಕಾಲೇಜಿನ ಆವರಣದಲ್ಲಿ ಆಯೋಜಿಸಿದ್ದ ಉದ್ಯೋಗ ಮೇಳದಲ್ಲಿ ಕೆಲಸ ಪಡೆದ ಅಭ್ಯರ್ಥಿಗಳಿಗೆ ಆಯ್ಕೆ ಪತ್ರವನ್ನು ಮಾಜಿ ಸಚಿವ, ಮಹದೇವಪುರ ಟಾಸ್ಕ್ ಫೋರ್ಸ್ ಅಧ್ಯಕ್ಷ ಅರವಿಂದ ಲಿಂಬಾವಳಿ ನೀಡಿದರು.

ಎಲ್ಲರಿಗೂ ಉದ್ಯೋಗ ಕಲ್ಪಿಸುವ ಗುರಿ

ನಮ್ಮ ಮಹದೇವಪುರ ವಿಧಾನಸಭಾ ಕ್ಷೇತ್ರದಲ್ಲಿರುವ ಎಲ್ಲರಿಗೂ ಉದ್ಯೋಗ ಸಿಗಬೇಕು ಎನ್ನುವ ಗುರಿ ನನ್ನದು. ಮುಂದಿನ ಉದ್ಯೋಗ ಮೇಳಗಳಲ್ಲಿ ಇಡೀ ಬೆಂಗಳೂರು ಜನತೆಯನ್ನು ಗಮನದಲ್ಲಿಟ್ಟುಕೊಳ್ಳಲಾಗುವುದು ಎಂದರು. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಮೇಕ್ ಇನ್ ಇಂಡಿಯಾ ಮೂಲಕ ಅನೇಕ ಕಂಪನಿಗಳಿಗೆ ಪ್ರೋತ್ಸಾಹ ನೀಡುತ್ತಿದ್ದಾರೆ. ಅದರಂತೆ ಉದ್ಯೋಗಾವಕಾಶಗಳು ನಿರ್ಮಾಣವಾಗಿದೆ. ಬಡತನ ರೇಖೆಗಿಂತ ಮೇಲಿರುವವರ ಸಂಖ್ಯೆ ಜಾಸ್ತಿಯಾಗಿದೆ. ನಮ್ಮೆಲ್ಲರ ಸಾಮೂಹಿಕ ಪ್ರಯತ್ನದಿಂದ, ಮುಂಬರುವ ದಿನಗಳಲ್ಲಿ ಹೆಚ್ಚಾಗಲಿ ಎಂದು ಮಾಜಿ ಸಚಿವ ಅರವಿಂದ ಲಿಂಬಾವಳಿ ತಿಳಿಸಿದರು.

ಹೈದರಾಬಾದ್‌ನಲ್ಲೇ ಬೀಡುಬಿಟ್ಟ ಎಸ್‌ಐಟಿ

ಬೆಂಗಳೂರು: ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದ ಬಹುಕೋಟಿ ಹಗರಣ ಪ್ರಕರಣ ರಾಜಕೀಯ ಕೆಸರೆಚಾಟಕ್ಕೆ ಕಾರಣವಾಗಿದೆ. ಎಸ್‌ಐಟಿ ತನಿಖೆ ಮಧ್ಯೆಯೇ ಇಸಿಐಆರ್ ದಾಖಲಿಸಿಕೊಂಡಿದ್ದ ಜಾರಿ ನಿರ್ದೇಶನಾಲಯದ ಅಧಿಕಾರಿಗಳು ನಿಗಮದ ಮಾಜಿ ಸಚಿವ ಬಿ.ನಾಗೇಂದ್ರ ಅವರನ್ನು ಬಂಧಿಸಿದ್ದಾರೆ. ಪ್ರಕರಣದ ತನಿಖೆ ನಡೆಸುತ್ತಿರುವ ಎಸ್‌ಐಟಿ ಹೈದರಾಬಾದ್‌ನಲ್ಲೇ ಬೀಡುಬಿಟ್ಟಿದೆ.

ಎಸ್‌ಐಟಿ ತನಿಖೆ ಚುರುಕುಗೊಳಿಸಿದ್ದು, ಈವರೆಗೂ 37 ಕೋಟಿ ರು.ಗಿಂತಲೂ ಅಧಿಕ ಹಣ ಹಾಗೂ 16 ಕೆ.ಜಿಗೂ ಹೆಚ್ಚು ಚಿನ್ನವನ್ನ ವಶಪಡಿಸಿಕೊಂಡಿದೆ. ಹೈದರಾಬಾದ್‌ನಲ್ಲೇ ಬೀಡುಬಿಟ್ಟಿರುವ ಎಸ್‌ಐಟಿ ಸೈಬರ್ ತಜ್ಞರ ತಂಡ, ಹೈದರಾಬಾದ್‌ನ ಫಸ್ಟ್ ಫೈನಾನ್ಸ್ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಅಧ್ಯಕ್ಷ ಸತ್ಯನಾರಾಯಣ ವರ್ಮಾಗೆ ಸಂಬಂಧಿಸಿದ ಕಚೇರಿ ಹಾಗೂ ಕೆಲ ಹಣಕಾಸು ವ್ಯವಹಾರದ ತನಿಖೆ ನಡೆಸುತ್ತಿದೆ. ಖಾತೆಗಳಿಗೆ ಹಣ ವರ್ಗಾವಣೆ ಬಳಿಕ ನಗದು ಸಂಗ್ರಹ ಮಾಡಿದ್ದ ಹಿನ್ನೆಲೆ, ಎಲ್ಲಾ ಬ್ಯಾಂಕ್ ಗಳ ದಾಖಲೆ ಪರಿಶೀಲಿಸಲಾಗುತ್ತಿದೆ. ಮೂಲ ಖಾತೆದಾರರನ್ನ ವಿಚಾರಣೆ ನಡೆಸಿ ಹೇಳಿಕೆ ದಾಖಲು ಮಾಡಿಕೊಳ್ಳುತ್ತಿರುವ ತಂಡ ಸತ್ಯನಾರಾಯಣ ವರ್ಮನನ್ನ ವಿಚಾರಣೆಗೆ ಒಳಪಡಿಸಿ ತನಿಖೆ ನಡೆಸಲಾಗುತ್ತಿದೆ. ವರ್ಮಾ ವಿಚಾರಣೆ ಮಾಡಲು ಇಡಿ ಸಹ ಮುಂದಾಗಿದ್ದು, ಎಸ್‌ಐಟಿ ಕಸ್ಟಡಿ ಮುಗಿಯುತ್ತಿದ್ದಂತೆ ವಶಕ್ಕೆ ಪಡೆಯಲು ಮುಂದಾಗಿದೆ. ಕಳೆದ ಎರಡು ದಿನಗಳ ಹಿಂದೆಯಷ್ಟೇ ಹೈದರಾಬಾದ್‌ನ ಎರಡು ಸ್ಥಳಗಳಲ್ಲಿ ಶೋಧ ನಡೆಸಿದ್ದ ಎಸ್‌ಐಟಿ, 6 ಕೆಜಿ ಚಿನ್ನ ಹಾಗೂ 2.50 ಕೋಟಿ ರೂ. ನಗದು ಹಣ ವಶಪಡಿಸಿಕೊಂಡಿತ್ತು. ಆರೋಪಿ ಸತ್ಯನಾರಾಯಣ ವರ್ಮನಿಂದ 5 ಕೆಜಿ ಚಿನ್ನ ಹಾಗೂ ಕಾಕಿ ಶ್ರೀನಿವಾಸ್‌ನಿಂದ 1 ಕೆಜಿ ಚಿನ್ನ ಜಪ್ತಿ ಮಾಡಿಕೊಂಡಿತ್ತು.

ಸಮಾಚಾರ ಸಣ್ಣದಲ್ಲ

ಪರಿಸರವಾದಿ ಭೂಹಳ್ಳಿ ಪುಟ್ಟಸ್ವಾಮಿ ಆತ್ಮಹತ್ಯೆ

ರಾಮನಗರ: ಫೇಸ್ ಬುಕ್ ನಲ್ಲಿ ಮಾಹಿತಿ ನೀಡಿ ಹಿರಿಯ ಪರಿಸರವಾದಿ ಭೂಹಳ್ಳಿ ಪುಟ್ಟಸ್ವಾಮಿ ಅವರು ಆತ್ಮಹತ್ಯೆಗೆ ಶರಣಾಗಿರುವ ಘಟನೆ ಭಾನುವಾರ ತಡರಾತ್ರಿ ನಡೆದಿದೆ.

ಮೂಲತಃ ಚನ್ನಪಟ್ಟಣ ತಾಲೂಕಿನ ಭೂಹಳ್ಳಿ ಗ್ರಾಮದ ನಿವಾಸಿಯಾಗಿರುವ ಭೂಹಳ್ಳಿ ಪುಟ್ಟಸ್ವಾಮಿ (76) ಅವರು ಆತ್ಮಹತ್ಯೆಗೆ ಶರಣಾಗಿರುವ ಹಿರಿಯ ಪರಿಸರವಾದಿ. ಭಾನುವಾರ ತಡ ರಾತ್ರಿ ಫೇಸ್ ಬುಕ್ ನಲ್ಲಿ ಪೋಸ್ಟ್ ಹಾಕಿದ್ದು ಅನಾರೋಗ್ಯದ ಕಾರಣ ದಿಂದ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದಾಗಿ ಹೇಳಿಕೊಂಡಿದ್ದಾರೆ. ಚನ್ನಪಟ್ಟಣ ಪಾರ್ವತಿ ಚಿತ್ರಮಂದಿರದ ರಸ್ತೆಯಲ್ಲಿ ರೂಮ್ ಮಾಡಿಕೊಂಡಿದ್ದ ಪುಟ್ಟಸ್ವಾಮಿ ಅವರು ತನ್ನ ರೂಮ್ ನಲ್ಲೆ ನೇಣಿಗೆ ಶರಣಾಗಿದ್ದಾರೆ. ತನ್ನ ಸ್ವಂತ ಹಣದಲ್ಲಿ ಹಲವಾರು ವನ ನಿರ್ಮಾಣ ಮಾಡಿದ್ದ ಪುಟ್ಟಸ್ವಾಮಿ ಸಾವಿರಾರು ಗಿಡ – ಮರಗಳನ್ನ ಬೆಳೆಸಿದ ಕೀರ್ತಿ ಇವರಿಗಿದೆ.

ವಿಶ್ವವಾಣಿ ಆರಾಮ
ಅನುದಿನವೂ ವಿರಾಮಕ್ಕೆ ಒಂದು ನೆಪ
ಪ್ರತಿದಿನ ಆರಾಮದಿಂದ ಓದಿ

ಪ್ರವಾಹಕ್ಕೆ ನಲುಗಿದ ಗ್ರಾಮಗಳು | ಹಸುಗೂಸು ಕಳೆದುಕೊಂಡ ಕಣ್ಣೀರಾದ ಬಾಣಂತಿಯರು

ಕೃಷ್ಣಾ ನದಿಯಲ್ಲಿ ಮುಂದುವರಿದ ಪ್ರವಾಹದ ಅಬ್ಬರ

ವಿನಾಯಕ ಮಠಪತಿ ಬೆಳಗಾವಿ: ಮಹಾರಾಷ್ಟ್ರದಲ್ಲಿ ಸುರಿದ ಧಾರಾಕಾರ ಮಳೆಗೆ ಉಂಟಾಗಿರುವ ಕೃಷ್ಣಾ ನದಿ ಪ್ರವಾಹ ತಗ್ಗುವ ಲಕ್ಷಣ ಕಂಡುಬರುತ್ತಿಲ್ಲ. ನದಿ ಪಾತ್ರದಲ್ಲಿನ ಸುಮಾರು 60ಕ್ಕೂ ಅಧಿಕ ಗ್ರಾಮಗಳು ಜಲಾವೃತಗೊಂಡಿದ್ದು 400 ಕ್ಕೂ ಅಧಿಕ ಕುಟುಂಬಗಳು ಕಾಳಜಿ ಕೇಂದ್ರದಲ್ಲಿ ಆಸರೆ ಪಡೆಯುತ್ತಿವೆ.

ಮಹಾರಾಷ್ಟ್ರದ ಸಾಂಗಲಿ, ಮಿರಜ್ ಹಾಗೂ ಕೊಲ್ಹಾಪುರ ಭಾಗದಲ್ಲಿ ಮಳೆ ಅಬ್ಬರ ಕೊಂಚ ಕಡಿಮೆಯಾಗಿದ್ದರು ನಗರ ಪ್ರದೇಶಕ್ಕೆ ನುಗ್ಗಿದ್ದ ನೀರು ಕೃಷ್ಣಾ ನದಿಗೆ ಹರಿದುಬರುತ್ತಿದೆ. ವೇದಗಂಗಾ ಹಾಗೂ ದೂದ್ ಗಂಗಾ ನದಿ ಒಳ ಹರಿವು ಏರಿಕೆಯಾಗಿದ್ದು ಸುಮಾರು 3 ಲಕ್ಷ ಕ್ಯೂಸೆಕ್ ನೀರು ಕೃಷ್ಣಾ ನದಿಗೆ ಹರಿದು ಬರುತ್ತಿದೆ. ಕೃಷ್ಣಾ ನದಿ ಪ್ರವಾಹಕ್ಕೆ ಅಥಣಿ, ಚಿಕ್ಕೋಡಿ, ರಾಯಬಾಗ, ಕಾಗವಾಡ ತಾಲೂಕಿನ ನದಿ ಪಾತ್ರದ ಗ್ರಾಮಗಳು ಸಂಪೂರ್ಣ ಜಲಾವೃತಗೊಂಡಿದ್ದು ಇತ್ತ ದೂದಗಂಗಾ ನದಿ ಆರ್ಭಟಕ್ಕೆ ನಿಪ್ಪಾಣಿ ತಾಲೂಕು ಜಲಾವೃತಗೊಂಡಿದೆ. ಈಗಾಗಲೇ ಜಿಲ್ಲಾಡಳಿತದಿಂದ ಕಾಳಜಿ ಕೇಂದ್ರ ಆರಂಭಿಸಲಾಗಿದ್ದು 1500 ಕ್ಕೂ ಅಧಿಕ ನಿರಾಶ್ರಿತರು ಗಂಜಿ ಕೇಂದ್ರ ಸೇರಿದ್ದಾರೆ.

20 ದಿನದ ಹಸುಗೂಸು ಕಳೆದುಕೊಂಡ ಬಾಣಂತಿಯರ ಸಂಕಟ: ಘಟಪ್ರಭಾ ನದಿ ಪ್ರವಾಹಕ್ಕೆ ಗೋಕಾಕ್ ಹಾಗೂ ಮೂಡಲಗಿ ತಾಲೂಕಿನ ಹಲವು ಗ್ರಾಮಗಳ ಜನ ನರಕಯಾತನೆ ಅನುಭವಿಸುತ್ತಿದ್ದಾರೆ. ಮೂಡಲಗಿ ತಾಲೂಕಿನ ಮಸಗುಪ್ಪಿ ಗ್ರಾಮದ ಹನಮವ್ವ ಹಾಗೂ ಲಕ್ಷ್ಮೀ ಎಂಬ ಇಬ್ಬರು ಬಾಣಂತಿಯರು 20 ದಿನದ ಹಸುಗೂಸುಗಳನ್ನು ಕಳೆದುಕೊಂಡು ಬಾಣಂತಿರ ಯರು ಕಾಳಜಿ ಕೇಂದ್ರದಲ್ಲಿ ಆಶ್ರಯ ಪಡೆಯುತ್ತಿದ್ದಾರೆ. ವಡೇರಹಟ್ಟಿಯ ಅಂಗನವಾಡಿಯಲ್ಲಿ ಕಾಳಜಿ ಕೇಂದ್ರದಲ್ಲಿರುವ ನಿರಾಶ್ರಿತ ಬಾಣಂತಿಯರ ಸಂಕಟ ಹೇಳತೀರದಾಗಿದೆ. ತಾಯಿಯ ಮನೆಯಲ್ಲಿ ಬೆಚ್ಚಗೆ ಆರೈಕೆ ಪಡೆಯಬೇಕಿದ್ದ ಬಾಣಂತಿಯರಿಗೆ ಈಗ ಸೂಕ್ತ ಸೌಲಭ್ಯ ಇಲ್ಲದ ಕಾಳಜಿ ಕೇಂದ್ರದಲ್ಲಿ ನೋವಿ ನಿಂದ ಬದುಕು ಸಾಗಿಸಬೇಕಾದ ಅನಿವಾರ್ಯತೆ ಎದುರಾಗಿದೆ.

ನಡುಗಡ್ಡೆಯಾದ ಸಪ್ತಸಾಗರ ಗ್ರಾಮ: ಅಥಣಿ ತಾಲೂಕಿನ ಕೃಷ್ಣಾ ನದಿ ಪಕ್ಕದಲ್ಲಿರುವ ಸಪ್ತಸಾಗರ ಗ್ರಾಮ ಪ್ರವಾಹಕ್ಕೆ ಸಿಲುಕಿ ನಡುಗಡ್ಡೆಯಾಗಿದೆ. ಗ್ರಾಮಕ್ಕೆ ಸಂಪರ್ಕಿಸುವ ರಸ್ತೆ ಸಂಪೂರ್ಣ ಜಲಾವೃ ತಗೊಂಡಿದ್ದು ನದಿ ಪಾತ್ರದ ಸುಮಾರು 200 ಕ್ಕೂ ಅಧಿಕ ಮನೆಗಳು ಜಲಾವೃತಗೊಂಡಿವೆ. ಮನೆ ಕಳೆದುಕೊಂಡ ಸುಮಾರು 500 ಕ್ಕೂ ಅಧಿಕ ನಿರಾಶ್ರಿ ತರು ಸುರಕ್ಷಿತ ಸ್ಥಳಕ್ಕೆ ತೆರಳಿದರೆ, ಈವರೆಗೆ ಎರಡು ದೇವಸ್ಥಾನಗಳು ಸಂಪೂರ್ಣ ಜಲಾವೃತಗೊಂಡಿವೆ.

ಕೃಷ್ಣಾ ನದಿ ಪ್ರವಾಹಕ್ಕೆ ಒಳಗಾಗಿರುವ ಸಪ್ತಸಾಗರಕ್ಕೆ ಸಂಪರ್ಕಿಸುವ ರಸ್ತೆ ಜಲಾವೃತವಾಗಿದೆ.

> ಸಂಪೂರ್ಣವಾಗಿ ಮನೆ ಬಿದ್ದರು ಭಾಗಶಃ ಬಿದ್ದಿದೆ ಎಂದು ಅಧಿಕಾರಿಗಳು ವರದಿ ನೀಡುತ್ತಿರುವುದು ನನ್ನ ಗಮನಕ್ಕೆ ಬಂದಿದೆ. ಸರಕಾರ ಪರಿಹಾರ ಕೊಡಲು ಸಿದ್ಧವಿರುವಾಗ ಅಧಿಕಾರಿಗಳು ತಪ್ಪು ವರದಿ ನೀಡುವುದು ಸರಿಯಲ್ಲ. ಕೆಲವು ಅಧಿಕಾರಿಗಳು ಕಟುಕರ ರೀತಿ ಕೆಲಸ ಮಾಡುತ್ತಿದ್ದಾರೆ. ಹೃದಯವಂತಿಕೆಯಿಂದ ಕೆಲಸ ಮಾಡಬೇಕು. ತಪ್ಪು ಮಾಡುವ ಅಧಿಕಾರಿಗಳಿಗೆ ಬಿಸಿ ಮುಟ್ಟಿಸುತ್ತೇನೆ.
>
> **– ಲಕ್ಷ್ಮೀ ಹೆಬ್ಬಾಳ್ಕರ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವೆ**

ಸಂಪರ್ಕ ಕಳೆದುಕೊಂಡ ಗ್ರಾಮಗಳು

ವೇದಗಂಗಾ ನದಿ ಪ್ರವಾಹಕ್ಕೆ ಸಿಲುಕಿರುವ ನಿಪ್ಪಾಣಿ ತಾಲೂಕಿನ ಹುನ್ನರಗಿ ಗ್ರಾಮ ಸಂಪರ್ಕ ಕಳೆದುಕೊಂ ಡಿದ್ದು ಗ್ರಾಮದ ಸುಮಾರು 50 ಕ್ಕೂ ಅಧಿಕ ಮನೆಗಳು ಜಲಾವೃತಗೊಂಡಿವೆ. ಜೊತೆಗೆ ಕೃಷ್ಣಾ ನದಿ ಪಾತ್ರದ ರಾಯಬಾಗ ತಾಲೂಕಿನ ಕೆಮಲಾಪುರ ಗ್ರಾಮದ ನಡುಗಡ್ಡೆಯಾಗಿದ್ದು ಜನರು ಪರದಾಡುತ್ತಿದ್ದಾರೆ.

ಮೂಡಲಗಿ ತಾಲೂಕಿನ ಮಸಗುಪ್ಪಿ ಗ್ರಾಮದ ಬಾಣಂತಿಯರು ಕಾಳಜಿ ಕೇಂದ್ರದಲ್ಲಿ ಆಶ್ರಯ ಪಡೆದಿರುವುದು.

ನದಿ ಪ್ರವಾಹಕ್ಕೆ ಮುಳುಗಿದ ದೇವಸ್ಥಾನ .

ಕೃಷ್ಣಾನದಿ ಪ್ರವಾಹದಲ್ಲಿ ಕೊಚ್ಚಿ ಹೋಗಿದ್ದ ರೈತನ ಶವ ಪತ್ತೆ

ಬಾಗಲಕೋಟೆ ಜಮಖಂಡಿ ತಾಲೂಕಿನ ಆಲಗೂರ ಗ್ರಾಮದಲ್ಲಿ ಕೃಷ್ಣಾ ನದಿ ಪ್ರವಾಹಕ್ಕೆ ಕೊಚ್ಚಿ ಹೋಗಿದ್ದ ರೈತ ಸಿದ್ದಪ್ಪ ಅಡಹಳ್ಳಿ(60) ಶವವಾಗಿ ಪತ್ತೆಯಾಗಿದ್ದಾರೆ. ಕೊಚ್ಚಿ ಹೋದ ಸಿದ್ದಪ್ಪನಿಗಾಗಿ ಶೋಧ ಕಾರ್ಯ ನಡೆದಿತ್ತು. ಸೋಮವಾರ ಬಬಲೇಶ್ವರ ತಾಲೂಕಿನ ಶಿರಗೂರ ಗ್ರಾಮದ ಬಳಿ ಶವ ಪತ್ತೆಯಾಗಿದೆ. ಶವ ಇದ್ದ ಸ್ಥಳಕ್ಕೆ ಜಮಖಂಡಿ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದು, ಮೃತದೇಹವನ್ನು ಮರಣೋತ್ತರ ಪರೀಕ್ಷೆಗೆ ರವಾನಿಸಿದ್ದಾರೆ. ಮೇವು ಮಾಡಿಕೊಂಡು ಮರಳಿ ಬರುವಾಗ ಆಲಗೂರ ಗ್ರಾಮದ ಸಿದ್ದಪ್ಪ ಅಡಹಳ್ಳಿ 3 ದಿನದ ಹಿಂದೆ ನದಿ ಪಾಲಾಗಿದ್ದರು.

ರಾಜ್ಯದ ಜಲಾಶಯಗಳ ಮಟ್ಟ

	ಜಲಾಶಯ	ಗರಿಷ್ಠ ಮಟ್ಟ	ಇಂದಿನ ಮಟ್ಟ	ಒಳಹರಿವು
1.	ಕೆಆರ್‌ಎಸ್	124.80	124.80	57,012
2.	ಕಬಿನಿ	2,284	2283.20	20,3467
3.	ಹಾರಂಗಿ	2,859	2855.85	7,613
4.	ಹೇಮಾವತಿ	2,922	2920.12	32,622
5.	ತುಂಗಭದ್ರಾ	1633	1630.88	1,47,122
6.	ಆಲಮಟ್ಟಿ	1704.81	1691.25	2,71,385
7.	ನಾರಾಯಣಪುರ	1615	1607.59	3,10,771

ಕಾವೇರಿ ನದಿಗೆ ಹಾರಿದ ನೌಕರನ ಮೃತದೇಹ ಪತ್ತೆ

ಕೊಡಗಿನ ಕುಶಾಲನಗರದಲ್ಲಿ ಸರಕಾರಿ ನೌಕರನೊಬ್ಬ ಕಾವೇರಿ ನದಿಗೆ ಹಾರಿದ್ದ. 5 ದಿನಗಳ ಬಳಿಕ ಸೋಮವಾರ ಮೃತದೇಹ ಪತ್ತೆಯಾಗಿದೆ. ಎಸಿ ಕಚೇರಿ ಪ್ರಥಮ ದರ್ಜೆ ನೌಕರ ಅರುಣ್(52) ಮೃತ ದುರ್ದೈವಿ. ಕೊಪ್ಪ ಸೇತುವೆಯಿಂದ ಕಾವೇರಿ ನದಿಗೆ ಹಾರಿದ್ದ ಅರುಣ್, ಸೇತುವೆಯಿಂದ 5 ಕಿ. ಮೀ ದೂರದಲ್ಲಿ ಶವ ಪತ್ತೆಯಾಗಿದೆ. ಮೃತದೇಹಕ್ಕಾಗಿ ರ್‍ಯಾಫ್ಟಿಂಗ್ ತಂಡ, ಅಗ್ನಿಶಾಮಕ ಸಿಬ್ಬಂದಿ ಹಾಗೂ ಪೊಲೀಸರು ಕಾರ್ಯಾಚರಣೆ ನಡೆಸಿದ್ದರು. ಸ್ಥಳಕ್ಕೆ ಕುಶಾಲನಗರ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಮೃತದೇಹವನ್ನು ಮರಣೋತ್ತರ ಪರೀಕ್ಷೆಗೆ ರವಾನಿಸಿದ್ದಾರೆ.

87ಕ್ಕೂ ಹೆಚ್ಚು ಮನೆ ಜಲಾವೃತ

ಬಾಗಲಕೋಟೆ ಜಿಲ್ಲೆ ಮುಧೋಳ ತಾಲೂಕಿನ ಮಿರ್ಜಿವು ನಲುಗಿ ಹೋಗಿದೆ. ಮಿರ್ಜಿ ಗ್ರಾಮಕ್ಕೆ ನದಿ ನೀರು ನುಗ್ಗಿ ಅವಾಂತರವೇ ಸೃಷ್ಟಿಯಾಗಿದೆ. 87ಕ್ಕೂ ಹೆಚ್ಚು ಮನೆಗಳು ನೀರಲ್ಲಿ ಜಲಾವೃತಗೊಂಡಿದೆ. 87 ಕುಟುಂಬಗಳ 300ಕ್ಕೂ ಹೆಚ್ಚು ಜನರು ಕಾಳಜಿ ಕೇಂದ್ರಕ್ಕೆ ಶಿಫ್ಟ್ ಆಗಿದ್ದಾರೆ. ಮಿರ್ಜಿ ಗ್ರಾಮದ ಎತ್ತರ ಪ್ರದೇಶದಲ್ಲಿರುವ ಬಿಬಿ ಮುಧೋಳ, ಸರಕಾರಿ ಪ್ರಾಥಮಿಕ ಶಾಲೆಯಲ್ಲಿರುವ ಕಾಳಜಿ ಕೇಂದ್ರಗಳನ್ನು ತೆರಯಲಾಗಿದೆ. ಸಾವಿರಾರು ಎಕರೆ ಜಮೀನಿನಲ್ಲಿ ಬೆಳೆದ ಕಬ್ಬು, ಉದ್ದು, ಸೇರಿ ಹಲವು ಬೆಳೆಗಳು ಮುಳುಗಡೆಯಾಗಿದೆ. ಶಾಶ್ವತ ಸ್ಥಳಾಂತರಕ್ಕೆ ಮಿರ್ಜಿ ಗ್ರಾಮಸ್ಥರು ಆಗ್ರಹಿಸಿದ್ದಾರೆ.

6 ಬಾರಿ ಡೈವೋರ್ಸ್, ಎಲ್ಲರಿಂದ ಜೀವನಾಂಶ!

← ಮೊದಲಪುಟದಿಂದ ಪತಿ ಪರ ವಕೀಲರು ವಾದ ಮಂಡಿಸಿ, ವಿವಾಹಿತ ಮಹಿಳೆಯರ ಮೇಲಿನ ಕ್ರೌರ್ಯಕ್ಕೆ ಸಂಬಂಧಿಸಿದ ಸೆಕ್ಷನ್ 498ಎ ಅಡಿಯಲ್ಲಿ ಎಲ್ಲ ಗಂಡಂದಿರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ಹೆಚ್ಚುವರಿ ಯಾಗಿ ಆಕೆ ಜೀವನಾಂಶವನ್ನು ಆಗ್ರಹಿಸಿ ದ್ದಾಳೆ ಎಂದರು. ಕಾನೂನು ಪ್ರಕ್ರಿಯೆ ಪ್ರಾರಂಭಿಸಿದ ನಂತರ ವಿಚ್ಛೇದನಕ್ಕೆ ಅರ್ಜಿ ಸಲ್ಲಿಸುವ ಮೊದಲು ಅವಳು ಪ್ರತಿ ಪತಿಯೊಂದಿಗೆ ಒಂದು ವರ್ಷದಿಂದ ಆರು ತಿಂಗಳವರೆಗೆ ವಾಸಿಸುತ್ತಿದ್ದಳು ಎಂದು ವಕೀಲರು ತಿಳಿಸಿದರು.

ವಿಚ್ಛೇದನ ಪಡೆಯುವುದು ಎಷ್ಟು ಬಾರಿ?: ವಿಚ್ಛೇದನ ಪ್ರಕರಣದಲ್ಲಿ ಕಾನೂನನ್ನು ದುರುಪಯೋಗಪಡಿಸಿಕೊಂಡು ಮಾನಸಿಕ ಹಿಂಸೆ ನೀಡುವುದನ್ನು ಒಪ್ಪಲಾಗದು. ಇತರ ಆರು ಮಂದಿಯ ಮಾಹಿತಿ ನಿಮ್ಮ ಬಳಿಯಿದ್ದರೆ ಅವರ ಫೋಟೋ ಸಹಿತ ನೀವು ನ್ಯಾಯಾಲಯಕ್ಕೆ ಮಾಹಿತಿ ಸಲ್ಲಿಸಿ. ಇದನ್ನಾಧರಿಸಿಯೇ ವಿಚಾರಣೆ ಮಾಡೋಣ. ಹೀಗೆ ಮದುವೆಯಾಗಿ, ವಿಚ್ಛೇದನೆ ಪಡೆಯುವುದು ಎಷ್ಟು ಬಾರಿ ಎಂದು ನ್ಯಾಯಮೂರ್ತಿಗಳು ಪ್ರಶ್ನಿಸಿದರು. ಇದಕ್ಕೆ ವಕೀಲರು ಸಮ್ಮತಿಸಿದ್ದು, ಮಾಹಿತಿ ಒದಗಿಸುವುದಾಗಿ ನ್ಯಾಯಾಲಯಕ್ಕೆ ತಿಳಿಸಿದ ಬಳಿಕ, ನ್ಯಾಯಮೂರ್ತಿಗಳು ಆಗಸ್ಟ್ 21ಕ್ಕೆ ಪ್ರಕರಣದ ವಿಚಾರಣೆಯನ್ನು ಮುಂದೂಡಿದರು. ಈ ವಿಚಾರಣೆ ವಿಡಿಯೊ ವೈರಲ್ ಆಗಿದ್ದು, ಹಲವರು ಈ ರೀತಿ ಕಾನೂನು ದುರುಪಯೋಗ ಪಡಿಸಿಕೊಳ್ಳುವವರಿಗೆ ಕಠಿಣ ಶಿಕ್ಷೆ ನೀಡಬೇಕು ಎಂದು ಸಲಹೆ ನೀಡಿದ್ದಾರೆ.

CHANGE OF NAME
I, Jayasheela Prakash, W/o G K Prakash, R/o 6, Ganga, 2nd Main, RMV 2nd Stage, 3rd Block, New BEL Road, Bengaluru-560094, have changed my name from Jayasheela to Jayasheela Prakash for all future purposes.
SD/-
Jayasheela Prakash

ಕರ್ನಾಟಕ ಸರ್ಕಾರ
ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣ ಅಧಿಕಾರಿಗಳ ಕಾರ್ಯಾಲಯ ರಾಯಚೂರು
ಇ.ಮೇಲ್ ವಿಳಾಸ: dtworcr@gmail.com ದೂರವಾಣಿ 08532–220045
ಸಂಖ್ಯೆ:ಜಿಪವಕಅರಾ/ಲೆಕ್ಕ/ಆಹಾರ/ಟೆಂಡರ್/ಸಿಆರ್–/2024–25 ದಿನಾಂಕ: 26–07–2024
:: ತಿದ್ದುಪಡಿ ಪ್ರಕಟಣೆ::
ಈ ಕಚೇರಿ ಇ–ಟೆಂಡರ್ ಪ್ರಕಟಣೆ ಸಂ. ಜಿಪವಕಅರಾ/ಲೆಕ್ಕ/ಆಹಾರ/ಟೆಂಡರ್/ಸಿಆರ್–/2024–25 ದಿನಾಂಕ:22–07–2024 ರಲ್ಲಿ ಪ್ರಕಟಿಸಿದಂತೆ ಈ ಕೆಳಕಂಡಂತೆ ತಿದ್ದುಪಡಿ ಇರುತ್ತದೆ.
"2024–25 ನೇ ಸಾಲಿಗೆ ಸಮಾಜ ಕಲ್ಯಾಣ ಇಲಾಖೆಯ ಮೆಟ್ರಿಕ್ ಪೂರ್ವ/ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳು/ವಸತಿ ಶಾಲೆಗಳ ವಿದ್ಯಾರ್ಥಿಗಳಿಗೆ ಗ್ರೂಪ್ 'ಎ' ರಿಂದ 'ಡಿ' ವರೆಗಿನ ಆಹಾರ ಸಾಮಗ್ರಿಗಳನ್ನು ಮತ್ತು ಇನ್ನಿತರೆ ಸಾಮಗ್ರಿಗಳನ್ನು ಸರಬರಾಜು ಪಡೆಯಲು ರಾಯಚೂರು ಜಿಲ್ಲೆಯ 5 ತಾಲೂಕುಗಳನ್ನು ಘಟಕಗಳಾಗಿ ವಿಂಗಡಿಸಿ ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಕರೆಯಲಾಗಿದೆ." ಎಂಬುವುದರ ಬದಲಾಗಿ
"ರಾಯಚೂರು ಜಿಲ್ಲೆಯ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ವತಿಂದ ನಿರ್ವಹಣೆಯಾಗುತ್ತಿರುವ ಮೆಟ್ರಿಕ್ ಪೂರ್ವ, ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳು ಹಾಗೂ ಮರ್ಹ ವಾಲ್ಮೀಕಿ ಆದಿವಾಸಿ ಬುಡಕಟ್ಟು ವಸತಿ ಶಾಲೆಗಳಿಗೆ ಗ್ರೂಪ್–'ಎ' ರಿಂದ 'ಹೆಚ್' ವರೆಗಿನ ಆಹಾರ ಸಾಮಗ್ರಿ ಮತ್ತು ಇತರೇ ಸಾಮಗ್ರಿಗಳನ್ನು ಸರಬರಾಜು ಮಾಡಲು ರಾಯಚೂರು ಜಿಲ್ಲೆಯ 5 ತಾಲೂಕುಗಳನ್ನು ಘಟಕಗಳಾಗಿ ವಿಂಗಡಿಸಿ ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಕರೆಯಲಾಗಿದೆ." ಎಂದು ಓದಿಕೊಳ್ಳುವುದು
ಸಹಿ/– ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳು ರಾಯಚೂರು
DIP/RCR/152KSMC&A/151/2024-25

ಪುರಸಭಾ ಕಾರ್ಯಾಲಯ ಮಾಲೂರು, ಕೋಲಾರ ಜಿಲ್ಲೆ–563130
ದೂರವಾಣಿ ಸಂ: 08151–232847/ ಸಹಾಯವಾಣಿ:08151–232840,
ಇಮೇಲ್:itstaff_ulb_malur@yahoo.co.in, ವೆಬ್‌ಸೈಟ್: www.malurtown.mrc.gov.in
ನಂ: ಪು.ಸ.ಮಾ/ಕಿ.ಅ/ಆಕ್ಷನ್–01/2024–25 ದಿನಾಂಕ: 24.07.2024
ಸಾರ್ವಜನಿಕ ಇ–ಹರಾಜು ಪ್ರಕಟಣೆ (ಇ–ಪ್ರಕ್ಯೂರ್‌ಮೆಂಟ್ ಮೂಲಕ ಮಾತ್ರ)
ಈ ಮೂಲಕ ಸಮಸ್ತ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಮಾಲೂರು ಪುರಸಭೆ ವ್ಯಾಪ್ತಿಯ ಸರ್ಕಾರಿ ಪದವಿ ಪೂರ್ವ ಕಾಲೇಜು ಒಡೆತನದ ಮೇ॥ಹೋಂಡಾ ಕ್ರೀಡಾಂಗಣದಲ್ಲಿ ಪೂರ್ವಾಭಿಮುಖವಾಗಿ ನಿರ್ಮಾಣಗೊಂಡಿರುವ 15 ವಾಣಿಜ್ಯ ಮಳಿಗೆಗಳ ಸಂಕೀರ್ಣದಲ್ಲಿ ಖಾಲಿ ಇರುವ 3 ವಾಣಿಜ್ಯ ಮಳಿಗೆಗಳಿಗೆ ಮಾನ್ಯ ಜಿಲ್ಲಾಧಿಕಾರಿಗಳ ಆದೇಶದಂತೆ, ಸರ್ಕಾರದ ಸುತ್ತೋಲೆಗಳ ಸಂಖ್ಯೆ: ನಇ/301/ಜಿಇಎಲ್/2017 ದಿ:19.07.2019 ರ ಮಾರ್ಗಸೂಚಿಗಳಂತೆ ಮರುಪಾವತಿ ಠೇವಣಿ ಹಾಗೂ ಬಾಡಿಗೆ ಮೊತ್ತಗಳನ್ನು ನಿಗಧಿಗೊಳಿಸಿ ಮಂಜೂರಾತಿ ಪಡೆಯಲಾಗಿರುತ್ತದೆ. ಅದರಂತೆ ಈ ಕೆಳಕಾಣಿಸಿದ ವಾಣಿಜ್ಯ ಮಳಿಗೆಗಳನ್ನು 12 ವರ್ಷಗಳ ಅವಧಿಗೆ ಬಾಡಿಗೆ ಮೊತ್ತಕ್ಕೆ ಹರಾಜು ಮೂಲಕ ಇ–ಪ್ರಕ್ಯೂರ್‌ಮೆಂಟ್ Simplified Auction ಮೂಲಕ ಇ–ಹರಾಜನ್ನು ನಡೆಸಲು ಸಾರ್ವಜನಿಕ ಪ್ರಕಟಣೆ ಹೊರಡಿಸಲಾಗಿದ್ದು, ಆಸಕ್ತರು ಈ ಇ–ಹರಾಜಿನಲ್ಲಿ ಭಾಗವಹಿಸಿ ಮಳಿಗೆಗಳನ್ನು ಬಾಡಿಗೆಗೆ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಕಚೇರಿ ವೇಳೆಯಲ್ಲಿ ತಾಂತ್ರಿಕ ವಿಭಾಗದಲ್ಲಿ ಸಂಪರ್ಕಿಸಬಹುದು.
ಬಿಡ್‌ದಾರರು ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನ Simplified Auction ನಲ್ಲಿ ಇ.ಎಂ.ಡಿ ಹಣ ಪಾವತಿಸಿ ಹರಾಜು ದಾಸ್ತಾವೇಜನ್ನು ಸಲ್ಲಿಸಿ ಲೈವ್ ಬಿಡ್ಡಿಂಗ್‌ನಲ್ಲಿ ಪಾಲ್ಗೊಳ್ಳಲು ನಿಗಧಿಪಡಿಸಿದ ಅಂತಿಮ ಸಮಯ ಕೆಳಕಂಡ ಕೋಷ್ಟಕದಲ್ಲಿ ನಿಗಧಿಪಡಿಸಿರುವಂತೆ ಇರುತ್ತದೆ.

Number	Details of Shops for e-Aunction	Date of Live Auction Starts from	Date of Live Auction Ends at	Delta Time
Slot-1	Annexure-1	29.07.2024 12:00:00	08.08.2024 12:00:00	3 Min

Annexure-1

ಕ್ರ ಸಂ	ಇ–ಹರಾಜು ಸಂಖ್ಯೆ	ಮೀಸಲಾತಿ ವಿವರ (ಸಾಮಾನ್ಯ/ ಎಸ್‌ಸಿ/ ಎಸ್‌ಟಿ/ ವಿಶೇಷ ಚೇತನರು	ಮಳಿಗೆಗಳ ಕ್ರಮ ಸಂಖ್ಯೆ	ಮಳಿಗೆಗಳ ಅಳತೆ (ಚ.ಅಡಿ)	ಹರಾಜಿನಲ್ಲಿ ಭಾಗವಹಿಸಲು ಮುಂಗಡ ಠೇವಣಿ ಮೊತ್ತ	ಹರಾಜಿಗೆ ನಿಗದಿ ಪಡಿಸಿರುವ ಮಳಿಗೆಯ ನಿರ್ದಿಷ್ಟ ಮಾಸಿಕ ಬಾಡಿಗೆ ಮೊತ್ತ	ಹರಾಜಿಗೆ ನಿಗಧಿ ಪಡಿಸಿರುವ ಮಳಿಗೆಯ ಕನಿಷ್ಟ ಮರು ಪಾವತಿ ಠೇವಣಿ ಮೊತ್ತ
01	DMA/2023-24/ AUCTION182	ಇತರೆ	12	270.03	50,000/–	4,265/–	3,47,000/–
02	DMA/2023-24/ AUCTION183	ಇತರೆ	13	270.03	50,000/–	4,265/–	3,47,000/–
03	DMA/2023-24/ AUCTION184	ಎಸ್.ಸಿ	14	270.03	25,000/–	4,265/–	3,47,000/–

ಸಹಿ/– (ಶ್ರೀ ರಮೇಶ್ ಕುಮಾರ್. ಕೆ) ಆಡಳಿತಾಧಿಕಾರಿಗಳು ಪುರಸಭೆ, ಮಾಲೂರು
ಸಹಿ/– (ಶ್ರೀ ಪ್ರದೀಪ್ ಕುಮಾರ್ ಎ.ಬಿ) ಮುಖ್ಯಾಧಿಕಾರಿ ಪುರಸಭೆ, ಮಾಲೂರು
ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:133/ಕೆಎಸ್‌ಎಂ.ಸಿ.ಎ/2024–25

ನಗರಸಭೆ ಕಾರ್ಯಾಲಯ ಗೋಕಾಕ
NO:CMC/PWD/SFC-15thF-SBM/2024-25/348 Date: 29-07-2024
ಟೆಂಡರ ಪ್ರಕಟಣೆ (e-Procurement)
ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಅದ್ಯಾದೇಶ 1999–2000 ರ ಪ್ರಕಾರ ಆಕ್ಟ 2000 ದ ನಿಯಮದಂತೆ ಸ್ಟ್ಯಾಂಡರ್ಡ ಬಿಡ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ–1, 2 & 4 ರ ನಿಯಮದನ್ವಯ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ಸಿವಿಲ್/ವಿದ್ಯುತ್ ಗುತ್ತಿಗೆದಾರರಿಗೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ 2024–25 ನೇ ಸಾಲಿನ ಎಸ್.ಎಫ್.ಸಿ. ಮುಕ್ತ, 15 ನೇ ಹಣಕಾಸು ಹಾಗೂ ಎಸ್.ಬಿ.ಎಂ. ನಿಧಿಯಡಿಯ ಕಾಮಗಾರಿಗಳಿಗಾಗಿ ಟೆಂಡರಗಳನ್ನು ಅಹ್ವಾನಿಸಲಾಗಿದೆ. ಟೆಂಡರ ಸಲ್ಲಿಸುವ ಕೊನೆಯ ದಿನಾಂಕ: 13/08/2024 ರಂದು ಸಂಜೆ 5–00 ಗಂಟೆ ಹೆಚ್ಚಿನ ಮಾಹಿತಿಗಾಗಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದವರ ಕಚೇರಿಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದೆ ಹಾಗೂ ಅಂತರ್ಜಾಲದ ಮೂಲಕ ವೆಬ್‌ಸೈಟ್ ವಿಳಾಸ www.gokakcity.mrc.gov.in & https://kppp.karnataka.gov.in ರಲ್ಲಿ ಪಡೆಯಬಹುದು.
ಸಹಿ/–(ಆರ್.ಪಿ.ಜಾಧವ) ಪೌರಾಯುಕ್ತರು, ನಗರಸಭೆ,ಗೋಕಾಕ.
DIPR/BGM/RO-NO-483/MCA/2024-25

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು – 560 020.
ಟೆಂಡರ್ ಸಂ: ಬೆಂಅಪ್ರಾ/2024–25/ಇಎಲ್/ವರ್ಕ್–ಇಂಡೆಂಟ್ 52 ದಿನಾಂಕ: 29.07.2024
ಅಲ್ಪಾವಧಿ ಟೆಂಡರ್ ಪ್ರಕಟಣೆ
ಬಿಡಿಎಯು **2024–25ನೇ ವರ್ಷಕ್ಕೆ ಬನಶಂಕರಿ 6ನೇ ಹಂತದಲ್ಲಿ 1ರಿಂದ 11ನೇ ಬ್ಲಾಕ್ ಸೇರಿದಂತೆ ಮುಂದುವರಿದ ಬಡಾವಣೆ 4ನೇ ಹೆಚ್, 4ನೇ ಬಿ ಮತ್ತು 4ನೇ ಟಿ ಗಳಲ್ಲಿ ವಿದ್ಯುತ್ ವಿತರಣಾ ವ್ಯವಸ್ಥೆ ಮತ್ತು ಪರಿಕರಗಳ ವಾರ್ಷಿಕ ನಿರ್ವಹಣೆಗಾಗಿ** ಅಲ್ಪಾವಧಿ ಟೆಂಡರ್‌ಗಳನ್ನು ಆಹ್ವಾನಿಸಿದೆ.
ಟೆಂಡರ್ ವೇಳಾಪಟ್ಟಿ: (1) ಟೆಂಡರ್ ದಸ್ತಾವೇಜು ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ: **30.07.2024ರಿಂದ.** (2) ಇ–ಪೋರ್ಟಲ್ ಮೂಲಕ ಟೆಂಡರುಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ: **12.08.2024ರಂದು ಸಂಜೆ 4.00 ಗಂಟೆವರೆಗೆ.** (3) ಟೆಂಡರ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ (ತಾಂತ್ರಿಕ ಮತ್ತು ಆರ್ಥಿಕ): **14.08.2024ರ ಸಂಜೆ 5.00 ಗಂಟೆಯ ನಂತರ.**
ಹೆಚ್ಚಿನ ವಿವರಗಳಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ **https://kppp.karnataka.gov.in** ನೋಡಿ ಅಥವಾ ಕಾರ್ಯನಿರ್ವಾಹಕ ಅಭಿಯಂತರರು (ವಿದ್ಯುತ್) ಇವರ ಕಚೇರಿ, ಬೆಂ.ಅ.ಪ್ರಾ ., ಟಿ. ಚೌಡಯ್ಯ ರಸ್ತೆ , ಕುಮಾರಪಾರ್ಕ್ ಪಶ್ಚಿಮ, ಬೆಂಗಳೂರು, ಸಂ.: +91 9845630164 ಸಂಪರ್ಕಿಸಿ. ವಿಚಾರಣೆಗಾಗಿ ಸಂಪರ್ಕಿಸಿ ಇ–ಮೇಲ್ ಐಡಿ: **eeelec.bda@gmail.com**
ಸಹಿ/- ಕಾರ್ಯನಿರ್ವಾಹಕ ಅಭಿಯಂತರರು (ವಿ), ವಿದ್ಯುತ್ ವಿಭಾಗ, ಬೆಂಅಪ್ರಾ, ಬೆಂಗಳೂರು

ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ಕಾರ್ಪೊರೇಟ್ ಕಚೇರಿ, "ಮೆಸ್ಕಾಂ ಭವನ", ಬಿಜೈ, ಮಂಗಳೂರು–575004
ದೂರವಾಣಿ: 0824–2885795 CIN: U40109 KA 2002 SGC 030425
ಸಂಖ್ಯೆ: ಮ.ವಿ.ಸ.ಕಂ/ಅ.ಇಂ(ಖ)/ಕಾನಿಇಂ(ಕಾ)/ಸಕಾನಿಇಂ/1/99567/2024 ದಿನಾಂಕ: 23–07–2024
ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮಾದರಿಯಲ್ಲಿ ಮಾತ್ರ)
ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪೆನಿಯು 110/33/11ಕೆ.ವಿ. ಬೈಕಂಪಾಡಿ ವಿದ್ಯುತ್ ಉಪಕೇಂದ್ರದಿಂದ ಹೊರಹೊಮ್ಮುವ 33ಕೆ.ವಿ. ಸುರತ್ಕಲ್ ಇಂಡಸ್ಟ್ರಿಯಲ್ ಫೀಡರ್‌ನಲ್ಲಿ ವಿಶ್ವನಾಥ ದೇವಸ್ಥಾನದ ಮೂಲಕ ಕಾಟಿಪಳ್ಳ GOS ವರೆಗೆ 0.6 ಕಿ.ಮೀ.ನಷ್ಟು ಉದ್ದದ ಹಾಲಿ ಇರುವ 33ಕೆ.ವಿ. ಕೊಯೋಟ್ ವಾಹಕವನ್ನು 33ಕೆ.ವಿ. 3Cx400 ಚ.ಮೀ. ಭೂಗತ ಕೇಬಲ್‌ನಿಂದ ಬದಲಾಯಿಸುವ ಜೊತೆಗೆ 33/11ಕೆವಿ ಕಾಟಿಪಳ್ಳ ಉಪ–ಕೇಂದ್ರಕ್ಕೆ ಪರ್ಯಾಯ ಮಾರ್ಗವಾಗಿ 0.6 ಕಿ.ಮೀ.ನಷ್ಟು ಉದ್ದದ 33 ಕೆ.ವಿ. 3Cx400 ಚ.ಮೀ. ಭೂಗತ ಕೇಬಲನ್ನು ಬಳಸಿ ಕಾಟಿಪಳ್ಳ 33 ಕೆ.ವಿ ಜಿ.ಒ.ಎಸ್‌ನಿಂದ 33/11 ಕೆವಿ ಕಾಟಿಪಳ್ಳ ಉಪಕೇಂದ್ರದ ವರೆಗೆ 33ಕೆ.ವಿ ಮಾರ್ಗವನ್ನು ರಚಿಸುವ ಕಾಮಗಾರಿಯನ್ನು ಆಂಶಿಕ ಗುತ್ತಿಗೆ ಆಧಾರದಲ್ಲಿ ಕೈಗೆತ್ತಿಕೊಳ್ಳಲು ಬಿಡ್ ವಿಚಾರಣಾ ಸಂಖ್ಯೆ: MESCOM/2024-25/UC/WORK_INDENT236 ರಲ್ಲಿ ಟೆಂಡರ್‌ಗಳನ್ನು ಆಹ್ವಾನಿಸುತ್ತಿದೆ.
ಅಸಕ್ತಿಯುಳ್ಳ ಅರ್ಹ ಬಿಡ್ಡುದಾರರು ವೆಬ್‌ಸೈಟ್ **https://kppp.karnataka.gov.in** ಗೆ **ದಿನಾಂಕ: 30.07.2024** ಅಥವಾ ನಂತರ ಲಾಗ್ ಆನ್ ಮಾಡಬಹುದು.
ಸಹಿ/–ಅಧೀಕ್ಷಕ ಇಂಜಿನಿಯರ್(ವಿ)(ಖರೀದಿ)
DIPR/ADM/KSMCA/333/24-25 dt: 25.07.2024
ವಿದ್ಯುತ್ ಸಂಬಂಧಿತ ದೂರು ಮತ್ತು ಸಹಾಯಕ್ಕಾಗಿ ಉಚಿತ ದೂರವಾಣಿ ಸಂಖ್ಯೆ 1912ಕ್ಕೆ ಕರೆ ಮಾಡಿ

ದೋಸ್ತಿ ಪಾದಯಾತ್ರೆಗೆ ಎಚ್ಡಿಕೆ ಸೂತ್ರಧಾರ?

← ಮೊದಲಪುಟದಿಂದ ಪಕ್ಷದ ಬಲವರ್ಧನೆ ದೃಷ್ಟಿಯಿಂದ ಜೆಡಿಎಸ್‌ನಿಂದಲೇ ಈ ಪಾದಯಾತ್ರೆ ಆಯೋಜಿಸಲಾಗಿದೆ ಎಂಬ ಮಾತುಗಳು ಕೇಳಿ ಬರುತ್ತಿವೆ.

ನಿಖಿಲ್ ಕುಮಾರಸ್ವಾಮಿಗೆ ಮಣೆ: ಕುಮಾರಸ್ವಾಮಿ ಅವರು ಕೇಂದ್ರ ಸಚಿವರಾಗಿರುವುದರಿಂದ ರಾಜ್ಯ ರಾಜಕೀಯದಲ್ಲಿ ಪೂರ್ಣ ಪ್ರಮಾಣದಲ್ಲಿ ತೊಡಗಿಸಿಕೊಳ್ಳಲು ಸಾಧ್ಯವಿಲ್ಲ. ಇದರೊಂದಿಗೆ ದೇವೇಗೌಡರಿಗೆ ಆರೋಗ್ಯ ಸಮಸ್ಯೆ, ರೇವಣ್ಣ ಕುಟುಂಬದ ವಿರುದ್ಧ ಲೈಂಗಿಕ ದೌರ್ಜನ್ಯದ ಆರೋಪಗಳಿವೆ. ಆದ್ದರಿಂದ ರಾಜ್ಯ ರಾಜಕೀಯದಲ್ಲಿ ಗೌಡರ ಕುಟುಂಬದ ಕುಡಿಯಾಗಿ ನಿಖಿಲ್ ಕುಮಾರಸ್ವಾಮಿ ಅವರನ್ನು ಮುನ್ನೆಲೆಗೆ ತರುವುದು ಕುಮಾರಸ್ವಾಮಿ ಅವರ ಲೆಕ್ಕಾಚಾರವಾಗಿದೆ. 2019ರ ಲೋಕಸಭಾ ಹಾಗೂ 2023ರ ವಿಧಾನಸಭಾ ಚುನಾವಣೆಯಲ್ಲಿ ಸೋಲನುಭವಿಸಿರುವ ನಿಖಿಲ್‌ಕುಮಾರ್ ಅವರ ವರ್ಚಸ್ಸು ಹೆಚ್ಚಿಸಲು ಈ ಪಾದಯಾತ್ರೆಯನ್ನು ಆಯೋಜಿಸಲಾಗಿದೆ. ಎನ್‌ಡಿಎ ಜಂಟಿ ಪಾದಯಾತ್ರೆಯಾಗಿದ್ದರೂ, ಹಳೇ ಮೈಸೂರು ಭಾಗದಲ್ಲಿ ಜೆಡಿಎಸ್‌ಗೆ ಹೆಚ್ಚಿನ ಒಲವಿರುವುದರಿಂದ ಮುಂದಿನ ಚುನಾವಣೆಗಳಿಗೆ ನಿಖಿಲ್‌ಗೆ ಸಹಾಯವಾಗಲಿದೆ ಎನ್ನುವ ಲೆಕ್ಕಾಚಾರದಲ್ಲಿ ಕುಮಾರಸ್ವಾಮಿ ಇದ್ದಾರೆ ಎನ್ನಲಾಗಿದೆ.

ತ.ನಾಡು ಜತೆ ಚರ್ಚೆಗೆ ಸಿದ್ಧ

← ಮೊದಲಪುಟದಿಂದ ನಾವು ತಮಿಳುನಾಡಿಗೆ ವಾರ್ಷಿಕ 177 ಟಿಎಂಸಿ ನೀರನ್ನು ಕೊಡಬೇಕು. ಈಗಾಗಲೇ 83 ಟಿಎಂಸಿಗೂ ಹೆಚ್ಚು ನೀರು ಹೋಗಿದೆ. ಮೆಟ್ಟೂರು ಜಲಾಶಯ ಕೂಡ ತುಂಬಿದೆ. ಆದರೆ ಸಂಕಷ್ಟದ ಸಮಯದಲ್ಲಿ ಅಷ್ಟು ನೀರು ಕೊಡಲಿಕ್ಕೆ ಆಗಲ್ಲ. ಹೆಚ್ಚುವರಿ ನೀರು ಸಂಗ್ರಹಣೆಗಾಗಿ ಮೇಕೆದಾಟು ಕಟ್ಟಲು ತಮಿಳುನಾಡು ಅಡ್ಡಗಾಲು ಹಾಕುತ್ತಿದೆ. ಮೇಕೆದಾಟು ಯೋಜನೆಗೆ ಮಂಜೂರಾತಿ ದೊರಕಿಸುವ ಕೆಲಸವನ್ನು ರಾಜ್ಯದ ಸಂಸದರು ಮಾಡಬೇಕು. ಯೋಜನೆ ಜಾರಿಯಾದರೆ 65 ಟಿಎಂಸಿ ನೀರು ಸಂಗ್ರಹಿಸಬ ಹುದು. ಇದರಿಂದ ಎರಡೂ ರಾಜ್ಯಗಳಿಗೆ ಅನುಕೂಲವಾಗುತ್ತದೆ. ಸಂಕಷ್ಟದ ಸಮಯದಲ್ಲಿ ಸೂಕ್ತ ಹಂಚಿಕೆಗೆ ಅನುಕೂಲ ಆಗುತ್ತದೆ ಎಂದು ಸಿಎಂ ಸಿದ್ದರಾಮಯ್ಯ ವಿವರಿಸಿದರು.

ಪ್ರತಿಪಕ್ಷಗಳಿಂದ ನಕಾರಾತ್ಮಕ ಧೋರಣೆ: ಈ ವಿಷಯದ ಬಗ್ಗೆ ನಮ್ಮ ಸಂಸದರು ಕೇಂದ್ರವನ್ನು ಕೇಳುವ ಬದಲು ಅನವಶ್ಯವಾಗಿ ಮಾತನಾ ಡುತ್ತಾರೆ. ಜನರನ್ನು ತಪ್ಪುದಾರಿಗೆ ಎಳೆಯುವ ಕೆಲಸ ಮಾಡು ತ್ತಾರೆ. ಅಧಿವೇಶನದಲ್ಲೂ ಇದೇ ರೀತಿ ಸಮಯ ವ್ಯರ್ಥ ಮಾಡಿದರು. ರಾಜ್ಯಕ್ಕೆ ಬರುವ ಅನುದಾನದ ಬಗ್ಗೆ ಒಂದು ದಿನವೂ ಮಾತನಾಡಲಿಲ್ಲ. ಯಾರು ಸುಳ್ಳು ಹೇಳುತ್ತಾರೆ, ಯಾರು ನಿಜ ಹೇಳುತ್ತಾರೆ ಎಂದು ರಾಜ್ಯದ ಜನರಿಗೆ ಗೊತ್ತಿದೆ ಎಂದು ಪರೋಕ್ಷವಾಗಿ ಬಿಜೆಪಿ ಜೆಡಿಎಸ್ ಸಂಸದರು, ಶಾಸಕರ ವಿರುದ್ಧ ಸಿಎಂ ಸಿದ್ದರಾಮಯ್ಯ ವಾಗ್ದಾಳಿ ನಡೆಸಿದರು.

ಕಮಲ ಚಕ್ರವ್ಯೂಹದಲ್ಲಿ ದೇಶ ಬಂಧಿ: ರಾಹುಲ್ ವಾಗ್ದಾಳಿ

← ಮೊದಲಪುಟದಿಂದ ಕುರುಕ್ಷೇತ್ರದಲ್ಲಿ ಅಭಿಮನ್ಯುವನ್ನು ಚಕ್ರವ್ಯೂಹ ಜಾಲದಲ್ಲಿ ಸಿಲುಕಿಸಿ ಹತ್ಯೆ ಮಾಡಲಾಗಿತ್ತು. ಅದೇ ರೀತಿ ಭಾರತದ ಜನರನ್ನು ಕಮಲ ಜಾಲದಲ್ಲಿ ಸಿಲುಕಿಸಲಾಗುತ್ತಿದೆ. ಆಗ ದ್ರೋಣಾಚಾರ್ಯ, ಕರ್ಣ, ಕೃಪಾಚಾರ್ಯ, ಕೃತವರ್ಮ, ಅಶ್ವತ್ಥಾಮ , ಶಕುನಿ ಎಂಬ 6 ಸಮರಾಗ್ರಣಿಗಳು ಸೇರಿಕೊಂಡೇ ಚಕ್ರವ್ಯೂಹದ ಜಾಲ ರಚಿಸಿದ್ದರು. ಈಗಲೂ ಅದೇ ರೀತಿ ಮೋದಿ, ಅಮಿತ್ ಶಾ, ಮೋಹನ್ ಭಾಗವತ್, ಅಜಿತ್ ದೋವಲ್, ಅಂಬಾನಿ, ಅದಾನಿ ಎಂಬ ಆರು ಮಂದಿ ಪದ್ಮವ್ಯೂಹ ರಚಿಸಿದ್ದಾರೆ ಎಂದು ರಾಹುಲ್ ಟೀಕಾಸ್ತ್ರ ಪ್ರಯೋಗಿಸಿದರು.

ರಾಹುಲ್ ಗಾಂಧಿ ಅವರ ಈ ಮಾತಿಗೆ ಎನ್‌ಡಿಎ ಮೈತ್ರಿಕೂಟ ಪಕ್ಷಗಳ ಸಂಸದರು ಎದ್ದುನಿಂತು ಪ್ರತಿಭಟನೆ ನಡೆಸಿದರು. ''ಬೇಕಾದರೆ 6 ಜನರ ಈ ವ್ಯೂಹ ಪಟ್ಟಿಯಿಂದ ದೋವಲ್, ಅಂಬಾನಿ, ಅದಾನಿ ಹೆಸರು ಕೈಬಿಡುತ್ತೇನೆ' ಎಂದು ರಾಹುಲ್ ವ್ಯಂಗ್ಯವಾಗಿ ಪ್ರತಿಕ್ರಿಯಿಸಿದರು.

ಏಕಸ್ವಾಮ್ಯ ಕಲ್ಪನೆ: ಕೇವಲ ಇಬ್ಬರು ಬಲಿಷ್ಠರ ಕೈಗಳಲ್ಲಿ ಮಾತ್ರವೇ ದೇಶದ ಪೂರ್ಣ ಧನಬಲ ಇರಬೇಕೆಂಬ ನೀತಿಯು ಆರ್ಥಿಕ ಶಕ್ತಿಯ ಕೇಂದ್ರೀಕ ರಣ. ಸಿಬಿಐ, ಇ.ಡಿ, ಐಟಿ ಮತ್ತಿತರ ಕೇಂದ್ರ ತನಿಖಾ ಸಂಸ್ಥೆಗಳು ಹಾಗೂ ರಾಜಕೀಯ ಶಕ್ತಿ, ಈ ಮೂರೂ ಚಕ್ರವ್ಯೂಹದ ಕೇಂದ್ರಗಳಾಗಿವೆ. ಇವು ದೇಶವನ್ನು ಧ್ವಂಸ ಮಾಡುತ್ತಿವೆ. ಆದರೆ ಜನ ಅರ್ಜುನನ ರೀತಿ ಇದ್ದಾರೆ. ಯಶಸ್ವಿಯಾಗಿ ಚಕ್ರವ್ಯೂಹವನ್ನು ಭೇದಿಸಲಿದ್ದಾರೆ ಎಂದು ರಾಹುಲ್ ಹೇಳಿದರು.

ನಗರಸಭಾ ಕಾರ್ಯಾಲಯ, ಶಿರಾ
ನ.ಸ.ಶಿ/ಟೆಂಡರ್/ತಾಂಶಾ/ಪಿ.ಆರ್/02/2023–24 ದಿನಾಂಕ: 22.07.2024
ಟೆಂಡರ್ ಪ್ರಕಟಣೆ
ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿನ ಪಾರದರ್ಶಕತೆಯ ಆದ್ಯಾದೇಶ 1999–2000 ಪ್ರಕಾರ ಆಕ್ಟ್ 2000ರನ್ವಯ 2023–24ನೇ ಸಾಲಿನ 15ನೇ ಹಣಕಾಸು ನಿರ್ಬಂಧಿತ ಅನುದಾನ ಮತ್ತು ಎಸ್.ಬಿ.ಎಂ 2.0 ಸಾಲಿನ ಅನುದಾನದಡಿಯ ಕಾಮಗಾರಿ ಇಂಡೆಂಟ್ ಸಂಖ್ಯೆ DMA/2024-25/OW/WORK_INDENT 22585 ನಿರ್ವಹಿಸಲು ಸ್ಟಾಂಡರ್ಡ್ ಟೆಂಡರ್ ಡಾಕ್ಯೋಮೆಂಟರಿನ ಇ–ಪ್ರಕ್ಯೋರ್‌ಮೆಂಟ್ ಮುಖಾಂತರ ಟೆಂಡರ್‌ಅನ್ನು ಈ ಕೆಳಕಂಡ ಸಹಿ ಮಾಡಿರುವವರು ಆಹ್ವಾನಿಸಿರುತ್ತಾರೆ. ಅರ್ಹ ಗುತ್ತಿಗೆದಾರರು ಇ–ಪ್ರಕ್ಯೋರ್‌ಮೆಂಟ್ ಪೋರ್ಟಲ್ http://kppp.karnataka.gov.in ಮುಖಾಂತರ ಟೆಂಡರ್‌ನಲ್ಲಿ ಭಾಗವಹಿಸಲು ಆಹ್ವಾನಿಸಲಾಗಿದೆ.
1) ಕಾಮಗಾರಿಗೆ ಭರ್ತಿ ಮಾಡಿದ ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: 22–07–2024 ರಿಂದ 07.08.2024 ಸಂಜೆ 5.00ಗಂಟೆಗೆ. 2) ಸ್ವೀಕರಿಸಿದ ಟೆಂಡರ್‌ಗಳನ್ನು ತೆರೆಯುವ ದಿನಾಂಕ:– 08–08–2024 ಸಂಜೆ 5:00 ಗಂಟೆಗೆ. 3) ಟೆಂಡರ್ ಅಂಗೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ನಗರಸಭೆ,ಶಿರಾ. ಕಾಯ್ದಿರಿಸಿಕೊಂಡಿದೆ.
ಸಹಿ/–ಅಧ್ಯಕ್ಷರು ನಗರಸಭೆ, ಶಿರಾ.
ಸಹಿ/–ಸ್ಥಾಯಿ ಸಮಿತಿ ಅಧ್ಯಕ್ಷರು ನಗರಸಭೆ, ಶಿರಾ.
ಸಹಿ/–ಉಪಾಧ್ಯಕ್ಷರು ನಗರಸಭೆ, ಶಿರಾ.
ಸಹಿ/–ಪೌರಾಯುಕ್ತರು ನಗರಸಭೆ, ಶಿರಾ.
DIPR/TUM/182/KSMCA/2024-25

ರಾಹುಲ್ ಗಾಂಧಿ
ಪ್ರತಿಪಕ್ಷ ನಾಯಕ

ಸಂಸತ್ತಿನಲ್ಲಿ ನಾನು ಜಾತಿಗಣತಿ ವಿಚಾರ ಪ್ರಸ್ತಾಪಿಸಿದಾಗ ಇಂತಹ ಗಂಭೀರ ವಿಷಯದ ಬಗ್ಗೆ ಹಣಕಾಸು ಸಚಿವರು ಹಾಸ್ಯ ಮಾಡಿ ನಕ್ಕರು. ದೇಶದ ಶೇ.90 ರಷ್ಟಿರುವ ಜನರ ಬಗ್ಗೆ ಬಿಜೆಪಿಯ ಉಡಾಫೆಯ ಪ್ರತಿಕ್ರಿಯೆ, ಅದರ ಉದ್ದೇಶ ಮತ್ತು ಮನೋಭಾವವನ್ನು ಬಹಿರಂಗಪಡಿಸಿದೆ. ಜಾತಿಗಣತಿಯನ್ನು ಕೈಗೊಳ್ಳುವ ಮೂಲಕ ತಮ್ಮ ಹಕ್ಕುಗಳಿಂದ ವಂಚಿತರಾಗಿ ರುವ ವರ್ಗಗಳಿಗೆ ನ್ಯಾಯ ಕೊಡುತ್ತೇವೆ ಎಂಬುದನ್ನು ಬಿಜೆಪಿಗೆ ಹೇಳಲು ಬಯಸುತ್ತೇನೆ.

ಸುಧೀರ್ ಮಿಶ್ರಾ, ಲಖನೌ

ಕಾಂಗ್ರೆಸ್ ಆಡಳಿತವಿರುವ ಕರ್ನಾಟಕದಲ್ಲಿ ಒಬಿಸಿ ದಲಿತರ ಮೀಸಲಾತಿಯ ಹಕ್ಕನ್ನು ಮುಸ್ಲಿಮರಿಗೆ ಏಕೆ ಕೊಟ್ಟಿದ್ದೀರಿ. ಕರ್ನಾಟಕದಲ್ಲಿ 1185 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇದಕ್ಕೆ ಕಾರಣಗಳನ್ನು ಯಾವಾಗ ಬಹಿರಂಗಪಡಿಸುವಿರಿ...?

40 ವರ್ಷದ ಹಿಂದೆಯೇ ಎಚ್‌ಡಿಕೆಗೆ ನಿವೇಶನ | ಹೊಸಬಾಂಬ್ ಸಿಡಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ

ಎಚ್‌ಡಿಡಿ ಕುಟುಂಬಕ್ಕೂ ಮುಡಾ ನಿವೇಶನ

ಮೈಸೂರು: ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡರೂ ಮುಡಾ ನಿವೇಶನ ತೆಗೆದುಕೊಂಡಿದ್ದಾರೆ. ಪುಟ್ಟಯ್ಯ ಸಿಐಟಿಬಿ ಅಧ್ಯಕ್ಷರಾಗಿದ್ದಾಗ ದೇವೇಗೌಡರು ತಮ್ಮ ಕುಟುಂಬಕ್ಕೆ ಎಷ್ಟು ನಿವೇಶನ ಬರೆಸಿಕೊಂಡಿದ್ದಾರೆ ಪಟ್ಟಿ ಕೊಡಲೇ ಎಂದು ಹೇಳುವ ಮೂಲಕ ಮುಖ್ಯಮಂತ್ರಿ ಸಿದ್ದರಾಮಯ್ಯ ಹೊಸ ಬಾಂಬ್ ಸಿಡಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ದೇವೇಗೌಡರಿಗೆ ಎಷ್ಟು ಸೈಟ್ ಹೋಗಿದೆ ಗೊತ್ತಾ ಎಂದು ಹೇಳಿ ಎಲ್ಲರನ್ನೂ ಚಕಿತಗೊಳಿಸಿದರು. 40 ವರ್ಷದ ಹಿಂದೆ ಕುಮಾರಸ್ವಾಮಿ ಮುಡಾ ಸೈಟ್ ಪಡೆದಿದ್ದಾರೆ, ಅದರ ಸ್ವಾಧೀನಪತ್ರವನ್ನು ಪಡೆದುಕೊಂಡಿದ್ದಾರೆ. ಈಗ ಇಲ್ಲ ಎಂದು ಸುಳ್ಳು ಹೇಳಿದರೆ ಹೇಗೆ ಎಂದು ಪ್ರಶ್ನಿಸಿದರು.

ರಾಜ್ಯಕ್ಕೆ ಏನು ಕೊಟ್ಟಿದ್ದಾರೆ ?: ಭದ್ರಾ ಯೋಜನೆ ಬಗ್ಗೆ ಬಜೆಟ್‌ನಲ್ಲಿ ಘೋಷಿಸಿದ್ದೀರಾ? ಆಂಧ್ರ, ಬಿಹಾರಕ್ಕೆ ವಿಶೇಷ ಅನುದಾನ ಘೋಷಣೆ ಮಾಡಿದ್ದಾರೆ, ರಾಜ್ಯಕ್ಕೆ ಏನು ಕೊಟ್ಟಿದ್ದಾರೆ. ಕೇಂದ್ರ ಬಜೆಟ್‌ನಲ್ಲಿ ರಾಜ್ಯಕ್ಕೆ ತಾರತಮ್ಯ ಮಾಡಿಲ್ಲ ಎಂದು ಸಮರ್ಥನೆ ಮಾಡುವ ಕೇಂದ್ರ ಸಚಿವ ಎಚ್.ಡಿ ಕುಮಾರಸ್ವಾಮಿಗೆ ಸಿಎಂ ಈ ರೀತಿ ತಿರುಗೇಟು ನೀಡಿದರು.

ಕುಮಾರಸ್ವಾಮಿಯ ಕ್ಷೇತ್ರ ಮಂಡ್ಯಕ್ಕೆ ಕೈಗಾರಿಕೆ ಏನಾದರೂ ಬಂತಾ? ಮೈಸೂರು ಅಥವಾ ಹಾಸನಕ್ಕೆ ಐಐಟಿ ಕೇಳಿದ್ದೆವು. ಕೊಟ್ಟಿದ್ದಾರಾ? ನಿರ್ಮಲಾ ಸೀತಾರಾಮನ್ ರಾಜ್ಯದಿಂದಲೇ ಆಯ್ಕೆಯಾದವರು. ಆದರೂ ಸುಳ್ಳು ಹೇಳುತ್ತಿದ್ದಾರೆ ಎಂದು ಸಿಎಂ ಟೀಕಿಸಿದರು.

ಕೇಂದ್ರ ಮಧ್ಯಸ್ಥಿಕೆ ವಹಿಸಲಿ : ಮೇಕೆದಾಟು ಅಣೆಕಟ್ಟೆ ಕಟ್ಟಲು ನಾವು ಸಿದ್ಧರಿದ್ದೇವೆ. ಆದರೆ ತಮಿಳುನಾಡಿನವರು ರಾಜಕೀಯ ಕಾರಣಕ್ಕೆ ವಿರೋಧ ಮಾಡುತ್ತಿದ್ದಾರೆ. ಕೇಂದ್ರ ಮಧ್ಯಸ್ಥಿಕೆ ವಹಿಸಲಿ ಎಂದು ಸಿಎಂ ಆಗ್ರಹಿಸಿದರು.

ಸುದ್ದಿಗಾರರೊಂದಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮಾತನಾಡಿದರು.

- 40 ವರ್ಷದ ಹಿಂದೆ ಮುಡಾ ಸೈಟ್ ಪಡೆದಿದ್ದ ಕುಮಾರಸ್ವಾಮಿ
- ಬಿಜೆಪಿ ಪಾದಯಾತ್ರೆ ಮಾಡಿದರೆ ರಾಜಕೀಯವಾಗಿ ಎದುರಿಸುತ್ತೇವೆ
- ಬಿಜೆಪಿ ಅವಧಿಯಲ್ಲಿ ಹಗರಣಗಳು ನಡೆದಿಲ್ಲವೇ ?
- ಎಚ್‌ಡಿಕೆ, ಬಿಜೆಪಿ ವಿರುದ್ಧ ಮುಖ್ಯಮಂತ್ರಿ ಸಿದ್ದರಾಮಯ್ಯ ಕಿಡಿ

ನನ್ನ ಅವಧಿಯಲ್ಲಿ ಭ್ರಷ್ಟಾಚಾರ ಪೂರ್ಣ ಹೋಗಿದೆ ಎಂದು ಹೇಳಲ್ಲ. ಆದರೆ ಕಡಿಮೆಯಾಗಿದೆ ಎಂದು ಹೇಳಬಲ್ಲೆ. ಬಿಜೆಪಿ ಅವಧಿಯಲ್ಲಿ ಭ್ರಷ್ಟಾಚಾರ ಎಷ್ಟಿತ್ತು. ಅದನ್ನು ಇಡೀ ದೇಶವೇ ನೋಡಿದೆ. ಈಗ ಕರ್ನಾಟಕವನ್ನು ಭ್ರಷ್ಟ ರಾಜ್ಯ ಎಂದು ಬಿಂಬಿಸಲು ಯತ್ನಿಸುತ್ತಿದೆ. ಸಂಸತ್‌ನಲ್ಲಿ ಕರ್ನಾಟಕಕ್ಕೆ ಭ್ರಷ್ಟಚಾರದ ಹಣೆ ಪಟ್ಟಿ ಕಟ್ಟುವ ಯತ್ನ ನಡೆಯುತ್ತಿದೆ. ಬಿಜೆಪಿಗೆ ಮಾನ -ಮರ್ಯಾದೆ ಇದೆಯಾ.

-ಸಿದ್ದರಾಮಯ್ಯ, ಮುಖ್ಯಮಂತ್ರಿ

ಮುಡಾ, ವಾಲ್ಮೀಕಿ ನಿಗಮ ಹಗರಣ ಖಂಡಿಸಿ ಬಿಜೆಪಿ ಪ್ರತಿಭಟನೆ ಕುರಿತು ಪ್ರತಿಕ್ರಿಯಿಸಿದ ಸಿಎಂ, ಬಿಜೆಪಿ ಅವಧಿಯಲ್ಲಿ ಹಗರಣಗಳು ನಡೆದಿಲ್ಲವೇ ?ಅವರ ಅವಧಿಯ 21 ಹಗರಣಗಳನ್ನು ಹೇಳಿದ್ದೇನೆ. ಅವರು ಅಧಿಕಾರದಲ್ಲಿದ್ದಾಗ ಒಂದು ಪ್ರಕರಣವನ್ನಾದರೂ ಸಿಬಿಐಗೆ ಕೊಟ್ಟಿದ್ದೀರಾ? ಬಿಜೆಪಿ ಬ್ಲ್ಯಾಕ್‌ಮೇಲ್ ತಂತ್ರ ಮಾಡುತ್ತಿದೆ. ಇಲ್ಲದ ಹಗರಣ ಸೃಷ್ಟಿ ಸುತ್ತಿದೆ. ಯಾವತ್ತೂ ಅವರು ನ್ಯಾಯದ ಪರವಾಗಿಲ್ಲ ಎಂದು ಕಿಡಿಕಾರಿದರು.

ಮುಡಾ ಹಗರಣವನ್ನು ನ್ಯಾಯಾಂಗ ತನಿಖೆಗೆ ಒಪ್ಪಿಸಿದ್ದೇವೆ. ನ್ಯಾಯಾಂಗ ತನಿಖೆಯನ್ನು ಕೇಂದ್ರ ಸಚಿವರು ಅನುಮಾನದಿಂದ ನೋಡಿದರೆ ಅದರಲ್ಲಿ ಅರ್ಥವಿದೆಯೇ? ಅವರ ಅವಧಿಯಲ್ಲಿ ನಡೆದ ಒಂದು ಪ್ರಕರಣವನ್ನಾದರೂ ನ್ಯಾಯಾಂಗ ತನಿಖೆ ಮಾಡಿಸಿದ್ದಾರಾ ಎಂದು ಸಿದ್ದರಾಮಯ್ಯ ಖಾರವಾಗಿ ಪ್ರಶ್ನಿಸಿದರು.

ಕಾಂಗ್ರೆಸ್‌ನಿಂದ ಪಾದಯಾತ್ರೆ: ಕೋವಿಡ್ ಸಮಯದಲ್ಲಿ ನಾಲ್ಕು ಸಾವಿರ ಕೋಟಿ ನುಂಗಿದರು. ಅದನ್ನು ತನಿಖೆ ಮಾಡಿದರಾ? ನಾನು ಬಂದ ಮೇಲೆ ಏಳೆಂಟು ಹಗರಣವನ್ನು ಸಿಬಿಐಗೆ ಕೊಟ್ಟಿದ್ದೇನೆ. ಇವರ ಅವಧಿಯಲ್ಲಿ ಒಂದಾದರೂ ಸಿಬಿಐಗೆ ಕೊಟ್ಟಿದ್ದಾರಾ? ಸಿಬಿಐ ಅನ್ನು ಚೋರ್ ಬಚಾವ್ ಸಂಸ್ಥೆ ಎನ್ನುತ್ತಿದ್ದ ಬಿಜೆಪಿ ಈಗ ಸಿಬಿಐ ಸಿಬಿಐ ಎಂದು ಬಾಯಿ ಬಡಿದುಕೊಳ್ಳುತ್ತಿದೆ ಎಂದು ಲೇವಡಿ ಮಾಡಿದರು.

ಮುಡಾ ಹಗರಣದ ವಿಚಾರದಲ್ಲಿ ನನಗೆ ಯಾವ ಬೇಸರವೂ ಆಗಿಲ್ಲ. ತಪ್ಪೇ ಮಾಡಿಲ್ಲ ಎನ್ನುವುದಾದರೆ ಬೇಸರ ಏಕೆ ಆಗುತ್ತದೆ ? 40 ವರ್ಷದ ರಾಜಕಾರಣದಲ್ಲಿ ನನ್ನ ಮೇಲೆ ಇಂತಹ ಆರೋಪ ಬಹಳ ನಡೆದವು. ಇದನ್ನು ರಾಜಕೀಯವಾಗಿ ಎದುರಿಸುತ್ತೇನೆ. ಬಿಜೆಪಿ ಪಾದಯಾತ್ರೆ ಮಾಡುವುದಾದರೆ ಮಾಡಲಿ. ಅದನ್ನು ರಾಜಕೀಯವಾಗಿ ಎದುರಿಸುತ್ತೇವೆ ಎಂದು ಹೇಳಿದರು.

ಸಿಎಂ ಕಾಲ್ಗುಣ ಸರಿಯಿಲ್ಲ ಎಂದವರಿಗೆ ಮಳೆ ಉತ್ತರ

ಸಿದ್ದರಾಮಯ್ಯ ಅಧಿಕಾರಕ್ಕೆ ಬಂದ ಅವಧಿಯಲ್ಲಿ ಸರಿಯಾಗಿ ಮಳೆಯಾಗದೇ ಬರಗಾಲ ಆವರಿಸುತ್ತದೆ. ಅವರ ಕಾಲ್ಗುಣ ಸರಿಯಿಲ್ಲ ಎಂದು ಟೀಕಿಸುತ್ತಿದ್ದವರಿಗೆ ಡಿಸಿಎಂ ಶಿವಕುಮಾರ ತಿರುಗೇಟು ನೀಡಿದರು. ಕೆಆರ್‌ಎಸ್ ಜಲಾಶಯಕ್ಕೆ ಬಾಗಿನ ಅರ್ಪಿಸುವುದಕ್ಕೂ ಮುನ್ನ ಸುದ್ದಿಗಾರರೊಂದಿಗೆ ಮಾತನಾಡಿ, ಸಿದ್ದರಾಮಯ್ಯ ಕಾಲ್ಗುಣ ಸರಿ ಇಲ್ಲ ಅನ್ನುತ್ತಿದ್ದರು. ಅವರು ಬಂದರೇ ಮಳೆ ಬರಲ್ಲ ಎನ್ನುತ್ತಿದ್ದರು. ಈಗ ಏನಾಗಿದೆ ನೋಡಿ. ಎಲ್ಲಾ ಜಲಾಶಯಗಳು ಭರ್ತಿಯಾಗಿದೆ. ತಮಿಳುನಾಡಿಗೆ ಅಗತ್ಯಗಿಂತ ಹೆಚ್ಚು ನೀರು ಹೋಗಿದೆ. ತಮಿಳುನಾಡು, ಕರ್ನಾಟಕ ಇಬ್ಬರೂ ಸಂತೋಷವಾಗಿದ್ದಾರೆ. ಎರಡೂ ರಾಜ್ಯಗಳಲ್ಲಿ ಕೆರೆ ಕಟ್ಟೆ ತುಂಬಿವೆ. ಹೀಗಾಗಿ ಬಾಗಿನ ಅರ್ಪಣೆ ಮಾಡುತ್ತಿದ್ದೇವೆ. ಶುಭಕಾರ್ಯದ ವೇಳೆ ರಾಜಕೀಯ ಮಾತನಾಡಲ್ಲ ಎಂದು ತಿಳಿಸಿದರು.

ಕೇಂದ್ರ ಬಜೆಟ್‌ನಲ್ಲಿ ರಾಜ್ಯಕ್ಕೆ ಅನ್ಯಾಯ

ಕೇಂದ್ರ ಬಜೆಟ್ ನಲ್ಲಿ ರಾಜ್ಯಕ್ಕೆ ಸಂಪೂರ್ಣ ಅನ್ಯಾಯವಾಗಿದೆ. ಪ್ರತಿ ಬಾರಿಯೂ ನಿರ್ಮಲಾ ಸೀತಾರಾಮನ್ ರಾಜ್ಯಕ್ಕೆ ಬಂದು ಸುಳ್ಳು ಹೇಳಿಹೋಗುತ್ತಾರೆ. ಕರ್ನಾಟಕದಿಂದ ರಾಜ್ಯಸಭಾ ಸದಸ್ಯರಾಗಿದ್ದಾರೆ. ರಾಜ್ಯದ ಋಣ ತೀರಿಸಬಾರದೇ ಎಂದು ಸಿಎಂ ಸಿದ್ದರಾಮಯ್ಯ ಮಾರ್ಮಿಕವಾಗಿ ಪ್ರಶ್ನಿಸಿದರು. 15ನೇ ಹಣಕಾಸು ಆಯೋಗದಲ್ಲಿ ರಾಜ್ಯಕ್ಕೆ ಆಗಿರುವ ಅನ್ಯಾಯ ದೇಶದ ಯಾವ ರಾಜ್ಯಕ್ಕೂ ಆಗಿಲ್ಲ. ಅತಿ ಹೆಚ್ಚು ತೆರಿಗೆ ಕೊಡುವ ಎರಡನೇ ರಾಜ್ಯ ಕರ್ನಾಟಕ. ಇಂತಹ ರಾಜ್ಯಕ್ಕೆ ಅನ್ಯಾಯಾಗುತ್ತಿದೆ. ಆಗಿಲ್ಲ ಎಂದು ಕೇಂದ್ರ ಸಚಿವೆ ಹೇಳುತ್ತಾರೆ. ಆಂಧ್ರ, ಬಿಹಾರಕ್ಕೆ ಕೊಟ್ಟಿರುವುದು ಎಷ್ಟು, ನಮಗೆ ಕೊಟ್ಟಿರೋದು ಎಷ್ಟು ಎಂದು ಹೇಳಲಿ ಎಂದು ಸಿಎಂ ಸವಾಲು ಹಾಕಿದರು.

ಸಮಾಚಾರ ಸಣ್ಣದಲ್ಲ

ಪಾದಯಾತ್ರೆ ಮಾಡಿ ಮೈ ಕರಗಿಸಲಿ

ಕಲಬುರಗಿ: ಬಿಜೆಪಿ ನಾಯಕರಿಗೆ ಮಾಡೋದಕ್ಕೆ ಏನು ಕೆಲಸವಿಲ್ಲ, ಆದರಿಂದ ಪಾದಯಾತ್ರೆ ಮಾಡುತ್ತಿದ್ದಾರೆ. ವಾಕ್ ಮಾಡಿ ಮೈ ಕರಗಿಸಲಿ ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣಪ್ರಕಾಶ್ ಪಾಟೀಲ್ ಹೇಳಿದರು. ನಗರದಲ್ಲಿ ಮುಡಾ ಹಗರಣದ ವಿರುದ್ಧ ಬಿಜೆಪಿ ಪಾದಯಾತ್ರೆ ಕುರಿತು ಸುದ್ದಿಗಾ ರರೊಂದಿಗೆ ಮಾತನಾಡಿದ ಅವರು, ಮುಡಾದಲ್ಲಿ ಏನು ಅಕ್ರಮವಾಗಿದೆ?. ಸಿದ್ದರಾಮಯ್ಯನವರಿಗೆ ಬದಲಿ ಸೈಟು ನೀಡಿದ್ದು ಯಾರು.? ಬಿಜೆಪಿ ಸರಕಾರವೇ ಸೈಟು ನೀಡಿ ಈಗ ಅವರೇ ಪಾದಯಾತ್ರೆ ಮಾಡುತ್ತೇವೆ ಎನ್ನುತ್ತಿರುವುದು ಹಾಸ್ಯಸ್ಪದವಾಗಿದೆ ಎಂದು ವ್ಯಂಗ್ಯವಾಡಿದರು. ಈಗಾಗಲೇ, ಮುಖ್ಯಮಂತ್ರಿಗಳು ಸ್ಪಷ್ಟವಾಗಿ ಯಾವುದೇ ಅಕ್ರಮವಾಗಿಲ್ಲ ಎಂದು ಹೇಳಿದ್ದಾರೆ. ಕಳೆದ ಐದು ವರ್ಷದಿಂದ 40 ಪರ್ಸೆಂಟ್ ಕಮಿಷನ್ ತಿಂದು ಬಹಳ ಆರಾಮಾಗಿ ಇದ್ದರು. ಇವಾಗ ಸ್ವಲ್ಪ ವಾಕ್ ಮಾಡಿ ಮೈ ಕರಗಿಸಲಿ ಎಂದು ಬಿಜೆಪಿ ನಾಯಕರಿಗೆ ಸಲಹೆ ನೀಡಿದರು.

ಬಸ್-ಬೈಕ್ ಡಿಕ್ಕಿ: ಸವಾರರಿಬ್ಬರ ಸಾವು

ಕಲಬುರಗಿ: ಬಸ್ ಡಿಕ್ಕಿ ಹೊಡೆದು ಬೈಕ್ ಸವಾರಿಬ್ಬರು ಸ್ಥಳದಲ್ಲೇ ಮೃತಪಟ್ಟು, ಇನ್ನೋರ್ವ ಗಂಭೀರವಾಗಿ ಗಾಯಗೊಂಡಿರುವ ಘಟನೆ ಇಲ್ಲಿಗೆ ಸಮೀಪದ ನಂದಿಕೂರ ಹತ್ತಿರ ಸೋಮವಾರ ಬೆಳಗ್ಗೆ 6 ಗಂಟೆ ಸುಮಾರಿಗೆ ನಡೆದಿದೆ. ಮೃತರನ್ನು ಜೇವರ್ಗಿ ತಾಲೂಕಿನ ಶಖಾಪುರ (ಎಸ್.ಎ) ಗ್ರಾಮದ ನಿವಾಸಿಗಳಾದ ಅಭಿಷೇಕ ತಂದೆ ರಾಮಚಂದ್ರಗೌಡ ಮಾಲಿಪಾಟೀಲ (17) ಮತ್ತು ತನೋಜ್ ತಂದೆ ಶ್ರೀಮಂತ ತಳವಾರ (17) ಎಂದು ಗುರುತಿಸಲಾಗಿದೆ. ಯಶಪಾಲ್ ರೆಡ್ಡಿ ಎಂಬಾತ ಗಾಯಗೊಂಡಿದ್ದು, ಆಸ್ಪತ್ರೆಗೆ ದಾಖಲಿಸಲಾಗಿದೆ. ಅಭಿಷೇಕ, ತನೋಜ್ ಮತ್ತು ಯಶಪಾಲ್ ರೆಡ್ಡಿ ಸ್ನೇಹಿತರಾಗಿದ್ದು, ಕಾಶಿಯಿಂದ ಆಗಮಿಸಿದ್ದ ಯಶಪಾಲ್ ರೆಡ್ಡಿ ಅವರನ್ನು ಕರೆದುಕೊಂಡು ಬೈಕ್ ಮೇಲೆ ಜೇವರ್ಗಿ ಕಡೆಗೆ ಹೋಗುತ್ತಿದ್ದಾಗ ಅಪಘಾತ ನಡೆದಿದೆ ಎಂದು ತಿಳಿದುಬಂದಿದೆ. ಈ ಕುರಿತು ಸಂಚಾರಿ ಪೊಲೀಸ್ ಠಾಣೆ-1ರಲ್ಲಿ ಪ್ರಕರಣ ದಾಖಲಾಗಿದೆ.

ಗೀಸರ್ ಸೋರಿಕೆ: ಯುವಕನ ಸಾವು

ಮೂಡುಬಿದಿರೆ: ಸ್ನಾನದ ಕೋಣೆಯ ಗ್ಯಾಸ್ ಗೀಸರ್‌ನ ರಾಸಾಯನಿಕ ಹೊರಚೆಲ್ಲಿ ಯುವಕ ಉಸಿರುಗಟ್ಟಿ ಮೃತಪಟ್ಟ ಘಟನೆ ಮೂಡುಬಿದಿರೆಯ ಕೋಟೆಬಾಗಿಲಿನ ವಸತಿ ಸಂಕೀರ್ಣವೊಂದರಲ್ಲಿ ಸಂಭವಿಸಿದೆ. ಕೋಟೆಬಾಗಿಲಿನ ದಿ. ಅನ್ಸಾರ್ ಅವರ ಪುತ್ರ ಶಾರಿಕ್ (18) ಮೃತಪಟ್ಟ ಯುವಕ. ಸ್ನಾನಕ್ಕೆಂದು ತೆರಳಿದಾತ ಬಹಳ ಹೊತ್ತಾದರೂ ಹೊರ ಬಾರದಿರುವುದನ್ನು ಗಮನಿಸಿದ ಆತನ ಸಹೋದರ ಹೋಗಿ ಪರಿಶೀಲಿಸಿ ದಾಗ ಶಾರಿಕ್ ಸಾವನ್ನಪ್ಪಿರುವುದು ಗೊತ್ತಾಗಿದೆ. ಸ್ನಾನದ ಕೋಣೆ ಬಂದ್ ಆಗಿದ್ದು ಗಾಳಿಯಾಡದ ಸ್ಥಿತಿ ಇದ್ದ ಕಾರಣ ಶಾರಿಕ್ ಹೊರಬರಲಾಗಲಿಲ್ಲ ಎನ್ನಲಾಗಿದೆ.

ಫನ್‌ತರಂಗ

– ರಘುಪತಿ ಶೃಂಗೇರಿ –

'ಕುಡಿದು ಇಂಗ್ಲೀಷ್ ಮಾತನಾಡಲು ಕಲಿಯಿರಿ' ಎಂದು ಪೋಸ್ಟರ್ ಹಾಕಿದ ಮದ್ಯದಂಗಡಿ ಸುದ್ದಿ



ಪ್ರತಿಪಕ್ಷಗಳಿಂದ ಸುಳ್ಳನ್ನು ಸತ್ಯ ಮಾಡುವ ಪ್ರಯತ್ನ: ಕೆ.ಜೆ.ಜಾರ್ಜ್

ಮುಖ್ಯಮಂತ್ರಿ ವಿರುದ್ಧ ಸುಳ್ಳು ಆರೋಪ

ಚಿಕ್ಕಮಗಳೂರು: ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮೂಡಾ) ದಲ್ಲಿ ನಿವೇಶನ ಹಂಚಿಕೆ ವಿಚಾರದಲ್ಲಿ ಮುಖ್ಯಮಂತ್ರಿಗಳ ವಿರುದ್ಧ ಸತ್ಯಕ್ಕೆ ದೂರವಾದ ಆರೋಪಗಳನ್ನು ಮಾಡಿರುವ ಪ್ರತಿಪಕ್ಷಗಳು, ಮುಖ್ಯಮಂತ್ರಿಯವರು ಪತ್ರಿಕಾಗೋಷ್ಠಿಯಲ್ಲಿ ದಾಖಲೆ ಸಹಿತ ಸ್ಪಷ್ಟನೆ ನೀಡಿದ್ದರೂ, ಸುಳ್ಳನ್ನು ಸತ್ಯ ಮಾಡುವ ಪ್ರಯತ್ನ ನಡೆಸುತ್ತಿವೆ ಎಂದು ಚಿಕ್ಕಮಗಳೂರು ಜಿಲ್ಲಾ ಉಸ್ತುವಾರಿಯನ್ನೂ ಹೊಂದಿರುವ ಇಂಧನ ಸಚಿವ ಕೆ.ಜೆ.ಜಾರ್ಜ್ ಆರೋಪಿಸಿದ್ದಾರೆ.

ಪ್ರೆಸ್ ಕ್ಲಬ್ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ಪತ್ರಿಕಾ ದಿನಾಚರಣೆಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಮುಖ್ಯಮಂತ್ರಿಯವರ ಪತ್ನಿಗೆ 50:50 ಅನುಪಾತದಲ್ಲಿ ನಿವೇಶನ ಹಂಚಿಕೆ ಮಾಡಿರುವುದು ಅಕ್ರಮ ಎಂಬುದು ಪ್ರತಿಪಕ್ಷದವರ ಆರೋಪ. ಆದರೆ, 50:50 ಅನುಪಾತದಲ್ಲಿ ಹಂಚಿಕೆ ಮಾಡುವ ನಿರ್ಧಾರ ಕೈಗೊಂಡಿದ್ದು ಯಾರು? ಬಿಜೆಪಿ ಸರಕಾರವಲ್ಲವೇ? ಎಂದು ಪ್ರಶ್ನಿಸಿದರು.

ಈಗ ಅವರು ಮುಖ್ಯಮಂತ್ರಿಗಳ ವಿರುದ್ಧವೇ ಆರೋಪ ಮಾಡುತ್ತಿದ್ದಾರೆ. ಈ ಆರೋಪದಲ್ಲಿ ಸತ್ಯಾಂಶವೇ ಇಲ್ಲ. ವಾಲ್ಮೀಕಿ ನಿಗಮ ಹಗರಣ ಕುರಿತು ಸದನದಲ್ಲಿ ಚರ್ಚಿಸಿದ ಪ್ರತಿಪಕ್ಷದವರು ಸರಕಾರ, ಮುಖ್ಯಮಂತ್ರಿಗಳ ವಿರುದ್ಧ ಸಲ್ಲದ ಆರೋಪಗಳನ್ನು ಮಾಡಿದರು. ಬಳಿಕ ಉತ್ತರಕ್ಕೂ ಅವಕಾಶ ನೀಡದೆ, ರಾಜಕಾರಣ ಮಾಡಿದರು. ಮೂಡಾ ಪ್ರಕರಣದಲ್ಲಿ ಮುಖ್ಯಮಂತ್ರಿಗಳು ಪತ್ರಿಕಾಗೋಷ್ಠಿ ಮೂಲಕ ಎಲ್ಲದಕ್ಕೂ ಸ್ಪಷ್ಟನೆ ನೀಡಿದ್ದಾರೆ. ನಮ್ಮ ಸರಕಾರದಲ್ಲಿ ಅಕ್ರಮ ನಡೆದಿಲ್ಲ ಎಂಬುದನ್ನು ದಾಖಲೆಗಳ ಸಹಿತ ಬಹಿರಂಗಪಡಿಸಿದ್ದಾರೆ. ಆದರೂ, ಪ್ರತಿಪಕ್ಷದವರು ತಮ್ಮ ಆರೋಪ ಮುಂದುವರಿಸುತ್ತಿದ್ದಾರೆ. ಸಿಎಂ ವಿರುದ್ಧದ ಆರೋಪಗಳಿಗೆ ಅವರ ಬಳಿ ದಾಖಲೆಗಳಿಲ್ಲ. ಆದರೂ, ತಮ್ಮ ಸುಳ್ಳುಗಳನ್ನೇ ಸತ್ಯ ಎಂದು ಬಿಂಬಿಸಲು ಪ್ರಯತ್ನಿಸುತ್ತಿದ್ದಾರೆ ಎಂದು ಕಿಡಿ ಕಾರಿದರು.

ಈ ಹಿಂದೆ ಐಎಎಸ್ ಅಧಿಕಾರಿ ಡಿ.ಕೆ.ರವಿ ಆತ್ಮಹತ್ಯೆ ಪ್ರಕರಣದಲ್ಲಿ ನನ್ನ ಮೇಲೆ ಆರೋಪ ಕೂರಿಸಲಾಗಿತ್ತು . ಆದರೆ, ಸಿಬಿಐ ತನಿಖೆ ನಡೆದು ನನ್ನನ್ನು ವಿಚಾರಣೆಗೂ ಕರೆಯಲಿಲ್ಲ. ಅಂತಿಮ ವರದಿಯಲ್ಲಿ ಈ ಪ್ರಕರಣದಲ್ಲಿ ನನ್ನ ಪಾತ್ರ ಏನೂ ಇಲ್ಲ ಎಂದು ಸಿಬಿಐ ಹೇಳಿತ್ತು. ಆದರೆ, ಮಾಧ್ಯಮಗಳು ಅದನ್ನು ಪ್ರಸಾರ ಮಾಡಲೇ ಇಲ್ಲ. ಮುಖ್ಯಮಂತ್ರಿಯವರ ಪ್ರಕರಣದಲ್ಲೂ ಈ ರೀತಿ ಆಗಬಾರದು.

-ಕೆ.ಜೆ.ಜಾರ್ಜ್, ಇಂಧನ ಸಚಿವ

ಬಿಜೆಪಿ ಪಾದಯಾತ್ರೆಗೆ ಸಚಿವ ಲಾಡ್ ತಿರುಗೇಟು

ಹಗರಣದಲ್ಲಿ ಪಾತ್ರ ಒಪ್ಪಿಕೊಳ್ಳಲಿ

ಹುಬ್ಬಳ್ಳಿ: ತಮ್ಮ ಕಾಲದಲ್ಲಿ ಮುಡಾದಲ್ಲಿ ಹಗರಣ ಆಗಿದೆ ಎಂದು ಬಿಜೆಪಿ ಮೊದಲು ಒಪ್ಪಿಕೊಳ್ಳಲಿ. ನಂತರ ಬೇಕಿದ್ದರೆ ಪಾದಯಾತ್ರೆ ಮಾಡಲಿ ಎಂದು ಕಾರ್ಮಿಕ ಸಚಿವ ಸಂತೋಷ್ ಲಾಡ್ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಿಜೆಪಿ ಮತ್ತು ಜೆಡಿಎಸ್ ಪಾದಯಾತ್ರೆ ಮಾಡಲು ಏನು ಕಾರಣ? ವಾಲ್ಮೀಕಿ ಮತ್ತು ಮುಡಾ ಹಗರಣದ ಕುರಿತು ಸರಕಾರ ಸಕಾರಾತ್ಮಕ ನಿರ್ಧಾರ ಕೈಗೊಂಡಿದೆ. ಸಚಿವ ನಾಗೇಂದ್ರ ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಟ್ಟಿದ್ದಾರೆ. ಒಂದೆಡೆ ಸಿಐಡಿ ತನಿಖೆ ನಡೆಯುತ್ತಿದೆ. ಇಡಿ ಮತ್ತು ಸಿಬಿಐ ಸಹ ಪ್ರವೇಶಿಸಿವೆ. ಸರಕಾರಿ ಮತ್ತು ಬ್ಯಾಂಕ್ ಅಧಿಕಾರಗಳ ವಿರುದ್ಧ ತನಿಖೆ ನಡೆಯುತ್ತಿದೆ. ಇಂತಹ ಸಂದರ್ಭದಲ್ಲಿ ಏಕೆ ಪಾದಯಾತ್ರೆ ಮಾಡುತ್ತಿದ್ದಾರೆ ಎಂದು ಹರಿಹಾಯ್ದರು.

ಸದನದಲ್ಲಿ ಮಾತನಾಡಲು ಏಳು ತಾಸು ಅವಕಾಶ ಮಾಡಿಕೊಡಲಾಗಿತ್ತು. ಬಿಜೆಪಿ ಕಾಲದಲ್ಲಿಯೇ ಮುಡಾದಲ್ಲಿ ಹಗರಣವಾಗಿದೆ. ನಮ್ಮ ಕಾಲದಲ್ಲಿ ನಾವು ಹಗರಣ ಮಾಡಿದ್ದೇವೆಂದು ಬಿಜೆಪಿಯವರು ಲಿಖಿತ ರೂಪದಲ್ಲಿ ಕೊಡಲಿ. ಕಾನೂನು ಬಾಹಿರವಾಗಿ ನಿವೇಶನ ಹಂಚಿದ್ದೇವೆ. ಅದಕ್ಕಾಗಿ ತನಿಖೆ ಮಾಡಬೇಕಿದೆ ಎಂದು ಬರೆದು ಕೊಡಲಿ. ಜನಕ್ಕೆ ಮೂಕ ಮಾಡಿದ್ದೇವೆ ಎಂದು ಮೊದಲು ಒಪ್ಪಿಕೊಳ್ಳಲಿ. ನೀವೇ ಸೈಟ್ ಕೊಟ್ಟು ಹಗರಣ ಮಾಡಿ, ಪಾದಯಾತ್ರೆ ಮಾಡುವುದು ಯಾವ ಧರ್ಮ? ಸಿಎಂ ಏಕೆ ರಾಜೀನಾಮೆ ಕೊಡಬೇಕು ಎಂದು ಪ್ರಶ್ನಿಸಿದರು. ಸಿದ್ದರಾಮಯ್ಯ ಅವರು ಗ್ಯಾರಂಟಿಗಳಿಗಾಗಿ 60ಸಾವಿರ ಕೋಟಿ ರು ಅನುದಾನ ಕೊಟ್ಟಿದ್ದಾರೆ. ಹಿಂದುಳಿದ ನಾಯಕರೊಬ್ಬರು ಈ ರೀತಿ ಬೆಳೆಯುತ್ತಿರುವುದನ್ನು ಬಿಜೆಪಿಯವರಿಗೆ ನೋಡುವುದಕ್ಕೆ ಆಗುತ್ತಿಲ್ಲ. ಸಿದ್ದರಾಮ ಯ್ಯನವರ ಪಬ್ಲಿಸಿಟಿ ತಡೆದುಕೊಳ್ಳಲು ಆಗುತ್ತಿಲ್ಲ ಎಂದು ಕುಟುಕಿದರು.

ಇಡಿ ದಾಳಿಯಿಂದ ಬಿಜೆಪಿಗೆ ಲಾಭ

ಇಡಿ ದಾಳಿ ರಾಜಕೀಯ ಪ್ರೇರಿತ. ಇಲ್ಲಿಯವರೆಗೆ 3ಸಾವಿರ ದಾಳಿ ನಡೆದಿವೆ. 2014ರಿಂದ ಇಲ್ಲಿವರೆಗೆ ಆದ ದಾಳಿಗಳಲ್ಲಿ ಶೇ. 76 ಪ್ರತಿಶತ ಪ್ರಕರಣ ಮುಚ್ಚಿ ಹೋಗಿವೆ. ಕೇವಲ ಶೇ. 24 ಕೇಸ್ ಮಾತ್ರ ನಡೆಯುತ್ತಿವೆ. 3ಸಾವಿರ ಪ್ರಕರಣಗಳ ಪೈಕಿ ಶೇ. 95 ಕೇಸ್ ವಿಪಕ್ಷದವರ ಮೇಲಿವೆ. ಇಡಿ ದಾಳಿಗೆ ತುತ್ತಾದವರೆಲ್ಲರೂ ಈಗ ಬಿಜೆಪಿಯಲ್ಲಿದ್ದಾರೆ.ಇಡಿ ದಾಳಿಯಿಂದ ಬಿಜೆಪಿಗೆ ಲಾಭವಿದೆ. ನಮ್ಮ ಪ್ರಣಾಳಿಕೆಯನ್ನೇ ಕಾಪಿ ಮಾಡಿ ಈಗ ಜಾರಿ ಮಾಡುತ್ತಿದ್ದಾರೆ. ಇದರ ಬಗ್ಗೆ ಯಾರು ಮಾತನಾಡುತ್ತಿಲ್ಲ ಎಂದರು.

ನಿಯಮಾವಳಿಯಂತೆ ಕೆಲಸ ಮಾಡಬೇಕು: ಸ್ಪೀಕರ್

ಮುಡಾ ಚರ್ಚೆಗೆ ಅವಕಾಶ ನಕಾರ ಯು.ಟಿ. ಖಾದರ್ ಸಮರ್ಥನೆ

ಮಂಗಳೂರು: ವಿಧಾನಸಭೆಯಲ್ಲಿ ಕೆಟ್ಟ ಸಂಪ್ರದಾಯ ಪ್ರಾರಂಭಕ್ಕೆ ನಾನು ತಯಾರಿಲ್ಲ. ಒಂದು ವೇಳೆ ಹಾಗೇ ಮಾಡಿದರೆ ಮುಂದೆ ಬರುವ ಸ್ಪೀಕರ್‌ಗಳಿಗೆ ಸಮಸ್ಯೆಯಾಗಬಹುದು ಎಂದು ಸ್ಪೀಕರ್ ಯು.ಟಿ.ಖಾದರ್ ಸ್ಪಷ್ಟಪಡಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ವಿಧಾನಸಭೆಯ ಅಧ್ಯಕ್ಷರು ಎಂಬ ಪೀಠ ದೇಶದ ಅತ್ಯುನ್ನತ ಸಾಂವಿಧಾನಿಕ ಹುದ್ದೆಯಲ್ಲಿ ಒಂದು . ಇಂತಹ ಪೀಠವು ಯಾವುದೇ ಗೊಂದಲಕ್ಕೆ ಒಳಗಾಗದೆ ಜನಪ್ರಿಯ ಮಾದರಿಯ ಗೋಜಲಿಗೆ ಸಿಲುಕದೆ ನಿಯಮಾವಳಿಗಳಂತೆ ಕೆಲಸ ಮಾಡಬೇಕಾಗುತ್ತದೆ. ಸತ್ಯ ಹೇಳಿದಾಗ, ಇರುವ ನಿಯಮಗಳ ಬಗ್ಗೆ ಹೇಳುವಾಗ ಕೆಲವರಿಗೆ ಅಸಮಾಧಾನ ಆಗುವುದು ಸ್ವಾಭಾವಿಕ . ಆದರೆ ಅವರಿಗೆ ಕೆಲವು ಸಮಯದ ನಂತರ ನಾನು ಯಾಕೆ ಚರ್ಚೆಗೆ ಅವಕಾಶ ಕೊಟ್ಟಿಲ್ಲ ಎಂಬ ವಿಚಾರ ಮನವರಿಕೆಯಾಗುತ್ತದೆ ಎಂದರು.

ವಾಲ್ಮೀಕಿ ಹಗರಣದ ಸಂಬಂಧಿಸಿ ನಾಲ್ಕು ದಿನ ಚರ್ಚೆ ನಡೆಯಿತು. ಐದನೇ ದಿನ ಮುಡಾ ಹಗರಣ ಬಂತು. ಮುಡಾ ಹಗರಣ ಸಂಬಂಧ ಸದಸ್ಯರು ಸದನದಲ್ಲಿ ಮಂಡಿಸಿದ ನಿಲುವಳಿ ಸೂಚನೆಯನ್ನು ನಿಯಮಗಳ ಪ್ರಕಾರ ಚರ್ಚೆಗೆ ಅವಕಾಶ ನೀಡಲಾಗಿಲ್ಲ, ವಿಧಾನಸಭೆಯ ಸಭಾಧ್ಯಕ್ಷರು ಕರ್ನಾಟಕ ವಿಧಾನಸಭೆ ಕಾರ್ಯ ವಿಧಾನ ಮತ್ತು ನಡವಳಿಕೆಯ ನಿಯಮಗಳ ಪ್ರಕಾರ ಕಾರ್ಯ ನಿರ್ವಹಿಸಬೇಕಾಗುತ್ತದೆಯೇ ಹೊರತು, ವಿಮರ್ಶೆಗಳ ಮರ್ಜಿಗೆ ಅನುಗುಣವಾಗಿ ಇಲ್ಲ ಎಂದು ಸ್ಪಷ್ಟನೆ ನೀಡಿದರು.

ತಪ್ಪು ಹುಡುಕೋ ಪ್ರಯತ್ನ ಬೇಡ

ವಿಧಾನಸೌಧಕ್ಕೆ ಅತಿಥಿಗಳು, ವಿದ್ಯಾರ್ಥಿಗಳು ಬಂದಾಗಲೆಲ್ಲ ಅಲ್ಲೇ ಫೋಟೊ ತೆಗೀತ್ತೀವಿ. ಇದರಲ್ಲಿ ತಪ್ಪು ಹುಡುಕೋ ಪ್ರಯತ್ನ ಬೇಡ, ಫೋಟೊ ತೆಗಿಯಬಾರದು ಅಂತ ಏನೂ ಇಲ್ಲ ಎಂದು ವಿಧಾನಸಭೆ ಸ್ಪೀಕರ್ ಯು.ಟಿ. ಖಾದರ್ ಸ್ಪಷ್ಟನೆ ನೀಡಿದ್ದಾರೆ.

ಸ್ಪೀಕರ್ ಪೀಠದ ಎದುರು ಕಾಂಗ್ರೆಸ್ ನಾಯಕರ ಜತೆ ಖಾದರ್ ಫೋಟೊ ವೈರಲ್ ಆದ ವಿಚಾರದ ಬಗ್ಗೆ ಅವರು ಮಾಧ್ಯಮಗಳಿಗೆ ಸ್ಪಷ್ಟನೆ ನೀಡಿದ ಅವರು, ಅಧಿವೇಶನ ನಡೆಯುವಾಗ ತೆಗೆದ ಫೋಟೊ ಅಲ್ಲ. ಅಧಿವೇಶನ ನಡೆಯುವ ಮೊದಲು ರಾತ್ರಿ ತೆಗೆದ ಫೋಟೊ ಅದು. ನಾನು ಅಧಿವೇಶನದ ಮೊದಲು ಮೈಕ್ ಚೆಕ್ ಮಾಡಲು ರಾತ್ರಿ ಹೋಗಿದ್ದೆ. ಆಗ ಮಂಗಳೂರಿನ ಮಾಜಿ ಮೇಯರ್ ಒಬ್ಬರು ತೆಗೆದ ಫೋಟೊ ಅದು ಎಂದು ಖಾದರ್ ಹೇಳಿದರು.

ಖೋಟಾನೋಟು ಪ್ರಕರಣ: ಬಂಧನ

ವಿಜಯಪುರ: ಖೋಟಾ ನೋಟು ಪ್ರಕರಣದಲ್ಲಿ 21 ವರ್ಷಗಳಿಂದ ತಲೆಮರೆಸಿಕೊಂಡಿದ್ದ ಆರೋಪಿಯನ್ನು ವಿಜಯಪುರ ಪೊಲೀಸರು ಬಂಧಿಸಿದ್ದಾರೆ. ಬಾಗಲ ಕೋಟೆ ಜಿಲ್ಲೆ ಮುಧೋಳ ತಾಲೂಕಿನ ಮಂಟೂರ ಗ್ರಾಮದ ರಾಜು ಸುರೇಂದ್ರ ನಾಯಕ್ ಬಂಧಿತ ಆರೋಪಿ.



ಈತನ ಮೇಲೆ ನಗರದ ಗಾಂಧಿಚೌಕ ಠಾಣೆಯಲ್ಲಿ 2001 ಮೇ 14 ರಂದು ಪ್ರಕರಣ ದಾಖಲಾಗಿತ್ತು. 2003 ರಲ್ಲಿ ನ್ಯಾಯಾಲಯದಲ್ಲಿ ವಿಚಾರಣೆ ನಡೆದು 3ನೇ ಆರೋಪಿತನಾದ ಈತನಿಗೆ ಶಿಕ್ಷೆಯಾಗಿತ್ತು. ನಂತರ ಆರೋಪಿಯ ಮೇಲ್ಮನವಿ ವಿಚಾರಣೆಯಲ್ಲಿ ಹೈಕೋರ್ಟ್ ಕೆಳ ನ್ಯಾಯಾಲಯದ ಆದೇಶವನ್ನು ಎತ್ತಿ ಹಿಡಿದಿತ್ತು.

ತದನಂ ತರ ಆರೋಪಿ ಸರ್ವೋಚ್ಚ ನ್ಯಾಯಾ ಲಯಕ್ಕೆ ಮೇಲ್ಮನವಿ ಸಲ್ಲಿಸಿದ ವೇಳೆ ಅಲ್ಲಿಯೂ ಕೆಳನ್ಯಾಯಾಲಯದ ಆದೇಶವನ್ನು ಎತ್ತಿ ಹಿಡಿದು ಆದೇಶದಂತೆ ಶಿಕ್ಷಿತ ಆರೋಪಿ ರಾಜು ಸುರೇಂದ್ರ ನಾಯಕ್ ನನ್ನು ಬಂಧಿಸಲು ವಾರಂಟ್ ಜಾರಿ ಮಾಡಿತ್ತು.

ಮಾಜಿ ಡಿಸಿಎಂ ಕೆ.ಎಸ್.ಈಶ್ವರಪ್ಪ ಆರೋಪ

ಮುಸ್ಲಿಮರನ್ನು ತೃಪ್ತಿಪಡಿಸಲು ರಾಮನಗರ ಹೆಸರು ಬದಲು

ಶಿವಮೊಗ್ಗ: ಇನ್ನು ಮೂರು ಉಪ ಚುನಾವಣೆ ಬರುತ್ತಿವೆ. ಮುಸ್ಲಿಮರನ್ನು ಸಂತೃಪ್ತಿ ಪಡಿಸಲು ರಾಮನಗರ ಹೆಸರು ಬದಲಾವಣೆ ಮಾಡುತ್ತಿದ್ದಾರೆ. ರಾಮ ಎನ್ನುವ ಹೆಸರಿದ್ದರೆ ನಿಮಗೆ ಏನು ಸಮಸ್ಯೆ? ಹಿಂದುತ್ವದ ಹೆಸರು ಬಂದರೆ ಸಿದ್ದರಾಮಯ್ಯ ಡಿಕೆ ಶಿವಕುಮಾರ್‌ಗೆ ದೆವ್ವ ಬಂದಹಾಗೆ ಆಗುತ್ತದೆ. ರಾಮನಗರದ ಹೆಸರು ರಾಮನಗರ ಎಂದೇ ಇರಬೇಕು ಎಂದು ಮಾಜಿ ಡಿಸಿಎಂ ಕೆ.ಎಸ್.ಈಶ್ವರಪ್ಪ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಚುನಾವಣೆ ಸಂದರ್ಭದಲ್ಲಿ ಕಾಂಗ್ರೆಸ್ ಅಹಿಂದ ವರ್ಗಕ್ಕೆ ಓಟು ಕೊಡಿ ಒಳ್ಳೆಯ ಕೆಲಸ ಮಾಡುತ್ತೇವೆ ಎಂದರು. ಜನ ನಂಬಿ ಮತ ಹಾಕಿ ಗೆಲ್ಲಿಸಿದರು. ಆದರೆ ಹಿಂದುಳಿದ ವರ್ಗಕ್ಕೆ ಮೀಸಲಿಟ್ಟಿದ್ದ 312 ಕೋಟಿ ಹಣ ರದ್ದು ಮಾಡಿದ್ದಾರೆ. ಜುಲೈ 12 ರಂದು ಅನುದಾನ ವಾಪಸ್ ಪಡೆದಿದ್ದಾರೆ. ಎಸ್‌ಸಿ, ಎಸ್ ಟಿ ಹಣವನ್ನು ವಾಪಸ್ ತೆಗೆದುಕೊಂಡಿದ್ದರು. ಗ್ಯಾರಂಟಿ ಯೋಜನೆಗೆ ಬಳಸಿದ್ದಾರೋ ಯಾವುದಕ್ಕೆ ಬಳಸಿದ್ದಾರೋ ಗೊತ್ತಿಲ್ಲ. ಎಸ್‌ಸಿ, ಎಸ್‌ಟಿ ಹಾಗೂ ಹಿಂದುಳಿದ ವರ್ಗಕ್ಕೆ ಮೀಸಲಿಟ್ಟಿದ್ದ ಹಣವನ್ನು ಆ ಸಮುದಾಯಕ್ಕೆ ಕೊಡಬೇಕು. ಈ ಹಣ ವಾಪಸ್ ಕೊಟ್ಟರೆ ಆ ಸಮುದಾಯ ಉದ್ದಾರ ಆಗುತ್ತದೆ. ರಾಜಕಾರಣಕ್ಕೆ ಹೇಳಿಕೆ ಕೊಟ್ಟರೆ ಏನು ಪ್ರಯೋಜನ ಇಲ್ಲ, ಆ ಸಮುದಾಯಕ್ಕೆ ಹಣ ಕೊಡಬೇಕು ಎಂದರು.

ವಿಜಯೇಂದ್ರ ಹಗರಣ ಮಾಡಿದ್ದಾರೆ, ಅವರೊಬ್ಬ ಅಪ್ರಬುದ್ಧ ರಾಜಕಾರಣಿ ಎಂದು ಡಿಕೆ ಶಿವಕುಮಾರ್ ಹೇಳಿದ್ದಾರೆ. ನಿಮ್ಮ ಬಳಿ ಸರಕಾರ ಇದೆ. ಎಸ್‌ಐಟಿ ಇದೆ. ನಿಮ್ಮ ಬಳಿ ದಾಖಲೆ ಇದ್ದರೆ ಬಿಜೆಪಿ, ಕಾಂಗ್ರೆಸ್ ಅವಧಿಯಲ್ಲಿ ನಡೆದ ಹಗರಣ ಎರಡನ್ನು ಸಿಬಿಐಗೆ ಕೊಡಿ. ಯಾರೇ ಹಗರಣ ಮಾಡಿದರೂ ಬಹಿರಂಗವಾಗಲಿ. ನಿಜಕ್ಕೂ ಇದು ನಿಮ್ಮ ಬ್ಲ್ಯಾಕ್ ಮೇಲ್ ತಂತ್ರ. ಯಾರೇ ಕಳ್ಳರಿದ್ದರೂ ಇವತ್ತಲ್ಲ ನಾಳೆ ಜೈಲಿಗೆ ಹೋಗಲೇಬೇಕು.

-ಕೆ.ಎಸ್.ಈಶ್ವರಪ್ಪ, ಮಾಜಿ ಡಿಸಿಎಂ

ಎಚ್‌ಡಿಕೆ ಶಾಶ್ವತವಾಗಿ ಭೂಮಿ ಮೇಲಿರಲಿ

ರಾಮನಗರ: ಜಿಲ್ಲೆ ಹೆಸರು ಬದಲಾವಣೆ ಮಾಡಿದವರು ಸರ್ವನಾಶ ಆಗುತ್ತಾರೆ ಎಂದಿರುವ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರು ತಮ್ಮ ವಿರುದ್ಧ ಮಾತನಾಡಿದವರನ್ನೆಲ್ಲಾ ಸರ್ವನಾಶ ಮಾಡಿಕೊಂಡೇ ಬಂದಿದ್ದಾರೆ. ಸೂರ್ಯ,ಚಂದ್ರ ಇರುವವರೆಗೆ ಅವರೇ ಭೂಮಿ ಮೇಲಿರಲಿ. ನಾವೆಲ್ಲಾ ಸರ್ವನಾಶವಾಗುತ್ತೇವೆ ಎಂದು ಮಾಗಡಿ ಶಾಸಕ ಎಚ್.ಸಿ. ಬಾಲಕೃಷ್ಣ ತಿರುಗೇಟು ನೀಡಿದ್ದಾರೆ.

ಜಿಲ್ಲೆ ಹೆಸರು ಬದಲಾವಣೆ ಕುರಿತು ನಗರದಲ್ಲಿ ಸೋಮವಾರ ಮಾಧ್ಯಮದವರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಹೆಸರು ಬದಲಾವಣೆಗೆ ಸಚಿವ ಸಂಪುಟದ ಅನುಮೋದನೆ ಸಿಕ್ಕಿದೆ. ಗೆಜೆಟ್ ಅಧಿಸೂಚನೆ ಬರುವುದೊಂದೇ ಬಾಕಿ ಇದೆ. ಬೆಂಗಳೂರು ಹೆಸರಿದ್ದರೆ ಮಾತ್ರ ಅಭಿವೃದ್ಧಿ ಸಾಧ್ಯವೇ ಎನ್ನುವವರು ರಾಮನಗರ ಹೆಸರಿದ್ದರೆ ಅಭಿವೃದ್ಧಿ ಆಗುತ್ತದೆಯೇ ಎಂಬುದರ ಬಗ್ಗೆ ಯೋಚಿಸಬೇಕು ಎಂದರು.

ಕುಮಾರಸ್ವಾಮಿ ಅವರು ಜಿಲ್ಲೆಯಲ್ಲಿ 20 ವರ್ಷ ರಾಜ್ಯಭಾರ ಮಾಡಿ ಏನು ಅಭಿವೃದ್ಧಿ ಮಾಡಿದ್ದಾರೆ? ಕೇವಲ ನಾಲ್ಕೈದು ಕಟ್ಟಡ ಕಟ್ಟಿದ್ದರೆ ಸಾಕೇ? ರಾಮನಗರ ಕಸದ ತೊಟ್ಟಿಯಂತಿದೆ. ಕನಕಪುರ ಮತ್ತು ರಾಮನಗರದ ಅಭಿವೃದ್ಧಿ ನಡುವಿನ ವ್ಯತ್ಯಾಸ ಹೇಗಿದೆ ಎಂದು ಅವರಿಗೆ ಗೊತ್ತಾ? ನಮಗೂ 20 ವರ್ಷ ಕೊಡಿ ಅಭಿವೃದ್ಧಿ ಮಾಡಿ ತೋರಿಸುತ್ತೇವೆ' ಎಂದು ಸವಾಲು ಹಾಕಿದರು.

ಬಿಜೆಪಿ ಹಿರಿಯ ನಾಯಕರಿಂದ ಭಿನ್ನ ನಡೆ | ವರಿಷ್ಠರಿಗೆ ಇಕ್ಕಟ್ಟಿನ ಪರಿಸ್ಥಿತಿ

ಜಾರಕಿಹೊಳಿ, ಯತ್ನಾಳ್ ಬಂಡಾಯ ಯಾತ್ರೆ

ಬೆಂಗಳೂರು: ಒಂದೆಡೆ ರಾಜ್ಯ ಬಿಜೆಪಿ ವತಿಯಿಂದ ಸರಕಾರದ ವಿರುದ್ಧ ಪಾದಯಾತ್ರೆ ನಡೆಸಲು ಸಿದ್ಧತೆ ನಡೆಯುತ್ತಿವೆ. ಇನ್ನೊಂದೆಡೆ ರಾಜ್ಯ ಸರಕಾರದ ವಿರುದ್ಧ 'ಬಂಡಾಯ' ಪಾದಯಾತ್ರೆಗೆ ಸದ್ದಿಲ್ಲದೇ ಪಕ್ಷದ ನಾಯಕರು ಸಿದ್ಧತೆ ನಡೆಸಿಕೊಂಡಿರುವುದು ಬಿಜೆಪಿಯನ್ನು ಇಕ್ಕಟ್ಟಿಗೆ ಸಿಲುಕುವಂತೆ ಮಾಡಿದೆ. ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ವಿರುದ್ಧ ಸದಾ ಕಿಡಿಕಾರುವ ಬಸನಗೌಡ ಪಾಟೀಲ್ ಯತ್ನಾಳ್ ಅವರೊಂದಿಗೆ ಸೇರಿ ಪ್ರತ್ಯೇಕ ಪಾದಯಾತ್ರೆ ನಡೆಸಲು ನಾನು ಸಿದ್ಧ ಎನ್ನುವ ಮೂಲಕ ಮಾಜಿ ಸಚಿವ ರಮೇಶ್ ಜಾರಕಿಹೊಳಿ 'ಬಂಡಾಯ' ಸಾರಿದ್ದಾರೆ. ಪಾದಯಾತ್ರೆ ನಡೆಸುವ ಬಗ್ಗೆ ಅಧಿಕೃತವಾಗಿ ದಿನಾಂಕ ನಿಗದಿಪಡಿಸದಿದ್ದರೂ, ಪಕ್ಷದ ವರಿಷ್ಠರು ಒಪ್ಪಿದರೆ ಪಾದಯಾತ್ರೆ ನಡೆಸುವುದಾಗಿ ಹೇಳಿರುವುದು ಇದೀಗ ವಿವಾದಕ್ಕೆ ಕಾರಣವಾಗಿದೆ.

ಈ ಬಗ್ಗೆ ಮಾತನಾಡಿರುವ ಮಾಜಿ ಸಚಿವ ರಮೇಶ್ ಜಾರಕಿಹೊಳಿ ಅವರು, ಮುಡಾ ಹಗರಣಕ್ಕಿಂತ ವಾಲ್ಮೀಕಿ ಹಗರಣ ದೊಡ್ಡದು. ಆದ್ದರಿಂದ ಈ ಹಗರಣದ ನಿಷ್ಪಕ್ಷಪಾತ ತನಿಖೆಗೆ ಆಗ್ರಹಿಸಿ ನಾನು ಮತ್ತು ವಿಜಯಪುರ ಶಾಸಕ ಬಸವರಾಜ ಪಾಟೀಲ ಯತ್ನಾಳ ಕೂಡಲಸಂಗಮದಿಂದ ಬಳ್ಳಾರಿಗೆ ಪಾದಯಾತ್ರೆ ನಡೆಸಲು ನಿರ್ಧರಿಸಿದ್ದೇವೆ ಎಂದು ಹೇಳಿರುವುದು ಇದೀಗ ಭಾರಿ ಚರ್ಚೆಗೆ ಗ್ರಾಸವಾಗಿದೆ.

ತಮ್ಮ ಮಾತನ್ನು ಇಲ್ಲಿಗೆ ನಿಲ್ಲಿಸದೇ ಸದನದಲ್ಲಿ ಗಲಾಟೆ ಮಾಡಿದರೆ ಸಾಲುವುದಿಲ್ಲ. ಪಾದಯಾತ್ರೆ ಮಾಡಬೇಕು. ಬಳ್ಳಾರಿ ಪಾದಯಾತ್ರೆಗೆ ಇನ್ನೂ ದಿನಾಂಕ ನಿಗದಿಯಾಗಿಲ್ಲ. ಪಾದಯಾತ್ರೆ ಬಗ್ಗೆ ರಾಜ್ಯ ಬಿಜೆಪಿ ಅಧ್ಯಕ್ಷರೊಂದಿಗೆ ಮಾತನಾಡುವ ಅಗತ್ಯವಿಲ್ಲ. ವಿಜಯೇಂದ್ರ ಅವರನ್ನು ರಾಜ್ಯಾಧ್ಯಕ್ಷರೆಂದು ನಾವಿನ್ನು ಪರಿಗಣಿಸಿಲ್ಲ. ನಾನೇನಿದ್ದರೂ ಹೈಕಮಾಂಡ್ ಜತೆ ಮಾತನಾಡುತ್ತೇವೆ ಎನ್ನುವ ಮೂಲಕ ಪಕ್ಷದಲ್ಲಿರುವ ಅಸಮಾಧಾನವನ್ನು ಬಹಿರಂಗಪಡಿಸಿದ್ದಾರೆ. ಇಷ್ಟು ದಿನದ ವಿಜಯೇಂದ್ರ ವಿರುದ್ಧ ಯತ್ನಾಳ್ ಅವರು ಬಹಿರಂಗವಾಗಿಯೇ ವಾಗ್ದಾಳಿ ನಡೆಸುತ್ತಿದ್ದರು. ಆದರೆ ಇದೀಗ ಯತ್ನಾಳ್ ಜತೆಗೆ ರಮೇಶ್ ಜಾರಕಿಹೊಳಿ ಅವರೂ ರಾಜ್ಯಾಧ್ಯಕ್ಷರ ವಿರುದ್ಧ ಅಸಮಾಧಾನ ಹೊರಹಾಕಿರುವುದು ಬಿಜೆಪಿಗೆ ನುಂಗಲಾರದ ತುತ್ತಾಗಿದೆ.

ಏನು ಮಾಡಲಾಗದ ಸ್ಥಿತಿಯಲ್ಲಿ ಬಿಜೆಪಿ

ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಅವರ ವಿರುದ್ಧ ಮೊದಲ ದಿನದಿಂದಲೂ ಯತ್ನಾಳ್ ಟೀಕಿಸುತ್ತಿದ್ದರೂ ಬಿಜೆಪಿ ವರಿಷ್ಠರು ಯಾವುದೇ ಕ್ರಮವಹಿಸಿಲ್ಲ. ಇದರೊಂದಿಗೆ ಇದೀಗ ರಮೇಶ್ ಜಾರಕಿಹೊಳಿ ಅವರು ಟೀಕಿಸಲು ಆರಂಭಿಸಿರುವುದು ರಾಜ್ಯ ನಾಯಕರನ್ನು ಇಕ್ಕಟ್ಟಿಗೆ ಸಿಲುಕಿಸಿದೆ. ಪಕ್ಷದ ವರಿಷ್ಠರೊಂದಿಗೆ ಈ ಇಬ್ಬರು ಉತ್ತಮ ಬಾಂಧವ್ಯ ಹೊಂದಿರುವುದರಿಂದ ಯಾವುದೇ ಕ್ರಮವಹಿಸುವ ಸಾಧ್ಯತೆಯಿಲ್ಲ. ಇದೇ ರೀತಿ ಟೀಕೆಯನ್ನು ಮುಂದುವರೆಸಿದರೆ ಏನು ಮಾಡಬೇಕು ಎನ್ನುವ ಗೊಂದಲದಲ್ಲಿ ನಾಯಕರಿದ್ದಾರೆ ಎನ್ನಲಾಗಿದೆ.

12ರ ಬಾಲಕಿಯಿಂದ ಅಂಗಾಂಗ ದಾನ

ತುಮಕೂರು: 12 ವರ್ಷದ ಬಾಲಕಿಯೊಬ್ಬಳು ಸಾವಿನಲ್ಲೂ ಸಾರ್ಥಕತೆ ಮೆರೆದಿದ್ದಾಳೆ. ತನ್ನ ಅಂಗಾಂಗಳನ್ನು ದಾನ ಮಾಡುವ ಮೂಲಕ 6 ಜನರ ಜೀವಕ್ಕೆ ಬೆಳಕಾಗಿದ್ದಾಳೆ.

ತಿಪಟೂರು ನಗರದ ಹಳೇಪಾಳ್ಯದ ನಿವಾಸಿಯಾಗಿರುವ ಚಂದನ ಅಲ್ಲಿನ ಶ್ರೀ ವಿವೇಕಾನಂದ ಇಂಟರ್ ನ್ಯಾಷನಲ್ ಶಾಲೆಯಲ್ಲಿ ಓದುತ್ತಿದ್ದಳು. ಜು.23ರಂದು ಶಾಲೆಗೆ ಹೋಗಿ ವಾಪಸ್ ಬರುವಾಗ ತಿಪಟೂರಿನಲ್ಲಿ ಅಪಘಾತವಾಗಿದೆ. ರಸ್ತೆ ದಾಟುವಾಗ ಚಂದನಗೆ ಲಾರಿ ಡಿಕ್ಕಿ ಹೊಡೆದು ತಲೆಗೆ ಪೆಟ್ಟಾಗಿತ್ತು. ಪರಿಣಾಮ ಮೆದುಳು ನಿಷ್ಕ್ರಿಯಗೊಂಡಿತ್ತು. ಅಪಘಾತದ ಬಳಿಕ ಹಾಸನ ಮೆಡಿಕಲ್ ಕಾಲೇಜಿನಲ್ಲಿ ಚಂದನಾಗೆ ಚಿಕಿತ್ಸೆ ಕೊಡಿಸಲಾಗಿತ್ತು. ಆದರೆತ ಆಕೆ ಸಾವು ಬದುಕಿನ ನಡುವೆ ಹೋರಾಟ ಮಾಡುತ್ತಿದ್ದಳು. ಕೊನೆಗೆ ಚಿಕಿತ್ಸೆ ಫಲಕಾರಿಯಾಗದೆ ಚಂದನ ಸಾವನ್ನಪ್ಪಿದ್ದಾಳೆ.

ಇದೀಗ ಸಾವನ್ನಪ್ಪಿದ ಮಗಳ ಅಂಗಾಂಗ ದಾನ ಮಾಡಿ ಚಂದನ ಪೋಷಕರು ಮಾದರಿಯಾಗಿದ್ದಾರೆ. ಪೋಷಕರ ದಿಟ್ಟ ನಿರ್ಧಾರಕ್ಕೆ ಆಸ್ಪತ್ರೆಯ ಸಿಬ್ಬಂದಿ ಗೌರವ ಸಲ್ಲಿಸಿದ್ದಾರೆ. ಚಂದನಾಳ ಅಂಗಾಂಗವನ್ನು ಮೈಸೂರು ಮತ್ತು ಬೆಂಗಳೂರಿನ 6 ಮಕ್ಕಳಿಗೆ ಜೋಡಣೆ ಮಾಡಿಸಲಾಗಿದೆ.

ವಿಶ್ವವಾಣಿ

ಸಂಪಾದಕೀಯ

ಮನು ಭಾಕರ್ ಯುವ ಜನತೆಗೆ ಸ್ಫೂರ್ತಿ

ಮನು ಭಾಕರ್ ಒಲಿಂಪಿಕ್ಸ್‌ನಲ್ಲಿ ಪದಕ ಗೆದ್ದ ಭಾರತದ ಮೊದಲ ಮಹಿಳಾ ಶೂಟರ್ ಎಂಬ ದಾಖಲೆ ನಿರ್ಮಿಸಿದ್ದಾರೆ. ತಮ್ಮ ಅದ್ಭುತ ಪ್ರತಿಭೆ ಮೂಲಕ ಎಲ್ಲರ ಮೆಚ್ಚುಗೆ ಗಳಿಸಿರುವ ಮನು ಭಾಕರ್ ರಾತ್ರೋರಾತ್ರಿ ದೇಶಾದ್ಯಂತ ಕೋಟ್ಯಂತರ ಅಭಿಮಾನಿಗಳ ಕ್ರೀಡಾತಾರೆಯಾಗಿದ್ದಾರೆ. ಕ್ರೀಡೆಯಲ್ಲಾಗಲಿ ಇತರ ಯಾವುದೇ ಕ್ಷೇತ್ರದಲ್ಲಾಗಲಿ ಗೆಲುವಿಗಷ್ಟೇ ಮಾನ್ಯತೆ. ಆದರೆ ಮನು ಭಾಕರ್ ಒಲಿಂಪಿಕ್ ಪದಕ ಗೆದ್ದ ಒಂದೇ ಕಾರಣಕ್ಕೆ ಭಾರತೀಯರಿಗೆ ಸ್ಫೂರ್ತಿಯಾಗಿಲ್ಲ. ಜೀವನದಲ್ಲಿ ಸ್ಪಷ್ಟ ಗುರಿ, ಸಾಧಿಸುವ ಹಂಬಲ ಮತ್ತು ಪರಿಶ್ರಮವಿದ್ದರೆ ಯಾವುದೂ ಅಸಾಧ್ಯವಲ್ಲ ಎನ್ನುವುದಕ್ಕೆ ಮನು ಭಾಕರ್ ಉದಾಹರಣೆಯಾಗಿದ್ದಾರೆ. ಕ್ರೀಡೆ ಹೊರತಾಗಿಯೂ ದೇಶದ ಯುವ ಸಮುದಾಯಕ್ಕೆ ಮಾದರಿಯಾಗಿದ್ದಾರೆ. ಬಾಲ್ಯದಿಂದಲೂ ಕ್ರೀಡೆಯ ಬಗ್ಗೆ ಆಸಕ್ತಿ ಬೆಳೆಸಿಕೊಂಡಿದ್ದ ಭಾಕರ್, ಶಾಲಾ ವಿದ್ಯಾರ್ಥಿನಿಯಾಗಿದ್ದಾಗ ಟೆನಿಸ್, ಸ್ಕೇಟಿಂಗ್ ಮತ್ತು ಬಾಕ್ಸಿಂಗ್‌ನಲ್ಲಿ ಆಸಕ್ತಿ ಹೊಂದಿದ್ದರು. ನಂತರ 'ತಂಗ್ ಟಾ' ಎಂಬ ಪ್ರಾಚೀನ ಮಣಿಪುರಿ ಸಮರ ಕಲೆ ಕಲಿತು ರಾಷ್ಟ್ರಮಟ್ಟದಲ್ಲಿ ಪದಕಗಳನ್ನು ಗೆದ್ದಿದ್ದರು. ತನ್ನ 14ನೇ ವಯಸ್ಸಿನಲ್ಲಿ ಶೂಟಿಂಗ್‌ನಲ್ಲಿ ಆಸಕ್ತಿ ಬೆಳೆಸಿಕೊಂಡ ಅವರಿಗೆ ತಂದೆ ರಾಮಕಿಶನ್ ಭಾಕರ್ ಆಸರೆಯಾಗಿ ನಿಂತರು. ಕೇವಲ ಎರಡೇ ವರ್ಷಗಳಲ್ಲಿ ತಮ್ಮ 16ನೇ ವಯಸ್ಸಿಗೆ ಐಎಸ್‌ಎಸ್‌ಎಫ್ ಶೂಟಿಂಗ್ ವಿಶ್ವಕಪ್‌ನಲ್ಲಿ 9 ಚಿನ್ನದ ಪದಕ, 2 ಬೆಳ್ಳಿ ಮತ್ತು 2 ಕಂಚು ಗೆದ್ದು ವಿಶ್ವದಾಖಲೆ ಬರೆದರು. 2017ರ ರಾಷ್ಟ್ರೀಯ ಶೂಟಿಂಗ್ ಚಾಂಪಿಯನ್‌ಶಿಪ್‌ನಲ್ಲಿ ಮಾಜಿ ವಿಶ್ವ ನಂ.1 ಆಟಗಾರ್ತಿ ಹೀನಾ ಸಿಧು ಅವರನ್ನು ಸೋಲಿಸುವ ಮೂಲಕ ಸಂಚಲನ ಮೂಡಿಸಿದ್ದರು. 2018ರಲ್ಲಿ ಆಸ್ಟ್ರೇಲಿಯಾದಲ್ಲಿ ನಡೆದ ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಮಹಿಳೆಯರ 10 ಮೀಟರ್ ಏರ್ ಪಿಸ್ತೂಲ್ ಸ್ಪರ್ಧೆಯಲ್ಲಿ ಚಿನ್ನದ ಪದಕ ಗೆದ್ದು ಸಂಭ್ರಮಿಸಿದ್ದರು. ಎಲ್ಲವೂ ಸರಿ ಹೋಗಿದ್ದರೆ 2020ರ ಟೋಕಿಯೋ ಒಲಿಂಪಿಕ್ಸ್‌ನಲ್ಲಿಯೇ ಮನು ಭಾಕರ್ ಪದಕ ಗೆಲ್ಲಬೇಕಿತ್ತು. 10 ಮೀಟರ್ ಏರ್ ಪಿಸ್ತೂಲ್ ಅರ್ಹತಾ ಪಂದ್ಯದಲ್ಲಿ ಅಗ್ರಸ್ಥಾನಿಯಾದರೂ ನಡುವೆ ಪಿಸ್ತೂಲ್ ಕೈಕೊಟ್ಟಿದ್ದರಿಂದ ಸ್ಪರ್ಧೆಯಿಂದ ಹಿಂದೆ ಸರಿಯಬೇಕಾಯಿತು. ಆಗ ಬೇಸರಗೊಂಡು ಕ್ರೀಡೆಯನ್ನು ತೊರೆದು ವಯೋಲಿನ್ ಕಲಿಕೆಯಲ್ಲಿ ತೊಡಗಿಸಿಕೊಂಡಿದ್ದರು. ಕೋಚ್ ಜಸ್ಪಾಲ್ ರಾಣಾ ಅವರ ಒತ್ತಾಯದ ಮೇರೆಗೆ ಮರಳಿ ಶೂಟಿಂಗ್ ಕಣಕ್ಕಿಳಿದು ಇದೀಗ ಪದಕಕ್ಕೆ ಗುರಿ ಇಟ್ಟಿದ್ದಾರೆ. ತಮ್ಮ ಸಾಧನೆಗೆ ಗೀತೆಯ ಅಧ್ಯಯನ ನೆರವಾಗಿದ್ದನ್ನು ಸ್ಮರಿಸಿಕೊಂಡಿದ್ದಾರೆ. ಮನುಭಾಕರ್ ಅವರ ಈ ಸಾಧನೆಯ ಹಿಂದೆ ಹರಿಯಾಣ ಸರಕಾರದ ಪ್ರೋತ್ಸಾಹವನ್ನೂ ನೆನಪಿಸಿಕೊಳ್ಳಬೇಕು. ಒಲಿಂಪಿಕ್ ಸೇರಿದಂತೆ ಅಂತಾರಾಷ್ಟ್ರೀಯ ಕ್ರೀಡೆಗಳಲ್ಲಿ ಹರಿಯಾಣದ ಕಲಿಗಳೇ ಹೆಚ್ಚಿದ್ದಾರೆ. ಎಲ್ಲ ರಾಜ್ಯ ಸರಕಾರಗಳು ಕ್ರೀಡೆಗೆ ಆದ್ಯತೆ ನೀಡಿದರೆ ಭಾರತ ಮುಂದಿನ ವಿಶ್ವಕಪ್ ವೇಳೆಗೆ ಇನ್ನಷ್ಟು ಪದಕ ಗೆಲ್ಲುವುದು ಅಸಾಧ್ಯವೇನಲ್ಲ.

ಸೊಂಪಾದಕೀಯ

ಪೇಸ್ಟ್ ಅಂಡ್ ಕಟ್

ಈಗಿನ ಕಾಲದಲ್ಲಿ ಗಂಡ ಹೆಂಡಿರ ಮಧ್ಯೆ ಡಿವೋರ್ಸ್ ಅನ್ನೋದು ತುಂಬಾ ಸುಲಭವಾಗಿ ಆಗ್ತಾ ಇರೋ ವಿಷಯಗಳಲ್ಲಿ ಒಂದು. ಸಾವಿರ ಸುಳ್ಳು ಹೇಳಿ ಒಂದು ಮದುವೆ ಮಾಡಿ ಅಂತಾರೆ, ಆದ್ರೆ ಮದುವೆಗೆ ಸಾವಿರ ಸುಳ್ಳು ಬೇಕಾದ್ರೂ, ಡಿವೋರ್ಸ್‌ಗೆ ಮಾತ್ರ ಒಂದೇ ಸಾಕು ಅಥವಾ ಅದೂ ಬೇಡ ಅನ್ನೋ ಥರ ಆಗಿದೆ. ಯಾಕಂದ್ರೆ, ಸಿಲ್ಲಿ, ಸಿಲ್ಲಿ ಕಾರಣಗಳಿಗೋಸ್ಕರ ಇಂದು ಡಿವೋರ್ಸ್‌ಗಳು ಆಗ್ತಾ ಇವೆ. ಈಗ ಹಲ್ಲಿನ ಕಾರಣದ ಸಿಲ್ಲಿ ರೀಸನ್ ಗೋಸ್ಕರ ದಂಪತಿಗಳು ವಿಚ್ಛೇದನ ಕೊಡಿ ಅಂತ ಕೋರ್ಟ್ ಮೆಟ್ಟಿಲು ಹತ್ತಿದ್ದಾರೆ. ಹೌದು, ಗಂಡಿರ ಹೆಂಡಿರ ಜಗಳ ರಾತ್ರಿ ಉಂಡು ಮಲಗೋ ತನಕ ಅಂತಾರೆ. ಆದರೆ ಇವರ ಜಗಳ ಉಂಡು ಮಲಗಿ ಬೆಳಗ್ಗೆ ಎದ್ದ ಮೇಲೆ ಶುರು ಆಗೋ ಕೆಟಗರಿಯದ್ದು. ಬೆಳಗ್ಗೆ ಹಲ್ಲುಜ್ಜಲು ಟೂತ್ ಪೇಸ್ಟ್ ಬಳಸು ವಾಗ ಗಂಡ ಟ್ಯೂಬಿನ ತಳಭಾಗದಿಂದ ಒತ್ತಿದರೆ, ಹೆಂಡತಿ ಟ್ಯೂಬಿನ ಕುತ್ತಿಗೆ ಯನ್ನು ಒತ್ತುತ್ತಿದ್ದಳಂತೆ. ಹೀಗೆ ಶುರು ಆದ ಜಗಳ ಒಬ್ಬರು ಇನ್ನೊಬ್ಬರ ಕುತ್ತಿಗೆ ಒತ್ತೋವರೆಗೂ ಹೋಗಿರೋ ಕಾರಣಕ್ಕೆ ಡಿವೋರ್ಸ್‌ವರೆಗೂ ಹೋಗಿದೆ. ಇದರ ಜತೆಗೆ ಕೋರ್ಟಿನಲ್ಲಿ ನ್ಯಾಯಾಧೀಶರ ಮುಂದೆ ಇಬ್ಬರೂ ಇನ್ನೊಂದಷ್ಟು ಸಮಸ್ಯೆಗಳನ್ನೂ ಹೇಳಿಕೊಂಡಿದ್ದಾರೆ. ಹೆಂಡ್ತಿ ಕಾಫಿ ಕೊಡಲ್ಲ, ಅಡುಗೆ ಮಾಡಲ್ಲ, ನೆಂಟರು ಬಂದ್ರೆ, ಸರಿಯಾಗಿ ನೋಡ್ಕೊಳಲ್ಲ, ಗೌರವ ಕೊಡದೆ ಏಕವಚನದಲ್ಲಿ ಮಾತಾಡ್ತಾಳೆ ಅಂತ ಗಂಡ ದೂರಿದರೆ, ಫ್ರೆಂಡ್ಸ್ ಕತೆ ಇರ್ತಾರೆ. ನನ್ನ್ ಸಿನಿಮಾ ಪಾರ್ಕ್, ಮಾಲ್‌ಗೆ ಕರ್ಕೊಂಡ್ ಹೋಗಲ್ಲ, ಮೊಬೈಲ್ ಪಾಸ್‌ವರ್ಡ್ ಹೇಳಲ್ಲ ಅಂತ ಹೆಂಡತಿ ದೂರಿದ್ದಾಳೆ. ಒಟ್ಟಿನಲ್ಲಿ ಟೂತ್‌ಪೇಸ್ಟ್ ಕಾರಣಕ್ಕಾಗಿ ಶುರು ಆದ ಜಗಳ ಈಗ ಈ ಎಲ್ಲ ಕಾರಣಗಳಿಗಾಗಿ ಡಿವೋರ್ಸ್ ಬೇಕು ಅನ್ನೋ ಮಟ್ಟಕ್ಕೆ ಬಂದಿದೆ. ಇವರ ಮಾತನ್ನು ಕೇಳಿದ ಜಡ್ಜ್, ಅಯ್ಯೋ ಎರಡು ಸೆಪರೇಟ್ ಟೂತ್‌ಪೇಸ್ಟ್ ಇಟ್ಕೊಂಡ್ ಬಿಡಿ, ಸಮಸ್ಯೆ ಇರಲ್ಲ ಅಂತ ಸಮಾಧಾನ ಮಾಡಿದ್ದಾರೆ. ಸದ್ಯಕ್ಕೆ ಟೂತ್‌ಪೇಸ್ಟ್‌ನಿಂದ ಸಂಬಂಧ ಕಟ್ ಆಗೋದು ಬೇಡ ಅಂತ ಇಬ್ಬರ ಮಧ್ಯೆ ಕಟ್ ಅಂಡ್ ಪೇಸ್ಟ್ ಮಾಡಿ ತೇಪೆ ಹಾಕೋ ಕೆಲಸ ನ್ಯಾಯಾಧೀಶರಿಂದ ಆಗಿದೆ. ಆದರೆ ಇದು ಎಲ್ಲಿಯವರೆಗೂ ನಡೆಯುತ್ತೋ ಅಂತ ಟೂತ್‌ಪೇಸ್ಟ್ ಕಂಪನಿಯವರೇ ಹೇಳ್ಬೇಕು.

ಸಂಪಾದಕರ ಸದ್ಯಶೋಧನೆ

ಹೀಗೊಂದು ಕೋರ್ಟ್ ತೀರ್ಪು

ಅಮೆರಿಕದ ಸಿನ್ಸಿನಾಟಿ ನಗರದಲ್ಲಿ ಹದಿನಾರು ವರ್ಷ ವಯಸ್ಸಿನ ಹುಡುಗನೊಬ್ಬ ಡಿಪಾರ್ಟ್‌ಮೆಂಟಲ್ ಸ್ಟೋರಿನಲ್ಲಿ ಬ್ರೆಡ್ಡನ್ನು ಕಳವು ಮಾಡಿ ಸಿಕ್ಕಿ ಬಿದ್ದ. ಸ್ಟೋರಿನಲ್ಲಿ ಕೆಲಸ ಮಾಡುವ ಹುಡುಗರು ಬಹಳ ಪ್ರಯಾಸಪಟ್ಟು ಅವನನ್ನು ಹಿಡಿದು ಪೊಲೀಸರಿಗೊಪ್ಪಿಸಿದರು. ಪೊಲೀಸರು ಅವನನ್ನು ಕೋರ್ಟಿಗೆ ಹಾಜರುಪಡಿಸಿದರು. ಇಡೀ ಪ್ರಕರಣವನ್ನು ಜಡ್ಜ್ ಗಮನವಿಟ್ಟು ಕೇಳಿಸಿಕೊಂಡರು. 'ನೀನು ನಿಜವಾಗಿಯೂ ಬ್ರೆಡ್ ಮತ್ತು ಚೀಸ್‌ನ್ನು ಕದ್ದೆಯಾ?' ಎಂದು ಜಡ್ಜ್ ಕೇಳಿದರು. ಆ ಹುಡುಗ ತಲೆ ತಗ್ಗಿಸಿ, 'ಹೌದು' ಎಂದ. 'ನೀನೇಕೆ ಅಂಥ ಕೆಲಸಕ್ಕೆ ಮುಂದಾದೆ?' ಎಂದು ಜಡ್ಜ್ ಕೇಳಿದರು. 'ಅದನ್ನು ಕಳವು ಮಾಡದೇ ಬೇರೆ ದಾರಿ ಇರಲಿಲ್ಲ' ಎಂದ. 'ಕಳವು ಮಾಡುವ ಬದಲು, ಬ್ರೆಡ್ ಮತ್ತು ಚೀಸ್‌ನ್ನು ಹಣ ಕೊಟ್ಟು ಖರೀದಿಸಬಹುದಿತ್ತಲ್ಲ?' ಎಂದು ಜಡ್ಜ್ ಕೇಳಿದರು. 'ನನ್ನ ಹತ್ತಿರ ಅಷ್ಟೂ ಹಣವಿರಲಿಲ್ಲ' ಎಂದ ಹುಡುಗ. 'ನಿನ್ನ ಮನೆಮಂದಿಯಿಂದ, ಅಣ್ಣ – ತಮ್ಮಂದಿರಿಂದ, ತಂದೆಯಿಂದ ಹಣ ಪಡೆಯಬೇಕಿತ್ತು' ಎಂದರು ಜಡ್ಜ್. ಅದಕ್ಕೆ ಆ ಹುಡುಗ, 'ನನಗೆ ತಾಯಿ ಬಿಟ್ಟು ಬೇರೆಯಾರೂ ಇಲ್ಲ. ಆಕೆ ಅನಾರೋಗ್ಯಪೀಡಿತೆ. ಅವಳನ್ನೂ ನಾನೇ ನೋಡಿಕೊಳ್ಳಬೇಕು. ನಿಜ ಹೇಳಬೇಕೆಂದರೆ, ಅವಳಿಗಾಗಿಯೇ ನಾನು ಬ್ರೆಡ್ ಮತ್ತು ಚೀಸ್‌ನ್ನು ಕಳವು ಮಾಡಿದ್ದು. ಅವಳು ಹಸಿವಾಗುತ್ತಿದೆ ಏನಾದರೂ ತಿನ್ನಲು ಕೊಡು ಎಂದಳು. ಮನೆಯಲ್ಲಿ ಏನೂ ಇರಲಿಲ್ಲ, ನನ್ನ ಬಳಿಹಣವಿರಲಿಲ್ಲ, ಹೀಗಾಗಿ ಕದ್ದೆ' ಎಂದ. 'ನೀನು ದುಡಿಯುವುದಿಲ್ಲವಾ?' ಎಂದು ಕೇಳಿದರು. 'ನಾನು ಗರಾಜಿನಲ್ಲಿ ಕಾರ್ ವಾಷ್ ಮಾಡುತ್ತೇನೆ. ತಾಯಿಗೆ ಹುಷಾರಿಲ್ಲವೆಂದು ಒಂದು ದಿನ ರಜೆ ತೆಗೆದುಕೊಂಡೆ. ಅಷ್ಟಕ್ಕೇ ನನ್ನನ್ನು ಕೆಲಸದಿಂದ ವಜಾ ಮಾಡಿಬಿಟ್ಟರು' ಎಂದ. 'ನೀನು ಸಹಾಯಕ್ಕಾಗಿ ಯಾರನ್ನಾದರೂ ಕೇಳಬೇಕಿತ್ತು' ಎಂದು ಜಡ್ಜ್ ಹೇಳಿದರು. 'ನಾನು ಬೆಳಗ್ಗೆಯಿಂದ ಕನಿಷ್ಠ ಇಪ್ಪತ್ತು ಜನರನ್ನು ಕೇಳಿರಬಹುದು. ಒಬ್ಬನೇ ಒಬ್ಬ ಸಹಾಯ ಮಾಡಲಿಲ್ಲ. ಕೊನೆಗೆ ದಾರಿ ಕಾಣದೇ ಕಳವು ಮಾಡಲು ನಿರ್ಧರಿಸಿದೆ' ಎಂದ ಹುಡುಗ. ಜಡ್ಜ್ ಕೇಳಬೇಕಾದ ಎಲ್ಲ ಪ್ರಶ್ನೆಗಳನ್ನು ಕೇಳಿದರು. ತೀರ್ಪು ಕೊಡುವುದೊಂದು ಬಾಕಿ ಇತ್ತು. ತುಂಬಿದ ಕೋರ್ಟ್ ಹಾಲ್‌ನ್ನುದ್ದೇಶಿಸಿ, 'ನನ್ನನೂ ಸೇರಿಸಿ, ಈ ಕೋರ್ಟ್ ಹಾಲ್‌ನಲ್ಲಿರುವ ಪ್ರತಿಯೊಬ್ಬರೂ, ಈ ಹುಡುಗನ ಅಪರಾಧಕ್ಕೆ ಒಂದಿಲ್ಲೊಂದು ರೀತಿಯಲ್ಲಿ ಕಾರಣರು. ಹೀಗಾಗಿ ಇಲ್ಲಿರುವ ಪ್ರತಿಯೊಬ್ಬರಿಗೂ ಹತ್ತು ಡಾಲರ್ ದಂಡ ವಿಧಿಸುತ್ತಿದ್ದೇನೆ. ಹತ್ತು ಡಾಲರ್ ದಂಡ ಪೀಕದೇ ಯಾರೂ ಇಲ್ಲಿಂದ ಕದಲುವ ಹಾಗಿಲ್ಲ' ಎಂದು ತೀರ್ಪು ನೀಡಿದರು. ಅಷ್ಟು ಹೇಳಿದ ಜಡ್ಜ್ ತಮ್ಮ ಜೇಬಿನಿಂದ ಹತ್ತು ಡಾಲರ್ ತೆಗೆದುಕೊಟ್ಟರು. ಆ ಹುಡುಗನನ್ನು ಪೊಲೀಸರಿಗೆ ಹಿಡಿದು ಕೊಟ್ಟ ಸ್ಟೋರಿನ ಮಾಲೀಕನಿಗೆ ಸಾವಿರ ಡಾಲರ್ ದಂಡ ವಿಧಿಸಿದರು. ಎಲ್ಲರಿಂದ ಸಂಗ್ರಹಿಸಿದ ದಂಡದ ಹಣವನ್ನು ಹುಡುಗನಿಗೆ ಕೊಡುವಂತೆ ಹೇಳಿದರು. ಜೀವನದಲ್ಲಿ ಎಂದೂ ಕಳವು ಮಾಡುವುದಿಲ್ಲ ಎಂದು ಪ್ರತಿಜ್ಞೆ ಮಾಡುವಂತೆ ಹುಡುಗನಿಗೆ ಹೇಳಿದರು. ಆತ ಪ್ರತಿಜ್ಞೆ ಮಾಡಿದ. ಹುಡುಗ ತನ್ನಷ್ಟಕ್ಕೇ ಬಿಕ್ಕುತ್ತಿದ್ದ. ಹುಡುಗನ ಅಪರಾಧಕ್ಕೆ ಇಡೀ ವ್ಯವಸ್ಥೆ ಕಾರಣ ಎಂಬ ತೀರ್ಮಾನಕ್ಕೆ ಕೋರ್ಟ್ ಬಂದಿತ್ತು. ಚಾಣಕ್ಯ ಹೇಳಿರುವುದೂ ಇದನ್ನೇ. 'ಹಸಿವಿನಿಂದ ಕಂಗೆಟ್ಟವ, ರೊಟ್ಟಿ ಅಥವಾ ಬ್ರೆಡ್ ಕಳವು ಮಾಡಲು ಹೋಗಿ ಸಿಕ್ಕಿಬಿದ್ದರೆ, ಇಡೀ ಸಮಾಜ ತಲೆತಗ್ಗಿಸಬೇಕು. ಅಂಥ ಪರಿಸ್ಥಿತಿ ನಿರ್ಮಾಣವಾಗಲು ಪ್ರತಿಯೊಬ್ಬರೂ ಕಾರಣರು ಎಂಬುದನ್ನು ಮರೆಯಬಾರದು. ಹಸಿದವ ಕಳಬಾರದು, ಸಾಯಬಾರದು. ಒಂದು ವೇಳೆ ಹಸಿವಿನಿಂದ ಯಾರಾದರೂ ಸತ್ತರೆ ಅದಕ್ಕೆ ನಾವೆಲ್ಲರೂ ಕಾರಣರು'. ಅದನ್ನೇ ಆ ಜಡ್ಜ್ ತಮ್ಮ ತೀರ್ಪಿನಲ್ಲಿ ಹೇಳಿದ್ದರು.

ಪಕ್ಷದಲ್ಲಿ ತಾಳಮೇಳ ತರುವವರ್‍ಯಾರು?

ಅಶ್ವತ್ಥಕಟ್ಟೆ

ರಂಜಿತ್ ಎಚ್. ಅಶ್ವತ್ಥ

vveditoped@gmail.com

ಯಾವುದೇ ಒಂದು ಪಕ್ಷ ಬಲಿಷ್ಠವಾಗಿ ಬೆಳೆಯುವುದಕ್ಕೆ 'ಹೊಂದಾಣಿಕೆ' ಬಹುಮುಖ್ಯ. ಪಕ್ಷದಲ್ಲಿ ಆಂತರಿಕವಾಗಿ ಹೊಂದಾಣಿಕೆಯಿಲ್ಲದೇ, ಎಷ್ಟೇ ಕಾರ್ಯಕರ್ತರ ಬಲವಿದ್ದರೂ, ಅದು ನದಿಯಲ್ಲಿ ಹುಣಸೆ ತೊಳೆದಂತೆ ಎನ್ನುವುದರಲ್ಲಿ ಅನುಮಾನವೇ ಇಲ್ಲ. ಆದರೆ ವಿಧಾನಸಭಾ ಚುನಾವಣೆ ಬಳಿಕದ ರಾಜ್ಯ ಬಿಜೆಪಿಯಲ್ಲಿ ಎದುರಾಗಿರುವ ಬಹುದೊಡ್ಡ ಸಮಸ್ಯೆಯೇ ಈ ಹೊಂದಾಣಿಕೆಯಾಗಿದೆ.

ಒಂದು ಕಾಲದಲ್ಲಿ ಬಿಜೆಪಿ ಪಾಲಿಗೆ ದಕ್ಷಿಣ ಭಾರತದ ಹೆಬ್ಬಾಗಿಲಾಗಿದ್ದ ಕರ್ನಾಟಕದಲ್ಲಿ ನಾಯಕತ್ವದ ಬದಲಾವಣೆಯಾದ ಬಳಿಕ, ಒಬ್ಬರಿಗೊಬ್ಬರ ಮೇಲೆ ಹಿಡಿತವಿಲ್ಲವೇನೋ ಎನ್ನುವ ಪರಿಸ್ಥಿತಿ ನಿರ್ಮಾಣವಾಗಿದೆ. ಶಿಸ್ತಿನ ಪಕ್ಷವೆನಿಸಿದ್ದ ಬಿಜೆಪಿಯಲ್ಲಿ ಒಂದು ಹುಲ್ಲು ಕಡ್ಡಿ ಅಲ್ಲಾಡಬೇಕೆಂದರೂ, ಅದಕ್ಕೆ ವರಿಷ್ಠರ ಅಥವಾ ರಾಜ್ಯಾಧ್ಯಕ್ಷರ ಅನುಮತಿ ಕಡ್ಡಾಯ ಎನ್ನುವ ಸ್ಥಿತಿಯಿತ್ತು. ಅದರಲ್ಲಿಯೂ ಯಡಿಯೂರಪ್ಪನವರು ಮುಖ್ಯಮಂತ್ರಿಯಾಗಿ, ರಾಜ್ಯಾಧ್ಯಕ್ಷ ಹಾಗೂ ಪ್ರತಿಪಕ್ಷ ನಾಯಕರಾಗಿರುವ ತನಕ, ರಾಜ್ಯದ ಯಾವುದೇ ತೀರ್ಮಾನ ಕೈಗೊಳ್ಳಬೇಕೆಂದರೂ ಅದಕ್ಕೆ ಯಡಿಯೂರಪ್ಪ ಅವರ ಅಂತಿಮ ಮುದ್ರೆ ಅನಿವಾರ್ಯ ಎನ್ನುವ ಸ್ಥಿತಿಯಿತ್ತು. ಅಮಿತ್ ಶಾ, ಮೋದಿ ಪಕ್ಷದ ಚುಕ್ಕಾಣಿ ಹಿಡಿದ ಬಳಿಕ, ಸಂತೋಷ್ ಅವರು ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಯಾದ ಬಳಿಕ ಕೆಲವೊಂದಷ್ಟು ವಿಷಯದಲ್ಲಿ ಈ ಪರಿಸ್ಥಿತಿ ಪರಿಸ್ಥಿತಿ ಬದಲಾಗಿದ್ದರೂ, ಯಾವುದೇ ತೀರ್ಮಾನಕ್ಕೂ ಮೊದಲು ಯಡಿಯೂರಪ್ಪ ಅವರನ್ನು ವಿಶ್ವಾಸಕ್ಕೆ ತಗೆದುಕೊಳ್ಳುವ ಕೆಲಸವನ್ನು ವರಿಷ್ಠರು ಮಾಡುತ್ತಿದ್ದರು. ಇನ್ನು ರಾಜ್ಯ ನಾಯಕರ ಮಟ್ಟಿಗೆ ಹೇಳುವುದಾದರೆ, ಯಾವುದೇ ಹೇಳಿಕೆ, ತೀರ್ಮಾನ ಕೈಗೊಳ್ಳಬೇಕೆಂದರೂ ಅದು ಯಡಿಯೂರಪ್ಪನವರ 'ಗಮನ'ಕ್ಕೆ ಬಂದೇ ಹೋಗುತ್ತಿತ್ತು ಎನ್ನುವುದು ಸ್ಪಷ್ಟ. ಆದರೆ ಯಡಿಯೂರಪ್ಪನವರ ಸಕ್ರಿಯ ರಾಜಕೀಯ ನಿವೃತ್ತಿ ಬಳಿಕ, ರಾಜ್ಯ ಬಿಜೆಪಿಯಲ್ಲಿ ಮನೆಯೊಂದು ನೂರಾರು ಬಾಗಿಲು ಎನ್ನುವ ಪರಿಸ್ಥಿತಿ ನಿರ್ಮಾಣವಾಗಿದೆ. ಪ್ರತಿಪಕ್ಷ ನಾಯಕ ಆರ್. ಅಶೋಕ್, ಪಕ್ಷದ ರಾಜ್ಯಾಧ್ಯಕ್ಷ ವಿಜಯೇಂದ್ರ ವಿರುದ್ಧ ನೇರಾನೇರ ಟೀಕೆ ಮಾಡಿದರೂ, ಅವರನ್ನು ಪ್ರಶ್ನಿಸುವುದು ಹೋಗಲಿ ಟೀಕಿಸುತ್ತಿರುವುದಕ್ಕೆ ಕಾರಣ ವೇನೆಂದು ಕೇಳುವ ಸ್ಥಿತಿಯಲ್ಲಿಯೂ ರಾಜ್ಯ ಬಿಜೆಪಿ ಇಲ್ಲವಾಗಿದೆ. ಬಿಜೆಪಿಯಲ್ಲಿ ಸೃಷ್ಟಿಯಾಗಿರುವ ಈ ಅರಾಜಕತೆ ಬಗ್ಗೆ ಬಿಜೆಪಿಯ ಪ್ರತಿಯೊಬ್ಬರ ನಾಯಕರೂ ಮಾತನಾಡುತ್ತಾರೆ. ಆದರೆ ಇದನ್ನು ಸರಿಪಡಿಸುವುದು ಹೇಗೆ ಎನ್ನುವ ಪ್ರಶ್ನೆಗೆ ಮಾತ್ರ ಬಹುತೇಕರದ್ದು 'ಮೌನ'ವೇ ಉತ್ತರವಾಗಿರುತ್ತದೆ.

ಈ ಹಿಂದೆಲ್ಲ ಬಿಜೆಪಿಯಲ್ಲಿ ಯಾವುದೇ ಸಣ್ಣ ಕಿರಿಕ್ ಮಾಡಿಕೊಂಡರೂ ಶಿಸ್ತು ಕ್ರಮವನ್ನು ಕೈಗೊಳ್ಳುವ ವ್ಯವಸ್ಥೆ ಪಕ್ಷದಲ್ಲಿತ್ತು. ಆ ಕಾರಣಕ್ಕೆ ಬಹುತೇಕರು ಯಾವುದೇ ಹೇಳಿಕೆ ನೀಡುವಾದ ಅಳೆದು ತೂಗಿ ಮಾತನಾಡುವ ಸ್ಥಿತಿಯಿತ್ತು. ಅದರಲ್ಲಿಯೂ ಪಕ್ಷದ ನಾಯಕತ್ವದ ವಿರುದ್ಧ ಮಾತನಾಡಿದ ಉದಾಹರಣೆ ತೀರಾ ಕಡಿಮೆ. ಆದರೆ ಇತ್ತೀಚಿಗೆ ಬಿಜೆಪಿ ನಾಯಕರು ವಿರೋಧ ಪಕ್ಷದ ವಿರುದ್ಧ ಮಾತನಾಡುವುದಕ್ಕಿಂತ ಹೆಚ್ಚಾಗಿ ಸ್ವಪಕ್ಷೀಯರ ವಿರುದ್ಧವೇ ಮಾತನಾಡುವುದು ಸಾಮಾನ್ಯ ಎನ್ನುವಂತಾಗಿದೆ. ಒಬ್ಬರ ಮೇಲೆ ಇನ್ನೊಬ್ಬರಿಗೆ ವಿಶ್ವಾಸವಿಲ್ಲದ ಪರಿಸ್ಥಿತಿ ನಿರ್ಮಾಣವಾಗಿದೆ.

ಇದಕ್ಕೆ ತಾಜಾ ಉದಾಹರಣೆಯ ರೀತಿಯಲ್ಲಿ ಕಳೆದ ವಾರವಷ್ಟೇ ನಡೆದ ವಿಧಾನಮಂಡಲದ ಅಧಿವೇಶನದಲ್ಲಿ ರಾಜ್ಯ ಬಿಜೆಪಿಯ ನಡೆಯಿತ್ತು. ಬಿಜೆಪಿಯೊಳಗಿರುವ ಹುಳುಕು ಕಲಾಪದಲ್ಲಿ ಮತ್ತೊಮ್ಮೆ ಬಹಿರಂಗವಾಯಿತು ಎಂದರೆ ತಪ್ಪಾಗುವುದಿಲ್ಲ. ಪ್ರತಿಪಕ್ಷವಾಗಿ ಆಡಳಿತ ಪಕ್ಷದ ವಿರುದ್ಧ ಬೀಳಬೇಕಿದ್ದ ಬಿಜೆಪಿ ಶಾಸಕರು, ಆಡಳಿತ ಪಕ್ಷಕ್ಕಿಂತ ಹೆಚ್ಚಾಗಿ ತಮ್ಮ ತಮ್ಮಲ್ಲಿಯೇ ಆರೋಪ ಮಾಡಿಕೊಳ್ಳುವಲ್ಲಿ ಸಮಯ ಕಳೆದರು. ಹಾಗೇ ನೋಡಿದರೆ, ಮಳೆಗಾಲದ ಅಧಿವೇಶನದಲ್ಲಿ ಆಡಳಿತ ಪಕ್ಷ ಕಾಂಗ್ರೆಸ್ ವಿರುದ್ಧ ಮುಗಿಬೀಳಲು ಬಿಜೆಪಿಗರಿಗೆ ಸಾಲು ಸಾಲು ಅವಕಾಶಗಳಿದ್ದವು. ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ಬಹುಕೋಟಿ ಹಗರಣ, ಎಸ್‌ಸಿ-ಎಸ್‌ಟಿ ಮೀಸಲು ಹಣವನ್ನು ಗ್ಯಾರಂಟಿ ಯೋಜನೆಗಳಿಗೆ ಬಳಸಿಕೊಂಡಿದ್ದು, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ನಿವೇಶನ ಹಂಚಿಕೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಕುಟುಂಬ ಹೆಸರು ಕೇಳಿಬಂದಿದ್ದು ಸೇರಿದಂತೆ ಹಲವಾರು ಅವಕಾಶಗಳಿದ್ದವು. ಈ ಎಲ್ಲವನ್ನು ಪ್ರಸ್ತಾಪಿಸಲು ಬಿಜೆಪಿ ನಾಯಕರು ಮುಂದಾದರು ಎನ್ನುವುದು ಎಷ್ಟು ಸತ್ಯವೋ, ಈ ವಿಷಯದ ಬಗ್ಗೆ ಮಾತನಾಡುವ ಯಾವೊಬ್ಬ ನಾಯಕನೂ 'ಗಟ್ಟಿ ಧ್ವನಿ'ಯಲ್ಲಿ ಪ್ರತಿಭಟಿಸಲಿಲ್ಲ ಎನ್ನುವುದೂ ಅಷ್ಟೇ ಸತ್ಯ.

ವಿಧಾನಸಭೆಯ ಇಡೀ ಕಲಾಪದಲ್ಲಿ ಬಿಜೆಪಿ ಪ್ರತಿ ಹಂತದಲ್ಲಿಯೂ 'ತಾನೇ ಹಗ್ಗ ಕೊಟ್ಟು ಕಟ್ಟಿಸಿಕೊಂಡು ಹೊಡೆಸಿಕೊಂಡ' ರೀತಿಯಲ್ಲಿತ್ತು. ಆಡಳಿತ ಪಕ್ಷದ ವಿರುದ್ಧ ಮಾತನಾಡಲು ಮುಂದಾಗುತ್ತಿದ್ದಂತೆ, ಕಾಂಗ್ರೆಸ್ ನಾಯಕರು ಬಿಜೆಪಿ ಸರಕಾರದ ಹಗರಣಗಳನ್ನು ಮುಂದಿಟ್ಟುಕೊಂಡು ಟೀಕಿಸಲು ಪ್ರಾರಂಭಿಸುತ್ತಿದ್ದರು. ಈ ಟೀಕೆಗೆ ಪ್ರತ್ಯುತ್ತರವಾಗಿ ಬಿಜೆಪಿಗರು ಉತ್ತರ ನೀಡುವ ಬದಲು, ಸ್ವಪಕ್ಷದ ವಿರುದ್ಧವೇ ಬಿಜೆಪಿ ಶಾಸಕರು ನೇರ ಅಥವಾ ಪರೋಕ್ಷವಾಗಿ ಟೀಕಿಸುತ್ತಿದದ್ದು, ಪಕ್ಷವಾಗಿ ಬಿಜೆಪಿ ಪಾಲಿಗೆ ದುರಂತ.

ಎರಡು ವಾರದ ಕಲಾಪದಲ್ಲಿ ಬಿಜೆಪಿಯಲ್ಲಿನ ಹೊಂದಾಣಿಕೆ ಕೊರತೆಯೇ ಹೈಲೈಟ್ ಆಗಿತ್ತು ಎಂದರೆ ತಪ್ಪಾಗುವುದಿಲ್ಲ. ಇನ್ನು ಮುಡಾ ಹಗರಣವನ್ನು ಮುಂದಿಟ್ಟುಕೊಂಡು ಬಿಜೆಪಿಗರು ಅಹೋರಾತ್ರಿ ಧರಣಿ ಆರಂಭಿಸಿದರೆ, ಕಾಂಗ್ರೆಸಿಗರಿಗಿಂತ ಮೊದಲೇ ಬಿಜೆಪಿಯ ಕೆಲ ಶಾಸಕರು 'ಅಪಸ್ವರ' ಎತ್ತಿದ್ದರು. ಅಹೋರಾತ್ರಿ ಬಳಿಕ ಮರುದಿನ ಬೆಳಗ್ಗೆಯೇ 'ಅಹೋರಾತ್ರಿ ಅನ್ನೋದೇ ಒಂದು ನಾಟಕ'ವೆಂದು ಪಕ್ಷದ ಹಿರಿಯ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ವಿಜಯೇಂದ್ರ ಹಾಗೂ ಯಡಿಯೂರಪ್ಪ ವಿರುದ್ಧ ವಾಗ್ದಾಳಿ ನಡೆಸುವ ಮೂಲಕ ಪಕ್ಷದಲ್ಲಿ ಯಾವುದೂ ಸರಿಯಿಲ್ಲ ಎನ್ನುವುದು ಬಹಿರಂಗಪಡಿಸಿದರು.

ಯತ್ನಾಳ್ ಮಾತ್ರವಲ್ಲದೇ ರಾಜ್ಯದಲ್ಲಿ ಬಿಜೆಪಿ ಸಂಘಟನೆಯನ್ನು ಗಟ್ಟಿಗೊಳಿಸುವಲ್ಲಿ ಪ್ರಮುಖ ಪಾತ್ರವಹಿಸಿದ್ದ, ಎಬಿವಿಪಿ, ಆರ್‌ಎಸ್‌ಎಸ್ ಹಿನ್ನಲೆಯಿಂದ ಬಂದಿರುವ ಮಾಜಿ ಸಚಿವ ಅರವಿಂದ ಲಿಂಬಾವಳಿ ಅವರೂ ಪಕ್ಷದ ನಾಯಕರ ನಡೆಯನ್ನು ನೇರವಾಗಿಯೇ ಟೀಕಿಸಿದರು. ಸಾಮಾಜಿಕ ಜಾಲತಾಣದಲ್ಲಿ ಈ ಬಗ್ಗೆ ಸುದೀರ್ಘವಾಗಿ ಬರೆದುಕೊಂಡಿದ್ದ ಅವರು, ಪ್ರತಿಪಕ್ಷವಾಗಿ ಬಿಜೆಪಿ ಈ ಬಾರಿಯ ಅಧಿವೇಶನದಲ್ಲಿ ಯಾವ ರೀತಿಯಲ್ಲಿ ವಿಫಲವಾಗಿದೆ ಎನ್ನುವುದನ್ನು ಹೇಳಿದ್ದರು. ಅವರ ಪೋಸ್ಟ್‌ನ ಕೊನೆಯಲ್ಲಿ, 'ಶಾಸಕರೂ ಆಗಿರುವ ನಮ್ಮ ಪಕ್ಷದ ಅಧ್ಯಕ್ಷರು (ಬಿ.ವೈ. ವಿಜಯೇಂದ್ರ) ಮತ್ತು ಪ್ರತಿಪಕ್ಷ ನಾಯಕರ ಮಧ್ಯೆ ಸಾಮರಸ್ಯ, ಹೊಂದಾಣಿಕೆ ಮತ್ತು ತಾಳ-ಮೇಳ ಇಲ್ಲದೇ ಹೋದದ್ದು ವಿಷಾದನೀಯ. ಇದರ ಸಂಪೂರ್ಣ ಲಾಭವನ್ನು ಆಡಳಿತ ಪಕ್ಷ ಪಡೆಯಲು ಸಹಾಯಕವಾಯಿತು. ಸಿಕ್ಕ ಅವಕಾಶ ಮತ್ತು ಸಮಯವನ್ನು ಸದನದಲ್ಲಿ ಸಮರ್ಪಕವಾಗಿ ಬಳಸಿಕೊಳ್ಳದೇ, ಇಡೀ ಅಧಿವೇಶನದಲ್ಲಿ ವೃಥಾ ಕಾಲಹರಣ ಮಾಡಿ, ಇನ್ನೂ ಒಂದು ದಿನ ಬಾಕಿ ಇರುವಾಗಲೇ ಸದನದ ಕಲಾಪಗಳನ್ನು ಮೊಟಕುಗೊಳಿಸುವಲ್ಲಿ ಆಡಳಿತ ಪಕ್ಷದವರೊಂದಿಗೆ ಕೈಜೋಡಿಸಿದ ನಮ್ಮ ಪಕ್ಷದ ನಾಯಕರ ನಡೆ ಪ್ರಶ್ನಾರ್ಹ. ಒಟ್ಟಾರೆ ಈ ಬಾರಿಯ ಅಧಿವೇಶನದಲ್ಲಿ ಪ್ರತಿಪಕ್ಷವಾಗಿ ಬಿಜೆಪಿ ಸಂಪೂರ್ಣ ವಿಫಲವಾಗಿದೆ. ಅಧಿವೇಶನದಲ್ಲಿ ನಾಯಕರ ನಡೆ ಗಮನಿಸಿದರೆ, ಮುಂದಿನ ದಿನಗಳಲ್ಲಿ ಬಿಜೆಪಿ ಜನಪರ ಹೋರಾಟಗಳಲ್ಲಿ ಹೇಗೆ ತನ್ನನ್ನು ತೊಡಗಿಸಿಕೊಳ್ಳಬಹುದು ಎಂಬುದು ನಿಷ್ಠಾವಂತ, ದೇವದುರ್ಲಭ ಕಾರ್ಯಕರ್ತರಿಗೆ ಆತಂಕದ ವಿಷಯವಾಗಿದೆ. ಬೆರಳೆಣಿಕೆಯಷ್ಟು ಶಾಸಕರನ್ನು ಹೊಂದಿದ್ದ ದಿನಗಳಲ್ಲೂ ಕಲಾಪಗಳಲ್ಲಿ ಅರ್ಭಟಿಸುತ್ತಿದ್ದ, ಜನರ ಆಶೋತ್ತರಗಳಿಗೆ ದನಿಯಾಗುತ್ತಿದ್ದ ಬಿಜೆಪಿಯನ್ನು ನೋಡಿದ್ದ ನನಗೆ, ಇಂದಿನ ನಮ್ಮ ಪಕ್ಷದ ಈ ಪರಿಸ್ಥಿತಿ ನೋಡಿ ತೀವ್ರ ಬೇಸರ ಮತ್ತು ಆತಂಕವಾಗುತ್ತಿದೆ' ಎನ್ನುವ ಮಾತುಗಳನ್ನು ಆಡಿದ್ದಾರೆ. ಪಕ್ಷದ ಶಿಸ್ತಿನ ಸಿಪಾಯಿಗಳಂತಿದ್ದ ಈ ರೀತಿಯ ಹಿರಿಯ ನಾಯಕರು ಬಹಿರಂಗವಾಗಿಯೇ ಟೀಕಿಸಿದರೂ, ಅದರ ಬಗ್ಗೆ ಪ್ರಶ್ನಿಸುವ ಅಥವಾ ಸಮಸ್ಯೆಯನ್ನು ಆಲಿಸುವ ಕೆಲಸವನ್ನು ರಾಜ್ಯ ಬಿಜೆಪಿಯ ಯಾವೊಬ್ಬರೂ ಮಾಡದಿರುವುದೇ ದಿನದಿಂದ ದಿನಕ್ಕೆ ನಾಯಕರು ಹಾಗೂ ಸಂಘಟನೆಯ ನಡುವೆ ಅಂತರ ಹೆಚ್ಚಾಗುತ್ತಿರುವುದನ್ನು ತೋರಿಸುತ್ತದೆ ಎಂದರೆ ತಪ್ಪಾಗುವುದಿಲ್ಲ.

ಈ ಎಲ್ಲ ಭಿನ್ನಮತ, ಭಿನ್ನಾಭಿಪ್ರಾಯದ ನಡುವೆ ಬಿಜೆಪಿಗರು ಇದೀಗ ಬೆಂಗಳೂರು-ಮೈಸೂರು ಪಾದಯಾತ್ರೆ ಮಾಡುವುದಾಗಿ ಘೋಷಿಸಿದ್ದಾರೆ. ಈ ಪಾದಯಾತ್ರೆಯನ್ನು ವಿಜಯೇಂದ್ರ ಆ್ಯಂಡ್ ಟೀಂ ಘೋಷಿಸುವ ಸಮಯಕ್ಕೆ ಸರಿಯಾಗಿ ಬೆಳಗಾವಿಯಲ್ಲಿ ರಮೇಶ್ ಜಾರಕಿಹೊಳಿ ಸುದ್ದಿಗೋಷ್ಠಿ ನಡೆಸಿ 'ನಾನು ಮತ್ತು ಯತ್ನಾಳ್ ಅವರು ಬಸವ ಕಲ್ಯಾಣದಿಂದ ಬಳ್ಳಾರಿಗೆ ಪಾದಯಾತ್ರೆ' ಮಾಡುವುದಾಗಿ ಘೋಷಿಸಿದ್ದಾರೆ. ಅಷ್ಟಕ್ಕೆ ನಿಲ್ಲಿಸದೇ 'ನಾವಿನ್ನು ವಿಜಯೇಂದ್ರ ಅವರನ್ನು ರಾಜ್ಯಾಧ್ಯಕ್ಷನೆಂದು ಒಪ್ಪಿಲ್ಲ, ನಾವೇನಿದ್ದರೂ ಪಕ್ಷದ ವರಿಷ್ಠರ ಸೂಚನೆಯನ್ನು ಪಾಲಿಸುವುದಷ್ಟೇ' ಎನ್ನುವ ಮೂಲಕ ಭಿನ್ನರಾಗವಿರುವುದನ್ನು ಮತ್ತೊಮ್ಮೆ ಪ್ರಕಟಿಸಿದ್ದಾರೆ. ಈ ಎಲ್ಲ ಬೆಳವಣಿಗೆ ನಡೆದರೂ, ವಿಜಯೇಂದ್ರ ಅವರಾಗಲಿ, ಅಶೋಕ್ ಅವರಾಗಲಿ ಕೂತು ಮಾತನಾಡುವ ಪ್ರಯತ್ನವನ್ನು ಮಾಡಿಲ್ಲ. (ಅಥವಾ ಈಗಾಗಲೇ ಕೂತು ಮಾತನಾಡುವ ಹಂತ ಮೀರಿ ಹೋಗಿದೆಯೋ ಎನ್ನುವುದನ್ನು ಬಿಜೆಪಿಗರೇ ಹೇಳಬೇಕು).

ಯಾವುದೇ ಪಕ್ಷ ಅಧಿಕಾರದಲ್ಲಿದ್ದಾಗ ಮಾತ್ರ ಪ್ರಬಲವಾಗಿರುತ್ತದೆ ಎಂದು ಹೇಳಲಾಗುವುದಿಲ್ಲ, ಆಡಳಿತ-ಪ್ರತಿಪಕ್ಷದಲ್ಲಿ ಕುಳಿತುಕೊಳ್ಳುವುದು ರಾಜಕೀಯವಾಗಿ ಸರ್ವೇ ಸಾಮಾನ್ಯ. ಆದರೆ ಪ್ರತಿಪಕ್ಷದಲ್ಲಿದ್ದಾಗ ಯಾವ ರೀತಿಯಲ್ಲಿ ಇರುತ್ತೇವೆ ಎನ್ನುವುದು ರಾಜಕೀಯ ಪಕ್ಷಕ್ಕೆ ಮುಖ್ಯ. ಕೆಲ ದಶಕದ ಹಿಂದೆ ಇದೇ ಬಿಜೆಪಿಯ ಸಂಖ್ಯಾಬಲ ಒಂದಕ್ಕಿ ದಾಟುತ್ತಿರಲಿಲ್ಲ. ಆದರೆ ಸದನದಲ್ಲಿ ಮಾತ್ರ ಆಡಳಿತ ಪಕ್ಷವನ್ನು ಇಕ್ಕಟ್ಟಿಗೆ ಸಿಲುಕಿಸುವಲ್ಲಿ ಎಂದೂ ಹಿಂದೆ ಬಿದ್ದಿರಲಿಲ್ಲ. ಆಗಿನ ಸಂಖ್ಯೆಗೆ ಹೋಲಿಸಿದರೆ, ಸದ್ಯ ಬಿಜೆಪಿ ಉತ್ತಮ ಸಂಖ್ಯಾಬಲವೇ ಹೊಂದಿದೆ. ಬಿಜೆಪಿ-ಜೆಡಿಎಸ್ ಇಂದಿಗೂ ವಿಧಾನಪರಿಷತ್‌ನಲ್ಲಿ 'ಬಹುಮತ'ವನ್ನು ಹೊಂದಿವೆ. ಆದರೂ ಹೋರಾಟದಲ್ಲಿ ವಿಫಲವಾಗುತ್ತಿರುವುದಕ್ಕೆ ನಾಯಕರ ಹೊಂದಾಣಿಕೆ ಕೊರತೆ ಹೊರತು ಇನ್ನಾವುದೇ ಸಮಸ್ಯೆಯಿಲ್ಲ.

ಮೊದಲ ಸಾಲಿನಲ್ಲಿ ಕೂರುವ ನಾಯಕರು ಪಕ್ಷದೊಳಗೆ ಹೊಂದಾಣಿಕೆ ಮಾಡಿಕೊಳ್ಳುವುದನ್ನು ಬಿಟ್ಟು, ಆಡಳಿತ ಪಕ್ಷದೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುತ್ತಿರುವುದು ರಾಜ್ಯ ಬಿಜೆಪಿಯ ದುರಂತ. ಹೊಂದಾಣಿಕೆ ರಾಜಕೀಯವನ್ನು ಬಿಟ್ಟು, ಇನ್ನಾದರೂ ಪಕ್ಷ ಸಂಘಟನೆ, ಪಕ್ಷದೊಳಗಿರುವ ಗೊಂದಲಗಳನ್ನು ಸರಿಪಡಿಸಿಕೊಳ್ಳುವಲ್ಲಿ ಗಮನಹರಿಸಬೇಕಿದೆ. ಈ ನಿಟ್ಟಿನಲ್ಲಿ ರಾಜ್ಯ ನಾಯಕರನ್ನು 'ತಿವಿಯುವ' ಕೆಲಸವನ್ನು ಪಕ್ಷದ ವರಿಷ್ಠರಿಂದ ಮಾತ್ರ ಸಾಧ್ಯ. ಈ ಹಂತದಲ್ಲಿಯೂ ಬಿಜೆಪಿ ವರಿಷ್ಠರು 'ಕಾದು ನೋಡೋಣ' ಎನ್ನುವ ಮನಸ್ಥಿತಿಯಲ್ಲಿಯೇ ಮುಂದುವರೆದರೆ, ಪಕ್ಷದಲ್ಲಿ ಈಗಿರುವ ಅಳಿದುಳಿದ ಸಂಘಟನೆಯೂ ಕಾಣೆಯಾಗುವುದರಲ್ಲಿ ಅನುಮಾನವಿಲ್ಲ.

ಬಜೆಟ್ ವಿಚಾರದಲ್ಲೂ ವಿಭಜಕ ನೀತಿ ಏಕೆ?

ಅಭಿಮತ

ಪ್ರಕಾಶ್ ಶೇಷರಾಘವಾಚಾರ್

sprakashbjpgmail.com

ನಮ್ಮ ರಾಜಕೀಯ ವ್ಯವಸ್ಥೆಯಲ್ಲಿ ಮುಂಗಡ ಪತ್ರವನ್ನು ಪಕ್ಷ ರಾಜಕೀಯದಿಂದ ಹೊರಬಂದು ವಸ್ತುನಿಷ್ಠೆಯಿಂದ ವಿಶ್ಲೇಷಣೆ ಮಾಡುವ ಪದ್ಧತಿಯೇ ಇಲ್ಲ. ಆಡಳಿತ ಮತ್ತು ವಿರೋಧ ಪಕ್ಷಗಳ ನಾಯಕರು ಅಪ್ಪ ಹಾಕಿದ ಆಲದ ಮರಕ್ಕೇ ಜೋತು ಬೀಳುತ್ತಾರೆ.

ಈ ಬಾರಿ ಹೊಸ ರಾಗವೊಂದು ಹಾಡಲು ಆರಂಭಿಸಿದೆ. ಅದು 'ನಮ್ಮ ರಾಜ್ಯಕ್ಕೇನು ಕೊಟ್ಟಿಲ್ಲ ಓಟು ನಮ್ಮದು ಯೋಜನೆ ಬೇರಯವರದ್ದು' ಎಂಬ ವರಸೆ. ಈಗಾಗಲೇ ಪ್ರಾದೇಶಿಕತೆಯ ಹೆಸರಲ್ಲಿ ದೇಶದ ಏಕತೆಗೆ ಧಕ್ಕೆ ತರುವ ಹಲವಾರು ಪ್ರಚೋದನಕಾರಿ ಶಕ್ತಿಗಳು ಕೆಲಸ ಮಾಡುತ್ತಿರುವಾಗ, ಮುಂಗಡವನ್ನು ರಾಜಕೀಯಕರಣಗೊಳಿಸಿ ನಮಗೇನು ಇಲ್ಲ ಎನ್ನುವ ತಪ್ಪು ಮಾಹಿತಿಯು ನೀಡಿ ಉರಿಯುವ ಬೆಂಕಿಗೆ ತುಪ್ಪ ಸುರಿಯುತ್ತಿದ್ದಾರೆ.

ಕಳೆದ 75 ವರ್ಷದ ಇತಿಹಾಸದಲ್ಲಿ ಮುಂಗಡ ಪತ್ರವು ರಾಜ್ಯ ಕೇಂದ್ರೀಕೃತವಾಗಿ ಮಂಡನೆಯಾಗಿಲ್ಲ. 2024-25 ಮುಂಗಡ ಪತ್ರವು ಕೂಡಾ ಇದರಿಂದ ಭಿನ್ನವಾಗಿಲ್ಲ, ಆದರೆ ಭಿನ್ನವಾಗಿ ವರ್ತಿಸುತ್ತಿರುವುದು ಕಾಂಗ್ರೆಸ್ ಪಾರ್ಟಿ. ದೇಶದಲ್ಲಿ 55 ಮುಂಗಡ ಪತ್ರವನ್ನು ಮಂಡಿಸಿರುವ ಕಾಂಗ್ರೆಸ್‌ಗೆ ಮುಂಗಡ ಪತ್ರದ ಆದ್ಯತೆಯ ಬಗ್ಗೆ ಗೊತ್ತಿದೆ ಆದರೆ ರಾಹುಲ್ ಗಾಂಧಿಯವರು ಇತ್ತೀಚಿನ ದಿನಗಳಲ್ಲಿ ಸುಳ್ಳು ವಿಷಯವನ್ನು ಹಬ್ಬಿಸುವ ಮೂಲಕ ಪ್ರಚೋದನಕಾರಿ ರಾಜಕೀಯ ತಂತ್ರಗಾರಿಕೆಯನ್ನು ಅಳವಡಿಸಿಕೊಂಡಿದ್ದಾರೆ.

ಆಂಧ್ರಪ್ರದೇಶ ರಾಜ್ಯ ವಿಂಗಡಣೆಯ ಒಪ್ಪಂದ ಪ್ರಕಾರ ಕಾನೂನಾತ್ಮಕವಾಗಿ ವಿಶೇಷ ಸವಲತ್ತು ಒದಗಿಸಬೇಕಾಗಿದೆ. ಸಂವಿಧಾನಾತ್ಮಕ ಭಾಧ್ಯತೆಯನ್ನು ಕೇಂದ್ರ ಸರಕಾರ ಪೂರೈಸುತ್ತಿದೆ. ಕಾಂಗ್ರೆಸ್ ವಕ್ತಾರ ಜೈರಾಮ್ ರಮೇಶ್ ರವರು ಬಜೆಟ್ ಮುನ್ನ ಆಂಧ್ರಕ್ಕೆ ವಿಶೇಷ ಅನುದಾನ ನೀಡಲು ಬೆಂಬಲಿಸಿದ್ದರು, ಆದರೆ ಈಗ ಕುರ್ಸಿ ಬಚಾವ್ ಬಜೆಟ್ ಎಂದು ಲೇವಡಿ ಮಾಡುತ್ತಿದ್ದಾರೆ.

2012-13 ರಲ್ಲಿ ಯುಪಿಎ ಸರಕಾರವು ಸ್ಟಾರ್ಟ್ ಅಪ್ ಕಂಪನಿಗಳಲ್ಲಿ ವಿದೇಶಿ ಬಂಡವಾಳ ಹೂಡಿಕೆಯ ಮೇಲೆ ಶೇ.30ರಷ್ಟು ತೆರಿಗೆ ವಿಧಿಸುವ ಏಂಜಲ್ ಟ್ಯಾಕ್ಸ್ ವಿಧಿಸಿದ್ದರು. ಬಂಡವಾಳಕ್ಕೆ ಪರದಾಡುವ ನವ ಉದ್ದಿಮೆಗಳ ಮೇಲೆ ಇದೊಂದು ಹೊರಲಾರದ ಹೊರೆಯಾಗಿತ್ತು. ಅಂತಿಮವಾಗಿ ತಡವಾಗಿಯಾದರೂ ಈ ಬಾರಿಯ ಮುಂಗಡ ಪತ್ರದಲ್ಲಿ ಏಂಜಲ್ ಟ್ಯಾಕ್ಸ್ ರದ್ದು ಪಡಿಸಲಾಗಿದೆ. ಇದನ್ನು ರದ್ದು ಪಡಿಸಲು ಕೇಂದ್ರ ಸರಕಾರ ಹತ್ತು ವರ್ಷ ವಿಳಂಬ ಮಾಡಬೇಕಿತ್ತಾ ಎಂಬ ಪ್ರಶ್ನೆ ಸಹಜವಾಗಿ ಕಾಡುತ್ತದೆ.

ಮುಂಗಡ ಪತ್ರದಲ್ಲಿ ಘೋಷಿಸಿರುವ ಗಮನ ಸೆಳೆಯುವ ಯೋಜನೆಯೆಂದರೆ ದೇಶದ ಪ್ರತಿಷ್ಠಿತ 500 ಕಂಪನಿಗಳಲ್ಲಿ ಒಂದು ಕೋಟಿ ಯುವಕ ಮತ್ತು ಯುವತಿಯರಿಗೆ ಇಂಟರ್ನ್‌ಶಿಪ್‌ಗೆ ಅವಕಾಶ ಕಲ್ಪಿಸಲು ಉದ್ದೇಶಿಸಿರುವುದು. ಈ ಯೋಜನೆಯಿಂದ ಯುವಕರು ಪ್ರತಿಷ್ಠಿತ ಕಂಪನಿಗಳಲ್ಲಿ ಕೌಶಲ್ಯ ಪಡೆದು ತರಬೇತಿಯ ಅವಧಿ ಮುಗಿದ ತರುವಾಯ ಹಲವರು ಅದೇ ಸಂಸ್ಥೆಯಲ್ಲಿ ಮುಂದುವರೆಯುವ ಅವಕಾಶ ಲಭ್ಯವಾಗಬಹುದು ಅಥವಾ ಮಧ್ಯಮ ಮತ್ತು ಸಣ್ಣ ಕೈಗಾರಿಕೆಗಳಲ್ಲಿ ಇದರಿಂದ ಕೆಲಸ ಪಡೆಯಲು ಸಹಾಯವಾಗುವುದು. ಮಧ್ಯಮ ಮತ್ತು ಸಣ್ಣ ಕೈಗಾರಿಕೆಗಳಿಗೆ ಸುಲಭವಾಗಿ ತರಬೇತಿ ಪಡೆದ ನುರಿತ ಉದ್ಯೋಗಿಗಳು ದೊರೆಯುವುದರಿಂದ ಅವರಿಗೆ ತಾತ್ಕಾಲಿಕವಾಗಿ ನೇಮಕಾತಿ ಮಾಡಿಕೊಂಡು ತರಬೇತಿ ನೀಡುವ ಕಷ್ಟವು ಇಲ್ಲವಾಗುತ್ತದೆ.

ಮಧ್ಯಮ ವರ್ಗಕ್ಕೆ ಮುಂಗಡ ಪತ್ರದಿಂದ ಲಾಭವಾಗಿಲ್ಲ ಎಂದು ಸಾಮಾಜಿಕ ತಾಣದಲ್ಲಿ ಆಕ್ರೋಶ ವ್ಯಕ್ತವಾಗುತ್ತಿದೆ. ಅವರ ವಾದ ನಾವು ಸಂಬಳದಾರರು ನಿಯತ್ತಿನಿಂದ ಆದಾಯ ತೆರಿಗೆ ಪಾವತಿ ಮಾಡುತ್ತೇವೆ. ಹೀಗಾಗಿ ನಮ್ಮ ಮೇಲೆ ಎಲ್ಲ ಹೊರೆ ಹೊರೆಸುತ್ತಾರೆ. ಆದರೆ ಲಕ್ಷಾಂತರ ಉದ್ದಿಮೆದಾರರು ವಾರ್ಷಿಕವಾಗಿ 25 ಲಕ್ಷಕ್ಕೂ ಹೆಚ್ಚು ಸಂಪಾದಿಸುತ್ತಿದ್ದರು ಅವರು ನಯಾಪೈಸೆ ಆದಾಯ ತೆರಿಗೆ ಪಾವತಿಸುವುದಿಲ್ಲ ಮತ್ತು ಇವರನ್ನು ಆದಾಯ ತೆರಿಗೆ ವ್ಯಾಪ್ತಿಗೆ ತರುವ ಯಾವುದೇ ಪ್ರಯತ್ನ ನಡೆಯುವುದಿಲ್ಲ, ಎಂಬುದು ಪ್ರಾಮಾಣಿಕವಾಗಿ ತೆರಿಗೆ ಪಾವತಿಸುವವರ ವಾದ. ನಮ್ಮ ವ್ಯವಸ್ಥೆಯಲ್ಲಿನ ದೋಷದ ಕಾರಣ ಪರಿಸ್ಥಿತಿಯಲ್ಲಿ ಬದಲಾವಣೆ ಕಾಣದೆ ಮುಂದುವರೆದಿರುವುದರಿಂದ ಅವರ ಆಕ್ರೋಶವು ನ್ಯಾಯಯುತವಾಗಿದೆ.

ದೇಶದಲ್ಲಿ ಆದಾಯ ತೆರಿಗೆ ರಿಟರ್ನ್ಸ್ ಸಲ್ಲಿಸುವವರು 8.1ಕೋಟಿ ಜನ ಅದರಲ್ಲಿ ಶೇಕಡಾ 50ರಷ್ಟು ಜನ ಮಾತ್ರ ತೆರಿಗೆ ಪಾವತಿ ಮಾಡುವುದು. ಹೊಸ ತೆರಿಗೆಯ ಪದ್ಧತಿ ಅಳವಡಿಸಿಕೊಂಡರೆ 7.75 ಲಕ್ಷ ರು. ಆದಾಯದ ವರೆಗೂ ತೆರಿಗೆ ವಿನಾಯತಿ ದೊರೆಯುತ್ತದೆ. ಕಳೆದ ಬಾರಿ 7.5 ಲಕ್ಷ ರು.ನವರೆಗೂ ವಿನಾಯಿತಿ ದೊರೆತಿತ್ತು. ಅಂದರೆ ಮಾಸಿಕ 60 ಸಾವಿರ ರು. ಸಂಬಳ ಪಡೆಯುವವರು ಯಾವುದೇ ತೆರಿಗೆಯನ್ನು ಕಟ್ಟುವ ಅಗತ್ಯವಿಲ್ಲ. ಯುಪಿಎ ಅವಧಿಯಲ್ಲಿ ತೆರಿಗೆ ವಿನಾಯತಿ ದೊರೆಯುತ್ತಿದ್ದಿದ್ದು ಕೇವಲ 2ಲಕ್ಷಕ್ಕೆ ರು.ಗೆ ಮಾತ್ರ. ಆದರೆ, ಬಿಜೆಪಿ ಅವಧಿಯಲ್ಲಿ 7.75 ಸಾವಿರ ರು. ವಾಗಿದೆ.

ಈ ಬಾರಿಯ ಮುಂಗಡ ಪತ್ರದಲ್ಲಿ ದೀರ್ಘಾವಧಿ ಶೇರು ಹೂಡಿಕೆಯ ಮೇಲಿನ ಲಾಭದ ಮೇಲೆ ಕ್ಯಾಪಿಟಲ್ ಗೇನ್ಸ್ ತೆರಿಗೆಯನ್ನು ಶೇ.15 ರಿಂದ 20 ಕ್ಕೆ ಹೆಚ್ಚಳ ಮಾಡಲಾಗಿದೆ. ಹಾಗೆಯೇ ಅಲ್ಪಾವಧಿ ಶೇರು ಹೂಡಿಕೆಯ ಮೇಲಿನ ಲಾಭದ ಮೇಲೆ ಕ್ಯಾಪಿಟಲ್ ಗೇನ್ಸ್ ತೆರಿಗೆಯನ್ನು ಶೇಕಡಾ 10 ರಿಂದ 12.5 ಕ್ಕೆ ಹೆಚ್ಚಳ ಮಾಡಲಾಗಿದೆ.

ಶೇರು ಹೂಡಿಕೆಯ ಮೇಲಿನ ಲಾಭದ ಮೇಲೆ ಹೆಚ್ಚಿಸಿರುವ ಈ ಅಲ್ಪ ತೆರಿಗೆಯು ವ್ಯಾಪಕ ಟೀಕೆಗೆ ಕಾರಣವಾಗಿದೆ. ಮಧ್ಯಮ ವರ್ಗದಿಂದ ಶೇರು ಮಾರುಕಟ್ಟೆಗೆ ಮಹತ್ವಾಕಾಂಕ್ಷೆಯ ಭಾರತೀಯರು ಪ್ರವೇಶಿಸಿದ್ದಾರೆ. ಅವರಿಗೆ ಶೇ.2.5 ದೀರ್ಘಾವಧಿಯ ಬಂಡವಾಳದ ಲಾಭಗಳ ಮೇಲಿನ ಹೆಚ್ಚುವರಿ ತೆರಿಗೆಯು ಹಾನಿಕಾರಕವೆಂದು ಭಾವಿಸುತ್ತಾರೆ. ವಿತ್ತ ಸಚಿವರು ಇದನ್ನು ಮುಟ್ಟದಿದ್ದರೆ ಸೂಕ್ತವಾಗಿತ್ತು. ಉತ್ತಮ ಅಂಶಗಳ ಬಗ್ಗೆ ಚರ್ಚೆಗಿಂತ ಶೇ.2.5 ಹೆಚ್ಚಳದ ಬಗ್ಗೆಯೇ ಇಂದು ಹೆಚ್ಚು ಸದ್ದು ಕೇಳುತ್ತಿದೆ. ಆರ್ಥಿಕ ತಜ್ಞೆ ಕೃಪಾ ವೆಂಕಟೇಶ್ ರವರು ನಿರ್ಮಲಾರವರು ಉತ್ತಮವಾದ ಬಜೆಟ್ ಮಂಡಿಸಿದ್ದಾರೆ ಆದರೆ ಹೊಸ ತೆರಿಗೆ ಪದ್ಧತಿಯನ್ನು ಮತ್ತಷ್ಟು ಆಕರ್ಷಣೀಯ ಮಾಡಬೇಕಿತ್ತು ಮತ್ತು ಇಕ್ವಿಟಿ ಮೇಲಿನ ತೆರಿಗೆ ಹೆಚ್ಚಳ ಮಾಡಿದ್ದು ಸರಿಯಲ್ಲ ಎನ್ನುತ್ತಾರೆ.

ಮುಂಗಡ ಪತ್ರದಲ್ಲಿ ಪ್ರವಾಸೋದ್ಯಮಕ್ಕೆ ಆದ್ಯತೆ ಇಲ್ಲವಾಗಿದೆ. ಮಂದಿರ ಪ್ರವಾಸೋದ್ಯಮಕ್ಕೆ ಉತ್ತೇಜಿಸಲು ಮತ್ತಷ್ಟು ಪ್ರಮುಖ ಪುಣ್ಯಕ್ಷೇತ್ರಗಳನ್ನು ಪರಿಗಣಿಸಿ ಅನುದಾನ ನೀಡುವ ಅಗತ್ಯವಿತ್ತು.

23-24 ರಲ್ಲಿ ಮೊದಲ ಬಾರಿಗೆ ಬ್ಯಾಂಕಿಂಗ್ ಕ್ಷೇತ್ರವು ನಿವ್ವಳ 3 ಲಕ್ಷ ಕೋಟಿ ರು. ಲಾಭಗಳಿಸಿದೆ. ನಷ್ಟದಲ್ಲಿದ್ದ ರಾಷ್ಟ್ರೀಕೃತ ಬ್ಯಾಂಕ್‌ಗಳು ಭರ್ಜರಿಯಾದ ಲಾಭದತ್ತ ಮುಖ ಮಾಡಿದೆ. 23-24ರಲ್ಲಿ ದಾಖಲೆಯ 1.4ಲಕ್ಷಕೋಟಿ ರು. ಲಾಭ ಗಳಿಸಿದೆ. ಸಾಲ ವಸೂಲಿಯಲ್ಲಿಯೂ ಪರಿಣಾಮಕಾರಿ ಕ್ರಮಗಳಿಂದ ಬ್ಯಾಂಕ್‌ಗಳ ಆರೋಗ್ಯ ಸುಧಾರಿಸಿದೆ ಇದರಿಂದ ಉದ್ದಿಮೆ ಆರಂಭಿಸುವವರಿಗೆ ಹೆಚ್ಚಿನ ಸಾಲ ದೊರೆಯಲು ಅನುಕೂಲವಾಗುತ್ತಿದೆ.

ಕೇವಲ ಬ್ಯಾಂಕ್‌ಗಳು ಲಾಭಗಳಿಸುತ್ತಿಲ್ಲ ಮೋದಿ ಸರಕಾರದಲ್ಲಿ ಸಾರ್ವಜನಿಕ ಉದ್ದಿಮೆಗಳು ಬ್ಲೂಚಿಪ್ ಕಂಪನಿಗಳಾಗಿ ಪರಿವರ್ತಿತವಾಗುತ್ತಿದೆ. ಒಂದು ಕಾಲದಲ್ಲಿ ರೋಗಗ್ರಸ್ತ ಉದ್ದಿಮೆ ಎಂದು ಹಣೆ ಪಟ್ಟಿ ಹೊಡೆದುಕೊಂಡಿದ್ದ ಸಂಸ್ಥೆಗಳು ಇಂದು ಶೇರು ಮಾರುಕಟ್ಟೆಯಲ್ಲಿ ಹೂಡಿಕೆದಾರರಿಗೆ ಲಕ್ಷಾಂತರ ರುಪಾಯಿ ಲಾಭವನ್ನು ತಂದು ಕೊಡುತ್ತಿದೆ. ಶೇರು ಮಾರುಕಟ್ಟೆಯಲ್ಲಿ ನೊಂದಣಿಯಾಗಿರುವ ಯಾವುದೇ ಸಾರ್ವಜನಿಕ ಉದ್ದಿಮೆಗಳ ಶೇರಿನಿಂದ ಹೂಡಿಕೆದಾರರಿಗೆ ನಷ್ಟವುಂಟಾಗಿಲ್ಲ. ಕಳೆದ ಹತ್ತು ವರ್ಷದಲ್ಲಿ ಕೈಗೊಂಡಿರುವ ಸುಧಾರಣೆಯಿಂದ ಉದ್ದಿಮೆಗಳು ಲಾಭದಾಯಕವಾಗಿ ನಡೆಯುತ್ತಿದೆ.

ಮುಂಗಡ ಪತ್ರದಲ್ಲಿ ಕರ್ನಾಟಕಕ್ಕೆ ಅನ್ಯಾಯ ಮಾಡಿ ಚೊಂಬು ಕೊಟ್ಟಿದ್ದಾರೆ ಎಂದು ಸಿದ್ದರಾಮಯ್ಯನವರು ತಮ್ಮ ಹಳೆಯ ಚೊಂಬು ರಾಗವನ್ನು ಮತ್ತೇ ಹಾಡಿದ್ದಾರೆ.

ಈಗಾಗಲೇ ಕೇಂದ್ರ ಸರಕಾರ ಬೆಂಗಳೂರು ಉಪನಗರ ರೈಲು ನಿರ್ಮಾಣಕ್ಕೆ 6,000 ಕೋಟಿ ರು. ಕೊಡುತ್ತಿದೆ. ಈ ವರ್ಷ 350 ಕೋಟಿ ರು. ನೀಡಲು ಅನುಮೋದಿಸಿದೆ. 24-25 ರಲ್ಲಿ ರಾಜ್ಯದ ರೈಲು ಯೋಜನೆಗಳಿಗೆ 7,559 ಕೋಟಿ ರು. ಅನುಮೋದನೆ ದೊರೆತಿದೆ. ಬೆಂಗಳೂರು ಮೆಟ್ರೋ ಯೋಜನೆಗೆ ಕೇಂದ್ರ ಅನುದಾನ ಭೂ ಸ್ವಾಧೀನಕ್ಕೆ, ತೆರಿಗೆ ವಿನಾಯತಿ ಮತ್ತು ಇಕ್ವಿಟಿ ಮೂಲಕ ಬಂಡವಾಳ ಹೂಡಿಕೆಗೆ ಬೆಂಬಲಿಸುತ್ತಿದೆ.

ರಾಷ್ಟ್ರೀಯ ಹೆದ್ದಾರಿ ಸಚಿವ ನಿತಿನ್ ಗಡ್ಕರಿಯವರು 'ರಾಜ್ಯದಲ್ಲಿ ರಸ್ತೆ ನಿರ್ಮಾಣ ಮಾಡಲು 2ಲಕ್ಷ ಕೋಟಿ ರು. ಕೊಡಲು ಸಿದ್ಧ, ರಾಜ್ಯ ಸರಕಾರ ಭೂಸ್ವಾಧೀನ ಮಾಡಿ ಕೊಡಿ' ಎಂದು ತಿಳಿಸಿದ್ದಾರೆ. ಚೆನ್ನೈ ಮತ್ತು ಬೆಂಗಳೂರು ಇಂಡಸ್ಟ್ರಿಯಲ್ ಕಾರಿಡಾರ್ ತರುವಾಯ ಈ ಬಾರಿ ಹೈದರಾಬಾದ್ ಮತ್ತು ಬೆಂಗಳೂರು ಕೈಗಾರಿಕಾ ಕಾರಿಡಾರ್ ಘೋಷಿಸಲಾಗಿದೆ. ಇದರ ಲಾಭ ಕೋಲಾರ ಚಿಕ್ಕಬಳ್ಳಾಪುರ ಮತ್ತು ತುಮಕೂರು ಜಿಲ್ಲೆಗಳಲ್ಲಿ ಉದ್ಯೋಗ ಸೃಷ್ಟಿಗೆ ಸಹಕಾರಿಯಾಗುವುದು.

ಕೇಂದ್ರದ ಮುಂಗಡ ಪತ್ರದಲ್ಲಿ 11 ಲಕ್ಷ ಕೋಟಿ ರು. ಮೂಲ ಸೌಕರ್ಯ ಅಭಿವೃದ್ಧಿ ಯೋಜನೆಗಳಿಗೆ ನಿಗದಿಯಾಗಿದೆ. ರಾಜ್ಯ ಸರಕಾರ ತ್ವರಿತವಾಗಿ ಪ್ರಸ್ತಾವನೆಗಳನ್ನು ಸಲ್ಲಿಸಿ ಗರಿಷ್ಠ ಅನುದಾನ ಪಡೆಯಲು ಗಮನ ನೀಡಬೇಕು. ಮೂರು ಕೋಟಿ ಮನೆಗಳ ನಿರ್ಮಾಣಕ್ಕೆ ಅನುದಾನ ಮೀಸಲಿದೆ ಇದರ ಗರಿಷ್ಠ ಲಾಭ ರಾಜ್ಯ ಸರಕಾರ ಪಡೆಯಬೇಕು. ಕೇಂದ್ರ ಸರಕಾರ ಘೋಷಿಸುವ ಪ್ರತಿಯೊಂದು ಯೋಜನೆಗಳು ಎಲ್ಲ ರಾಜ್ಯಗಳಿಗೆ ಲಾಭವಾಗುವುದು ಅದನ್ನು ಪಡೆದುಕೊಳ್ಳುವ ಜಾಣ್ಮೆ ರಾಜ್ಯ ಸರಕಾರ ತೋರಬೇಕಾಗಿದೆ.

ನಾಳೆಯೇ ಪ್ರಧಾನಿಯಾಗಲು ಹಾತೊರೆಯುತ್ತಿರುವ ರಾಹುಲ್ ಗಾಂಧಿಯವರು ಕೇಂದ್ರ ಮತ್ತು ರಾಜ್ಯಗಳ ಸಂಬಂಧಕ್ಕೆ ಹುಳಿ ಹಿಂಡಲು ಇದೊಂದು ಎನ್‌ಡಿಎ ಬಜೆಟ್ ಭಾರತದ ಬಜೆಟ್ ಅಲ್ಲ ಎಂದು ಟೀಕಿಸಿದ್ದಾರೆ. ಟೀಕೆ ಮಾಡುವ ಮುನ್ನ ತಮ್ಮ ಸರಕಾರ ಇಲ್ಲಿಯತನಕ ಮಂಡಿಸಿರುವ 55 ಮುಂಗಡ ಪತ್ರಗಳ ಹಣೆಬರಹವನ್ನು ಓದಬೇಕಿತ್ತು ಆದರೆ ಅವರಿಗೆ ಪ್ರಚೋದಿಸಿ ತಮ್ಮ ರಾಜಕೀಯ ಬೇಳೆ ಬೇಯಿಸಿಕೊಳ್ಳುವುದು ಮುಖ್ಯವಾಗಿರುವುದು ದುರಂತದ ಸಂಗತಿ.

ಓದುಗರ ಓಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಜನಪ್ರತಿನಿಧಿಗಳ ಬೃಹನ್ನಾಟಕ

ರಾಜ್ಯದಲ್ಲಿ ಕಾಂಗ್ರೆಸ್, ಬಿಜೆಪಿ ಮತ್ತು ಜೆಡಿಎಸ್ ನಡುವೆ ಒಳ ಒಪ್ಪಂದವಿದೆ ಮತ್ತು ಮುಡಾ ಹಾಗೂ ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣಗಳು ಬೆಳಕಿಗೆ ಬರುತ್ತಿದ್ದಂತೆ, ತಮ್ಮ ಪಕ್ಷದ ಸರಕಾರ ರಚನೆಯಾಗಿ 14 ತಿಂಗಳನಂತರ ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿಯವರು ಬಿಜೆಪಿ ಅವಧಿಯಲ್ಲಿ ನಡೆದ ಹಗರಣಗಳ ಬಗ್ಗೆ ಮಾತನಾಡುತ್ತಿರುವುದು ಹಾಸ್ಯಾಸ್ಪದವೆಂಬ ಬಿಜೆಪಿ ನಾಯಕ ಶಾಸಕ ಬಸನಗೌಡ ಪಾಟೀಲರ ಹೇಳಿಕೆ, ಸಾಮಾನ್ಯವಾಗಿ ಬಹುತೇಕ ನಾಗರಿಕರ ಅನಿಸಿಕೆಯೇ. ವಕ್ಫ್ ಆಸ್ತಿ ಕಬಳಿಕೆ ಕುರಿತ ಅನ್ವರ್ ಮಾನಿಪ್ಪಾಡಿ ವರದಿ, ನೈಸ್ ಸಂಸ್ಥೆಯ ಅಕ್ರಮ ಕುರಿತ ಸದನ ಸಮಿತಿಯ ವರದಿ, ಅರ್ಕಾವತಿ ಡಿನೋಟಿಫಿಕೇಷನ್ನಿಗೆ ಸಂಬಂಧಿಸಿದ ರೀಡೂ ಕುರಿತ ನ್ಯಾಯಮೂರ್ತಿ ಕೆಂಪಣ್ಣ ಆಯೋಗದ ವರದಿ, ಜಿ ಕ್ಯಾಟಗರಿ ನಿವೇಶನಗಳ ಅಕ್ರಮ ಹಂಚಿಕೆ ಕುರಿತ ವರದಿ, ಇತ್ಯಾದಿಗಳೆಲ್ಲವೂ, ದಶಕಗಳಿಂದಲೇ ತಾರ್ಕಿಕ ಅಂತ್ಯ ಕಾಣದೆ ನನೆಗುದಿಗೆ ಬಿದ್ದಿದ್ದರೂ, ಸದನದಲ್ಲಿ ಪ್ರಸ್ತಾಪವೇ ಆಗದಿರುವುದು, ಕೆಲವು ನೆಪ ಮಾತ್ರಕ್ಕೆ ಆಗುವುದು, ರಾಜಕೀಯ ಪಕ್ಷಗಳ ನಡುವೆ ಒಳ ಒಪ್ಪಂದವಿರುವುದಕ್ಕೆ ಪ್ರಬಲ ಸಾಕ್ಷ್ಯಗಳಲ್ಲವೇ?

ಮುಡಾ ಹಗರಣ ಕುರಿತಂತೆ, ತನಿಖೆಗಾಗಿ ಹಿರಿಯ ಅಧಿಕಾರಿಗಳ ಸಮಿತಿ ರಚಿಸಿದ್ದ ಸರಕಾರ, ಏಕಾಏಕಿ ಅಧಿವೇಶನ ಪ್ರಾರಂಭವಾಗುವ ಮುನ್ನಾ ದಿನ, ಸರಕಾರ ಉಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶರ ಸಮಿತಿ ರಚಿಸುತ್ತದೆ, ಸದನದಲ್ಲಿ ವಿಷಯ ಪ್ರಸ್ತಾಪವಾಗುತ್ತಿದ್ದಂತೆ ಗದ್ದಲ, ವಾಕ್ಸಮರ, ಅಹೋರಾತ್ರಿ ಧರಣಿ, ನಿಗದಿತ ದಿನಕ್ಕಿಂತ ಒಂದು ದಿನ ಮುಂಚೆಯೇ ಅಧಿವೇಶನದ ಮುಕ್ತಾಯ, ನಂತರ ಬೆಂಗಳೂರಿನಿಂದ ಮೈಸೂರಿಗೆ ಪ್ರತಿಪಕ್ಷ ಪಾದಯಾತ್ರೆ ಹಮ್ಮಿಕೊಳ್ಳುವುದು, ಇದೆಲ್ಲಾ ಪೂರ್ವನಿಯೋಜಿತವಲ್ಲದೆ, ಹೊಂದಾಣಿಕೆಯಲ್ಲದೆ ಮತ್ತಿನ್ನೇನು? ಎಲ್ಲ ಹಗರಣಗಳಲ್ಲಿ, ಸಾಮಾನ್ಯವಾಗಿ ಎಲ್ಲ ಪಕ್ಷಗಳ ನೇತಾರರನೇಕರ ಪಾತ್ರವಿರುತ್ತದೆ, ಇಲ್ಲವೇ ಅವರು ಫಲಾನುಭವಿಗಳಾಗಿರುತ್ತಾರೆ. ಆ ಸತ್ಯವನ್ನು ಜನರಿಂದ ಮರೆಮಾಚಲು ಮತ್ತು ವ್ಯವಸ್ಥಿತವಾಗಿ ಮುಚ್ಚಿಹಾಕಿ ಅವರನ್ನು ಕುರಿಗಳನ್ನಾಗಿಸಲು, ಪಕ್ಷಾತೀತವಾಗಿ ಜನಪ್ರತಿನಿಧಿಗಳೆನಿಸಿಕೊಂಡವರು ಮಾಡುತ್ತಿರುವ 'ನಾನು ಹೊಡೆದಂತೆ ಮಾಡುತ್ತೇನೆ, ನೀನು ಅತ್ತಂತೆ ಮಾಡು' ಎಂಬಂತಹ ಬೃಹನ್ನಾಟಕಗಳು ಇತ್ತೀಚೆಗೆ ಹೆಚ್ಚಾಗುತ್ತಿವುದು ಪ್ರಜಾತಂತ್ರಕ್ಕೆ ಮಾರಕ.

-ತಿಪ್ಪೂರು ಪುಟ್ಟೇಗೌಡ ಬೆಂಗಳೂರು

ಅರ್ಥಗರ್ಭಿತ ಮಾತುಗಳು!

ಕೆಲವರ ಮಾತುಗಳನ್ನು ಯಾರೂ ಅಷ್ಟೊಂದು ಗಂಭೀರವಾಗಿ ತೆಗೆದುಕೊಳ್ಳುವುದೇ ಇಲ್ಲ. ಅವರು ಯಾವಾಗಲೂ ಹಾಗೇ ಎಂಬ ಶರಾ ಬೇರೆ. ಈ ಸಾಲಿಗೆ ಸೇರುವವರು ಶಾಸಕ ಬಸನಗೌಡ ಪಾಟೀಲ ಯತ್ನಾಳ ಅಂತ ಅಂದುಕೊಂಡಿದ್ದರೆ ನಾವು ಎಡವಿದ್ದೇವೆ ಎಂತಲೇ ಅರ್ಥ. ಅವರ ಕೆಲ ಮಾತುಗಳು ಎಷ್ಟೊಂದು ಅರ್ಥವತ್ತಾಗಿರುತ್ತವೆ ಎಂದರೆ ಅವುಗಳನ್ನು ತಳ್ಳಿಹಾಕಲು ಸಾಧ್ಯವೇ ಇಲ್ಲ.

ರಾಜ್ಯದಲ್ಲಿ ಕಾಂಗ್ರೆಸ್, ಬಿಜೆಪಿ, ಜೆಡಿಎಸ್ ಸೇರಿದಂತೆ ಮೂರೂ ಪಕ್ಷಗಳಲ್ಲಿ 'ಒಳ ಒಪ್ಪಂದ' ರಾಜಕೀಯ ಮಿತಿ ಮೀರಿದೆ. ಹೀಗಾಗಿ ಇವರೆಲ್ಲ ಹೊರಬಂದು ತಮ್ಮದೇ ಆದ 'ಒಳ ಒಪ್ಪಂದ ಪಕ್ಷ' ವನ್ನು ಕಟ್ಟಿಕೊಂಡರೆ ಸೂಕ್ತ ಎನ್ನುವ ಮಾತು ನಿಜ ಅನಿಸುತ್ತಿಲ್ಲವೇ? ಯತ್ನಾಳರ ಮಾತು ಹಾಸ್ಯಭರಿತವಾಗಿದ್ದು ಟಾಂಗ್ ಕೊಡುವಲ್ಲಿ ಯಶಸ್ಸು ಕಂಡೀತು ಅಂದುಕೊಂಡವರೂ ಮತ್ತೊಮ್ಮೆ ವಿಚಾರಿಸುವಂತಿದೆ. ಈಗ ಅವರು ಹೇಳಿದ್ದು ಗಂಭೀರ ವಿಷಯವೇ, ಆದರೆ ಹಾಸ್ಯಮಯವಾಗಿ ನಿರೂಪಿಸಿದಗದಾರೆ.

ಈ ಹಿಂದೆ ನಡೆದ ವಿಧಾನ ಸಭಾ ಚುನಾವಣೆ, ಈಗ ನಡೆಯುತ್ತಿರುವ ಸದನದ ಕಲಾಪಗಳನ್ನು ವೀಕ್ಷಿಸಿದರೆ ಯತ್ನಾಳರ ಮಾತಲ್ಲೂ ಹುರುಳಿದೆ ಅಂತ ಯಾರಿಗಾದರೂ ಅನಿಸಬಹುದು. ಗೆಲ್ಲುವ ಅರ್ಹತೆ ಇರದ ವ್ಯಕ್ತಿ ಸೋಲುವುದು, ಎಂತೆಂಥ ಅಸ್ತ್ರಗಳು ವಿಪಕ್ಷದವರ ಬತ್ತಳಿಕೆಯಲ್ಲಿ ಇದ್ದರೂ ಯಾವೊಂದೂ ಪ್ರಯೋಗವಾಗದೇ ಬತ್ತಳಿಕೆಯಲ್ಲೇ ಉಳಿದುಕೊಂಡಿದ್ದು, ಒಂದು ಅಸ್ತ್ರಪ್ರಯೋಗಿಸಬೇಕು ಅಂತ ಅಂದುಕೊಳ್ಳುವಾಗಲೇ, ಅದಕ್ಕೆ ಪ್ರತಿ ಅಸ್ತ್ರದ ಪ್ರಯೋಗದ ಬೆದರಿಕೆ ನೀಡಿದ್ದನ್ನು ಗಮನಿಸಿದರೆ, ಇವೆಲ್ಲ ಒಳ ಒಪ್ಪಂದದ ಪರಿಣಾಮವೇ ಎಂಬುದರಲ್ಲಿ ಸಂಶಯವೇ ಬೇಡ. ಒಬ್ಬರ ಹುಳಿಕು ಕೆದಕಲು ಹೋಗಿ ಇನ್ನೊಬ್ಬರ ಹುಳುಕೂ ಬೆಳಕಿಗೆ ಬಂದು, ಇಬ್ಬರ ಮಾನ, ಮರ್ಯಾದೆ ಹಾಳಾಗುವ ಬದಲು, ನಮ್ಮ ನಮ್ಮಲ್ಲೇ ಒಪ್ಪಂದ ಮಾಡಿಕೊಂಡು ಸುಮ್ಮನಿದ್ದುಬಿಡೋಣ ಅಂತ ಪರಸ್ಪರ ಒಪ್ಪಿದಂತೆ ಕಾಣುತ್ತಿದೆ. ನಾವೆಲ್ಲ ಜನರ 'ಸೇವೆ'ಗೆಂದೇ ಆಯ್ಕೆ ಆಗಿ ಬಂದವರು, ನಮ್ಮೊಳಗೇಕೆ ಕಲಹ, ಭಿನ್ನಾಭಿಪ್ರಾಯ ಎನ್ನುವಂತಾಗಿದೆ. ಈಗ ಹೇಳಿ, ಯತ್ನಾಳ ಅವರ ಮಾತಲ್ಲಿ ಎಷ್ಟೊಂದು ಸತ್ವವಿದೆ, ಸತ್ಯವಿದೆ ಎಂಬುದನ್ನು!

ಆದರೆ, ಇಲ್ಲೊಂದು ಸಮಸ್ಯೆ. ಯತ್ನಾಳ ಇಂತಹ ಸಂದಿಗ್ಧ ಸ್ಥಿತಿಯಲ್ಲಿ ಯಾವ ಪಕ್ಷಕ್ಕೆ ತಮ್ಮ ಬೆಂಬಲ ಸೂಚಿಸಬಹುದೆಂಬುದು!?

-ಶಂಕರನಾರಾಯಣ ಭಟ್ ಹೊನ್ನಾವರ

ಬೇಕಾಗಿದೆ ನೆರವು

ಸದ್ಯ ರಾಜ್ಯದಲ್ಲಿ ಜ್ವಲಂತ ಸಮಸ್ಯೆ ಎಂದರೆ ಎಲ್ಲರಲ್ಲಿ ಪ್ರವಾಹ ಭೀತಿ. ರಾಜ್ಯದ ಅನೇಕ ಭಾಗಗಳಲ್ಲಿ ವರುಣನ ಆರ್ಭಟದಿಂದಾಗಿ ಹಳ್ಳ ಕೊಳಗಳು ಭರ್ತಿಯಾಗಿ ಅಪಾಯಕಾರಿ ಸ್ವರೂಪ ಪಡೆದು ಕೊಂಡಿವೆ. ಜಲಾಶಯಗಳು ಭರ್ತಿಯಾಗಿ ಹೊರ ಹರಿವು ಕೂಡ ಹೆಚ್ಚಾಗಿದೆ. ಮಳೆ, ಗಾಳಿಯಿಂದ ವ್ಯಾಪಕ ಹಾನಿಯಾಗಿದ್ದು, ರೈತರು ಕಂಗಾಲಾಗಿದ್ದಾರೆ. ಜನ-ಜಾನುವಾರುಗಳು ಸಂಕಷ್ಟಕ್ಕೆ ಸಿಲುಕಿದೆ. ಅನೇಕ ಕಡೆ ಸತ್ತವರನ್ನು ಮಣ್ಣು ಮಾಡುವುದಕ್ಕೂ ಸ್ಥಳವಿಲ್ಲದಂತಾಗಿದೆ. ಕುಸಿದ ಮನೆ ಕಟ್ಟಲಾಗದೆ ಒಡಕು ಮನೆಯಲ್ಲೇ ದಿನಕಳೆಯುತ್ತಿದ್ದಾರೆ. ಜೀವ ಹಾನಿಗೊಳಗಾದವರಿಗೆ ತಡ ಮಾಡದೆ ಸರಕಾರ ಸಹಾಯಹಸ್ತ ಚಾಚಬೇಕು. ಸಂತ್ರಸ್ತರಾಗಿರುವ ಕುಟುಂಬಗಳಿಗೆ ಹೆಚ್ಚಿನ ಪರಿಹಾರ ನೀಡಲು ಕೇಂದ್ರ ಸರಕಾರವು ರಾಜ್ಯಕ್ಕೆ ವಿಶೇಷ ಆರ್ಥಿಕ ನೆರವು ನೀಡಬೇಕು. ರಾಜ್ಯ ಸರಕಾರ ಕೂಡ ಈ ಸಂಬಂಧ ಕೇಂದ್ರದ ಮೇಲೆ ಒತ್ತಡ ತರಬೇಕು. ಪರಿಹಾರ ಕಾಮಗಾರಿಗಳಿಗೆ ಹಣಕಾಸಿನ ಕೊರತೆಯಾಗದಂತೆ ಸಕಾಲಿಕ ಎಚ್ಚರಿಕೆಯನ್ನು ಸರಕಾರ ತೆಗೆದುಕೊಳ್ಳದಿದ್ದರೆ ಪರಿಸ್ಥಿತಿ ಬಿಗಡಾಯಿಸುತ್ತದೆ. ಸಚಿವರು ಮತ್ತು ಅಧಿಕಾರಿಗಳು ಮಳೆ ಹಾನಿ ಗೊಳಗಾದ ಪ್ರದೇಶಗಳಿಗೆ ತೆರಳಿ ಪರಿಸ್ಥಿತಿಯ ಉಸ್ತುವಾರಿ ನೋಡಿಕೊಳ್ಳುವ ಮೂಲಕ ನೆರೆ ಸಂತ್ರಸ್ತರಿಗೆ ಧೈರ್ಯ ತುಂಬುವ ಕೆಲಸ ಮಾಡಬೇಕಿದೆ.

-ಮಲ್ಲಮ್ಮ ವಿಜಯಪುರ

ಸುಪ್ರೀಂಗೆ ಮೆಚ್ಚುಗೆ ಇರಲಿ

ಕಳೆದೆರಡು ತಿಂಗಳಿಂದ ದೇಶದಾದ್ಯಂತ ಬಾರಿ ಚರ್ಚೆಗೆ ಒಳಗಾಗಿದ್ದ ನೀಟ್-ಯುಜಿ ಅರ್ಹತಾ ಪರೀಕ್ಷೆಯ ಪ್ರಶ್ನೆ ಪತ್ರಿಕೆ ಸೋರಿಕೆ ಹಾಗೂ ಇನ್ನಿತರ ಪರೀಕ್ಷಾ ಅಕ್ರಮಗಳಿಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್‌ನ ಕಾರ್ಯ ವೈಖರಿಯು ಪ್ರತಿಯೊಬ್ಬ ಸಾಮಾನ್ಯ ನಾಗರಿಕರನಿಗೂ ಕಾನೂನು ವ್ಯವಸ್ಥೆಯ ಮೇಲೆ ಪುನಃ ನಂಬಿಕೆಯನ್ನು ಇಡುವಂತಾಗಿದೆ. ಎನ್‌ಟಿಎ ಪರೀಕ್ಷಾ ಪ್ರಾಧಿಕಾರ ಹಾಗೂ ಕೇಂದ್ರ ಶಿಕ್ಷಣ ಮಂತ್ರಿಗಳು ಈ ವಿಷಯಕ್ಕೆ ಸಂಬಂಧಿಸಿದಂತೆ ಬೇಜವಾಬ್ದಾರಿ ಹೇಳಿಕೆ ನೀಡಿದರು ಸಹ ವಿದ್ಯಾರ್ಥಿಗಳ ಹಿತ ದೃಷ್ಟಿಯಿಂದ ಹಾಗೂ ಭಾರತದ ಪರೀಕ್ಷಾ ವ್ಯವಸ್ಥೆಯನ್ನು ಬಲ ಪಡಿಸುವ ನಿಟ್ಟಿನಲ್ಲಿ ನ್ಯಾ.ಚಂದ್ರಚೂಡ್ ಎಲ್ಲರಲ್ಲೂ ಭರವಸೆ ಮೂಡಿಸಿದ್ದಾರೆ. ನೀಟ್ ಆರೋಪಿಗಳ ಬಂಧನ ಹಾಗೂ ನೀಟ್ ಪರಿಷ್ಕೃತ ಫಲಿತಾಂಶ ಬಿಡುಗಡೆಯಿಂದಾಗಿ ಪ್ರಾಮಾಣಿಕ ಮಕ್ಕಳಿಗೆ ಅನ್ಯಾಯವಾಗದಂತೆ ಕ್ರಮ ಕೈಗೊಂಡಿರುವುದು ಮೆಚ್ಚುಗೆಗೆ ಪಾತ್ರವಾಗಿದೆ. ಕೇಂದ್ರ ಸರಕಾರ ಭಾರತೀಯ ಪರೀಕ್ಷಾ ವ್ಯವಸ್ಥೆಗೆ ಧಕ್ಕೆ ಬಾರದಂತೆ ಇನ್ನೂ ಮುಂದೆಯಾದರು ಜಾಗರೂಕತೆಯಿಂದ ಹೆಜ್ಜೆಯಿಡುವುದನ್ನು ಕಲಿತುಕೊಳ್ಳಬೇಕಿದೆ.

- ಸುರೇಂದ್ರ ಪೈ ಭಟ್ಕಳ

ಭಟ್ಟರ್ ಸ್ಕಾಚ್

● **ಬ್ರಿಜೇಶ ಉತ್ತಪ್ಪ, ಬೆಂಗಳೂರು**
ಎಲ್ಲಾ ಇದ್ದೂ ಏನೂ ಇಲ್ಲದ ಸ್ಥಿತಿ ಅಂದ್ರೆ, ಯಾವುದು?
– ಈ ಪ್ರಶ್ನೆಯನ್ನು ಆರ್‌ಸಿಬಿ ಟೀಮ್ ಮ್ಯಾನೇಜರ್‌ಗೆ ಫಾರ್ವರ್ಡ್ ಮಾಡುತ್ತೇನೆ!

● **ನಂದಗೋಪಾಲ್ ಹೆಣ್ಣೂರು, ಮಳವಳ್ಳಿ**
ರಾಜಕಾರಣಿಗಳ ಆತ್ಮವಿಶ್ವಾಸದ ಬಗ್ಗೆ ಒಂದು ಉದಾಹರಣೆ ಕೊಡ್ತೀರಾ ಭಟ್ರೇ?
– ಆರೋಪ ಸಾಬೀತಾದ್ರೆ, ರಾಜೀನಾಮೆ ಎಂಬ ಆತ್ಮವಿಶ್ವಾಸದ ಹೇಳಿಕೆ!

● **ಮೂರ್ತಿ, ಮಾವಳ್ಳಿ**
ಪ್ರೇಮಿಗಳು ಒಳ್ಳೆಯವರಂತೆ ಹೌದಾ?
– ಅವರ ತಂದೆ-ತಾಯಿಗಳಿಗೆ ಮಾತ್ರ ಅಲ್ಲ!

● **ರಾಗಿಣಿ, ಬೀದರ**
ಬೆಂಗಳೂರಿನ ಹುಡುಗಿಯರಿಗೆ ಧಿಮಾಕು ಜಾಸ್ತಿಯಂತೆ, ಹೌದಾ?
– ಇಲ್ಲಿ ಬೆಂಗಳೂರಿನ ಪದ ಬೇಕಾಗಿರಲಿಲ್ಲ!

● **ಜಯರಾಮ ಗೋಳೇದುಹಟ್ಟಿ, ರಾಮನಗರ**
ನಿಮ್ಮ ಜತೆಗಾರ ಎತ್ತು ಯಾವುದು?
– ನಾನು ಹಾಗೂ ನನ್ನ ಓದುಗರು!

● **ಸುಮನಾ ಹೂವಿನಗದ್ದೆ, ಶಿವಮೊಗ್ಗ**
ಗಣ್ಯರ ಜತೆ ಓಡಾಡಿಕೊಂಡು ಇರ್ತಾರಲ್ಲ, ಅವರು ತಾವೇ ಗ್ರೇಟ್ ಅಂತ ಪೋಸು ಕೊಡ್ತಾರಲ್ಲಾ ಭಟ್ರೇ?
– ಅವರು ಒಂಥರಾ ಗಣಪತಿ ಮುಂದೆ ಕುಳಿತ ಇಲಿಯ ಹಾಗೆ, ಪೀಠದಿಂದ ಕೆಳಗಿಳಿದರೆ ಸಾಯಿಸುತ್ತಾರೆ!

● **ರಾಜಾರಾಮ ಹೆಗಡೆ, ಶಿರಸಿ**
ರಾಜಕಾರಣಕ್ಕೆ ಎಂಥವರನ್ನಾದರೂ ಒಂದುಗೂಡಿಸುವ ಶಕ್ತಿ ಇದೇ ಅಲ್ವಾ?
– ಎಂಥವರನ್ನೂ ಬೇರ್ಪಡಿಸುವ ಶಕ್ತಿಯೂ ಇದೇ!

● **ವಿ.ಹೇಮಂತ ಕುಮಾರ, ಬೆಂಗಳೂರು**
ಕೆಲವು ಅನಿಷ್ಟಗಳು ಬಂದ ಹಾಗೆ ತೊಲಗಿಬಿಡುತ್ತವೆ, ಆದರೆ ಕಾಯುವ ತಾಳ್ಮೆ ಇರುವುದಿಲ್ಲವಲ್ಲ ಭಟ್ರೇ?
– ನಿನ್ನ ತಾಳ್ಮೆ ಮೀರುವ ಮುನ್ನವೇ ಅನಿಷ್ಟಗಳು ತೊಲಗುತ್ತವೆ, ಸಮಾಧಾನ!

● **ಸತೀಶ ಕುಮಾರ ಡಿ.ಜಿ., ಕೆಂಗೇರಿ**
ಪ್ರೀತಿಸುವ ಹುಡುಗಿ ಕೈಕೊಟ್ಟಿದ್ದಾಳೆ, ನನಗೆ ಸಾಂತ್ವನದ ಮಾತುಗಳನ್ನು ಹೇಳ್ತೀರಾ?
– ಪೀಡೆ ತೊಲಗಿದ್ದಕ್ಕೆ ಸಂತಸಪಡು, ಸಾಂತ್ವನ ನಿರೀಕ್ಷಿಸಬೇಡ!

● **ವಿಜಯ ಬೆಲ್ಲದ, ಬೆಳಗಾವಿ**
ಆತ್ಮಹತ್ಯೆ ಎಲ್ಲಾ ಸಮಸ್ಯೆಗಳಿಗೆ ಪರಿಹಾರವಾ?
– ಕುಡಿತವೂ ಪರಿಹಾರವಲ್ಲ ಎಂದು ಗೊತ್ತಿದ್ದೂ ಕುಡಿಯುವುದಿಲ್ಲವಾ?!

ಇರುವುದೊಂದೇ ಜೀವನ, ನಮ್ಮಿಚ್ಛೆಯಂತೆ ಕಳೆಯೋಣ!

ದೊಡ್ಡ ಮಾಲ್‌ಗಳಲ್ಲಿ ನಿಧಾನವಾಗಿ ಅತ್ತಿತ್ತ ಸುತ್ತಾಡುವ ಹಿರಿಯ ನಾಗರಿಕರ ದಂಡು ಕಾಣಬಹುದು. ಅವರು ದಿನದಲ್ಲಿನ ಎಂಟ ರಿಂದ ಹತ್ತು ಗಂಟೆ ಹೊರಗಡೆ ಕಳೆಯಬೇಕು ಎನ್ನುವ ದರ್ದಿಗೆ ಬಿದ್ದಿರುತ್ತಾರೆ. ಹೀಗೆ ಅಚ್ಚುಕಟ್ಟಾಗಿ ಸೂಟ್‌ನಲ್ಲಿ ಓಡಾಡುವ ಹಿರಿಯ ನಾಗರಿಕರ ಹಿಂದೆ ಕರಾಳ ಬಡತನದ ಛಾಯೆ ಹೊರಗಿನವರಿಗೆ ತಿಳಿಯುವುದಿಲ್ಲ.

ವಿಶ್ವರಂಗ
ರಂಗಸ್ವಾಮಿ ಮೂಕನಹಳ್ಳಿ
vveditoped@gmail.com

ಯುದ್ಧ ಯಾರಿಗೆ ಬೇಕು ಹೇಳಿ? ಹೌದು ಯುದ್ಧ ಜಗತ್ತಿನಲ್ಲಿ ಶೇ.99. 99 ರಷ್ಟು ಜನರಿಗೆ ಬೇಡದ ವಿಷಯ. ಆದರೆ ಆ ಉಳಿದ ಶೇ.0.001 ರಷ್ಟು ಜನರಿದ್ದಾರಲ್ಲ ಅವರು ಮಹತ್ವಕಾಂಕ್ಷಿಗಳು. ಜಗತ್ತನ್ನ ತಮ್ಮ ಕಪಿ ಮುಷ್ಟಿಯಲ್ಲಿ ಇಟ್ಟು ಕೊಳ್ಳಬೇಕು ಎನ್ನುವ ಹಂಬಲದವರು. ಅವರ ವಿಷಯವನ್ನ ಬದಿಗಿಟ್ಟು ನೋಡಿದರೆ ಜಗತ್ತಿನ ಉಳಿದೆಲ್ಲ ಜನರ ಭಾವನೆ ಮುಕ್ಕಾಲು ಪಾಲು ಒಂದೇ ಇದೆ. ಅವರಿಗೆ ಬೇಕಿರುವುದು ಒಂದು ಶಾಂತಿಯುತ, ಉತ್ತಮ ಗುಣಮಟ್ಟದ ಜೀವನ. ಯುದ್ಧದ ಸಮಯದಲ್ಲಿ ಮಾತ್ರ ಜನರ ಜೀವನ ಅಸ್ತವ್ಯಸ್ತವಾಗುತ್ತದೆ ಎಂದು ನೀವೆಂದುಕೊಂಡಿದ್ದರೆ ಅದು ಪೂರ್ಣ ಸತ್ಯವಲ್ಲ. ಮುಂದುವರೆದ ದೇಶಗಳಲ್ಲಿ ಎಲ್ಲಕ್ಕೂ ಹೆಚ್ಚಿನ ಬೆಲೆಯನ್ನ ತೆರಬೇಕಾಗುತ್ತದೆ. ಹೀಗಾಗಿ ಜಗತ್ತಿನಲ್ಲಿ ಆಗುತ್ತಿರುವ ಸಣ್ಣ ಪುಟ್ಟ ವ್ಯತ್ಯಾಸಗಳು ಜನ ಸಾಮಾನ್ಯನ ಬದುಕಿಗೆ ಹೆಚ್ಚಿನ ಹೊಡೆತವನ್ನ ನೀಡುತ್ತದೆ. ಬಹುಪಾಲು ಜನರಿಗೆ ಯೂರೋಪ್ ಎಂದರೆ ಅದೊಂದು ಸ್ವರ್ಗ ಎನ್ನುವ ಭಾವನೆಯಿದೆ, ಅದು ನಿಜ, ಜೋಬಿನ ತುಂಬಾ ಹಣವನ್ನ ತುಂಬಿಕೊಂಡು ಪ್ರವಾಸಿಗರಾಗಿ ಹೋದಾಗ ಅದು ನಿಜಕ್ಕೂ ಸ್ವರ್ಗದಂತೆ ಕಂಡರೆ ಮತ್ತು ಪ್ರವಾಸಿಗರು ಅದನ್ನ ನಿಜವೆಂದು ನಂಬಿದರೆ ಅದರಲ್ಲಿ ಅವರ ತಪ್ಪು ಹೆಚ್ಚೇನೂ ಇಲ್ಲ ಎನ್ನಬಹುದು. ವಾಸ್ತವದಲ್ಲಿ ಇಲ್ಲಿ ಹಿರಿಯ ನಾಗರಿಕರ ಸಂಖ್ಯೆ ಬಹಳ ಹೆಚ್ಚಾಗುತ್ತಿದೆ. ಸಾಮಾನ್ಯ ಪಿಂಚಣಿದಾರನಿಗೆ ಸಿಗುವ ಪಿಂಚಣಿ ಹೊಟ್ಟೆಗಾದರೆ ಬಟ್ಟೆಗಿಲ್ಲ, ಬಟ್ಟೆಗಾದರೆ ಹೊಟ್ಟೆಗಿಲ್ಲ ಎನ್ನುವಂತಿದೆ. ಬಾರ್ಸಿಲೋನಾ ಮಹಾನಗರದಲ್ಲಿ ಕಸದ ಬುಟ್ಟಿಯಲ್ಲಿ ಅವರಿವರು ಎಸೆದಿರುವ ಆಹಾರವನ್ನ ಹೆಕ್ಕುವ ಬಹಳಷ್ಟು ಹಿರಿಯ ನಾಗರಿಕರನ್ನ ಕಂಡ ಅನುಭವ ನನ್ನದು. ಈ ರೀತಿಯ ಬಡತನ ಅನುಭವಿಸುತ್ತಿರುವ ಜನರ ಸಂಖ್ಯೆ ಒಂದೆಡೆಯಾದರೆ, ಹೊಟ್ಟೆಬಟ್ಟೆಗೆ ಅಷ್ಟೊಂದು ತತ್ವಾರವಿಲ್ಲದ ಇನ್ನೊಂದು ವರ್ಗವಿದೆ. ಆದರೆ ಈ ವರ್ಗದ ಬಡತನವನ್ನ ನೀವು ಚಳಿಗಾಲದಲ್ಲಿ ಕಾಣಬಹುದು. ಅಂದರೆ ಗಮನಿಸಿ ಚಳಿಗಾಲದಲ್ಲಿ ಪೂರ್ಣ ದಿನ ಮನೆಯಲ್ಲಿ ಉಳಿದುಕೊಂಡರೆ ಚಳಿ ತಡೆಯಲಾಗದೆ ಹೀಟರ್ ಹಾಕಬೇಕಾಗುತ್ತದೆ. ರಾತ್ರಿ ಬೇರೆ ದಾರಿಯಿಲ್ಲ, ಆದರೆ ದಿನದಲ್ಲಿ ಕೂಡ ಹೀಟರ್ ಹಾಕಿದರೆ 300 ರಿಂದ 350 ಯುರೋ ಎಲೆಕ್ಟ್ರಿಸಿಟಿ ಬಿಲ್ ಮಾಸಿಕ ಬರುವುದು ಗ್ಯಾರಂಟಿ. ಒಬ್ಬ ಹೆಚ್ಚಿನ ಸಂಬಳಕ್ಕೆ ಕೆಲಸ ಮಾಡದ ಅತಿ ಸಾಧಾರಣ ವ್ಯಕ್ತಿಗೆ ಮಾಸಿಕವಾಗಿ ಬರುವ ಪೆನ್ಷನ್ 450 ರಿಂದ 600 ಯುರೋ ಅಷ್ಟೇ, ಇದರಲ್ಲಿ 350 ಯುರೋಗಳಷ್ಟು ಎಲೆಕ್ಟ್ರಿಸಿಟಿ ಬಿಲ್ ಕಟ್ಟಿದರೆ ತಿನ್ನುವುದೇನು? ಬೇರೆ ಖರ್ಚುಗಳ ಬಾಬತ್ತು ನಿಭಾಯಿಸುವುದು ಹೇಗೆ? ಹೀಗಾಗಿ ಇಲ್ಲಿನ ಹಿರಿಯ ನಾಗರಿಕರು ಒಂದು ವಿಧಾನವನ್ನ ಕಂಡು ಕೊಂಡಿದ್ದಾರೆ. ನೀವು ಯಾವುದೇ ದೊಡ್ಡ ಮಾಲ್‌ಗಳಲ್ಲಿ ಹೋಗಿ ಅಲ್ಲೆಲ್ಲ ನಿಧಾನವಾಗಿ ಅತ್ತಿತ್ತ ಸುತ್ತಾಡುವ ಹಿರಿಯ ನಾಗರಿಕರ ದಂಡು ಕಾಣಬಹುದು. ಹೇಗಾದರೂ ಮಾಡಿ ದಿನದಲ್ಲಿನ ಎಂಟ ರಿಂದ ಹತ್ತು ಗಂಟೆ ಹೊರಗಡೆ ಕಳೆಯಬೇಕು ಎನ್ನುವ ದರ್ದಿಗೆ ಇವರು ಬಿದ್ದಿರುತ್ತಾರೆ. ಹೀಗೆ ಅಚ್ಚುಕಟ್ಟಾಗಿ ಸೂಟ್‌ನಲ್ಲಿ ಓಡಾಡುವ ಹಿರಿಯ ನಾಗರಿಕರ ಹಿಂದೆ ಇರುವ ಈ ಕರಾಳ ಬಡತನದ ಛಾಯೆ ಹೊರಗಿನವರಿಗೆ ತಿಳಿಯುವುದಿಲ್ಲ. ಖುಷಿಗೆ ಒಂದೆರೆಡು ದಿನ ಮಾಲ್‌ನಲ್ಲಿ ಸುತ್ತಾಡುವುದಕ್ಕೂ ವರ್ಷದ 8 ತಿಂಗಳು ಕಾಡುವ ಚಳಿಯಿಂದ ಬಚಾವಾಗುವ ಕಾರಣಕ್ಕೆ ಮಾಲ್‌ನಲ್ಲಿ ಸುತ್ತಾಡುವುದಕ್ಕೂ ಬಹಳ ವ್ಯತ್ಯಾಸವಿದೆ.

ಯುದ್ಧದ ವಿಷಯ ಹೇಳುತ್ತಾ ಇದೇನಿದು ಬಾರ್ಸಿಲೋನಾದಲ್ಲಿನ ಹಿರಿಯ ನಾಗರಿಕರ ವಿದ್ಯುತ್ಶಕ್ತಿ ಬಡತನದ ಬಗ್ಗೆ ಹೇಳಲು ಕಾರಣವಿದೆ. ಮೇಲೆ ಹೇಳಿದ ಸ್ಥಿತಿ ಸಾಮಾನ್ಯ ದಿನಗಳದ್ದು ಯುದ್ಧದ ಸಮಯದಲ್ಲಿ ಬೆಲೆ ಏರಿಕೆಯಾಗುತ್ತದೆ. ಜಗತ್ತಿನಾದ್ಯಂತ ಸಾಮಾನ್ಯ ಜನರ ಬದುಕು ಬಹಳ ಕಷ್ಟವಾಗುತ್ತದೆ. ಭಾರತದಲ್ಲಿ ಅದರಲ್ಲೂ ದಕ್ಷಿಣ ಭಾರತದಲ್ಲಿ ಹವಾಮಾನ ಬದುಕಿಗೆ ಬಹಳ ಪೂರಕವಾಗಿದೆ. ಹೀಗಾಗಿ ವರ್ಷದ ಹನ್ನೆರೆಡೂ ತಿಂಗಳು ನಾವು ಬೀದಿಬೀಸಾಗಿ ಓಡಾಡಿಕೊಂಡಿರಬಹುದು. ರಾಗಿಮುದ್ದೆ, ಗೊಜ್ಜು ತಿಂದು ದಿನ ಕಳೆದು ಬಿಡಬಹುದು. ಇಲ್ಲಿ ಕಾಸ್ಟ್ ಆಫ್ ಲಿವಿಂಗ್ ಅಂದರೆ ಬದುಕಲು ಬೇಕಾಗುವ ಹಣ ಬಹಳ ಕಡಿಮೆ. ಯೂರೋಪಿನಲ್ಲಿ ಹೊಟ್ಟೆಗೆ ಊಟವಿಲ್ಲದಿದ್ದರೂ ಬಟ್ಟೆಯ ಮೇಲೆ ಸೆಂಟ್ ಸಿಂಪಡಿಸುವುದು ಮಾತ್ರ ತಪ್ಪಿಸುವಂತಿಲ್ಲ.

ನನಗಿನ್ನೂ ಚೆನ್ನಾಗಿ ನೆನಪಿದೆ 2014 ರ ಫೆಬ್ರವರಿಯಲ್ಲಿ ರಷ್ಯಾ ಉಕ್ರೈನ್ ದೇಶದ ಕ್ರಿಮಿಯಾ ಎನ್ನುವ ಜಾಗವನ್ನ ಆಕ್ರಮಿಸಿಕೊಳ್ಳುತ್ತದೆ. ಅಂದಿಗೆ ಇದು ಇಂದಿನ ಮಟ್ಟದಲ್ಲಾಗುತ್ತ ರೀತಿಯಲ್ಲಿ ಬಹು ದೊಡ್ಡ ಅಂತಾರಾಷ್ಟ್ರೀಯ ಸುದ್ದಿಯಾಗಲಿಲ್ಲ. ಮಾರ್ಚ್ ತಿಂಗಳಲ್ಲಿ ಅದನ್ನು ರಷ್ಯಾದ ಭಾಗ ಎಂದು ಕೂಡ ಹೇಳಿಕೊಂಡಿತು. ನಿಮಗೆಲ್ಲ ಗೊತ್ತಿರಲಿ ರಷ್ಯಾದ ಮೂಲಕ ಬರುವ ಆಯಿಲ್ ಮತ್ತು ಗ್ಯಾಸ್ ನಾಲ್ಕು ದಿನ ಬರದೇ ನಿಂತು ಹೋದರೆ ಅರ್ಧ ಯೂರೋಪು ಚಳಿಯಲ್ಲಿ ಸತ್ತು ಹೋಗುತ್ತದೆ. ಇಲ್ಲಿ ಸಾಮಾನ್ಯರಲ್ಲಿ ಸಾಮಾನ್ಯ ಜೀವನ ನಡೆಸಲು ಕೂಡ ಹೆಚ್ಚಿನ ಹಣದ ಅವಶ್ಯಕತೆಯಿದೆ. ಇಲ್ಲಿ ಕಾಸ್ಟ್ ಆಫ್ ಲಿವಿಂಗ್ ಬಹಳ ಹೆಚ್ಚು. ಸಾಮಾನ್ಯನ ಬದುಕು ಕೂಡ ಇಲ್ಲಿ ದುಬಾರಿ. ಅಂದಿನ ದಿನಗಳಲ್ಲಿ ಉಂಟಾದ ಅವ್ಯವಸ್ಥೆ ಯೂರೋಪಿನ ಜನರ ಬದುಕನ್ನ ಎಷ್ಟರಮಟ್ಟಿಗೆ ತಲ್ಲಣಕ್ಕೆ ತಳ್ಳಿತ್ತು ಎನ್ನುವುದನ್ನ ಪ್ರತ್ಯಕ್ಷ ಕಂಡ ಅನುಭವ ಇನ್ನೂ ಮಸ್ತಕದಲ್ಲಿ ಹಾಗೆ ಇದೆ. ಅಂದಿನಿಂದ ಆಗುತ್ತಿರುವ ಈ ಯುದ್ಧದ ಸನ್ನಿವೇಶದಲ್ಲಿ ನಾವಿನ್ನೂ ಇದ್ದೇವೆ. ಇದು ಶುರುವಾಗಿ ಎರಡು ವರ್ಷವಾಯ್ತು ಎಂದು ಕೊಂಡರೆ ಅದು ತಪ್ಪು. ರಷ್ಯಾ, ಉಕ್ರೈನ್ ನಡುವಿನ ಯುದ್ಧ ಹತ್ತು ವರ್ಷದಿಂದ ನಡೆಯುತ್ತಿದೆ. ದೊಡ್ಡ ಮಟ್ಟದ ಸುದ್ದಿಯಾಗಿ ಎರಡು ವರ್ಷ ಮಾತ್ರ ಆಗಿದೆ. ಯಾರೋ ಒಂದಿಬ್ಬರು ತೆಗೆದುಕೊಳ್ಳುವ ನಿರ್ಧಾರಕ್ಕೆ ಜಗತ್ತಿನ ಬಹಳಷ್ಟು ಮಂದಿಯ ಜೀವನ, ಬದುಕುವ ರೀತಿ ಬದಲಾಗುವುದು ಮಾತ್ರ ಸಹಿಸಿಕೊಳ್ಳುವುದು ಕಷ್ಟ.

ಮೊದಲೇ ಹೇಳಿದಂತೆ ಸಾಮಾನ್ಯ ದಿನದಲ್ಲಿ ಯೂರೋಪಿನ ಬಹಳಷ್ಟು ಮನೆಗಳಲ್ಲಿ ಎನರ್ಜಿ ಕೊರತೆಯಿದೆ. ಅಂದರೆ ಎನರ್ಜಿ, ಎಲೆಕ್ಟ್ರಿಸಿಟಿ ಬಹಳವಿದೆ ಆದರೆ ಅದನ್ನ ಕೊಳ್ಳುವ ಶಕ್ತಿ ಇವರಿಗಿಲ್ಲ, ಇಂತಹ ಸನ್ನಿವೇಶವನ್ನ ಇಲ್ಲಿ 'ಪೂವರ್ಟಿ ಎನರ್ಜೆಟಿಕ' ಎಂದು ಕರೆಯುತ್ತಾರೆ. ಹೊರಗಿನಿಂದ ನಿಂತು ನೋಡಿದಾಗ ಅಥವಾ ಪ್ರವಾಸಿಗರಾಗಿ ಬಂದು ನೋಡಿದಾಗ ಕಾಣದ ನಗ್ನ ಸತ್ಯ ಇಲ್ಲಿ ಬದುಕಲು ಶುರು ಮಾಡಿದಾಗ ಅನಾವರಣವಾಗುತ್ತ ಹೋಗುತ್ತದೆ.

ಇನ್ನು ಯುದ್ಧದ ಇನ್ನೊಂದು ಕರಾಳ ಸತ್ಯವನ್ನ ಕೂಡ ಹೇಳುತ್ತೇನೆ. ಇಂತಹ ವಿಷಯಗಳನ್ನ ಕೂಡ ಇಲ್ಲಿನ ಸಮಾಜದಲ್ಲಿ ನೇರವಾಗಿ ಕಂಡ ಅನುಭವ ನನ್ನದು. ಯುಎಸ್‌ಎಸ್‌ಆರ್ ಪತನವಾಗಿ ಅಲ್ಲಿದ್ದ 15 ರಾಜ್ಯಗಳು ದೇಶಗಳಾಗಿ ಬದಲಾಗಿ ಹೋದವು. ಹೀಗೆ ರಷ್ಯಾದಿಂದ ಬೇರ್ಪಟ್ಟ ದೇಶಗಳಲ್ಲಿ ಉಕ್ರೇನ್ ಅತಿ ದೊಡ್ಡ ದೇಶ. ಅಂದಿನ ದಿನದಲ್ಲಿ ಆರ್ಥಿಕವಾಗಿ ಬಹಳಷ್ಟು ಜರ್ಝರಿತವಾಗಿದ್ದ ಈ ದೇಶಗಳ ಗಂಡು ಮಕ್ಕಳು ಯೂರೋಪು ಮತ್ತು ಜಗತ್ತಿನ ಇತರ ಭಾಗಗಳಿಗೆ ಕೂಲಿಗಳಾಗಿ ಕೆಲಸ ಅರಸಿ ಹೋಗುತ್ತಾರೆ. ಹೆಣ್ಣು ಮಕ್ಕಳು ಕೂಡ ದೇಶ, ಮನೆ ಬಿಟ್ಟು ಹೊರಡುತ್ತಾರೆ. ಹೆಚ್ಚಿನ ವಿದ್ಯಾಭ್ಯಾಸವಿಲ್ಲದ ಬೇರೆ ರೀತಿಯ ಕೌಶಲ್ಯ ಇಲ್ಲದ ಇವರಿಗೆ ವೇಶ್ಯಾವೃತ್ತಿ ಹಣಗಳಿಸುವ ಸುಲಭದ ದಾರಿಯಾಗುತ್ತದೆ. ಕಲವು ಆರ್ಗನೈಸ್ಡ್ ಕ್ರೈಂನಲ್ಲಿ ಬೊಂಬೆಗಳಂತೆ ಬಳಸಲ್ಪಟ್ಟರೆ, ಬಹಳಷ್ಟು ಜನ ತಮ್ಮ ಇಚ್ಛೆಯಂತೆ ಈ ವೃತ್ತಿಯಲ್ಲಿ ತೊಡಗಿಕೊಂಡಿದ್ದಾರೆ. ಯೂರೋಪಿನ ಉದ್ದಗಲಕ್ಕೂ, ದುಬೈನಂತಹ ನಗರಗಳಲ್ಲೂ ಎರಡು ಸಾವಿರ ಮತ್ತು ಆ ನಂತರದ ದಿನಗಳಲ್ಲಿ ಹೀಗೆ ರಷ್ಯಾ ಮತ್ತು ಬ್ರೇಕ್ ಅವೇ ರಷ್ಯಾ ದೇಶಗಳ ಬಹಳಷ್ಟು ಯುವಕ/ಯುವತಿಯರನ್ನ ಈ ರೀತಿಯ ಕೆಲಸಗಳಲ್ಲಿ ಕಾಣಬಹುದಿತ್ತು. ಇಂದಿಗೂ ಉಕ್ರೇನ್ ಈ ಹಳೆಯ ವ್ಯಾಪಾರದಲ್ಲಿ ಮುಂದಿದೆ.



ಸೋವಿಯತ್ ಯೂನಿಯನ್ ಛಿದ್ರವಾದದ್ದು ಎಲ್ಲರಿಗೂ ತಿಳಿದಿರುವ ವಿಷಯ. ಅಮೆರಿಕ ಇದರ ಹಿಂದಿನ ಶಕ್ತಿ ಎನ್ನುವುದು ಕೂಡ ರಹಸ್ಯವೇನಲ್ಲ. ಹೀಗೆ ಸೋವಿಯತ್ ಯೂನಿಯನ್‌ನಿಂದ ಬೇರ್ಪಟ್ಟು 15 ಹೊಸ ದೇಶಗಳು ನಿರ್ಮಾಣವಾದವು. ನಮಗೆ ಇಷ್ಟು ವಿಷಯ ಮಾತ್ರ ತಿಳಿದಿರುತ್ತದೆ. ಜಾರ್ಜಿಯಾ, ಉಕ್ರೈನ್ ಮುಂತಾದ ದೇಶಗಳಲ್ಲಿ ಆಂತರಿಕ ಕಲಹ ಶುರುವಾಗಿ ಆ ದೇಶಗಳು ಇನ್ನಿಲ್ಲದ ಸಾವು ನೋವಿನ ಜತೆಗೆ ಇಡೀ ನಗರವೇ ಸ್ಮಶಾನ ಎನ್ನುವ ಮಟ್ಟಿಗೆ ಹಾಳಾದವು. ಹೀಗೆ ಅಂದಿನ ಶಕ್ತಿಶಾಲಿ ಒಕ್ಕೂಟವನ್ನು ಛಿದ್ರಗೊಳಿಸಿದರ ಪರಿಣಾಮ ಸೋವಿಯತ್ ಯೂನಿಯನ್‌ನ ಹೃದಯವಾಗಿದ್ದ ರಷ್ಯಾ ಬಹಳ ಪೆಟ್ಟು ತಿಂದಿತು. ಈ ರೀತಿಯ ವಿಭಜನೆ 1991 ರಲ್ಲಿ ಆಗುತ್ತದೆ. ಆ ನಂತರ ಹಲವು ವರ್ಷಗಳ ಕಾಲ ರಷ್ಯಾ ಯಾವುದೇ ಸಿದ್ಧಾಂತವಿಲ್ಲದೆ ವೃಥಾ ವೇಳೆಯನ್ನ ಕಳೆಯುತ್ತದೆ. 2000 ಇಸವಿಯ ವೇಳೆಗೆ ಪುಟಿನ್ ಅಧಿಕಾರವನ್ನ ಪಡೆಯುತ್ತಾರೆ. ಒಂದೆರೆಡು ವರ್ಷದಲ್ಲಿ ತೈಲದ ಮೇಲಿನ ಹಿಡಿತವನ್ನ ಸಂಪಾದಿಸುತ್ತಾರೆ. ಜಗತ್ತಿಗೆ ಬೇಕಾದ ಎನರ್ಜಿ ಮೂಲಗಳ ಮೇಲೆ, ತೈಲದ ಮೇಲಿನ ಹಿಡಿತ ರಷ್ಯವನ್ನ ಮತ್ತೆ ಒಂದಷ್ಟು ಆರ್ಥಿಕವಾಗಿ ಪುನರ್ಜೀವನಗೊಳಿಸುತ್ತವೆ.

ರಷ್ಯಾ ಮತ್ತೆ ಬಲಶಾಲಿಯಾಗಿದೆ. ಚೀನಾದ ಜತೆಗೆ ಉತ್ತಮ ಬಾಂಧವ್ಯ ಕೂಡ ಹೊಂದಿದೆ. ಇದು ದೊಡ್ಡಣ್ಣನ ಕಣ್ಣು ಕೆಂಪಗಾಗಿಸಿದೆ. ಮತ್ತೆ ಛಿದ್ರಗೊಳಿಸುವ ಕೆಲಸಕ್ಕೆ ಅದು ಇಳಿದಿದೆ, ಹೀಗಾಗಿ ರಷ್ಯಾ, ಉಕ್ರೇನ್ ಕಗ್ಗಂಟು ಮುಗಿಯುತ್ತಿಲ್ಲ. ಈ ಮಧ್ಯೆ ಯೂರೋಪಿನ ಮತ್ತು ಬ್ರೇಕ್ ಅವೇ ರಷ್ಯಾ ದೇಶದ ಜನರ ಬದುಕು ಮೂರಾಬಟ್ಟೆಯಾಗುತ್ತದೆ. ದೂರದಲ್ಲಿರುವ ನಮಗೂ ಅದರ ಬಿಸಿ ತಟ್ಟುತ್ತದೆ. ಅನುಭವವೇ ಜೀವನ ಎನ್ನುವ ತತ್ವ ಹೊಂದಿರುವ ನನ್ನಂತಹ ಲಕ್ಷಾಂತರ ಜನರ ಓಡಾಟವನ್ನು ಈ ಯುದ್ಧಗಳು ಕಸಿದಿದು ಬಿಡುತ್ತವೆ.

ಸ್ಪೇನ್ ಕೂಡ ಆಂತರಿಕ ಯುದ್ಧವನ್ನ ಕಂಡಿದೆ. ಎರಡನೇ ಮಹಾಯುದ್ಧದಲ್ಲಿ ಸ್ಪೇನ್ ಭಾಗವಹಿಸಲಿಲ್ಲ. ಸ್ವ ಇಚ್ಛೆಯಿಂದ ಬೇಕಾದವರು ಹೋಗಿ ಜರ್ಮನ್ ಸೇನೆಯನ್ನು ಸೇರಿಕೊಳ್ಳಬಹುದು ಎಂದು ಅಂದಿನ ದಿನದಲ್ಲಿ ಸರಕಾರ ಹೇಳಿತ್ತು. ಹೀಗಾಗಿ ಸ್ಪ್ಯಾನಿಷ್ ಜನತೆಗೆ ಯುದ್ಧದ, ಆಂತರಿಕ ಕಲಹದ ನೋವು ಅದರಿಂದ ದೀರ್ಘಕಾಲದಲ್ಲಿ ಆಗುವ ಪರಿಣಾಮಗಳ ಅರಿವಿದೆ. ಹೀಗಾಗಿ ಅವರು ಎಂದಿಗೂ ಯುದ್ಧದ ಪರವಲ್ಲ. ಸ್ಪೇನ್ ದೇಶದ ಒಂದು ರಾಜ್ಯ ಅಂದಲೂಸಿಯಾದಿಂದ ಹೆಚ್ಚು ಶ್ರೀಮಂತ ರಾಜ್ಯ ಕತಲೂನ್ಯಕ್ಕೆ ಜನರು ವಲಸೆ ಬರುವಾಗ ಅವರನ್ನ ರೈಲಿಂದ ಇಳಿಯಲು ಬಿಡದೆ ಹೊಡೆದು ವಾಪಸ್ಸು ಕಳಿಸುತ್ತಿದ್ದರು ಎಂದು ಇಲ್ಲಿನ ನನ್ನ ಹಿರಿಯ ನಾಗರಿಕ ಗೆಳೆಯರು ಇಂದಿಗೂ ಜ್ಞಾಪಿಸಿಕೊಳ್ಳುತ್ತಾರೆ. ಒಂದೇ ದೇಶದಲ್ಲಿ ಇದ್ದೂ ದೇಶದ ಇತರ ರಾಜ್ಯದಿಂದ ಬರುವ ಜನರನ್ನ ಸೇರಿಸಿಕೊಳ್ಳಲು ಜನರು ಇಷ್ಟಪಡುತ್ತಿರಲಿಲ್ಲ, ಯಾವಾಗ ಸಮಾಜದಲ್ಲಿ ಒತ್ತಡ ಮತ್ತು ಕೊರತೆ ಉಂಟಾಗುತ್ತದೆ ಆಗೆಲ್ಲ ಇವು ಸಾಮಾನ್ಯ.

ಸ್ಪೇನ್ ದೇಶದಲ್ಲಿ ಇಂದಿಗೂ ಶಾಲೆಗೆ ಹೋಗುತ್ತಾ, ಕಲಿಯುತ್ತಾ, ಕುಣಿಯುತ್ತಾ ಬಾಲ್ಯ ಕಳೆಯಲಾಗದೇ ಜೀವನ ಸಂಧ್ಯಾಕಾಲಕ್ಕೆ ಕಾಲಿಟ್ಟಿರುವ ಸಾವಿರಾರು ಜನರನ್ನ ನೀವು ಕಾಣಬಹುದು. ಹತ್ತು ಹನ್ನೆರಡನೇ ವಯಸ್ಸಿಗೆ ದುಡಿಯಲು ಶುರು ಮಾಡಿದ್ದೆವು, ಹೊಟ್ಟೆ ತುಂಬಾ ಊಟ ಮಾಡಿದ ದಿನ ನಾವು ಅದೆಷ್ಟು ಖುಷಿಯಿಂದ ಇರುತ್ತಿದ್ದೆವು ಗೊತ್ತೇ? ಎಂದು ತಮ್ಮ ಬಾಲ್ಯವನ್ನು, ಸ್ಪೇನ್ ದೇಶದ ಅಂದಿನ ಆರ್ಥಿಕತೆಯನ್ನ ನನ್ನ ಹಲವಾರು ಗೆಳೆಯರು ವಿವರಿಸಿದ್ದಾರೆ. ಅದು ಕೇಳಿದ್ದಲ್ಲ, ಅವರೇ ಅನುಭವಿಸಿದ ಜೀವನ, ಹೀಗಾಗಿ ಆಗಿನ ಕಾಲಘಟ್ಟದಲ್ಲಿ ಅಂದಿನ ಸನ್ನಿವೇಶದಲ್ಲಿ ಭಾಗಿಯಾಗಿದ್ದ ಜನರಿಂದ ಅದನ್ನ ಕೇಳುವ ಮತ್ತು ಅದರ ಕಲ್ಪನೆ ಮಾಡಿಕೊಳ್ಳುವ ಅವಕಾಶ ನನ್ನದಾಗಿತ್ತು.

ಇಂತಹ ಯುದ್ಧದ ಪ್ರತಿಕೂಲ ಪರಿಣಾಮ ಗೊತ್ತಿರುವ ಕಾರಣ ಸ್ಪ್ಯಾನಿಶರು ಯುದ್ಧದಲ್ಲಿ ಆಸಕ್ತಿ ಹೊಂದಿಲ್ಲ. ಪಕ್ಕದ ಜರ್ಮನಿ, ಫ್ರಾನ್ಸ್, ಇಟಲಿ ದೇಶಗಳು ಮಿಲಿಟರಿಗೆ, ಅಣು ಬಾಂಬ್ ಇತ್ಯಾದಿಗಳಿಗೆ ಹೆಚ್ಚಿನ ಹಣವನ್ನ ವ್ಯಯಿಸುತ್ತಿದ್ದರೆ, ಸ್ಪೇನ್ ಮಾತ್ರ ಆ ರೇಸ್‌ನಲ್ಲಿ ಸಿಲುಕಿಲ್ಲ. ಹೌದು ಸ್ಪೇನ್ ನ್ಯೂಕ್ಲಿಯರ್ ಪವರ್ ಅಲ್ಲ, ಅಲ್ಲಿನ ನನ್ನ ಗೆಳೆಯರು ನಿಮ್ಮ ದೇಶದಲ್ಲಿ ಅಷ್ಟೊಂದು ಬಡತನ ಇಟ್ಟು ಕೊಂಡು ನ್ಯೂಕ್ಲಿಯರ್ ಮೇಲೆ, ಡಿಫೆನ್ಸ್ ಮೇಲೆ ಅದೇಕೆ ಅಷ್ಟು ಹಣ ಖರ್ಚು ಮಾಡುತ್ತೀರಿ? ಎಂದು ಕೇಳುತ್ತಿದ್ದರು. ಆಗೆಲ್ಲ ನಕ್ಕು ನಮ್ಮ ಪ್ರಶ್ನೆ ಪತ್ರಿಕೆಯಲ್ಲಿರುವ ಪ್ರಶ್ನೆಗೆ ತಕ್ಕ ಉತ್ತರ ಬರೆಯಬೇಕು. ನಿಮ್ಮ ಪ್ರಶ್ನೆ ಬೇರೆ, ಹೀಗಾಗಿ ನಿಮ್ಮ ಉತ್ತರ ನಮಗೆ ಸರಿ ಹೊಂದುವುದಿಲ್ಲ ಎನ್ನುತ್ತಿದ್ದೆ. ಅದು ಅವರಿಗೆ ಅರ್ಥವಾಗಲಿಲ್ಲ, ಆಗುವುದೂ ಇಲ್ಲ ಎನ್ನುವುದು ಕೂಡ ಗೊತ್ತಿರುವ ವಿಷಯ. ಸ್ಪೇನ್‌ನಲ್ಲಿ ಇರುವುದೊಂದು ಜೀವನ ಅದನ್ನ ಖುಷಿಯಿಂದ ಕಳೆಯೋಣ ಎನ್ನುವುದು ಅಲಿಖಿತ ನಿಯಮ. ನಾಳೆಗಾಗಿ ಬದುಕದೆ ಇಂದಿಗಾಗಿ ಬದುಕುವ ಅವರ ಜೀವನ ನಿಯಮ ಎಲ್ಲರಿಗೂ ಇಷ್ಟವಾಗಿದಿದ್ದರೆ? ಜಗತ್ತು ಇನ್ನಷ್ಟು ಸುಂದರವಾಗಿರುತ್ತಿತ್ತು, ನೀವೇನಂತೀರಾ?

ಪ್ರಸ್ತುತ

ಅಜಯ್ ಅಂಗಡಿ

ಹರಿವು ತಪ್ಪುತ್ತಿರುವ ವಾರ್ತಾ ವಾಹಿನಿಗಳು

ಇತ್ತೀಚಿನ ದಿನಗಳಲ್ಲಿ ವಾರ್ತಾ ವಾಹಿನಿಗಳೆಂದರೆ ಬಹುತೇಕ ಎಲ್ಲರಿಗೂ ಅಸಹ್ಯ ಹುಟ್ಟಿಸುವಂತಾಗಿದೆ. ಈ ಸುದ್ದಿ ಮಾಧ್ಯಮಗಳು ತಮ್ಮ ಮೂಲ ಧ್ಯೇಯೋದ್ದೇಶವನ್ನು ಮರೆತೇ ಬಿಟ್ಟಿವೆಯೇನೋ ಅನ್ನುವಂತೆ ವರ್ತಿಸುತ್ತಿರುವುದು ವಿಷಾದದ ಸಂಗತಿ. ಜಗತ್ತಿನ ಆಗುಸೋಗುಗಳನ್ನು ಒಂದೆಡೆ ಕ್ರೋಢೀಕರಿಸಿ ಸರಿಯಾದ ಮಾಹಿತಿಯನ್ನು ಸರಿಯಾದ ರೀತಿಯಲ್ಲಿ ಸಾರ್ವಜನಿಕರಿಗೆ ತಿಳಿಸುವುದಕ್ಕಾಗಿಯೇ ಜನ್ಮತಾಳಿರುವುದು ಮಾಧ್ಯಮ. ಆ ನಿಟ್ಟಿನಲ್ಲಿ ಮುದ್ರಣ ಮಾಧ್ಯಮ ತನ್ನ ಮೂಲ ಆಶಯವನ್ನು ಉಳಿಸಿಕೊಂಡು ಮುನ್ನಡೆಯುತ್ತಿದೆ. ಆದರೆ ವಿದ್ಯುನ್ಮಾನ ಮಾಧ್ಯಮ ಹಾದಿ ತಪ್ಪಿ ಬಹಳ ದಿನಗಳಾಗಿರುವುದು ಜಾಗತಿಕ ಸತ್ಯ.

ಸುದ್ದಿಗಳನ್ನು ಆತುರಾತುರವಾಗಿ ಜನರ ಮುಂದೆ ಇಡಬೇಕೆಂಬ ಹಪಹಪಿಗೆ ಬಿದ್ದಿರುವ ವಾರ್ತಾ ವಾಹಿನಿಗಳು ಸುದ್ದಿಯ ಸತ್ಯಾಸತ್ಯತೆಯನ್ನು ಅರಿಯದೆ ಬಿತ್ತರಿಸಿ ಮುಖಭಂಗಕ್ಕೆ ಒಳಗಾಗುತ್ತಿರುವುದು ಗುಟ್ಟಿನ ವಿಷಯವೇನಲ್ಲ. ಸುಖಾಸುಮ್ಮನೆ ಸಿಕ್ಕಿದ್ದನ್ನೆಲ್ಲ ಸುದ್ದಿಯೆಂದು ಬಿಂಬಿಸುವ, ಖ್ಯಾತನಾಮರ ವೈಯಕ್ತಿಕ ಬದುಕಿನ ಪುಟಗಳನ್ನು ತಮಗಿಷ್ಟ ಬಂದಂತೆ ಬಿತ್ತರಿಸುವ ಇವರುಗಳಿಗೆ ವೃತ್ತಿಪರತೆ ಎಷ್ಟರಮಟ್ಟಿಗೆ ಇದೆ ಅನ್ನುವುದೇ ಹಾಸ್ಯಾಸ್ಪದ. ಜನರ ಮುಂದಿಡಲು ಬೇಕಾದಷ್ಟು ಸರಕಿದ್ದರೂ ಮಾಧ್ಯಮಗಳೇಕೆ ಕೇವಲ ಕೆಲವು ವಿಷಯಗಳನ್ನಷ್ಟೇ ತೀವ್ರವಾದ ಆಸಕ್ತಿಯಿಂದ ಪ್ರಸಾರ ಮಾಡುತ್ತಾರೆ ಅನ್ನೋದು ಅದ್ಯಾವ ಮಹತ್ತರ ವಿಷಯವೋ?!

ಸದಾ ಅಬ್ಬರಿಸಿಯೇ ಮಾತನಾಡುವ ವಾರ್ತಾ ವಾಚಕರದಂತೂ ವಿಚಿತ್ರ ಮ್ಯಾನರಿಸಂ. ತೀರಾ ವೈಯಕ್ತಿಕ ದ್ವೇಷವಿದೆ ಅನ್ನುವಂತೆ ಇರುತ್ತದೆ ಅವರ ಹಾವಭಾವ ಒಮ್ಮೊಮ್ಮೆ. ರಾಜಕಾರಣಿಗಳು ಎಲ್ಲೇ ಹೋದರೂ ಹಿಂಬಾಲಿಸುವ ಮಾಧ್ಯಮಗಳು ಅವರನ್ನು ಮತ್ತು ಅವರ ಸಾರ್ವಜನಿಕ ನಡೆನುಡಿಗಳನ್ನು ಎಚ್ಚರಿಸುವಂತಹ ಕೆಲಸ ಕಡಿಮೆಯಾಗಿ, ಕೇವಲ ಅವರನ್ನು ಧೀರರಂತೆ ಬಿಂಬಿಸುವ ಅಥವಾ ಕಟುವಾಗಿ ಟೀಕಿಸುವ ಭರದಲ್ಲಿ ಏನು ಹೇಳಬೇಕೋ ಅದನ್ನು ಮರೆಯುತ್ತಿದ್ದಾರಾ ಅನ್ನುವುದು ಯೋಚಿಸಬೇಕಾದ ಸಂಗತಿ. ಕೆಲವೊಮ್ಮೆ ಸುದ್ದಿ ತಿರುಚುವಿಕೆಯೂ ಯಾವ ಅಡೆತಡೆಯಿಲ್ಲದೆ ನಡೆದಿರಬಹುದಾದ ನಿದರ್ಶನಗಳು ಆಗಾಗ ಸುದ್ದಿಯಾಗಿವೆ.

ಇನ್ನು ವಿದ್ಯುನ್ಮಾನ ಮಾಧ್ಯಮಗಳು ಏರ್ಪಡಿಸುವ ಚರ್ಚೆಗಳು ಅಸಲಿಗೆ ಚರ್ಚಾಕೂಟದಂತೆ ಭಾಸವಾಗುವುದು ತೀರಾ ವಿರಳ. ಯಾವುದೋ ಸಂತೆಯಲ್ಲಿನ ಗದ್ದಲದೊಳಗೆ ಇದ್ದೇವೇನೋ ಅನಿಸುವಂಥ ವಿಚಿತ್ರ ಸನ್ನಿವೇಶ ಅದು. ಚರ್ಚೆಯಲ್ಲಿ ವಿಷಯದ ತೀವ್ರತೆ ಮತ್ತು ವಿಷಯದ ಕುರಿತ ಆಳವಾದ ಅಧ್ಯಯನ ನಡೆಸಿರುವವರನ್ನು ಕರೆಸದೆ ಅರ್ಧಂಬರ್ಧ ತಿಳಿದುಕೊಂಡ ತಜ್ಞರನ್ನು ಒಳಗೊಳ್ಳುವಂತೆ ಮಾಡಿ ಚರ್ಚೆಯ ಅರ್ಥವನ್ನು ಹಾಳುಗೆಡವುವಂಥ ಅವಸರವೇಕೆ? ಎಲ್ಲೆಲ್ಲೂ ಈ ಮಾಧ್ಯಮಗಳದೇ ಹಾವಳಿ. ಜಾಲತಾಣಗಳಲ್ಲಿ ಇವರುಗಳು ನ್ಯೂಸ್‌ಗೆ ಕೊಡುವ ಥಂಬ್ನೇಲ್‌ಗಳೇ ನೋಡುಗರನ್ನು ಬೆಚ್ಚಿಬೀಳಿಸುವಂತೆ ಇರುತ್ತವೆ.

ಮಾಧ್ಯಮಗಳು ಅನುಭವಿ ಪತ್ರಕರ್ತರ ಅಧೀನದಲ್ಲಿ ಕಾರ್ಯಪ್ರವೃತ್ತವಾದಲ್ಲಿ ಅವುಗಳಿಗೊಂದು ರೂಪುರೇಷೆ ಮತ್ತು ವೈವಿಧ್ಯತೆ ಸಿಗಬಹುದೇನೋ? ಆದರೆ ಪ್ರಸ್ತುತ ವಾತಾವರಣ ಹಾಗಿಲ್ಲ. ಒಂದರ್ಥದಲ್ಲಿ ಈಗ ವಾರ್ತಾ ವಾಹಿನಿಗಳು ಮನರಂಜನಾ ವಾಹಿನಿಗಳಾಗಿ ಬದಲಾಗುತ್ತಿರುವುದು ವಿಪರ್ಯಾಸ. ದಶಕಗಳ ಹಿಂದೆ 'ದೂರದರ್ಶನ'ದಲ್ಲೇ ಉಪಯುಕ್ತ ಮಾಹಿತಿ ಸಿಗುತ್ತಿತ್ತು. ಆದರೆ ಪ್ರಸ್ತುತ ಕಾಲಘಟ್ಟದಲ್ಲಿ 'ಸಮೀಪದರ್ಶನ'ವಿದ್ದರೂ ಸತ್ಯ ಮತ್ತು ಮಿಥ್ಯಗಳ ನಡುವಿನ ಸೂಕ್ಷ್ಮ ಅಂತರವನ್ನು ಸಹ ನಮಗೆ ಗುರುತಿಸಲಾಗುತ್ತಿಲ್ಲ. ಆದರೂ ಅಲ್ಲೊಂದು ಇಲ್ಲೊಂದು ಮೂಲಗಳಿಂದ ಉಪಯುಕ್ತ ಮಾಹಿತಿ ದೊರಕುತ್ತಿರುವುದು ಸಮಾಧಾನಕರ.

ಇತ್ತೀಚೆಗೆ ವಿಶ್ವೇಶ್ವರ ಭಟ್ಟರು 'ವಿಶ್ವವಾಣಿ ಟಿವಿ'ಯನ್ನು ಆರಂಭಿಸುತ್ತಿದ್ದಾರೆ ಎಂಬ ಸುದ್ದಿ ಹರಿದಾಡುತ್ತಿದೆ. ಪ್ರಸ್ತುತ 'ವಿಶ್ವವಾಣಿ ಟಿವಿ' ತನ್ನ ಕಾರ್ಯಾರಂಭ ಮಾಡಿದ್ದು ಮುಂದಿನ ದಿನಗಳಲ್ಲಿ ಸ್ಯಾಟಲೈಟ್ ಟಿವಿಯಾಗಿ ಜನಮನ್ನಣೆ ಗಳಿಸಬಹುದು. ಈ ಮುಖೇನ ವಿಶ್ವೇಶ್ವರ ಭಟ್ಟರಲ್ಲಿ ಒಂದು ವಿನಂತಿ. ನಿಮ್ಮ ಸಾರಥ್ಯದಲ್ಲಿ ಪತ್ರಿಕೋದ್ಯಮ ಹೊಸದೊಂದು ಮನ್ವಂತರಕ್ಕೆ ತೆರೆದುಕೊಂಡಿದ್ದನ್ನು ನಾವು ನೋಡಿದ್ದೇವೆ. 'ವಿಶ್ವವಾಣಿ ಟಿವಿ' ಹತ್ತರಲ್ಲಿ ಹನ್ನೊಂದಾಗದೆ ವಿಭಿನ್ನತೆಯಿಂದ ಕೂಡಿರಲಿ. ಈ ಮುಖಾಂತರವಾದರೂ ವಾರ್ತಾ ವಾಹಿನಿಗಳು ನಿಖರ ಸುದ್ದಿಗಳನ್ನು ಪ್ರವಹಿಸಲಿ.

(ಲೇಖಕರು: ಹವ್ಯಾಸಿ ಬರಹಗಾರರು)

ತ್ಯಾಗ, ಕರುಣೆಯ ಮಹಾಸಾಗರ ತಾಯಿ

ನಗರ ಪ್ರದೇಶಗಳಲ್ಲಿ ಹೆಣ್ಣೆಂಬ ತಾಯಿ ಬೆಳಿಗ್ಗೆ ಎದ್ದು, ತಮ್ಮ ಮಕ್ಕಳಿಗೆ ತಿಂಡಿಯನ್ನು ಮಾಡಿ ಅವರನ್ನು ಶಾಲೆಗೆ ಕಳುಹಿಸಿ, ಗಂಡನಿಗೆ ಮಧ್ಯಾಹ್ನದ ಊಟದ ಡಬ್ಬಿ ಕಟ್ಟಿ ತಾನು ತಿನ್ನಲು ಸಮಯ ಇಲ್ಲದೆ ತಿಂಡಿಯನ್ನು ಡಬ್ಬಿಗೆ ಹಾಕಿಕೊಂಡು ಓಡೋಡಿ ರೈಲು ಅಥವಾ ಬಸ್ಸನ್ನು ಏರಿ ಫ್ಯಾಕ್ಟರಿ ಅಥವಾ ಕಂಪನಿ ಕೆಲಸಗಳಿಗೆ ಹೋಗುವ ದಾರಿಯಲ್ಲಿ ತಿಂಡಿಯನ್ನು ತಿಂದು ಸಾಯಂಕಾಲ ಮನೆಗೆ ಬರುವಾಗ ತರಕಾರಿ ಹಣ್ಣುಗಳನ್ನು ಚೀಲಕ್ಕೆ ಹಾಕಿಕೊಂಡು ಬಂದು ಮನೆಯಲ್ಲಿ ಅಡುಗೆ ಮಾಡಿ ಮಕ್ಕಳಿಗೆ ತಿನ್ನಿಸುತ್ತಾ ಮಕ್ಕಳ ಮನೆಯ ಪಾಠವನ್ನು ಗಮನಿಸುತ್ತಾಳೆ.

ವಾತ್ಸಲ್ಯ
ಪ್ರೊ. ಸಿ. ಶಿವರಾಜು
vveditoped@gmail.com

ಅಮ್ಮ ಎಂಬ ಎರಡಕ್ಷರದ ಮಹತ್ವ ಅತಿಶ್ರೇಷ್ಠವಾದುದ್ದು. ಸೃಷ್ಟಿಕರ್ತೆ, ಜನ್ಮದಾತೆ, ಜನನಿ, ತಾಯಿ, ಅವ್ವ ಎಂಬಿತ್ಯಾದಿ ಹೆಸರುಗಳಿಂದ ಅಮ್ಮನನ್ನು ಕರೆಯುತ್ತೇವೆ. ಆಕೆಯು ಮಕ್ಕಳ ಮೇಲೆ ತೋರುವ ಪ್ರೀತಿಯನ್ನು, ಜೀವನದುದ್ದಕ್ಕೂ ಮಾಡಿದ ತ್ಯಾಗವನ್ನು, ಸಾಕು ಸಾಕೆನಿಸುವಷ್ಟು ನೀಡುವ ವಾತ್ಸಲ್ಯವನ್ನು ಕೆಲವು ಪದಗಳಲ್ಲಿ ಹಿಡಿದಿಡುವುದು ಸಾಧ್ಯವಿಲ್ಲ. ಅಮ್ಮ ಎಂದರೆ ನಮ್ಮನ್ನು ಹಡೆದವ್ವ ಒಂಭತ್ತು ತಿಂಗಳು ಹೆತ್ತು ಹೊತ್ತು ಬೆಳೆಸಿದ್ದಾಳೆ. ಅಮ್ಮನ ಪ್ರೀತಿ ವಿಶ್ವದಲ್ಲೇ ಅತಿದೊಡ್ಡ ಪ್ರೀತಿ. ನಮ್ಮನ್ನು ಕಷ್ಟಪಟ್ಟು ಬೆಳೆಸಿದವಳು.

ಅಮ್ಮ ಕೊಡುವ ರಕ್ಷಣೆಗೆ, ಪ್ರೀತಿಗೆ, ಸಮಯದ ಮಿತಿ ಇಲ್ಲ. ನಿದ್ದೆ ಇಲ್ಲದ ರಾತ್ರಿಗಳು ಮತ್ತು ದಣಿವರಿಯದ ದಿನಗಳನ್ನು ಕಳೆದಿರುವುದೆಷ್ಟು? ಅವಳ ಆಲಿಂಗನವು ನೆಮ್ಮದಿಯ ಅಭಯಾರಣ್ಯವೇ ಆಗಿದೆ. ಅಮ್ಮ ಎಂಬ ಪದಕ್ಕೆ ಹೆಣ್ಣಿನ ಬದುಕನ್ನೇ ಸಾರ್ಥಕಗೊಳಿಸುವ ಶಕ್ತಿ ಇದೆ. ಸದಾ ಮಕ್ಕಳ ಸುಖ ಬಯಸುವ ತ್ಯಾಗಮಯಿ. ಅವಳ ಋಣ ತೀರಿಸಲು ಒಂದು ಜನ್ಮ ಸಾಕಾಗುವುದಿಲ್ಲ. ಕೋಟಿ ದೇವರ ಹಿಂದಿಕ್ಕಿ ಕಾಣುವ ಮೊದಲ ದೇವತೆ, 'ತಾಯಿಗಿಂತ ಬಂಧುವಿಲ್ಲ' ಈ ವಿಷಯದಲ್ಲಿ ನಮ್ಮನ್ನು ಜಗತ್ತಿಗೆ ಕರೆತರುವ ಮೊದಲ ವ್ಯಕ್ತಿ ಅವಳು. ನಮ್ಮ ಜೀವನದ ಮೊದಲ ಶಿಕ್ಷಕಿ, ಅಕ್ಷರದಾತೆ, ಯಾವಾಗಲೂ ನಮ್ಮ ಪಾಲನೆಯಲ್ಲಿ ಮೊದಲ ಪಾತ್ರ ವಹಿಸುವ ಮಹಾಕರುಣಾಮಯಿ, ಅವಳ ಪ್ರೀತಿ ಕಾಳಜಿ ಮತ್ತು ಬೆಂಬಲ ಬಹಳ ದೊಡ್ಡದು. ಅಮ್ಮನ ವಿನಮ್ರ ನುಡಿ ಮತ್ತು ದಯೆಯ ಸ್ವಭಾವವೇ ಅಚ್ಚುಮೆಚ್ಚು. ಆದ್ದರಿಂದಲೇ ಸ್ವಾಮಿ ವಿವೇಕಾನಂದರವರು 'ತಾಯಿಯ ಹೃದಯವು ಮಗುವಿನ ಶಾಲಾ ಕೋಣೆಯಾಗಿದೆ' ಎಂಬ ಸತ್ಯದ ನುಡಿಯನ್ನು ನಮಗೆ ತಿಳಿಸಿದ್ದಾರೆ.

ಜೀವನದಲ್ಲಿ ನಮಗೆ ನುಡಿಯಲು ಬರುವಂತಹ ಮೊದಲ ಪದ ಅಮ್ಮ. ತಾಯಿ ಮತ್ತು ಮಕ್ಕಳ ಮಧ್ಯೆ ಇರುವುದು ಬೆಲೆಕಟ್ಟಲಾಗದ ಪ್ರೀತಿ, ಮಮತೆ, ವಾತ್ಸಲ್ಯ, ಮಮಕಾರ. ಮಕ್ಕಳನ್ನು ಹೆತ್ತು, ಹೊತ್ತು, ಸಾಕಿ, ಸಲುಹಿ ಉತ್ತಮ ಭವಿಷ್ಯ ರೂಪಿಸುವಲ್ಲಿ ತಾಯಿಯ ಪಾತ್ರ ಪ್ರಧಾನವಾದುದ್ದು. ಅವಳು ಮಕ್ಕಳ ಭವಿಷ್ಯ ರೂಪಿಸುವ ಮಹಾಶಿಲ್ಪಿ ಎಂಬುದು ಸಾರ್ವಕಾಲಿಕ ಸತ್ಯ. ಅದು ಯಾವ ಕಾಲಕ್ಕೂ ಬದಲಾಗಲು ಸಾಧ್ಯವೇ ಇಲ್ಲ. ಅಮ್ಮಂದಿರ ಪ್ರಪಂಚ ಚಿಕ್ಕದು, ಆದರೆ ತಾಯಿಯ ಪ್ರೀತಿ ಆಳತೆಗೆ ಮೀರಿದ್ದು. ಅಮ್ಮ ಮೊದಲ ಗುರು, ಮಾರ್ಗದರ್ಶಿ, ಪಾಲನೆ ಪೋಷಣೆಯ ಮೇರು ಶಿಖರ, ಸ್ಫೂರ್ತಿದಾತೆ, ವಿನಮ್ರತೆಯ ಮತ್ತು ದಯೆಯ ಮತ್ತೊಂದು ಹೆಸರೇ ತಾಯಿ. ಮಕ್ಕಳ ವ್ಯಕ್ತಿತ್ವವನ್ನು ರೂಪಿಸುವ ಮಹಾಮಾತೆ. ಮಕ್ಕಳ ದೊಡ್ಡ ಶಕ್ತಿ, ಜೀವನದಲ್ಲಿ ಕುಟುಂಬದ ಸನ್ನಿವೇಶವನ್ನು ಸಮರ್ಪಕವಾಗಿ ನಿಭಾಯಿಸುವ ಮಹಾಚಾಣಾಕ್ಷೆ, ಮಗುವಿಗೆ ಸಾಮಾಜಿಕ ಜೀವನದ ಮೌಲ್ಯವನ್ನು ಹಾಗೂ ಹೇಗೆ ಬದುಕಬೇಕೆಂಬ ರೀತಿ, ರಿವಾಜುಗಳನ್ನು ತಮ್ಮಲ್ಲಿರುವ ಸಾಮರ್ಥ್ಯವನ್ನು ತುಂಬುವ ಶಕ್ತಿ ಅವಳಿಗೆ ಮಾತ್ರ ಇರುತ್ತದೆ. ಅಮ್ಮನ ಬಗ್ಗೆ ವರ್ಣಿಸುವುದಕ್ಕೆ ಪದಗಳೇ ಸೋತು ಬಿಡುತ್ತವೆ. ಅಕ್ಷರದಿಂದ ಅಮ್ಮನನ್ನು ವರ್ಣಿಸಲು ಸಾಧ್ಯವಿಲ್ಲ.

ತಾಯಿ ಎಂಬ ಶಿಲ್ಪಿಗೆ ಆಕಾರವಿಲ್ಲದ ಕಲ್ಲನ್ನು ಸಂಸ್ಕಾರವೆಂಬ ಉಳಿಪೆಟ್ಟಿನಿಂದ ಪೂಜನೀಯ ಮೂರ್ತಿಯನ್ನಾಗಿಸುವ ತಾಕತ್ತಿದೆ. ವಿಶ್ವದಲ್ಲಿ ಮಹೋನ್ನತವಾದುದ್ದನ್ನು ಸಾಧಿಸಿದ ಶೇ. 95 ರಷ್ಟು ಜನರ ಸಾಧನೆಯಲ್ಲಿ ನಿಸ್ಸಂದೇಹವಾಗಿ ಅಮ್ಮನ ಬೆವರಿದೆ ಎಂದೇಳಬಹುದು. ಹಸಿದ ಹೊಟ್ಟೆಯ ತ್ಯಾಗವಿದೆ. ಮೈ ಮೇಲೆ ಮನೆ ಬಿದ್ದರೂ ಮಗುವನ್ನು ಹೊಟ್ಟೆಯಲ್ಲಿ ರಕ್ಷಿಸಿದ ಮಹಾತಾಯಿ ಅವಳು. ಮಕ್ಕಳು ಬೆಳೆದು ತಮ್ಮ ಸ್ವಂತ ಪ್ರಯಾಣವನ್ನು ಪ್ರಾರಂಭಿಸಿದಾಗ ತಾಯಿಯ ಪಾತ್ರವು ವಿಶ್ವಾಸಾರ್ಹ ಮತ್ತು ಸ್ನೇಹಪೂರ್ಣವಾಗಿ ವಿಕಸನಗೊಳ್ಳುತ್ತದೆ. ತೆರೆದ ತೋಳುಗಳು ಮತ್ತು ತೆರೆದ ಹೃದಯದಿಂದ ಅವಳು ನಗು ಮತ್ತು ಕಣ್ಣೀರನ್ನು ಸಮಾನವಾಗಿ ಸ್ವಾಗತಿಸುತ್ತಾಳೆ. ಸೋಲಿನ ಕ್ಷಣಗಳಲ್ಲಿ ಸಾಂತ್ವಾನವನ್ನು ನೀಡುತ್ತಾಳೆ. ಅಮ್ಮನ ಪ್ರೀತಿಯು ತಲೆಮಾರುಗಳಾದ್ಯಂತ ಹೃದಯಗಳನ್ನು ಬಂಧಿಸುವ ಎಳೆಯಾಗಿದೆ. ಜೀವನವನ್ನು ರೂಪಿಸುವಲ್ಲಿ ಅಮ್ಮನ ಪರಿಶ್ರಮವು ಅಗಾಧವಾದುದ್ದು. ಸ್ವಂತ ಮಕ್ಕಳಿಂದ ಪರಿತಪ್ತಳಾಗಿ ವೃದ್ಧಾಶ್ರಮದ ಮೂಲೆಯೊಂದರಲ್ಲಿ ಕೂತರು, ಅದೇ ಮಗನ ಬಾಲ್ಯವನ್ನು ನೆನಪಿಸಿಕೊಂಡು ನಸು ನಗೆ ಬೀರುತ್ತಾ ಆತನ ಭವಿಷ್ಯ ಚೆನ್ನಾಗಿರಬೇಕೆಂದು ಎರಡು ಕೈಯೆತ್ತಿ ಹಾರೈಸುವ ಅಮ್ಮನನ್ನು ಲೇಖನದಿಂದ ಕಟ್ಟಿ ಹಾಕುವುದಕ್ಕೆ ಸಾಧ್ಯವೇ?

ಬೆಂಗಳೂರಿನಂತಹ ನಗರ ಪ್ರದೇಶದಲ್ಲಿ ವಾಸಿಸುತ್ತಿರುವ ಒಂದು ಸಣ್ಣ ಕುಟುಂಬ. ಆ ಕುಟುಂಬಕ್ಕೆ ಒಬ್ಬಳೇ ಹೆಣ್ಣು ಮಗು. ಆ ಮಗುವಿಗೆ ಹುಟ್ಟಿನಿಂದಲೇ ಕಿವಿ ಕೇಳಿಸುವುದಿಲ್ಲ ಮಾತನಾಡಲು ಬರುವುದಿಲ್ಲ, ಆದರೂ ತನ್ನ ಮಗಳನ್ನು ವಿದ್ಯಾಭ್ಯಾಸ ಮಾಡಿಸಿ ಬಹಳ ಎತ್ತರಕ್ಕೆ ಬೆಳೆಸಬೇಕೆಂಬ ಹಂಬಲ ತಂದೆ ತಾಯಿಗೆ ಇರುತ್ತದೆ. ತನ್ನ ತಾಯಿ ಆ ಮಗುವಿನ ಬೆಳವಣಿಗೆಗೋಸ್ಕರ ತನ್ನ ಜೀವನವನ್ನೇ ಮುಡುಪಾಗಿಟ್ಟು ವಿದ್ಯಾಭ್ಯಾಸ ಕೊಡಿಸುವ ಜತೆಗೆ ಭರತನಾಟ್ಯ ಶಾಲೆಗೆ ಸೇರಿಸಿ ಭರತನಾಟ್ಯವನ್ನು ಕಲಿಸುತ್ತಾಳೆ. ಆ ಮಗು ಭರತನಾಟ್ಯದಲ್ಲಿ ಪ್ರಸಿದ್ಧಿಯನ್ನು ಪಡೆದು ಕರ್ನಾಟಕದಲ್ಲೇ ಅಲ್ಲದೇ ದೇಶ ವಿದೇಶಗಳಲ್ಲಿ ಹೆಸರನ್ನು ಗಳಿಸುತ್ತಾಳೆ. ಆಕೆಯ ಅಮ್ಮನಿಗೆ ಮಗಳ ಬೆಳವಣಿಗೆಯನ್ನು ನೋಡಿ ಅವಳಿಗೆ ಆಗುವ ಆನಂದ ಹೇಳಲಿಕ್ಕೆ ಸಾಧ್ಯವಿಲ್ಲ. ಅಮ್ಮ ಎಂದರೆ ಮಹಾತ್ಯಾಗಿ ಎಂಬುದನ್ನು ನಾವು ಇಲ್ಲಿ ಅರಿಯಬೇಕಾಗಿದೆ. ತಮ್ಮ ಮಗುವಿಗೆ ಸತ್ಯದ ಮಾರ್ಗವನ್ನು ತೋರಿಸುವ ಮೊದಲ ಶಿಕ್ಷಕಿ ತಾಯಿ ಹಾಗೂ ಅತೃಪ್ತಳಾಗಿರುವ ಹೆಣ್ಣಿನ ಕುಟುಂಬವು ಎಂದಿಗೂ ಸಂತೋಷದಿಂದಿರಲು ಸಾಧ್ಯವಿಲ್ಲ ಎಂಬ ಅರಿವನ್ನು ನಮಗೆ ಬಸವಣ್ಣನವರು ನೀಡಿದ್ದಾರೆ.

ತಮಿಳುನಾಡಿನ ಕೊಳಗೇರಿಯಲ್ಲಿ ಹುಟ್ಟಿ ಬೆಳೆದು ತನ್ನ ಪ್ರಾಥಮಿಕ ಶಿಕ್ಷಣದಿಂದ ಪದವಿಯವರೆಗೆ ಶಿಕ್ಷಣ ಮುಗಿಸಿ ಉನ್ನತ ವಿದ್ಯಾಭ್ಯಾಸಕ್ಕೆ ಹೈದ್ರಾಬಾದಿನ 'ಇಂಡಿಯನ್ ಇನ್ಸಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್' (MMJ) ಗೆ ಪ್ರವೇಶ ಪಡೆದು ಎಂ.ಬಿ.ಎ ಯಲ್ಲಿ ಪ್ರಥಮ ರ‍್ಯಾಂಕ್ ಗಳಿಸಿ ಸಹಜವಾಗಿ ಖಾಸಗಿ ಕಂಪನಿಗೆ ಉದ್ಯೋಗಕ್ಕೆ ಸೇರಬೇಕೆಂಬುದು ಸಾಮಾನ್ಯರ ಬಯಕೆಯಾಗಿರುತ್ತದೆ. ಆದರೆ ವಿಭಿನ್ನವಾಗಿ ಯೋಚಿಸಿದ ಶರತ್‌ಬಾಬು ತನ್ನ ತಾಯಿ ತಾನು ಚಿಕ್ಕ ವಯಸ್ಸಿನಲ್ಲಿರುವಾಗಲೆ ತನ್ನ ವಿದ್ಯಾಭ್ಯಾಸಕ್ಕೆ ಹಾಗೂ ಕುಟುಂಬದ ನಿರ್ವಹಣೆಗಾಗಿ ಬೆಳಗಿನ ಜಾವ ಮೂರು ಗಂಟೆಗೆ ಎದ್ದು ಇಡ್ಲಿಯನ್ನು ಬೇಯಿಸಿ ತನ್ನ ಕೊಳಗೇರಿಯಲ್ಲಿ ವ್ಯಾಪಾರ ಮಾಡಿ ಸಂಸಾರ ಸಾಗಿಸುತ್ತಿದ್ದ ಅಮ್ಮನ ಸ್ಫೂರ್ತಿಯನ್ನು ಶರತ್‌ಬಾಬು ಮೆಲುಕು ಹಾಕಿಕೊಂಡು ನಾನು ಕೂಡ ಹೊಟೇಲ್ ಬ್ಯುಸಿನೆಸ್ ಮಾಡಬೇಕೆಂದು ಬ್ಯಾಂಕಿನಿಂದ ಸಾಲ ಪಡೆದು, ಹೈದರಾಬಾದಿನಲ್ಲೇ ಹೊಟೇಲ್ ತೆಗೆದು ಕೈ ಸುಟ್ಟುಕೊಂಡು ಸಾಲವಂತನಾಗಿರುವಾಗ ಗೋವಾದ ವಿಶ್ವವಿದ್ಯಾಲಯದ ಕ್ಯಾಂಟೀನ್ ಒಂದರಲ್ಲಿ 1500 ವಿದ್ಯಾರ್ಥಿಗಳಿಗೆ ತಿಂಡಿ ಊಟ ತಯಾರು ಮಾಡಿ ಕೊಡುವ ಟೆಂಡರ್ ತನ್ನದಾಗಿಸಿಕೊಂಡು ಹಗಲೂ ರಾತ್ರಿ ದುಡಿದು ಕೆಲವೇ ತಿಂಗಳುಗಳಲ್ಲಿ ಬ್ಯಾಂಕಿನ ಸಾಲ ತೀರಿಸಿ ಬಂಡವಾಳ ಮಾಡಿಕೊಂಡು ಈಗ ಹತ್ತಾರು ಹೊಟೇಲ್‌ಗಳನ್ನು ತೆರೆದು ದೊಡ್ಡಉದ್ಯಮವನ್ನಾಗಿ ಮಾಡಿ ಸಾವಿರಾರು ಕೊಳಗೇರಿ ಜನಗಳಿಗೆ ಉದ್ಯೋಗವನ್ನು ನೀಡುವುದರ ಮೂಲಕ ದೇಶದ ದೊಡ್ಡಉದ್ಯಮಿಯಾಗಿದ್ದಾರೆ. ತನ್ನ ತಾಯಿಯು ಸಂಸಾರ ನೀಗಿಸಲಿಕ್ಕೋಸ್ಕರ ಹಾಗೂ ತನ್ನ ಮಗನ ವಿದ್ಯಾಭ್ಯಾಸ ಮಾಡಿಸುವುದಕ್ಕೋಸ್ಕರ ಮಾಡುತ್ತಿದ್ದ ಇಡ್ಲಿ ತಯಾರಿಕೆ ಮತ್ತು ಮಾರಾಟದಿಂದ ಸ್ಫೂರ್ತಿ ಪಡೆದ ಬಾಬು ರವರು ತಾನು ಎಂ.ಬಿ.ಎ ಪದವಿಯನ್ನು ಪಡೆದು ಹೊಟೇಲ್ ಉದ್ಯಮವನ್ನು ಮಾಡಿ ಸಾವಿರಾರು ಕೊಳಗೇರಿ ಜನರಿಗೆ ಉದ್ಯೋಗ ನೀಡಿ ಇಂದಿಗೂ ಕೋಟಿ ಕೋಟಿ ವಿದ್ಯಾವಂತರಿಗೆ ಸಾಮಾನ್ಯ ಜನರಿಗೆ ಮಾದರಿಯಾಗಿ ಸ್ಫೂರ್ತಿಯಾಗಿ ನಮ್ಮ ಮುಂದೆ ಆದರ್ಶವ್ಯಕ್ತಿಯಾಗಿ ಬದುಕುತ್ತಿದ್ದಾರೆ. ಅಂದರೆ ತಾಯಿ ಯಾವ ವಿಚಾರದಲ್ಲಿ ಸ್ಫೂರ್ತಿಯಾಗಿಲ್ಲ? ಆಸರೆಯಾಗಿಲ್ಲ? ಮಾದರಿಯಾಗಿಲ್ಲ? ಎಂಬುದನ್ನು ಹುಡುಕಿದರೂ ಸಿಗುವುದಿಲ್ಲ. ಅಮ್ಮ ಎಂಬ ಆ ಮಹಾತಾಯಿಯಿಂದಲೇ ಈ ಜಗತ್ತು ಬದಲಾವಣೆಯನ್ನು ಕಂಡಿದೆ ಬೆಳವಣೆಯಾಗುತ್ತಿದೆ ಎಂದರೆ ತಪ್ಪಾಗುವುದಿಲ್ಲ. ಆದ್ದರಿಂದಲೇ ಲೇಖಕ, ಚೇತನ್ ಭಗತ್ ರವರು 'ತಾಯಿಯ ಪ್ರೀತಿಯು ಸಾಮಾನ್ಯ ಮನುಷ್ಯನಿಗೆ ಅಸಾಧ್ಯವಾದುದನ್ನು ಮಾಡಲು ಅನುವು ಮಾಡಿಕೊಡುವ ಇಂಧನವಾಗಿದೆ' ಎಂಬುದಾಗಿ ತಾಯಿಯನ್ನು ಕುರಿತು ವರ್ಣಿಸಿದ್ದಾರೆ.

ಛತ್ರಪತಿ ಶಿವಾಜಿ ಮಹಾರಾಜರ ಆಸ್ಥಾನದಲ್ಲಿ ಒಂದು ಬಾರಿ ಯುದ್ಧದ ಪ್ರಸಂಗ ಬಂದೊದಗುತ್ತದೆ. ಆಗ ಮಹಾರಾಜರು ಸೈನ್ಯಾಧಿಪತಿಯನ್ನು ಕರೆದು ಯುದ್ಧಕ್ಕೆ ಸನ್ನದ್ಧರಾಗುವಂತೆ ಆಜ್ಞಾಪಿಸುತ್ತಾರೆ. ಯುದ್ಧಕ್ಕೆ ಸಿದ್ಧರಾಗುವ ಸಂದರ್ಭದಲ್ಲಿ ಮಹಾರಾಜರು ತಲೆಗೆ ಹಾಕಿಕೊಳ್ಳುವ ಶಿರಸ್ತ್ರಾಣವನ್ನು ತೆಗೆದುಕೊಳ್ಳಲು ಹೋದಾಗ ಆ ಶಿರಸ್ತ್ರಾಣದ ಒಳಗಡೆ ಗುಬ್ಬಚ್ಚಿವೊಂದು ಗೂಡನ್ನು ಕಟ್ಟಿ ಮರಿಗಳನ್ನು ಪೋಷಣೆ ಮಾಡುತ್ತಿರುತ್ತದೆ. ಅದನ್ನು ಕಂಡ ಶಿವಾಜಿ ಮಹಾರಾಜರ ತಾಯಿ ಜೀಜಾಬಾಯಿಯವರು ಶಿರಸ್ತ್ರಾಣವನ್ನು ತೆಗೆದುಕೊಳ್ಳಬೇಡ ಎಂದು ಆದೇಶಿಸುತ್ತಾರೆ. ಏಕೆಂದರೆ ಅದರಲ್ಲಿ ಗುಬ್ಬಚ್ಚಿ ಮರಿಗಳನ್ನು ಹಾಕಿ ಪೋಷಣೆ ಮಾಡುತ್ತಿದೆ. ನನ್ನ ಮಗನಾಗಿ ನೀನು ನನಗೆ ಎಷ್ಟು ಮುಖ್ಯವೋ ಅಷ್ಟೇ ಆ ಗುಬ್ಬಚ್ಚಿ ಮರಿಗಳು ಕೂಡ ಮುಖ್ಯ, ಏಕೆಂದರೆ ಅದರ ಮರಿಗಳ ರಕ್ಷಣೆ ನಮ್ಮ ಕರ್ತವ್ಯ. ಆದ್ದರಿಂದ ನೀನು ಶಿರಸ್ತ್ರಾಣವಿಲ್ಲದೇ ನನ್ನ ಆಶೀರ್ವಾದದಿಂದ ಯುದ್ಧದಲ್ಲಿ ಗೆಲ್ಲುತ್ತಿಯಾ ಎನ್ನುವ ನಂಬಿಕೆಯಿಂದ ಯುದ್ಧಕ್ಕೆ ಸನ್ನದ್ಧನಾಗು ಎಂದು ತಾಯಿ ಜೀಜಾಬಾಯಿಯವರು ಆಜ್ಞಾಪಿಸುತ್ತಾರೆ.

ಅದರಂತೆ ಶಿವಾಜಿ ಮಹಾರಾಜರು ತನ್ನ ತಾಯಿಯ ಆಶೀರ್ವಾದವೇ ನನಗೆ ಶ್ರೀರಕ್ಷೆ, ಅದುವೇ ಶಿರಸ್ತ್ರಾಣ ಎಂದು ಭಾವಿಸಿ, ಯುದ್ಧಕ್ಕೆ ತೆರಳಿ ಯುದ್ಧದಲ್ಲಿ ಜಯಶೀಲರಾಗಿ ಆಸ್ಥಾನಕ್ಕೆ ಹಿಂತಿರುಗುತ್ತಾರೆ. ಇದನ್ನು ಕಂಡ ತಾಯಿ ಜೀಜಾಬಾಯಿಯವರು ಶಿರಸ್ತ್ರಾಣವಿಲ್ಲದೆ ಯುದ್ಧವನ್ನು ಗೆದ್ದ ಮಗನನ್ನು ಅಪ್ಪಿಕೊಂಡು ಆನಂದ ಭಾಷ್ಪವನ್ನು ಸುರಿಸುತ್ತಾರೆ. ಇಲ್ಲಿ ಜೀಜಾಬಾಯಿಯವರಿಗೆ ತನ್ನ ಮಕ್ಕಳಂತೆ ಗುಬ್ಬಚ್ಚಿ ಮರಿಗಳ ಮೇಲಿರುವ ಪ್ರೀತಿ, ವಾತ್ಸಲ್ಯ, ಮಾನಿವೀಯತೆ, ಹಾಗೂ ತನ್ನ ಮಗ ಶಿವಾಜಿ ಶಿರಸ್ತ್ರಾಣವಿಲ್ಲದೆ ಯುದ್ಧವನ್ನು ಮಾಡಲು ಪ್ರೇರೇಪಿಸುವುದರ ಮೂಲಕ ಅವನ ಶೌರ್ಯ, ಪರಾಕ್ರಮ, ಚಾಣಾಕ್ಷತೆ, ಎದೆಗಾರಿಕೆಯನ್ನು ಜಗತ್ತಿಗೆ ತೋರಿಸುವ ತಾಯಿಯ ಹೃದಯವಂತಿಕೆಯು ಆದರ್ಶವಾಗಿದೆ ಮತ್ತು ಪ್ರಶಂಸನೀಯವೂ ಆಗಿದೆ. ಹಾಗಾಗಿ ರವೀಂದ್ರನಾಥ ಟ್ಯಾಗೋರ್ ರವರು ದೇವರು ಎಂಬ ನಂಬಿಕೆಯ ಒಂದು ಶಕ್ತಿ ಎಲ್ಲೆಡೆ ಇರಲು ಸಾಧ್ಯವಿಲ್ಲ, ಆದ್ದರಿಂದ ತಾಯಿಯ ರೂಪದಲ್ಲಿ ಇದ್ದು ಎಲ್ಲವನ್ನು ನಿರ್ವಹಿಸುತ್ತಾಳೆ. ಎಂಬ ಸತ್ಯವನ್ನು ನಮಗೆ ತಿಳಿಸಿದ್ದಾರೆ.

ಜೀವನವೆಂಬ ಪಯಣದಲ್ಲಿ ಅಮ್ಮನ ಪಾತ್ರಗಳನ್ನು ವಿವರಿಸಲಿಕ್ಕೆ ಪದಗಳಿಂದ ಸಾಧ್ಯವಿಲ್ಲ. ಈ ಜಗತ್ತಿನಲ್ಲಿ ಕಾಣಿಸುವ ಅಥವಾ ಮಾಡಲು ಸಾಧ್ಯವಾಗುವ ಎಲ್ಲಾ ಕೆಲಸಗಳನ್ನು ಒಂದು ಹೆಣ್ಣು ಮಾಡುತ್ತಾಳೆ. ಹಳ್ಳಿಗಳಲ್ಲಾಗಲೀ ನಗರ ಪ್ರದೇಶಗಳಲ್ಲಾಗಲೀ ಹೆಣ್ಣೆಂಬ ತಾಯಿ ಬೆಳಿಗ್ಗೆ ಎದ್ದು, ತಮ್ಮ ಮಕ್ಕಳಿಗೆ ತಿಂಡಿಯನ್ನು ಮಾಡಿ ಅವರನ್ನು ಶಾಲೆಗೆ ಕಳುಹಿಸಿ, ಗಂಡನಿಗೆ ಮಧ್ಯಾಹ್ನದ ಊಟದ ಡಬ್ಬಿ ಕಟ್ಟಿ ತಾನು ತಿನ್ನಲು ಸಮಯ ಇಲ್ಲದೆ ತಿಂಡಿಯನ್ನು ಡಬ್ಬಿಗೆ ಹಾಕಿಕೊಂಡು ಓಡೋಡಿ ರೈಲು ಅಥವಾ ಬಸ್ಸನ್ನು ಏರಿ ಫ್ಯಾಕ್ಟರಿ ಅಥವಾ ಕಂಪನಿ ಕೆಲಸಗಳಿಗೆ ಹೋಗುವ ದಾರಿಯಲ್ಲಿ ತಿಂಡಿಯನ್ನು ತಿಂದು ಸಾಯಂಕಾಲ ಮನೆಗೆ ಬರುವಾಗ ತರಕಾರಿ ಹಣ್ಣುಗಳನ್ನು ಚೀಲಕ್ಕೆ ಹಾಕಿಕೊಂಡು ಬಂದು ಮನೆಯಲ್ಲಿ ಅಡುಗೆ ಮಾಡಿ ಮಕ್ಕಳಿಗೆ ತಿನ್ನಿಸುತ್ತಾ ಮಕ್ಕಳ ಮನೆಯ ಪಾಠವನ್ನು ಗಮನಿಸಿ ಗಂಡನಿಗೂ ಊಟ ಬಡಿಸುವಾಗ, ಆತ ಕುಡುಕನಾದರೆ ಅವನಿಂದ ಏಟುಗಳನ್ನು ತಿಂದು ಕೊನೆಗೆ ತಡರಾತ್ರಿ ಉಳಿದು ಬಳಿದದ್ದನ್ನು ಸ್ವಲ್ಪ ಊಟ ಮಾಡಿ, ಮಧ್ಯ ರಾತ್ರಿಗೆ ಮಲಗಿ ತನ್ನೆಲ್ಲಾ ನೋವುಗಳನ್ನು ತಡೆದುಕೊಂಡು ಮಕ್ಕಳಿಗೆ ನಮ್ಮಂತಹ ಬದುಕು ಬರಬಾರದು, ಹೇಗಾದರೂ ವಿದ್ಯಾಭ್ಯಾಸ ಮಾಡಿಸಬೇಕೆಂಬ ಹಂಬಲದಿಂದ ಹಗಲು ರಾತ್ರಿ ಶ್ರಮಪಟ್ಟು ಮಕ್ಕಳನ್ನು ದೊಡ್ಡವರನ್ನಾಗಿ ಮಾಡಿ ಅವರು ಚೆನ್ನಾಗಿ ಬದುಕುವುದನ್ನು ನೋಡುವುದೇ ಅಮ್ಮನ ಅಂತಿಮ ಗುರಿಯಾಗಿರುತ್ತದೆ.

ಈ ಜಗತ್ತು ಕಂಡ ಅಪ್ರತಿಮ ಸಮಾಜಸೇವಕಿ ಮದರ್ ತೆರೇಸಾ ಕೂಡ ಒಬ್ಬರು ಆದರ್ಶ ಅಮ್ಮ. ತಾಯಿಯಾದವರು ಕೆಲವು ಮಕ್ಕಳಿಗೆ ಮಾತ್ರ ಜನ್ಮ ನೀಡುತ್ತಾಳೆ. ಆದರೆ ತೆರೆಸಾ ರವರು ಕೋಟಿ ಕೋಟಿ ಜನರಿಗೆ ಜನ್ಮ ನೀಡದಿದ್ದರೂ ಅವರಿಗೆ ಆಸರೆಯಾಗಿ ಅವರಿಗೆ ಶಿಕ್ಷಣ ನೀಡುವಮೂಲಕ ಅನಾಥಮಕ್ಕಳಿಗೆ ಆಸರೆಯಾಗಿ ವಿದ್ಯಾಭ್ಯಾಸ ನೀಡಿ, ವೃದ್ಧರಿಗೆ ಆಶ್ರಯದಾತೆಯಾಗಿ, ಕುಷ್ಠರೋಗಿಗಳ ದಾರಿದೀಪವಾಗಿ, ಅಬಲೆಯರ, ಹೆಣ್ಣು ಮಕ್ಕಳ ಮಾರ್ಗದರ್ಶಿಯಾಗಿ, ಬೀದಿ ಮಕ್ಕಳ, ಕೊಳಗೇರಿಮಕ್ಕಳ, ಬೆಳಕಾಗಿ ಜನ್ಮದಾತೆಯಂತೆ ಮಹಾತಾಯಿಯಾಗಿ, ತಾಯಂದಿರ ತಾಯಿಯಾಗಿ ಇಡೀ ಜಗತ್ತನ್ನೇ ಕಣ್ತೆರೆಸಿರುವ ಇವರು ಕೂಡ ಈ ಸಮಾಜದ ಎಲ್ಲಾ ದುರ್ಬಲರ ಅಮ್ಮ ಎಂದೇ ಖ್ಯಾತಿಯನ್ನು ಪಡೆದಿದ್ದಾರೆ. ಅಮ್ಮನ ಕರ್ತವ್ಯ ಜವಾಬ್ದಾರಿಗಳು ಬಹಳಷ್ಟು ಇವೆ ಅದಕ್ಕೆ ಕಾಲಮಿತಿ ಇಲ್ಲ. ಸಮಯದ ನಿಯಮವಿಲ್ಲ. ಹಗಲು ರಾತ್ರಿ ಎನ್ನದೆ ಆ ಮಕ್ಕಳ ಶ್ರೇಯಸ್ಸಿಗಾಗಿ ಅವರ ಭವಿಷ್ಯಕ್ಕಾಗಿ ದುಡಿಯುವ ಮನೊಭಾವನೆ, ನಿಷ್ಕಲ್ಮಶವಾದ ಮನಸ್ಸು ಹೆಣ್ಣಿಗೆ ಮಾತ್ರ ಇರುತ್ತದೆ, ಎಂಬುದನ್ನು ಮದರ್ ತೆರೆಸಾ ರವರಿಂದ ನಾವು ತಿಳಿಯಬಹುದಾಗಿದೆ.

ಹೀಗೆ ಅಮ್ಮ ಎಂಬ ಒಬ್ಬ ಹೆಣ್ಣು ಗಂಡನಿಗೆ ಹೆಂಡತಿಯಾಗಿ, ಅಣ್ಣನಿಗೆ ತಂಗಿಯಾಗಿ, ಮಕ್ಕಳಿಗೆ ಅಮ್ಮನಾಗಿ, ದೇಶ ರಕ್ಷಕಿಯಾಗಿ, ಸಮಾಜ ಸೇವಕಿಯಾಗಿ, ಸಂಸಾರವನ್ನು ಸಮರ್ಪಕವಾಗಿ ನಿರ್ವಹಣೆ ಮಾಡುವ ಛಲಗಾತಿಯಾಗಿ, ಉತ್ತಮ ಆಡಳಿತ ನೀಡುವ ಅಧಿಕಾರಿಯಾಗಿ, ಮಾದರಿ ರಾಜಕಾರಣಿಯಾಗಿ, ಚಂದ್ರಲೋಕಕ್ಕೆ ಹಾರಿದ ವೀರವನಿತೆಯಾಗಿ, ಯಾವುದೇ ಕೆಲಸವನ್ನು ಅಚ್ಚುಕಟ್ಟಾಗಿ ನಿರ್ವಹಿಸುವ, ಶಕ್ತಿಯೆಲ್ಲಾ ಇರುವುದು ಅಮ್ಮನಿಗೆ ಮಾತ್ರ. ಇಷ್ಟೆಲ್ಲಾ ಸಮರ್ಪಕವಾಗಿ ನಿರ್ವಹಣೆ ಮಾಡುವ ಹೆಣ್ಣಿನ ಭ್ರೂಣಹತ್ಯೆ ಮಾಡುತ್ತಿರುವ ಈ ಸಮಾಜಕ್ಕೆ ಏನನ್ನಬೇಕು? ಹೆಣ್ಣೆಂದರೆ ಅಸಡ್ಡೆ, ತುಚ್ಛ ಮನೋಭಾವ, ತಿರಸ್ಕಾರ ಅಮ್ಮ ಎಂದರೆ ವಿಪರೀತ ಸಲುಗೆ, ತಾಯಿಯನ್ನು ಕಂಡರೆ ವಿನಾಕಾರಣ ಸಿಟ್ಟು, ಹೆಣ್ಣೆಂದರೆ ಕನಿಷ್ಠ ಎಂಬ ಮನಃಸ್ಥಿತಿಗೆ ಧಿಕ್ಕಾರವಿರಲಿ. ಸಮಾಜದಲ್ಲಿ ಈ ರೀತಿಯ ಆಲೋಚನೆಗಳು, ಮನೋಭಾವನೆ ಬದಲಾಗಬೇಕಿದೆ. ಈ ಆಲೋಚನಾ ರೀತಿ ಬದಲಾಗದೆ ಅಮ್ಮನ ಮಹತ್ವ ಅರಿಯಲಿಕ್ಕೆ ಸಾಧ್ಯವಾಗುವುದಿಲ್ಲ.

(ಲೇಖಕರು: ಬೆಂಗಳೂರು ವಿಶ್ವವಿದ್ಯಾಲಯದ ಸಂಸ್ಕೃತ ವಿಭಾಗದ ಅಧ್ಯಕ್ಷರು)

ಅಚ್ಚುಕಟ್ಟು ಪ್ರದೇಶ
RNI: KARKAN/2016/67914

VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393959/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049

Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:9, Issue:218

ಸಮಾಚಾರ ಸಣ್ಣದಲ್ಲ

ಅಮೆರಿಕ ಅಧ್ಯಕ್ಷರಾಗಿ ಟ್ರಂಪ್: ಏಮಿಟ್ರಿಪ್

ವಾಷಿಂಗ್ಟನ್: ಅಮೆರಿಕ ಅಧ್ಯಕ್ಷೀಯ ಚುನಾವಣೆಯಿಂದ ಜೋ ಬೈಡನ್ ಹಿಂದೆ ಸರಿಯಲಿದ್ದಾರೆ ಎಂದು ಈ ಮೊದಲೇ ಭವಿಷ್ಯ ನುಡಿದಿದ್ದ ಅಮೆರಿಕದ ಜೋತಿಷಿ ಏಮಿಟ್ರಿಪ್, ಈಗ ಡೊನಾಲ್ಡ್ ಟ್ರಂಪ್ ಅಮೆರಿಕದ ಮುಂದಿನ ಅಧ್ಯಕ್ಷರಾಗಲಿದ್ದಾರೆ ಎಂದು ಭವಿಷ್ಯ ನುಡಿದಿದ್ದಾರೆ. ಟ್ರಂಪ್ ರಾಜಕೀಯ ಜೀವನದ ಉತ್ತುಂಗದಲ್ಲಿದ್ದಾರೆ. ಟ್ರಂಪ್ ಹತ್ಯೆ ಯತ್ನ ನಡೆದಿದೆ. ಅದೇ ಬಗೆಯಲ್ಲಿ ಹಲವು ಅಚ್ಚರಿಯ ವಿಷಯಗಳು, ಅನಿರೀಕ್ಷಿತ ಘಟನೆಗಳು ನಡೆಯಲಿವೆ ಎಂದು ಏಮಿಟ್ರಿಪ್ ಭವಿಷ್ಯ ನುಡಿದಿರುವುದಾಗಿ ವರದಿಯಾಗಿದೆ.

ತೆರಿಗೆ ಹಣ ವಾಪಸ್: ತಪ್ಪು ಮಾಹಿತಿಗೆ ಶಿಕ್ಷೆ

ದೆಹಲಿ: ಮೂಲದಲ್ಲೇ ಕಡಿತವಾಗಿರುವ ತೆರಿಗೆ ಹಣವನ್ನು ವಾಪಸ್ ಪಡೆಯುವ ಸಲುವಾಗಿ ಆದಾಯ ತೆರಿಗೆ ಲೆಕ್ಕಪತ್ರ ಸಲ್ಲಿಸುವಾಗ ಉತ್ಪ್ರೇಕ್ಷಿತ ಅಥವಾ ಸುಳ್ಳು ಮಾಹಿಡಿ ನೀಡುವುದು ಶಿಕ್ಷಾರ್ಹ ಅಪರಾಧ ಎಂದು ಆದಾಯ ತೆರಿಗೆ ಇಲಾಖೆ ಎಚ್ಚರಿಸಿದೆ. 2024-25 ಲೆಕ್ಕಾಚಾರ ವರ್ಷದಲ್ಲಿ ಆದಾಯ ತೆರಿಗೆ ಲೆಕ್ಕಪತ್ರ ಸಲ್ಲಿಕೆಗೆ ಜು.31 ಕಡೆದಿನವಾಗಿದೆ. ಜು.26ರ ವೇಳೆಗೆ ದೇಶದಲ್ಲಿ 5 ಕೋಟಿಗೂ ಹೆಚ್ಚು ಐಟಿಆರ್(ತೆರಿಗೆ ಲೆಕ್ಕಪತ್ರ) ಸಲ್ಲಿಕೆಯಾಗಿದೆ.

ಮಸೀದಿಗೆ ಕೊಟ್ಟ ಜಾಗ ನನ್ನದು: ಮಹಿಳೆ ವಾದ

ಲಕ್ನೋ: ಅಯೋಧ್ಯೆಯಲ್ಲಿ ಮಸೀದಿ ನಿರ್ಮಾಣಕ್ಕೆ ಸರಕಾರದಿಂದ ನೀಡಲಾಗಿರುವ 5 ಎಕರೆ ಜಾಗ ತಮ್ಮ ಕುಟುಂಬಕ್ಕೆ ಸೇರಿದ್ದು ಎಂದು ದೆಹಲಿಯ ಮಹಿಳೆ ರಾಣಿ ಪಂಜಾಬಿ ಎಂಬವರು ಈಗ ತಕಾರರು ತೆಗಿದ್ದಾರೆ. ರಾಮ ಜನ್ಮಭೂಮಿ-ಬಾಬ್ರಿ ಮಸೀದಿ ಪ್ರಕರಣದಲ್ಲಿ ತೀರ್ಪು ನೀಡುವ ವೇಳೆ ಸುಪ್ರೀಂ ಕೋರ್ಟ್, ಮಸೀದಿ ನಿರ್ಮಾಣಕ್ಕೂ ಅಯೋಧ್ಯೆಯಲ್ಲಿ 5 ಎಕರೆ ಜಾಗ ಮಂಜೂರು ಮಾಡುವಂತೆ ರಾಜ್ಯ ಸರಕಾರಕ್ಕೆ ಆದೇಶಿಸಿತ್ತು. ರಾಜ್ಯ ಸರಕಾರ ಅಯೋಧ್ಯೆ ಹೊರವಲಯದಲ್ಲಿ 5 ಎಕರೆ ಜಾಗ ಮಂಜೂರು ಮಾಡಿದೆ. ಆದರೆ, ಧನ್ನಿಪುರದಲ್ಲಿ ನೀಡಲಾಗಿರುವ ಜಾಗ ತಮ್ಮ ಕುಟುಂಬಕ್ಕೆ ಸೇರಿದ್ದು ಎಂದು ರಾಣಿ ಪಂಜಾಬಿ ತಕರಾರು ತೆಗೆದಿದ್ದಾರೆ. ತನ್ನ ಬಳಿ ಎಲ್ಲ ದಾಖಲೆಗಳಿದ್ದು, ಸುಪ್ರೀಂ ಕೋರ್ಟ್ ಕದ ತಟ್ಟುವುದಾಗಿ ಹೇಳಿದ್ದಾರೆ. ಇದನ್ನು ಅಲ್ಲಗಳೆದಿರುವ ಇಂಡೋ-ಇಸ್ಲಾಮಿಕ್ ಕಲ್ಚರಲ್ ಫೌಂಡೇಷನ್ ಟ್ರಸ್ಟ್ ಮುಖ್ಯಸ್ಥ ಜಫರ್ ಫಾರೂಕಿ, ಈಕೆಯ ವಾದವನ್ನು 2021ರಲ್ಲೇ ಅಲಹಾಬಾದ್ ಹೈಕೋರ್ಟ್ ತಿರಸ್ಕರಿಸಿದೆ ಎಂದಿದ್ದಾರೆ.

ದಾವೆ ವೆಚ್ಚ 4 ಕೋಟಿ ಭರಿಸಿ: ಸುಪ್ರೀಂ ಆದೇಶ

ದೆಹಲಿ: ಟ್ರೇಡ್‌ಮಾರ್ಕ್ ಉಲ್ಲಂಘನೆ ಪ್ರಕರಣದಲ್ಲಿ ನ್ಯಾಯಾಲಯದ ಆದೇಶ ಉಲ್ಲಂಘಿಸಿದ ಪತಂಜಲಿ ಲಿ.ಗೆ 4 ಕೋಟಿ ರು ದಾವೆ ವೆಚ್ಚ ಭರಿಸುವಂತೆ



ಸುಪ್ರೀಂ ಕೋರ್ಟ್ ಆದೇಶಿಸಿದೆ. 2023ರಲ್ಲಿ ಮಂಗಲಂ ಆರ್ಗ್ಯಾನಿಕ್ಸ್ ಲಿ. ಸಂಸ್ಥೆ ಪತಂಜಲಿ ವಿರುದ್ಧ ಟ್ರೇಡ್‌ಮಾರ್ಕ್ ಉಲ್ಲಂಘನೆ ಪ್ರಕರಣ ದಾಖಲಿಸಿತ್ತು. ನ್ಯಾಯಾಲಯ ಕರ್ಪೂರ ಮಾರಾಟ- ಪ್ರಚಾರ ನಡೆಸದಂತೆ ನಿರ್ಬಂಧ ವಿಧಿಸಿತ್ತು. ಆದರೆ ಪತಂಜಲಿ ಮಾರಾಟ ಮುಂದುವರೆಸಿತ್ತು. ಈ ಬಗ್ಗೆ ಮಂಗಲಂ ಲಿ. ಕೋರ್ಟ್ ಗಮನ ಸೆಳೆದಿತ್ತು. ಈ ಸಂಬಂಧ ಜೂ.24ರಂದು ಪತಂಜಲಿ ಕ್ಷಮೆ ಯಾಚಿಸಿತ್ತು. ಆದರೆ, ಆ ಬಳಿಕವೂ ಜು. 8ರವರೆಗೂ ಕರ್ಪೂರ ಮಾರಾಟ ನಡೆಸಲಾಗಿದೆ ಎಂದು ಮಂಗಲಂ ದೂರಿದೆ. ಕೋರ್ಟ್ ಆದೇಶ ಉಲ್ಲಂಘಿಸಿದ ತಪ್ಪಿಗೆ 4. ಕೋಟಿ ರು. ದಾವೆ ವೆಚ್ಚ ಪಾವತಿಸುವಂತೆ ಪತಂಜಲಿ ಸಂಸ್ಥೆಗೆ ನ್ಯಾ. ಆರ್ .ಐ.ಚಾಗ್ಲಾ ಆದೇಶಿಸಿದ್ದಾರೆ.

ಕಾಶ್ಮೀರ: ಗುಜರಿ ಸ್ಫೋಟ-4 ಸಾವು

ಬಾರಾಮುಲ್ಲಾ: ಕಾಶ್ಮೀರ ಉತ್ತರ ಭಾಗದ ಸೋಪೋರ್ ನಗರದಲ್ಲಿ ಸೋಮವಾರ ಗುಜರಿ ಮಳಿಗೆಯೊಂದರಲ್ಲಿ ಹಳೆಯ ಸಾಮಗ್ರಿಗಳನ್ನು ಲಾರಿಯಿಂದ ಇಳಿಸುತ್ತಿದ್ದಾಗ ಆಕಸ್ಮಿಕವಾಗಿ ಸ್ಫೋಟವಾಗಿದೆ, ಅವಘಡದಲ್ಲಿ ನಾಲ್ವರು ಕಾರ್ಮಿಕರು ಸಾವಿಗೀಡಾಗಿದ್ದಾರೆ. ಲಡಾಕ್‌ನಿಂದ ಬಂದಿದ್ದ ಲಾರಿಯಿಂದ ಗುಜರಿ ಸಾಮಗ್ರಿಗಳನ್ನು ಇಳಿಸುವಾಗ ಸ್ಫೋಟವಾಗಿದೆ. ಮೂವರು ಸ್ಥಳದಲ್ಲೇ ಸಾವನ್ನಪ್ಪಿದ್ದರೆ, ಒಬ್ಬ ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗದಲ್ಲಿ ಕೊನೆಯುಸಿರೆಳೆದ. ಮೃತರನ್ನು ನಾಜಿರ್ ಅಹ್ಮದ್, ಅಝೀಮ್ ಅಶ್ರಫ್ ಮಿರ್, ಆದಿಲ್ ರಶೀದ್ ಭಟ್ ಹಾಗೂ ಮಹಮದ್ ಅಜಾರ್ ಎಂದು ಗುರುತಿಸಲಾಗಿದೆ. ಹಲವರಿಗೆ ಸಣ್ಣಪುಟ್ಟ ಗಾಯಗಳಾಗಿವೆ. ಸ್ಫೋಟಕ್ಕೆ ಕಾರಣವೇನು ಎಂಬುದು ಸದ್ಯ ತಿಳಿದುಬಂದಿಲ್ಲ.

{ ರಾಜನಾಥ್ ಸಿಂಗ್ } ರಕ್ಷಣಾ ಸಚಿವ

ಅಗ್ನಿಪಥ್ ವಿಚಾರದಲ್ಲಿ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ ಜನರನ್ನು ದಾರಿ ತಪ್ಪಿಸುವ ಕೆಲಸ ಮಾಡುತ್ತಿದ್ದಾರೆ. ಪ್ರತಿಪಕ್ಷ ನಾಯಕ ಯಾವಾಗ ಉತ್ತರ ಬಯಸುತ್ತಾರೋ ಅಂದು ಸಂಸತ್‌ನಲ್ಲಿ ಅಗ್ನಿವೀರ್ ಯೋಜನೆ ಬಗ್ಗೆ ವಿವರವಾದ ಹೇಳಿಕೆ ನೀಡಲು ಸಿದ್ಧನಿದ್ದೇನೆ. ರಾಷ್ಟ್ರೀಯ ಭದ್ರತೆ, ಯೋಧರ ವಿಚಾರ ಬಹಳ ಸೂಕ್ಷ್ಮವಾದದ್ದು. ಆ ವಿಚಾರದಲ್ಲಿ ವಿವಾದ, ವೃಥಾ ಆರೋಪ ಸಲ್ಲ.



ಭಾರತದಲ್ಲೇ ಎಂಕ್ಯು 9ಬಿ ಡ್ರೋನ್ ತಯಾರಿಗೆ ತಾಂತ್ರಿಕ ನೆರವು: ಅಮೆರಿಕ ಪ್ರಸ್ತಾವನೆ

ದೆಹಲಿ: ಅತ್ಯಂತ ಶಕ್ತಿಶಾಲಿ 'ಎಂಕ್ಯು-9ಬಿ' ಡ್ರೋನ್ ಭಾರತದಲ್ಲೇ ಸಿದ್ಧಪಡಿಸಲು ಅಗತ್ಯವಿರುವ ತಾಂತ್ರಿಕ ಸಲಹೆಯನ್ನು ನೀಡಲು ಸಿದ್ಧವಿರುವುದಾಗಿ ಕೇಂದ್ರ ಸರಕಾರಕ್ಕೆ ಅಮೆರಿಕ ಪ್ರಸ್ತಾವನೆ ಸಲ್ಲಿಸಿದೆ.

'ಎಂಕ್ಯು-9ಬಿ' ಶ್ರೇಣಿಯ 31 ಡ್ರೋನ್‌ಗಳನ್ನು ಪೂರೈಸುವಂತೆ ಭಾರತದ ರಕ್ಷಣಾ ಸಚಿವಾಲಯ ಅಮೆರಿಕದ ರಕ್ಷಣಾ ಇಲಾಖೆ ಜತೆ ಒಟ್ಟು 25,730 ಕೋಟಿ ರು. ಮೌಲ್ಯದ ಒಪ್ಪಂದ ಮಾಡಿಕೊಂಡಿದೆ. ಇದರಲ್ಲಿ 16 ಡ್ರೋನ್‌ಗಳು ಸ್ಕೈಗಾರ್ಡಿಯನ್, 15 ಸೀ ಗಾರ್ಡಿಯನ್ ಆಗಿರಲಿವೆ. ದೇಶೀಯವಾಗಿಯೇ ಡ್ರೋನ್‌ಗಳನ್ನು ಸಿದ್ಧಪಡಿಸಿಕೊಡಬೇಕು ಎಂಬುದು ಭಾರತ ಸರಕಾರದ ಕೋರಿಕೆಯಾಗಿದೆ. ಈ ಬಗ್ಗೆ ಎರಡೂ ದೇಶಗಳ ಮಧ್ಯೆ ಕೆಲ ಸಮಯದಿಂದ ಚರ್ಚೆ ನಡೆಯುತ್ತಿತ್ತು. ಈ ಮಧ್ಯೆ, ಭಾರತ ಸರಕಾರ ಆತ್ಮನಿರ್ಭರ ಭಾರತ ಪರಿಕಲ್ಪನೆಗೆ ಒತ್ತು ನೀಡುತ್ತದೆಂಬ ಕಾರಣಕ್ಕೆ ಡ್ರೋನ್‌ಗಳನ್ನು ದೇಶೀಯವಾಗಿ ತಯಾರು ಮಾಡಲು ತಾಂತ್ರಿಕ ಬೆಂಬಲ ನೀಡುವ ಪ್ರಸ್ತಾವನೆಯನ್ನು ಅಮೆರಿಕ ಕೂಡಾ ಮುಂದಿಟ್ಟಿದೆ. ಅಮೆರಿಕ ಪೂರೈಸಲು ಒಪ್ಪಿರುವ ಎಂಕ್ಯು-9ಬಿ ಡ್ರೋನ್‌ಗಳನ್ನು ಚೆನ್ನೈ, ಗುಜರಾತ್ ನೌಕಾನೆಲೆಗಳು, ಉತ್ತರ ಪ್ರದೇಶದ ಸರಸಾವ ಮತ್ತು ಗೋರಖ್‌ಪುರ ವಾಯುನೆಲೆಗಳಲ್ಲಿ ಬಳಸಲು ಯೋಜಿಸಲಾಗಿದೆ. ಪ್ರಧಾನಿ ಮೋದಿ ನೇತೃತ್ವದ ಸರಕಾರದ ಆಶಯದಂತೆ ರಕ್ಷಣೆಗೆ ಸಂಬಂಧಿಸಿದ ಸಾಧನಗಳನ್ನು ಆದಷ್ಟೂ ದೇಶೀಯವಾಗಿ ತಯಾರಿಸುವಲ್ಲಿ ಇದು ಮಹತ್ವದ ಹೆಜ್ಜೆ ಎಂದು ರಕ್ಷಣಾ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

ಎಂಕ್ಯು-9ಬಿ ಡ್ರೋನ್ ವೈಶಿಷ್ಟ್ಯ

ಅಮೆರಿಕದ ಯುದ್ಧ ಸಾಮಗ್ರಿಗಳಲ್ಲಿ ಎಂಕ್ಯು-9ಬಿ ಡ್ರೋನ್ ಅತ್ಯಂತ ಶಕ್ತಿಶಾಲಿ ಎನ್ನಲಾಗಿದೆ. ಮಾನವ ರಹಿತವಾದ ಈ ಆಕಾಶಕಾಯ ಒಮ್ಮೆ ಹಾರಾಟ ಆರಂಭಿಸಿದರೆ ಗರಿಷ್ಠ 40 ಗಂಟೆಗಳವರೆಗೂ ಸತತವಾಗಿ ಗಾಳಿಯಲ್ಲೇ ಹಾರಾಡುತ್ತಾ ಇರಬಲ್ಲಷ್ಟು ಸಾಮರ್ಥ್ಯ ಹೊಂದಿದೆ. ಗರಿಷ್ಠ 40 ಸಾವಿರ ಅಡಿಗಳಷ್ಟು(13 ಕಿ.ಮೀ.) ಎತ್ತರದವರೆಗೂ ಸಾಗಬಲ್ಲದು. ಆಕಾಶದಿಂದ ನೆಲಕ್ಕೆ ಗುರಿಯಿಟ್ಟ ಹಾರಿಸಬಲ್ಲ ಹೆಲ್‌ಫೈರ್ ಕ್ಷಿಪಣಿಗಳನ್ನು ಹಾಗೂ ಸ್ಮಾರ್ಟ್ ಬಾಂಬ್‌ಗಳನ್ನು ಈ ಡ್ರೋನ್ ಒಳಗೊಂಡಿರಲಿದೆ. ಅಲ್ಲದೇ, ಶಕ್ತಿಶಾಲಿ ಕ್ಯಾಮೆರಾ ಹೊಂದಿದ್ದು, ಗಡಿ ಭಾಗದಲ್ಲಿ 13 ಕಿಮೀ ಎತ್ತರದ ಆಕಾಶದಲ್ಲಿ ಒಂದೆಡೆಯೇ ಗಂಟೆಗಟ್ಟಲೆ ನಿಶ್ಯಬ್ದವಾಗಿ ನಿಂತು ಶತ್ರು ದೇಶದ ಗಡಿಯಂಚಿನ ಸೇನಾ ಚಟುವಟಿಕೆಗಳತ್ತ ಕಣ್ಣಿಡಬಲ್ಲದು, ಗುಪ್ತಚರ ಚಟುವಟಿಕೆ ನಡೆಸಬಲ್ಲದು, ಕ್ಯಾಮೆರಾವನ್ನು ಸುತ್ತಲೂ ತಿರುಗಿಸುತ್ತಾ ನಿದಿಷ್ಟ ಪ್ರದೇಶದತ್ತ ಸತತ ನಿಗಾ ಇಡಬಲ್ಲದಾಗಿದೆ. ಇದನ್ನು ಆಕಾಶಕ್ಕೆ ಹಾರಿಸಲು ಮತ್ತು ಇಳಿಸಲು ಸ್ವಲ್ಪ ದೊಡ್ಡದೇ ಆದ ರನ್‌ವೇ ಅಗತ್ಯವಿರುತ್ತದೆ.

ಜಮ್ಮು, ಕುಪ್ವಾರ ಉಗ್ರ ದಾಳಿ ಹಿಂದೆ ಪಾಕ್ ಎಸ್ಸೆಸ್ಜಿ ನೆರವು | ಮತ್ತೊಂದು ಪಾಕ್-ಭಾರತ ಯುದ್ಧಕ್ಕೆ ಮುನ್ನುಡಿಯೇ? | ಜಮ್ಮು-ಕಾಶ್ಮೀರದ ಮಾಜಿ ಡಿಜಿಪಿ ಎಸ್.ಪಿ.ವೈದ್ ಮಾಹಿತಿ

ಕಾಶ್ಮೀರಕ್ಕೆ ಪಾಕ್ ಕಮಾಂಡೊ ನುಸುಳಿದ್ದಾರಾ?

ದೆಹಲಿ: ಜಮ್ಮು-ಕಾಶ್ಮೀರಕ್ಕೆ ತರಬೇತಿ ಪಡೆದ ಉಗ್ರರು ನುಸುಳುವುದಕ್ಕೆ ಹಾಗೂ ಭಯೋತ್ಪಾದನೆ ಚಟುವಟಿಕೆಗಳನ್ನು ನಡೆಸುವುದನ್ನು ಪಾಕಿಸ್ತಾನ ಸೇನೆಯ ವಿಶೇಷ ಚಟುವಟಿಕೆ ಗುಂಪು (ಎಸ್‌ಎಸ್‌ಜಿ) ಕಮಾಂಡೋಸ್ ನಿರ್ದೇಶಿಸುತ್ತಿದೆ ಎಂಬ ಮಾಹಿತಿ ಲಭ್ಯವಾಗಿದೆ.

ಕಾಶ್ಮೀರದ ಮಾಜಿ ಪೊಲೀಸ್ ಮಹಾ ನಿರ್ದೇಶಕ ಎಸ್.ಪಿ.ವೈದ್ ಈ ಕುರಿತು ಮಾಹಿತಿ ನೀಡಿರುವ ವಿಡಿಯೊ ವೈರಲ್ ಆಗಿದೆ. ವಿಧಿ 370 ರದ್ದು ನಂತರ ಕಾಶ್ಮೀರ ಕಣಿವೆಯಲ್ಲಿ ಭಯೋತ್ಪಾದಕ ಚಟುವಟಿಕೆ ಬಹುತೇಕ ಇಲ್ಲವಾಗಿತ್ತು. ಭಾರತದ ಸೇನೆ ಕೈಗೊಂಡ 2 ಸರ್ಜಿಕಲ್ ಸ್ಟ್ರೈಕ್ ದಾಳಿಗಳೂ ಪಾಕ್ ಪ್ರೇರಿತ ಉಗ್ರರ ಜಂಗಾಬಲವನ್ನೇ ಉಡುಗಿಸಿದ್ದವು. ಆದರೆ, ಈಗ ಎನ್‌ಡಿಎ ಸರಕಾರ 3ನೇ ಬಾರಿಗೆ ಅಧಿಕಾರ ವಹಿಸಿ ಕೊಂಡ ಬೆನ್ನಲ್ಲೇ ಕಣಿವೆ ರಾಜ್ಯದಲ್ಲಿ ಭಯೋತ್ಪಾದನಾ ಚಟುವಟಿಕೆಗಳು ನಾಟಕೀಯ ರೀತಿಯಲ್ಲಿ ಹೆಚ್ಚಳವಾಗಿವೆ.



ಕಾಶ್ಮೀರದಲ್ಲಿ ಭಯೋತ್ಪಾದನಾ ಚಟುವಟಿಕೆಗಳನ್ನು ಸಂಘಟಿಸಲೆಂದೇ ಪಾಕ್ ಸೇನೆಯ ಎಸ್‌ಎಸ್‌ಜಿಯ 600 ಕಮಾಂಡೋಗಳನ್ನು ನಿಯೋಜಿಸಲಾಗಿದೆ. ಅವರಲ್ಲಿ ಹೆಚ್ಚಿನವರು ಈಗಾಗಲೇ ಜಮ್ಮು-ಕಾಶ್ಮೀರಕ್ಕೆ ನುಸುಳಿದ್ದಾ ರೆ. ಕೆಲವರು ಒಳನುಸುಳಲು ಗಡಿಯಲ್ಲಿ ಸಮಯ ಕಾಯುತ್ತಿದ್ದಾರೆ. ಎಸ್‌ಎಸ್‌ಜಿ ಕಮಾಂಡೋಸ್‌ನ ಜನರಲ್ ಆಫೀಸರ್ ಕಮಾಂಡಿಂಗ್(ಜಿಒಸಿ) ಆದಿಲ್ ರೆಹಮಾನಿ ನೇತೃತ್ವದಲ್ಲಿ ಕಾಶ್ಮೀರದಲ್ಲಿ ನುಸುಳುಕೋರರನ್ನು ಸಂಘಟಿಸಿ ನಿರ್ದೇಶಿಸಲಾಗುತ್ತಿದೆ. ಇದು ಯುದ್ಧಕ್ಕೂ ಮುಂಚಿನ ಸಿದ್ಧತಾ ಕಾರ್ಯದಂತಿದೆ ಎಂದು ಜಮ್ಮು-ಕಾಶ್ಮೀರ ಪೊಲೀಸ್ ಮಾಜಿ ಪೊಲೀಸ್ ಮಹಾನಿರ್ದೇ ಶಕ(ಡಿಜಿಪಿ) ಶೇಷ್ ಪಾಲ್ ವೈದ್(ಎಸ್.ಪಿ.ವೈದ್) ಹೇಳಿದ್ದಾರೆ. ಮಾಜಿ ಡಿಜಿಪಿ ಎಸ್.ಪಿ.ವೈದ್ ಮಾತ್ರವಲ್ಲದೆ ಬ್ರಿಟನ್ ಮೂಲದ ಲೇಖಕ, ಪ್ರಸಾರಕ ಮತ್ತು ಮಾನವ ಹಕ್ಕುಗಳ ಕಾರ್ಯಕರ್ತ, ಕಾಮೆಂಟೇಟರ್ ಅಮ್ಜದ್ ಅಯೂಬ್ ಮಿರ್ಜಾ ಕೂಡ ಸಾಮಾಜಿಕ ಜಾಲತಾಣಗಳಲ್ಲಿ ಇದೇ ರೀತಿಯ ಹೇಳಿಕೆ ನೀಡಿದ್ದಾರೆ.

ಜೂ.9ರಂದು ಹಿಂದೂ ಯಾತ್ರಿಕರಿದ್ದ ಬಸ್ ಮೇಲೆ ರಿಯಾಸಿ ಪ್ರದೇಶದಲ್ಲಿ ಉಗ್ರ ದಾಳಿ ನಡೆದು 9 ಮಂದಿ ಸಾವಾಗಿದೆ. ಅದರೊಂದಿಗೇ ಕೇಂದ್ರಾಡಳಿತ ಪ್ರದೇಶ ಜಮ್ಮು-ಕಾಶ್ಮೀರದಲ್ಲಿ ಭಯೋತ್ಪಾದಕ ದಾಳಿಗಳು ಹೆಚ್ಚಿವೆ ಎಂಬುದು ಉಲ್ಲೇಖಾರ್ಹ. ಉತ್ತರ ಕಾಶ್ಮೀರದ ಕುಪ್ವಾರ ಜಿಲ್ಲೆಯಲ್ಲಿ ಗಡಿ ನಿಯಂತ್ರಣ ರೇಖೆ ಬಳಿ ಇತ್ತೀಚೆಗೆ ಭದ್ರತಾ ಪಡೆಗಳು ಒಬ್ಬ ಪಾಕಿಸ್ತಾನಿ ನುಸುಳುಕೋರನನ್ನು ಗುಂಡಿಕ್ಕಿ ಕೊಂದಿವೆ. ಮೃತ ಉಗ್ರನ ಬಳಿಯಿಂದ ಅಪಾರ ಪ್ರಮಾಣದ ಶಸ್ತ್ರಾಸ್ತ್ರ ಮತ್ತು ಮದ್ದುಗುಂಡುಗಳನ್ನು ವಶಪಡಿಸಿಕೊಳ್ಳಲಾಗಿದೆ. ಹತನಾದ ಉಗ್ರ ಪಾಕಿಸ್ತಾನ ಸೇನೆಯ ಎಸ್‌ಎಸ್‌ಜಿ ಕಮಾಂಡೋ ಆಗಿದ್ದ ಎಂದು ವರದಿಗಳು ತಿಳಿಸಿವೆ. ಎಸ್‌ಎಸ್‌ಜಿ ಪಾಕಿಸ್ತಾನದಲ್ಲಿ ವಿಶೇಷ ತರಬೇತಿ ಪಡೆದ ಸಶಸ್ತ್ರ ಪಡೆಯಾಗಿದೆ.

ಕುಪ್ವಾರದಲ್ಲಿ ಕಳೆದ ವಾರ ನಡೆದ ಗಡಿ ನುಸುಳುವ ಕಾರ್ಯಾಚರಣೆಯನ್ನು ಪಾಕ್ ಸೇನೆಯ ಆಜ್ಞೆಯ ಮೇರೆಗೆ ಬಾರ್ಡರ್ ಆಕ್ಷನ್ ಟೀಮ್(ಬಿಎಟಿ) ಪೂರ್ಣ ಪ್ರಮಾಣದಲ್ಲಿ ನಡೆಸಿದೆ ಎಂದು ಭಾರತೀಯ ಭದ್ರತಾ ಪಡೆಗಳ ಅಧಿಕಾರಿಗಳು ವಿಶ್ಲೇಷಿಸಿದ್ದಾರೆ.



ಉಗ್ರ ದಾಳಿ ಹೆಚ್ಚುವ ಭೀತಿ

ಜಮ್ಮು ಭಾಗದ ಪೂಂಚ್, ಕಿಶ್ತ್ವಾರ್, ಕಥುವಾ, ದೋಡಾ ಜಿಲ್ಲೆಗಳು, ಉತ್ತರ ಕಾಶ್ಮೀರ ಕಣಿವೆಯ ಕುಪ್ವಾರ, ಹಂದ್ವಾರ, ಬಂಡಿಪೋರಾ ಭಾಗಗಳಲ್ಲಿ ಹೆಚ್ಚು ಉಗ್ರರು ಅಡಗಿದ್ದಾರೆ. ಮುಂಬರುವ ದಿನಗಳಲ್ಲಿ ಉಗ್ರ ದಾಳಿ ಹೆಚ್ಚುವ ಭೀತಿ ಎದುರಾಗಿದೆ. ಅವರೆಲ್ಲಾ ಪಾಕ್ ಸೇನೆಯಿಂದಲೇ ತರಬೇತಿ ಪಡೆದವರಾಗಿದ್ದಾರೆ. ಅವರು ಎಂ4 ಮತ್ತು ಚೈನೀಸ್ ಎ56 ಅಸಾಲ್ಟ್ ರೈಫಲ್ಸ್ ಸೇರಿದಂತೆ ಅತ್ಯಾಧುನಿಕ ಶಸ್ತ್ರಾಸ್ತ್ರಗಳನ್ನು ಹೊಂದಿದ್ದಾರೆ. ಅಫ್ಘಾನಿಸ್ತಾನದಲ್ಲಿ ಅಮೆರಿಕ ಸೇನೆ ಬಿಟ್ಟು ಹೋಗಿದ್ದ ಶಸ್ತ್ರಾಸ್ತ್ರಗಳು ಈಗ ಜಮ್ಮು-ಕಾಶ್ಮೀರಕ್ಕೆ ನುಸುಳಿರುವ ಉಗ್ರರ ಕೈಗಳಲ್ಲಿವೆ ಎಂಬ ಮಾಹಿತಿ ಇದೆ.

ಪ್ರಮುಖಾಂಶ

- ಎಸ್‌ಎಸ್‌ಜಿಯ ಒಂದು ಪೂರ್ಣ ಬೆಟಾಲಿಯನ್ ಕಾಶ್ಮೀರಕ್ಕೆ ನುಸುಳಿದೆ ಎಂದು ಹೇಳಲಾಗುತ್ತಿದೆ.
- 600 ಕಮಾಂಡೋಗಳ ಬೆಟಾಲಿಯನ್ ಕುಪ್ವಾರ ಮತ್ತಿತರ ಕಣಿವೆ ಪ್ರದೇಶಗಳಲ್ಲಿ ಅಡಗಿಕೊಂಡಿದೆ
- ಕಾಶ್ಮೀರದಲ್ಲಿನ ಸ್ಥಳೀಯ ಜಿಹಾದಿ ಸ್ಲೀಪರ ಸೆಲ್‌ಗಳೂ ಸಕ್ರಿಯವಾಗಿ ಎಸ್‌ಎಸ್‌ಜಿಗೆ ನೆರವಾಗುತ್ತಿವೆ
- ಪಾಕ್ ಲೆ.ಕರ್ನಲ್ ಶಾಹಿದ್ ಸಲೀಮ್ ಜಂಜುವಾ ಜಮ್ಮುನಲ್ಲಿ ಉಗ್ರ ದಾಳಿ ಸಂಘಟಿಸುತ್ತಿದ್ದಾರೆ
- ಜಮ್ಮು-ಕಾಶ್ಮೀರದಲ್ಲಿ 70 ಪಾಕ್ ಮೂಲದ ಉಗ್ರರಿದ್ದಾರೆಂದು ಕಾಶ್ಮೀರ ಪೊಲೀಸರೇ ಒಪ್ಪಿದ್ದಾರೆ

ಭಾರತೀಯ ಸೇನೆಯ ಕನಿಷ್ಠ 15-16 ತುಕಡಿಗಳನ್ನು ಸಂಪೂರ್ಣವಾಗಿ ಯುದ್ಧದಲ್ಲಿ ತೊಡಗುವಂತೆ ಮಾಡುವುದೇ ಈ ಕೃತ್ಯಗಳ ಹಿಂದಿನ ಉದ್ದೇಶ ಇವಾಗಿದೆ. ಪಾಕ್ ಸೇನೆಯ ಲೆಫ್ಟಿನೆಂಟ್ ಕರ್ನಲ್ ಶಾಹಿದ್ ಸಲೀಂ ಈಗಾಗಲೇ ಜಮ್ಮು-ಕಾಶ್ಮೀರಕ್ಕೆ ನುಸುಳಿದ್ದಾನೆ ಎಂದು ವರದಿಯಾಗಿದೆ. ಪಾಕ್ ಸೇನೆ ಉಗ್ರರ ಎಲ್ಲಾ ಸ್ಲೀಪರ್ ಸೆಲ್‌ಗಳನ್ನೂ ಸಕ್ರಿಯಗೊಳಿಸಿದೆ. ಜಮ್ಮು-ಕಾಶ್ಮೀರ ಭಾಗಕ್ಕೆ ನುಸುಳಲು ಇನ್ನೂ 2 ಬೆಟಾಲಿಯನ್ ಸಜ್ಜಾಗಿವೆ. ಇದು ನಿಗೂಢ ಯುದ್ಧವಾಗಿದೆ, ಭಾರತದ ಸೇನೆಯೂ ಕ್ಷಿಪ್ರ ಪ್ರತಿಕ್ರಿಯೆಗೆ ಸಜ್ಜಾಗಿರಬೇಕು.

-ಎಸ್.ಪಿ.ವೈದ್
ಜಮ್ಮು-ಕಾಶ್ಮೀರ ಮಾಜಿ ಡಿಜಿಪಿ

ಯಾರೂ ಈ ಎಸ್‌ಪಿ ವೈದ್

ಶೇಷ್‌ಪಾಲ್ ವೈದ್(ಎಸ್.ಪಿ.ವೈದ್) ಭಾರತೀಯ ಪೊಲೀಸ್ ಸೇವೆ(ಐಪಿಎಸ್) ಹಿರಿಯ ಅಧಿಕಾರಿಯಾಗಿದ್ದವರು. ಜಮ್ಮು-ಕಾಶ್ಮೀರದಲ್ಲಿ 2016ರ ಡಿಸೆಂಬರ್‌ನಿಂದ 2018ರ ಸೆಪ್ಟೆಂಬರ್‌ವರೆಗೆ ಪೊಲೀಸ್ ಮಹಾ ನಿರ್ದೇಶಕರಾಗಿದ್ದರು.

100 ಕೋಟಿ ರು. ಲಂಚ ಪ್ರಕರಣ | ಕೇಜ್ರಿವಾಲ್ ಮುಖ್ಯ ಸಂಚುಕೋರ

ಕೇಜ್ರಿ ವಿರುದ್ಧ ಸಿಬಿಐ ದೋಷಾರೋಪಪಟ್ಟಿ

ದೆಹಲಿ: ಅಬಕಾರಿ ನೀತಿ ಹಗರಣದ ಭ್ರಷ್ಟಾಚಾರ ಪ್ರಕರಣದಲ್ಲಿ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಮತ್ತಿತರೆ ಆರೋಪಿಗಳ ವಿರುದ್ಧ ಕೇಂದ್ರೀಯ ತನಿಖಾ ದಳ(ಸಿಬಿಐ) ನ್ಯಾಯಾಲಯಕ್ಕೆ ಸೋಮವಾರ ದೋಷಾರೋಪಪಟ್ಟಿ ದಾಖಲಿಸಿದೆ. ಇನ್ನೊಂದೆಡೆ

ಕೇಜ್ರಿವಾಲ್ ಸಲ್ಲಿಸಿದ ಜಾಮೀನು ಅರ್ಜಿ ವಿಚಾರಣೆ ನಡೆಸಿದ ದೆಹಲಿ ಹೈಕೋರ್ಟ್, ಆದೇಶ ಕಾಯ್ದಿರಿಸಿದೆ. ಪ್ರಕರಣದಲ್ಲಿ ಸಿಬಿಐ ತನಿಖೆ ಮುಂದುವರಿದಿದೆ. ಕೇಜ್ರಿವಾಲ್ ಪರ ಸಾಕಷ್ಟು ಸಾಕ್ಷ್ಯಗಳು ಲಭ್ಯವಾಗಿವೆ ಎಂದು ಸಿಬಿಐ ಪರ ವಕೀಲರು ವಾದಿಸಿದ್ದಾರೆ. ದೆಹಲಿಯ ರೋಸ್ ಅವೆನ್ಯೂ ವಿಶೇಷ ಸಿಬಿಐ ನ್ಯಾಯಾಲಯಕ್ಕೆ ಸೋಮವಾರ ದೋಷಾರೋಪ ಪಟ್ಟಿ ಸಲ್ಲಿಸಲಾಗಿದೆ. ಕೇಜ್ರಿವಾಲ್ ಅವರನ್ನು ಪ್ರಕರಣದಲ್ಲಿ ಸಂಚುಕೋರ ಎಂದು ಸಿಬಿಐ ಉಲ್ಲೇಖಿಸಿದೆ. ದೆಹಲಿ ಸಿಎಂ ಸೇರಿ 6 ಜನರನ್ನು ಆರೋಪಪಟ್ಟಿಯಲ್ಲಿ ಹೆಸರಿಸಲಾಗಿದೆ. ಸದ್ಯ ಕೇಜ್ರಿವಾಲ್ ಆ.8ರವರೆಗೆ ನ್ಯಾಯಾಂಗ ಬಂಧನದಲ್ಲಿದ್ದಾರೆ. ಸಿಬಿಐ ಇಲ್ಲಿಯವರೆಗೆ ಪ್ರಕರಣ ಸಂಬಂಧ ನ್ಯಾಯಾಲಯಕ್ಕೆ ಐದು ಆರೋಪಪಟ್ಟಿ ಸಲ್ಲಿಸಿದೆ. ಹಿಂದಿನ ಚಾರ್ಜ್‌ಶೀಟ್‌ನಲ್ಲಿ ಆಮ್ ಆದ್ಮಿ ಪಕ್ಷ 100 ಕೋಟಿ ರು. ಲಂಚ ಪಡೆದಿದ್ದು ಅದರಲ್ಲಿ 44.45 ಕೋಟಿ ರು.ಗಳನ್ನು ಹವಾಲಾ ಮಾರ್ಗದಲ್ಲಿ ಗೋವಾ ಚುನಾವಣೆಗೆ ಬಳಸಲಾಗಿದೆ ಎಂದು ಆರೋಪಿಸಲಾಗಿದೆ. ಜಾರಿ ನಿರ್ದೇಶನಾಲಯ ದಾಖಲಿಸಿದ್ದ ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ಜು.12ರಂದು ಮಧ್ಯಂತರ ಜಾಮೀನು ನೀಡಿತ್ತು. ಆದರೆ, ಅದಕ್ಕೂ ಮುನ್ನಾ ದಿನ ಸಿಬಿಐ ಭ್ರಷ್ಟಾಚಾರ ಪ್ರಕರಣದಲ್ಲಿ ಬಂಧನಕ್ಕೆ ಒಳಪಡಿಸಿತು. ಹಾಗಾಗಿ, ಕೇಜ್ರಿವಾಲ್‌ಗೆ ಜಾಮೀನು ಸಿಕ್ಕರೂ ಜೈಲಿನಿಂದ ಬಿಡುಗಡೆ ಸಿಕ್ಕಿರಲಿಲ್ಲ.

ಅಪಘಾತ: ಇಬ್ಬರು ಕನ್ವಾರಿಯಾ ಸಾವು

ಮೊರೆನಾ: ಮಧ್ಯಪ್ರದೇಶದ ಮೊರೆನಾದಲ್ಲಿ ಸೋಮವಾರ ಟ್ರಕ್ ಡಿಕ್ಕಿ ಹೊಡೆದ ಪರಿಣಾಮ ಟ್ರ್ಯಾಕ್ಟರ್ ಟ್ರಾಲಿಯಲ್ಲಿದ್ದ ಇಬ್ಬರು 'ಕನ್ವಾರಿಯಾಗಳು' ಸಾವನ್ನಪ್ಪಿದ್ದಾರೆ. 14 ಮಂದಿ ಗಾಯಗೊಂಡಿದ್ದಾರೆ. ರಾ.ಹೆದ್ದಾರಿ ಸಂಖ್ಯೆ 44ರಲ್ಲಿ ನಸುಕಿನ 5 ಗಂಟೆಗೆ ಅಪಘಾತವಾಗಿದೆ. ಇದರಿಂದ ಆಕ್ರೋಶಗೊಂಡ ಗ್ರಾಮಸ್ಥರು ಟ್ರಕ್ ಚಾಲಕನನ್ನು ಥಳಿಸಿ, ರಸ್ತೆ ತಡೆ ನಡೆಸಿದರು.

3 ಸಾವು ಪ್ರಕರಣ: ಮತ್ತೆ ಐವರ ಬಂಧನ

ನೆಲಮಾಳಿಗೆಯಲ್ಲಿ ಕೋಚಿಂಗ್; 13 ಅಕ್ರಮ ಕೇಂದ್ರಗಳಿಗೆ ಬೀಗ

ದೆಹಲಿ: ರಾಷ್ಟ್ರ ರಾಜಧಾನಿಯಲ್ಲಿ ಐಎಎಸ್ ಕೋಚಿಂಗ್ ಸೆಂಟರ್ ವೊಂದರ ನೆಲಮಾಳಿಗೆಗೆ ನೀರು ನುಗ್ಗಿ ಮೂವರು ಐಎಎಸ್ ಆಕಾಂಕ್ಷಿಗಳು ಸಾವಿಗೀಡಾದ ನಂತರ ಎಚ್ಚೆತ್ತಿರುವ ದೆಹಲಿ ಮುನ್ಸಿಪಲ್

ಕಾರ್ಪೊರೇಷನ್, ಅಕ್ರಮ ಕೋಚಿಂಗ್ ಸೆಂಟರ್‌ಗಳ ವಿರುದ್ಧ ಕ್ರಮ ಕೈಗೊಳ್ಳಲು ಆರಂಭಿಸಿದೆ. ಘಟನೆ ಕುರಿತು ತನಿಖೆ ನಡೆಸಲು ಉನ್ನತ ಮಟ್ಟದ ಸಮಿತಿ ರಚಿಸಲಿದೆ ಎಂದು ಡಿಎಂಸಿ ಅಧಿಕಾರಿಯೊಬ್ಬರು ಭಾನುವಾರ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ಭಾನುವಾರ ತಡರಾತ್ರಿವರೆಗೂ ನಡೆದ ಕಾರ್ಯಾಚರಣೆಯಲ್ಲಿ ದೆಹಲಿಯ ವಿವಿಧೆಡೆಯ 13 ಕೋಚಿಂಗ್ ಸೆಂಟರ್‌ಗಳನ್ನು ಅಸುರಕ್ಷಿತ ಎಂದು ಗುರುತಿಸಿ ಬೀಗ ಹಾಕಿಸಲಾಗಿದೆ. ಅವುಗಳಲ್ಲಿ ಐಎಎಸ್ ಗುರುಕುಲ, ಚಾಹಲ್ ಅಕಾಡೆಮಿ, ಪ್ಲುಟಸ್ ಅಕಾಡೆಮಿ, ಸಾಯಿ ಟ್ರೇಡಿಂಗ್, ಐಎಎಸ್ ಸೇತು, ಟಾಪರ್ಸ್ ಅಕಾಡೆಮಿ, ದೈನಿಕ್ ಸಂವಾದ್, ಸಿವಿಲ್ಸ್ ಡೈಲಿ ಐಎಎಸ್, ಕೆರಿಯರ್ ಪವರ್, 99 ಟಿಪ್ಪಣಿಗಳು, ವಿದ್ಯಾ ಗುರು, ಗೈಡೆನ್ಸ್ ಐಐಎಸ್ ಮತ್ತು ಈಜಿ ಫಾರ್ ಐಎಎಸ್ ಕೋಚಿಂಗ್ ಸೆಂಟರ್ ಸೇರಿವೆ.ಈ ಕೋಚಿಂಗ್ ಸೆಂಟರ್‌ಗಳು ನಿಯಮ ಉಲ್ಲಂಘಿಸಿ ನೆಲಮಾಳಿಗೆಯಲ್ಲಿ ತರಗತಿ ನಡೆಸುತ್ತಿವೆ. ಹಾಗಾಗಿ ಅವುಗಳಿಗೆ ಬೀಗ ಹಾಕಿ ಸೀಲ್ ಮಾಡಲಾಗಿದೆ. ಜತೆಗೆ ನೋಟಿಸ್ ನೀಡಲಾಗಿದೆ ಎಂದು ಅಧಿಕಾರಿ ತಿಳಿಸಿದ್ದಾರೆ. 3 ಐಎಎಸ್ ಆಕಾಂಕ್ಷಿಗಳ ಸಾವಿಗೆ ಕಾರಣವಾದ ರಾವ್ ಐಎಎಸ್ ಸ್ಟಡಿ ಸರ್ಕಲ್ ಕೇಂದ್ರವನ್ನೂ ಸೀಲ್ ಮಾಡಲಾಗಿದೆ. ಅಲ್ಲದೇ, ಶನಿವಾರದ ದುರಂತ ಸಂಬಂಧ ಮತ್ತೆ ಐವರನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಹಲ್ವಾ ತಯಾರಿಕೆಯಲ್ಲೂ ತಾರತಮ್ಯ | ಪ್ರತಿಪಕ್ಷ ನಾಯಕನ ಭಾಷಣಕ್ಕೆ ಹಣೆ ಚಚ್ಚಿಕೊಂಡ ಸಚಿವೆ

ಮಧ್ಯಮವರ್ಗ ದ್ವೇಷಿ ಬಜೆಟ್

ದೆಹಲಿ: ಪ್ರಸಕ್ತ ಹಣಕಾಸು ವರ್ಷದ ಕೇಂದ್ರ ಬಜೆಟ್ 'ಮಧ್ಯಮ ವರ್ಗ ಮತ್ತು ಹಿಂದುಳಿದ

ಜಾತಿಗಳ ವಿರೋಧಿ' ಎಂದು ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ ಲೋಕಸಭೆಯಲ್ಲಿ ಸೋಮವಾರ ಖಂಡಿಸಿದರು.

ಬಜೆಟ್ ಸಿದ್ಧಪಡಿಸುವ ತಂಡದಲ್ಲಿ ವೈವಿಧ್ಯ ಪ್ರಾತಿನಿಧ್ಯ ಕೊರತೆ ಬಗೆಗೂ ಪ್ರಸ್ತಾಪಿಸಿದ ರಾಹುಲ್ ಗಾಂಧಿ, ಎಲ್ಲರನ್ನೂ ಒಳಗೊಳ್ಳುವಿಕೆಯ ನೀತಿಯ ಬಗ್ಗೆ ಮೋದಿ ಸರಕಾರವನ್ನು ಪ್ರಶ್ನಿಸಿದ್ದಾರೆ. ಆರೋಪದ ಸಮರ್ಥನೆಗೆ ರಾಹುಲ್ ಅವರು, ಬಜೆಟ್ ಮುನ್ನಾದಿನ ಹಣಕಾಸು ಸಚಿವಾಲಯದಲ್ಲಿ ನಡೆಯುವ ಸಾಂಪ್ರದಾಯಿಕ 'ಹಲ್ವಾ ತಯಾರಿಕೆ' ರೂಢಿ ಯ ಸಂದರ್ಭದ ಫೋಟೊವನ್ನೂ ಸದನದಲ್ಲಿ ಪ್ರದರ್ಶಿಸಿದರು. ಬಜೆಟ್ ಹಲ್ವಾ ಸಿದ್ಧತೆಯ ತಂಡದಲ್ಲಿ 20 ಅಧಿಕಾರಿಗಳಿದ್ದಾರೆ. ಆದರೆ ಅವರಲ್ಲಿ ಒಬ್ಬರೂ ದಲಿತ, ಒಬಿಸಿ, ಆದಿವಾಸಿ ಇಲ್ಲ ಎಂದು ಟೀಕಿಸಿದರು. ರಾಹುಲ್ ಗಾಂಧಿ ಅವರ ಈ ಮಾತಿನ ವೈಖರಿಗೆ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಎರಡೂ ಕೈಗಳಿಂದ ಹಣೆಗೆ ಬಡಿದುಕೊಂಡು ಬೇಸರ ವ್ಯಕ್ತಪಡಿಸಿದರು. ಈ ಸಂದರ್ಭದ ವಿಡಿಯೋ ವೈರಲ್ ಆಗಿದ್ದು, ಪರ-ವಿರುದ್ಧ ಪ್ರತಿಕ್ರಿಯೆಗಳು ವ್ಯಕ್ತವಾಗುತ್ತಿವೆ.

ಫೋಟೊ ಪ್ರದರ್ಶನಕ್ಕೆ ಸ್ಪೀಕರ್ ಆಕ್ಷೇಪ

ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ ಸದನದಲ್ಲಿ ಅತಿ ಉತ್ಸಾಹದಿಂದ ಮಾತನಾಡುವಾಗ ಬಜೆಟ್ ಮುನ್ನಾದಿಣ ಹಣಕಾಸು ಸಚಿವಾಲಯದಲ್ಲಿ ನಡೆಯುವ ಹಲ್ವಾ ತಯಾರಿಕೆಯ ಫೋಟೊ ಪ್ರದರ್ಶಿಸಿದರು. ಅದಕ್ಕೆ ಸಭಾಧ್ಯಕ್ಷ ಓಂ ಬಿರ್ಲಾ ಅವರು ಆಕ್ಷೇಪ ವ್ಯಕ್ತಪಡಿಸಿದರು. ಸದನದಲ್ಲಿ ಹಾಗೆಲ್ಲಾ ಫೋಟೊ ಪ್ರದರ್ಶನ ಮಾಡಬಾರದು ಎಂದು ಪ್ರತಿಪಕ್ಷ ನಾಯಕರಿಗೆ ತಿಳಿಹೇಳಿದರು. ಆ ದೃಶ್ಯವನ್ನು ವಿಡಿಯೊದಲ್ಲಿ ದಾಖಲಿಸದಂತೆ, ಸಂದರ್ಭವನ್ನು ಕಡತದಲ್ಲಿ ಉಲ್ಲೇಖಿಸದಂತೆ ಸದನದ ಸಿಬ್ಬಂದಿಗೆ ಸ್ಪೀಕರ್ ಆದೇಶಿಸಿದರು.

ತಮಿಳುನಾಡು ಮೂಲದ ಮಹಿಳೆ ರಕ್ಷಣೆ

ಕಾಡಲ್ಲಿ ಸರಪಳಿಯಿಂದ ಮರಕ್ಕೆ ಕಟ್ಟಿ ಮಹಿಳೆ ಮೇಲೆ ಕ್ರೌರ್ಯ

ಸಿಂಧುದುರ್ಗ: ತಮಿಳುನಾಡು ಮೂಲದ 50ರ ಪ್ರಾಯದ ಮಹಿಳೆಯನ್ನು ಮಹಾರಾಷ್ಟ್ರದ ಸಿಂಧುದುರ್ಗ ಜಿಲ್ಲೆಯ ಅರಣ್ಯದಲ್ಲಿ ಕಬ್ಬಿಣದ ಸರಪಳಿಯಿಂದ ಮರಕ್ಕೆ ಕಟ್ಟಿ ಹಾಕಿರುವುದು ಕುರಿಗಾಹಿ ನೀಡಿದ ಮಾಹಿತಿಯಿಂದ ಕಂಡುಬಂದಿದ್ದು, ರಕ್ಷಿಸಿ ಆಸ್ಪತ್ರೆಗೆ ದಾಖಲಿಸಲಾಗಿದೆ.

ಸೋನುರಲಿ ಗ್ರಾಮದ ಬಳಿ ಕಾಡಿನಲ್ಲಿ ಕುರಿ ಕಾಯುವ ವ್ಯಕ್ತಿ ಶನಿವಾರ ಸಂಜೆ ಮಹಿಳೆಯ ದುಃಸ್ಥಿತಿ ಕಂಡು ಊರಿನವರಿಗೆ ಮಾಹಿತಿ ನೀಡಿದ್ದಾರೆ. ನಂತರ ಪೊಲೀಸರು ಸ್ಥಳಕ್ಕೆ ಧಾವಿಸಿ, ಮಹಿಳೆಯನ್ನು ರಕ್ಷಿಸಿ ಮೊದಲಿಗೆ ಸಾವಂತವಾಡಿ ಆಸ್ಪತ್ರೆಗೆ ದಾಖಲಿಸಲಾಯಿತು. ಬಳಿಕ ಮಹಿಳೆ ಮಾನಸಿಕ ಸಮಸ್ಯೆಗಳಿಂದ ಬಳಲುತ್ತಿದ್ದಾರೆ ಎಂಬುದು ಅವರ ಬಳಿ ಸಿಕ್ಕ ವೈದ್ಯಕೀಯ ವರದಿಗಳಿಂದ ತಿಳಿದ ಬಳಿಕ ಗೋವಾ ವೈದ್ಯಕೀಯ ಕಾಲೇಜು ಆಸ್ಪತ್ರೆಗೆ ಸ್ಥಳಾಂತರಿಸಲಾಯಿತು ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಕೆಲ ದಿನಗಳಿಂದ ಆಹಾರವಿಲ್ಲದೇ ಮಹಿಳೆ ದೇಹಾರೋಗ್ಯ ಕ್ಷೀಣಿಸಿತ್ತು. ಸದ್ಯ ಮಹಿಳೆ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಮಹಿಳೆ ಬಳಿ ಅಮೆರಿಕದ ಪಾಸ್‌ಪೋರ್ಟ್

ಜೆರಾಕ್ಸ್, ತಮಿಳುನಾಡು ವಿಳಾಸದ ಆಧಾರ್ ಕಾರ್ಡ್ ಮತ್ತಿತರ ದಾಖಲೆ ಪತ್ತೆಯಾಗಿವೆ. ಆಕೆಯ ಅಮೆರಿಕ ವೀಸಾ ಅವಧಿ ಮುಗಿದಿದೆ. 10 ವರ್ಷಗಳಿಂದ ಭಾರತದಲ್ಲೇ ಇದ್ದಾರೆ. ಆಕೆಯ ಹೆಸರು ಲಲಿತಾ ಕಾಯಿ ಎಂಬುದು ದಾಖಲೆಗಳಿಂದ ತಿಳಿದುಬಂದಿದೆ.

ಆಕೆಯ ಪತಿ ತಮಿಳುನಾಡಿನಿಂದ ಕರೆತಂದು ಕಾಡಲ್ಲಿ ಮರಕ್ಕೆ ಕಟ್ಟಿಹಾಕಿ ಪರಾರಿಯಾಗಿರಬಹುದೆಂದು ಶಂಕಿಸಲಾಗಿದೆ. ಆಕೆಯ ಸಂಬಂಧಿಕರ ಪತ್ತೆಗೆ ತಮಿಳುನಾಡು, ಗೋವಾ ಮತ್ತಿತರೆಡೆಗೆ ಪೊಲೀಸ್ ತಂಡಗಳನ್ನು ಕಳುಹಿಸಿಕೊಡಲಾಗಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿ ಹೇಳಿದ್ದಾರೆ.

ಪ್ರತ್ಯೇಕ ಆಸನ ವ್ಯವಸ್ಥೆ ತೃಣಮೂಲ ಮನವಿ

ದೆಹಲಿ: ಲೋಕಸಭೆಯಲ್ಲಿ ತಮ್ಮ ಪಕ್ಷದ ಸದಸ್ಯರಿಗೆ ಪ್ರತ್ಯೇಕ ಆಸನದ ವ್ಯವಸ್ಥೆ ಕಲ್ಪಿಸುವಂತೆ ತೃಣಮೂಲ ಕಾಂಗ್ರೆಸ್ (ಟಿಎಂಸಿ) ಪಕ್ಷ ಸ್ಪೀಕರ್‌ಗೆ ಸೋಮವಾರ ಮನವಿ ಮಾಡಿದೆ.



ಸ್ಪೀಕರ್ ಓಂ ಬಿರ್ಲಾ ಅವರು ಸದನ ದಲ್ಲಿ ಪ್ರತಿಪಕ್ಷಗಳ 'ಇಂಡಿ ಒಕ್ಕೂಟ'ಕ್ಕೆ ಆಸನ ವ್ಯವಸ್ಥೆ ಕಲ್ಪಿಸುವ ಪ್ರಯತ್ನದಲ್ಲಿ ದ್ದಾರೆ. ಇದರ ಮಧ್ಯೆಯೇ, ಸದನದಲ್ಲಿ ಯಾವ ಬಣಕ್ಕೂ ಸೇರದೇ ತಮ್ಮನ್ನು ಪ್ರತ್ಯೇಕವಾಗಿ ಗುರುತಿಸಿಕೊಳ್ಳಲು ಅವಕಾಶವಾಗುವಂತೆ ಆಸನ ವ್ಯವಸ್ಥೆ ಮಾಡುವಂತೆ ಟಿಎಂಸಿ ಮನವಿ ಮಾಡಿದೆ. ಪ್ರತಿಪಕ್ಷಗಳ ಒಕ್ಕೂಟವಾದ 'ಇಂಡಿಯ'ದ ಭಾಗವೇ ಆಗಿದ್ದರೂ ಟಿಎಂಸಿ ಹಿಂದಿನಿಂದಲೂ ಪ್ರತ್ಯೇಕವಾಗಿ ಬಿಜೆಪಿಯ ಕಡು ವಿರೋಧಿ ಪಕ್ಷ ಎಂದೇ ಗುರುತಿಸಿಕೊಂಡು ಬರುತ್ತಿದೆ. ಅದರಂತೆ, ಸದನದಲ್ಲೂ ತಮಗೆ ಪ್ರತ್ಯೇಕವಾಗಿ ಆಸನ ಕಲ್ಪಿಸಿಕೊಡುವಂತೆ ಟಿಎಂಸಿ ಮನವಿ ಮಾಡಿದೆ ಎನ್ನಲಾಗಿದೆ. ಸ್ಪೀಕರ್ ಓಂ ಬಿರ್ಲಾ ಅವರ ನಿರ್ದೇಶನದಂತೆ ಲೋಕಸಭೆಯಲ್ಲಿ ಆಡಳಿತಾರೂಢ ಎನ್‌ಡಿಎ ಮೈತ್ರಿಕೂಟದ ಸದಸ್ಯರು ಮತ್ತು ಪ್ರತಿಪಕ್ಷಗಳ ಒಕ್ಕೂಟ ಇಂಡಿಯದ ಸದಸ್ಯರ ನಡುವೆ ಸ್ಪಷ್ಟವಾಗಿ ವಿಭಜನೆ ಆಗುವಂತೆ ಆಸನ ವ್ಯವಸ್ಥೆ ಮಾಡಲಾಗುತ್ತಿದೆ.

ಅಮೆರಿಕದಿಂದ 48 ವಿದ್ಯಾರ್ಥಿ ವಾಪಸ್

ದೆಹಲಿ: ಉನ್ನತ ಶಿಕ್ಷಣ ಪಡೆಯಲೆಂದು ಭಾರತದಿಂದ ಅಮೆರಿಕಕ್ಕೆ ತೆರಳಿದ್ದವರಲ್ಲಿ 48 ವಿದ್ಯಾರ್ಥಿಗಳನ್ನು ಕಳೆದ 3 ವರ್ಷದಲ್ಲಿ ಅಮೆರಿಕ ವಾಪಸ್ ಕಳುಹಿಸಿದೆ. ಹಾಗೆ ವಾಪಸ್ ಕಳುಹಿಸಲು ಏನು ಕಾರಣ



ಎಂಬುದನ್ನು ಈವರೆಗೂ ತಿಳಿಸಿಲ್ಲ ಎಂದು ಕೇಂದ್ರ ವಿದೇಶಾಂಗ ವ್ಯವಹಾರಗಳ ಸಹಾಯಕ ಸಚಿವ ಕೀರ್ತಿವರ್ಧನ್ ಸಿಂಗ್ ಲೋಕಸಭೆಗೆ ಸೋಮವಾರ ಮಾಹಿತಿ ನೀಡಿದರು.

ಸಂಸದ ಬಿ.ಕೆ.ಪಾರ್ಥಸಾರಥಿ ಕೇಳಿದ ಪ್ರಶ್ನೆಗೆ ಉತ್ತರಿಸಿದ ಸಚಿವರು, ವಾಪಸ್ ಕಳುಹಿಸಿದ 48 ವಿದ್ಯಾರ್ಥಿಗಳು ಅಮೆರಿಕಕ್ಕೆ ವಾಪಸಾಗಲು ಅವಕಾಶವನ್ನೂ ನೀಡಲಾಗಿಲ್ಲ. ಅನಧಿಕೃತವಾಗಿ ನೌಕರಿ ಮಾಡುವುದು ಅಥವಾ ಅನುಮತಿಯಿಲ್ಲದೇ ತರಗತಿಗಳಿಂದ ಹೊರಗುಳಿದಿರುವುದು, ಅಮಾನತು, ಪ್ರಾಯೋಗಿಕ ತರಬೇತಿ ಪಡೆಯುವುದರಲ್ಲಿ ವೈಫಲ್ಯ ಮೊದಲಾದ ಕಾರಣಗಳಿಂದ ವಿದ್ಯಾರ್ಥಿ ವೀಸಾ ರದ್ದು ಮಾಡಿ ವಾಪಸ್ ಕಳುಹಿಸಿರುವ ಸಾಧ್ಯತೆ ಇದೆ ಎಂದಷ್ಟೇ ಊಹಿಸಲಾಗಿದೆ. ಈ ಬಗ್ಗೆ ಅಮೆರಿಕದಿಂದ ಹೆಚ್ಚಿನ ಮಾಹಿತಿ ಕೇಳಲಾಗಿದೆ ಎಂದು ಸಚಿವರು ಸದನಕ್ಕೆ ತಿಳಿಸಿದರು. ವಿದೇಶಕ್ಕೆ ತೆರಳುವವರಿಗೆ ಸುರಕ್ಷಿತ-ನ್ಯಾಯ ಯುತ ವಲಸೆ ಮಾರ್ಗಗಳ ಬಗ್ಗೆ ಕೇಂದ್ರ ಸರಕಾರ ಅರಿವು ಮೂಡಿಸುತ್ತಿದೆ. ಇನ್ನೊಂದೆಡೆ ಭಾರತ-ಅಮೆರಿಕ ಸಂಬಂಧ ಗಟ್ಟಿಗೊಳಿ ಸುವ ಪ್ರಯತ್ನಗಳೂ ನಡೆಯುತ್ತಿವೆ ಎಂದರು.

ಬಾಲ್ಯವಿವಾಹ ನಿಷೇಧ ಸರ್ವ ಧರ್ಮ ಅನ್ವಯ

ಕೊಚ್ಚಿ: 'ಬಾಲ್ಯವಿವಾಹ ನಿಷೇಧ ಕಾಯಿದೆ-2006' ದೇಶದ ಎಲ್ಲಾ ನಾಗರಿಕರಿಗೂ ಅನ್ವಯ. ಅದಕ್ಕೆ ಯಾವ ಧರ್ಮವೂ ಹೊರತಾಗಿಲ್ಲ ಎಂಬ ಮಹತ್ವದ ತೀರ್ಪನ್ನು ಕೇರಳ ಹೈಕೋರ್ಟ್ ಸೋಮವಾರ ನೀಡಿದೆ.

ಇಂಥ ಕಾನೂನುಗಳ ಜಾರಿ ವಿಚಾರದಲ್ಲಿ ದೇಶದ ನಾಗರಿಕ ಎಂಬುದಷ್ಟೇ ಮುಖ್ಯವಾ ಗುತ್ತದೆ. ಧರ್ಮ ಎಂಬ ಅಂಶಕ್ಕೆ ನಂತರದ ಸ್ಥಾನ ಎಂದು ನ್ಯಾ.ಪಿ.ವಿ.ಕುಂಞಿಕೃಷ್ಣನ್ ಅವರ ಪೀಠ ಸ್ಪಷ್ಟವಾಗಿ ಹೇಳಿದೆ. 2012ರಲ್ಲಿ ಪಾಲಕ್ಕಾಡ್‌ನಲ್ಲಿ ನಡೆದ ಬಾಲ್ಯವಿವಾಹ ಪ್ರಕರಣದ ಆರೋಪಿಗಳಾದ ಬಾಲಕಿಯ ತಂದೆ ಮತ್ತು ವರ ಮಹಾಶಯ ಸಲ್ಲಿಸಿದ್ದ ಮೇಲ್ಮನವಿ ವಜಾ ಮಾಡಿದ ಹೈಕೋರ್ಟ್ ಪೀಠ, ಈ ಅಭಿಪ್ರಾಯ ವ್ಯಕ್ತಪಡಿಸಿದೆ. ಅರ್ಜಿದಾರರ ಪರ ವಕೀಲರು ವಾದ ಮಂಡಿಸುವ ಸಂದರ್ಭ, 'ಮುಸ್ಲಿಂ ವೈಯಕ್ತಿಕ ಕಾನೂನು' ಪ್ರಸ್ತಾವಿಸಿದ್ದರು. 'ಬಾಲಕಿ ಪ್ರೌಢಾವಸ್ಥೆಗೆ ಬಂದಿದ್ದ ಕಾರಣ ಆಕೆಗೆ ಮದುವೆ ಮಾಡಿಸುವುದು ತಪ್ಪಲ್ಲ. ಬಾಲ್ಯವಿವಾಹ ನಿಷೇಧ ಕಾಯ್ದೆಯು ಮುಸ್ಲಿಂ ವೈಯಕ್ತಿಕ ಕಾನೂನಿಗಿಂತ ದೊಡ್ಡದಲ್ಲ' ಎಂದು ವಾದಿಸಿದ್ದರು. ಆದರೆ, ಅವರ ವಾದವನ್ನು ಕೋರ್ಟ್ ಒಪ್ಪಲಿಲ್ಲ. ಬಾಲ್ಯವಿವಾಹ ನಿಷೇಧ ಕಾಯಿದೆಯಿಂದ ಮುಸ್ಲಿಂ ಬಾಲಕಿಯರಿಗೂ ನ್ಯಾಯ ಸಿಗಬೇಕು ಎಂದು ಪೀಠ ಅಭಿಪ್ರಾಯಪಟ್ಟಿತು.

ಲೋಕ್ ಅದಾಲತ್‌ಗೆ ಮಾಧ್ಯಮ ಕ್ಯಾಮರಾ

ದೆಹಲಿ: ದೇಶದ ಪರಮೋಚ್ಚ ನ್ಯಾಯಾಲಯ 'ಸುಪ್ರೀಂ ಕೋರ್ಟ್' ಕಾರ್ಯಾರಂಭ ಮಾಡಿರುವುದಕ್ಕೆ 75 ವರ್ಷಗಳು ಸಂದಿರುವ ಸಂಭ್ರಮವನ್ನು ಆಚರಿಸಲು ನ್ಯಾಯಾಲಯ ವಾರ ಕಾಲ ವಿಶೇಷ ಅಭಿಯಾನ ಹಮ್ಮಿಕೊಂಡಿದೆ.

ಇದೇ ಮೊದಲ ಬಾರಿಗೆ ಸುಪ್ರೀಂ ಕೋರ್ಟ್‌ನ ಏಳು ನ್ಯಾಯಮೂರ್ತಿಗಳನ್ನು ಒಳಗೊಂಡು ವಿಶೇಷ ಪೀಠ ಒಂದು ವಾರ ಕಾಲ ವಿಶೇಷ ಲೋಕ್ ಅದಾಲತ್ ಆರಂಭಿಸಿದೆ. ಈ ವಿಶೇಷ ಕಲಾಪದ ನೇರ ಪ್ರಸಾರ ನಡೆಸುವುದಕ್ಕಾಗಿ ವಿಚಾರಣಾ ಕಲಾಪದ ಹಾಲ್‌ಗೆ ಮಾಧ್ಯಮ ಕ್ಯಾಮರಾಗಳಿಗೂ ಸೋಮವಾರ ಮೊದಲ ಬಾರಿ ಅನುಮತಿ ನೀಡಲಾಗಿತ್ತು. ಸೋಮವಾರ ಮಧ್ಯಾಹ್ನ 2ಕ್ಕೆ ಆರಂಭಗೊಂಡ ವಿಶೇಷ ಲೋಕ್ ಅದಾಲತ್‌ನ ಕಲಾಪ ಆಗಸ್ಟ್ 3 ರವರೆಗೂ ಮುಂದುವರಿಯಲಿದೆ. ಸರ್ವೋಚ್ಚ ನ್ಯಾಯಾಲಯದಲ್ಲಿ ಬಾಕಿ ಇರುವ ಪ್ರಕರಣಗಳಲ್ಲಿ ಸಾಧ್ಯವಾದಷ್ಟು ಹೆಚ್ಚು ಸಂಖ್ಯೆಯ ಅರ್ಜಿಗಳನ್ನು ಇತ್ಯರ್ಥ ಪಡಿಸುವ ಗುರಿ ಇಟ್ಟುಕೊಳ್ಳಲಾಗಿದೆ. ಹಿರಿಯ ವಕೀಲರು ಲೋಕ ಅದಾಲತ್‌ಗೆ ಹೋಗಬಹುದಾದ ಪ್ರಕರಣಗಳಿದ್ದರೆ ಅವುಗಳನ್ನು ಹಾಜರುಪಡಿಸಬಹುದು ಎಂದು ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ತಿಳಿಸಿದ್ದಾರೆ. ನಾಗರಿಕರು ಕೂಡ ಪ್ರಕರಣ ಬಾಕಿಯಾಗಿದ್ದರೆ ಲೋಕ ಅದಾಲತ್‌ಗೆ ತಂದು ತ್ವರಿತ ಪರಿಹಾರ ಪಡೆಯುವಂತೆ ಸೂಚಿಸಿದ್ದಾರೆ.

ಸಮಾಚಾರ ಸಣ್ಣದಲ್ಲ

ಮೇಧಾ ಪಾಟ್ಕರ್ ಜೈಲು ಶಿಕ್ಷೆ ರದ್ದು: ಕೋರ್ಟ್ ಆದೇಶ

ದೆಹಲಿ: ಮಾನನಷ್ಟ ಮೊಕದ್ದಮೆ ಪ್ರಕರಣದಲ್ಲಿ ಸಾಮಾಜಿಕ ಹೋರಾಟಗಾರ್ತಿ ಮೇಧಾ ಪಾಟ್ಕರ್‌ಗೆ ವಿಧಿಸಿದ್ದ ಜೈಲು ಶಿಕ್ಷೆಯನ್ನು ಅಮಾನತು ಮಾಡಿ ದೆಹಲಿ

ಕೋರ್ಟ್ ಆದೇಶಿಸಿದೆ. ಮೇಧಾ ಪಾಟ್ಕರ್ ಸಲ್ಲಿಸಿದ್ದ ಮೇಲ್ಮನವಿಯ ವಿಚಾರಣೆ ನಡೆಸಿದ ದೆಹಲಿ ಸಾಕೇತ್ ನ್ಯಾಯಾಲಯ ಪಾಟ್ಕರ್‌ಗೆ ವಿಧಿಸಿದ್ದ 5 ತಿಂಗಳ ಜೈಲು ಶಿಕ್ಷೆಯನ್ನು ರದ್ದುಗೊಳಿಸಿದೆ. ಜತೆಗೆ ಲೆಫ್ಟಿನೆಂಟ್ ಗವರ್ನರ್ ವಿ ಕೆ ಸಕ್ಸೇನಾ ಅವರಿಗೆ ಸಪ್ಟೆಂಬರ್ 4ರೊಳಗೆ ಉತ್ತರ ನೀಡುವಂತೆ ಸೂಚಿಸಿ ನೋಟೀಸ್ ಜಾರಿ ಮಾಡಿದೆ. ಪಾಟ್ಕರ್ ಅವರಿಗೆ ನ್ಯಾಯಾಲಯ 25 ಸಾವಿರ ರು ಭದ್ರತೆ ಹಾಗೂ ಅಷ್ಟೇ ಮೊತ್ತದ ಜಾಮೀನು ಬಾಂಡ್ ಪಡೆದು ಜಾಮೀನು ನೀಡಿದೆ. ಜು.1 ರಂದು ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟ್ ರಾಘವ್ ಶರ್ಮಾ ಮಾನನಷ್ಟ ಮೊಕದ್ದಮೆ ಪ್ರಕರಣದಲ್ಲಿ ಮೇಧಾ ಪಾಟ್ಕರ್ ದೋಷಿ ಎಂದು ಘೋಷಿಸಿ 10 ಲಕ್ಷ ರು ದಂಡ ಹಾಗೂ 5 ತಿಂಗಳ ಸಾದಾ ಜೈಲು ಶಿಕ್ಷೆ ವಿಧಿಸಿದ್ದರು. ಹಾಗೇ ಮೇಲ್ಮನವಿ ಸಲ್ಲಿಸಲು ಅವಕಾಶ ಕೂಡ ನೀಡಿದ್ದರು. 23 ವರ್ಷಗಳ ಹಿಂದೆ ವಿ ಕೆ ಸಕ್ಸೇನಾ ಮೇಧಾ ಪಾಟ್ಕರ್ ವಿರುದ್ಧ ಮಾನನಷ್ಟ ಮೊಕದ್ದಮೆ ದಾಖಲಿಸಿದ್ದರು.

ರಾಮನಗರ ಹೆಸರು ಮರುಸ್ಥಾಪಿಸುತ್ತೇವೆ

ಬೆಂಗಳೂರು: ರಾಮನಗರ ಜಿಲ್ಲೆಯ ಹೆಸರನ್ನು ಮರು ಸ್ಥಾಪನೆ ಮಾಡೇ ಮಾಡುತ್ತೇವೆ ಎಂದು ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಹೇಳಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬೆಂಗಳೂರು ದಕ್ಷಿಣ ಜಿಲ್ಲೆಯ ಹೆಸರನ್ನು ಮತ್ತೆ ರಾಮನಗರ ಎಂದು ಬದಲಾವಣೆ ಮಾಡುವುದು

ಕುಮಾರಸ್ವಾಮಿ ಹಣೆಯಲ್ಲಿ ಬರೆದಿಲ್ಲ ಎಂಬ ಡಿ.ಕೆ ಶಿವಕುಮಾರ್ ಹೇಳಿಕೆಗೆ ತಿರುಗೇಟು ನೀಡಿ, ರಾಮನಗರ ಜಿಲ್ಲೆ ಹೆಸರನ್ನು ಮರು ಸ್ಥಾಪನೆ ಮಾಡೇ ಮಾಡುತ್ತೇವೆ ಎಂದು ಸವಾಲು ಹಾಕಿದರು. ಕುಮಾರಸ್ವಾಮಿ ಅವರ ಹಣೆ ಬರಹ ಬರೆಯುವುದು ಭಗವಂತ ಮತ್ತು ಏಳೂವರೆ ಕೋಟಿ ಜನತೆ ಕಾದು ನೋಡೋಣ. ಭಗವಂತ ಯಾರ ಯಾರ ಹಣೆ ಬರಹ ಏನು ಬರೆಯುತ್ತಾರೆ ಎಂದು ಈಗಾಗಲೇ ಏನೇನು ಬರೆದಿದ್ದಾನೆ ಎಂಬುದು ಮುಂದೆ ಗೊತ್ತಾಗುತ್ತದೆ. ನಾವು ಯಾವತ್ತೂ ಡಿ.ಕೆ. ಶಿವಕುಮಾರ್ ರವರನ್ನು ನೆನಪು ಮಾಡಿಕೊಳ್ಳುವುದಿಲ್ಲ. ಆದರೆ ಡಿಕೆಶಿ, ನಮಗೆ ಸದಾ ಅವರದೇ ಚಿಂತೆ ಎಂಬಂತೆ ಮಾತನಾಡಿದ್ದಾರೆ.

ರಾಜ್ಯದ ಮಲೆನಾಡು, ಕರಾವಳಿ ಜಿಲ್ಲೆಗಳಲ್ಲಿ ಮತ್ತೆ ಅಲರ್ಟ್

ತಗ್ಗಿದ್ದ ಮುಂಗಾರು ಮತ್ತೆ ಚುರುಕು

ಬೆಂಗಳೂರು: ರಾಜ್ಯದ ಮಲೆನಾಡು, ಕರಾವಳಿ ಜಿಲ್ಲೆಗಳಲ್ಲಿ ಕೊಂಚ ತಗಿದ್ದ ಮುಂಗಾರು ಮಳೆ ಮತ್ತೆ ಚುರುಕಾಗುವ ಲಕ್ಷಣಗಳು ಕಂಡುಬರುತ್ತಿದೆ. ಈ ಹಿನ್ನಲೆಯಲ್ಲಿ ಮತ್ತೆ ಅಲ್ಲಿನ ಭಾಗದಲ್ಲಿ ಅಲರ್ಟ್‌ಗಳನ್ನು ಹವಾಮಾನ ಇಲಾಖೆ ಘೋಷಿಸಿದೆ.

ಕರಾವಳಿ ಜಿಲ್ಲೆಯಾದ ಉತ್ತರ ಕನ್ನಡ, ಮಲೆನಾಡು ಜಿಲ್ಲೆಗಳಾದ ಚಿಕ್ಕಮಗಳೂರು, ಶಿವಮೊಗ್ಗ ಜಿಲ್ಲೆಗಳಿಗೆ ಮುಂದಿನ 48 ಗಂಟೆಗಳಿಗೆ ಅನ್ವಯವಾಗುವಂತೆ ಆರೆಂಜ್ ಅಲರ್ಟ್ ನೀಡಲಾಗಿದೆ. ಇನ್ನು ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳಿಗೆ ಇಂದಿನಿಂದ ನಾಲ್ಕು ದಿನ ಯೆಲ್ಲೋ ಅಲರ್ಟ್ ನೀಡಲಾಗಿದೆ. ಉಳಿದಂತೆ ಉತ್ತರ ಒಳನಾಡಿನ ಬೆಳಗಾವಿ ಜಿಲ್ಲೆಗೆ ಇಂದು ಮತ್ತು ನಾಳೆ, ಉತ್ತರ ಒಳನಾಡಿನ ಹಾಸನ ಜಿಲ್ಲೆಗೆ ಇಂದು ಮತ್ತು ನಾಳೆ, ಮಲೆನಾಡು ಜಿಲ್ಲೆಯಾದ ಕೊಡಗು ಜಿಲ್ಲೆಗೆ ಇಂದು ಆರೆಂಜ್ ಮತ್ತು ನಂತರದ ಮೂರು ದಿನ ಯೆಲ್ಲೋ ಅಲರ್ಟ್ ಘೋಷಿಸಲಾಗಿದೆ.

ಉತ್ತರ ಕನ್ನಡ, ಚಿಕ್ಕಮಗಳೂರು, ಶಿವಮೊಗ್ಗ ಮತ್ತು ಕೊಡಗು ಜಿಲ್ಲೆಗಳಲ್ಲಿ ಅತಿ ಭಾರೀ ಮಳೆಯಾಗಿದೆ. ನಿರಂತರ ಗಾಳಿಯ ವೇಗ ಗಂಟೆಗೆ 30–40 ಕಿಮೀ ದಾಖಲಾಗಲಿದೆ. ದಕ್ಷಿಣ ಕನ್ನಡ, ಉಡುಪಿ, ಬೆಳಗಾವಿ ಮತ್ತು ಹಾಸನ ಜಿಲ್ಲೆಗಳಲ್ಲಿ ಭಾರೀ ಮಳೆಯಾಗುವ ಸಾಧ್ಯತೆಯಿದ್ದು, ನಿರಂತರ ಗಾಳಿ ಸಹ ಇರಲಿದೆ. ಒಳನಾಡಿನ ಉಳಿದ ಜಿಲ್ಲೆಗಳ ಕೆಲವು ಸ್ಥಳಗಳಲ್ಲಿ ಗಾಳಿಯೊಂದಿಗೆ ಹಗುರದಿಂದ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.



ಸಿಲಿಕಾನ್ ಸಿಟಿಯಲ್ಲಿ ಮೋಡ ಕವಿದ ವಾತಾವರಣ

ಬೆಂಗಳೂರು ನಗರ ಮತ್ತು ಸುತ್ತಮುತ್ತ ಸ್ಥಳಗಳಲ್ಲಿ ಮುಂದಿನ 48 ಗಂಟೆಗಳ ಕಾಲ ಸಾಮಾನ್ಯವಾಗಿ ಮೋಡ ಕವಿದ ಆಕಾಶ ಇರಲಿದೆ. ಹಗುರ ಮಳೆಯಾಗುವ ಸಾಧ್ಯತೆ ಇದೆ. ಗರಿಷ್ಠ ಮತ್ತು ಕನಿಷ್ಠ ತಾಪಮಾನ ಕ್ರಮವಾಗಿ 28 ಡಿಗ್ರಿ ಮತ್ತು 20 ಡಿಗ್ರಿ ದಾಖಲಾಗಲಿದೆ ಎಂದು ಹೇಳಿದೆ.

ಸರಾಸರಿ ಸಮುದ್ರ ಮಟ್ಟದಲ್ಲಿ ತೀರದ ಟ್ರಫ್ ದಕ್ಷಿಣ ಗುಜರಾತ್ ಉದ್ದಕ್ಕೂ ಉತ್ತರ ಕೇರಳದ ಕರಾವಳಿಯವರೆಗೆ ಸಾಗುತ್ತಿದೆ. ಆದ್ದರಿಂದ ಕರಾವಳಿ ಕರ್ನಾಟಕ ಮತ್ತು ಪಕ್ಕದ ಪಶ್ಚಿಮ ಘಟ್ಟಗಳ ಜಿಲ್ಲೆಗಳಲ್ಲಿ ಬಲವಾದ ಗಾಳಿ ಬೀಸಲಿದೆ. ಈ ಹಿನ್ನಲೆಯಲ್ಲಿ ರಾಜ್ಯದಲ್ಲಿ ನೈರುತ್ಯ ಮುಂಗಾರು ಸಾಮಾನ್ಯವಾಗಿದೆ. ಕರಾವಳಿ ಬಹುತೇಕ ಸ್ಥಳಗಳಲ್ಲಿ ಮತ್ತು ಒಳನಾಡಿನ ಕೆಲವು ಸ್ಥಳಗಳಲ್ಲಿ ಮಳೆಯಾಗಿದೆ.

– ಡಾ.ಎನ್. ಪುವಿಯರಸನ್, ಬೆಂಗಳೂರು ಹವಾಮಾನ ಕೇಂದ್ರದ ಹಿರಿಯ ವಿಜ್ಞಾನಿ

ಮೋದಿಗೆ ಮೊಮ್ಮಗ ಚಂದ್ರಕುಮಾರ್ ಬೋಸ್ ಆಗ್ರಹ

ನೇತಾಜಿ ಚಿತಾಭಸ್ಮ ತರಿಸಿ, ಸತ್ಯ ಬಹಿರಂಗ ಪಡಿಸಿ

ದೆಹಲಿ: ಇಂಡಿಯನ್ ನ್ಯಾಷನಲ್ ಆರ್ಮಿ ಸ್ಥಾಪಕರಾದ ವೀರ ಸ್ವಾತಂತ್ರ್ಯ ಹೋರಾಟಗಾರ ಸುಭಾಷ್ ಚಂದ್ರ ಬೋಸ್ ಅವರ ಚಿತಾಭಸ್ಮವನ್ನು ಜಪಾನಿನ ರೆಂಕೋಜಿಯಿಂದ ಆ.18ರೊಳಗೆ ಭಾರತಕ್ಕೆ

ತರುವಂತೆ ಮಾಡಿ ಎಂದು ನೇತಾಜಿ ಅವರ ಮೊಮ್ಮಗ ಚಂದ್ರ ಕುಮಾರ್ ಬೋಸ್ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಆಗ್ರಹಿಸಿದ್ದಾರೆ.

ಪಿಟಿಐ ಸುದ್ದಿಸಂಸ್ಥೆ ಜತೆ ಭಾನುವಾರ ಮಾತನಾಡಿದ ಅವರು, ನೇತಾಜಿ ಸಾವಿನ ಬಗೆಗಿನ ಊಹಾಪೋಹಗಳಿಗೆ ತೆರೆ ಎಳೆಯಬೇಕಿದೆ. ಅದಕ್ಕಾಗಿ ನೇತಾಜಿಗೆ ಸಂಬಂಧಿಸಿದ ಕಡತಗಳನ್ನು ವರ್ಗೀಕರಿಸಲು ಮುಂದಾದ ಎನ್‌ಡಿಎ ಸರಕಾರವೇ ಈ ಬಗ್ಗೆ ಸತ್ಯ ಪ್ರಕಟಿಸಬೇಕು ಎಂದು ಹೇಳಿದರು.

ಪಶ್ಚಿಮ ಬಂಗಾಳ ಬಿಜೆಪಿ ಉಪಾಧ್ಯಕ್ಷರಾಗಿದ್ದ ಚಂದ್ರ, ವರ್ಗೀಕೃತ ಕಡತಗಳು ರಹಸ್ಯ ಮಾಹಿತಿ ಮತ್ತು ದಾಖಲೆಗಳು ಬಹಿರಂಗವಾಗಿವೆ. ನೇತಾಜಿ ಸಾವು 1945ರ ಆ.18ರಂದು ತೈವಾನ್‌ನಲ್ಲಿ ವಿಮಾನ ಅಪಘಾತದಲ್ಲಿ ಸಂಭವಿಸಿತು ಎಂಬುದನ್ನು ದಾಖಲೆ ತೋರಿಸುತ್ತದೆ. ಸ್ವಾತಂತ್ರ್ಯ ನಂತರ ಅವರು ಭಾರತಕ್ಕೆ ಮರಳಲು ಬಯಸಿದ್ದರು ಎಂದು ನೆನಪಿಸಿಕೊಂಡಿದ್ದಾರೆ.

ಭಾರತದ ಸ್ವಾತಂತ್ರ್ಯಕ್ಕೆ ಶ್ರಮಿಸಿದ ಅವರ ಚಿತಾಭಸ್ಮ ಭಾರತ ಮಾತೆಯ ಮಡಿಲನ್ನು ಸೇರಬೇಕು, ಇಲ್ಲಿನ ಮಣ್ಣನ್ನು ಸೇರಿಕೊಳ್ಳಬೇಕು.

ನೇತಾಜಿ ಅವರ ಪುತ್ರಿ ಅನಿತಾ ಬೋಸ್ ಹಿಂದೂ ಸಂಪ್ರದಾಯದ ಪ್ರಕಾರ ಅವರ ಅಂತಿಮ ವಿಧಿವಿಧಾನಗಳನ್ನು ಪೂರೈಸಲು ಬಯಸಿದ್ದಾರೆ. ಈ ಬಗ್ಗೆ ಮೂರೂವರೆ ವರ್ಷಗಳಿಂದ ಪ್ರಧಾನಿ ಮೋದಿ ಅವರಿಗೆ ಪತ್ರ ಬರೆಯುತ್ತಿದ್ದೇನೆ ಎಂದು ಚಂದ್ರ ಕುಮಾರ್ ಹೇಳಿದ್ದಾರೆ. ರೆಂಕೋಜಿಯಲ್ಲಿರುವ ಚಿತಾಭಸ್ಮ ನೇತಾಜಿ ಅವರದ್ದಲ್ಲ ಎಂದು ಭಾರತ ಸರಕಾರಕ್ಕೆ ಅನ್ನಿಸುತ್ತಿದ್ದರೆ ಜಪಾನ್ ಸಂಸ್ಥೆಗೆ ಚಿತಾಭಸ್ಮ ನಿರ್ವಹಣೆ ಖರ್ಚನ್ನು ಕೊಡಬಾರದು ಎಂದು ಸೂಚ್ಯವಾಗಿ ನುಡಿದರು.

ರಾಜ್ಯಸಭೆಯಲ್ಲಿ ದೇವೇಗೌಡರ ಮಾತು

ಕುಡಿಯುವ ನೀರಿಗಾಗಿ ಎನ್‌ಡಿಎಗೆ ಮತ

ದೆಹಲಿ: ಬೆಂಗಳೂರು ಕುಡಿಯುವ ನೀರಿನ ಸಮಸ್ಯೆ ಕುರಿತಾಗಿ ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡ ಅವರು ರಾಜ್ಯಸಭೆಯಲ್ಲಿ ರಾಷ್ಟ್ರದ ಗಮನ ಸೆಳೆದಿದ್ದಾರೆ.

ಬಜೆಟ್ ಕುರಿತ ಚರ್ಚೆಯಲ್ಲಿ ಭಾಗವಹಿಸಿದ್ದ ಎಚ್‌ಡಿಡಿ, ಬೆಂಗಳೂರಿನ ಕುಡಿಯುವ ನೀರಿನ ಸಮಸ್ಯೆಗೆ ಪರಿಹಾರ ದೊರಕಿಸಿಕೊಡಿ ಎಂದು ಕೇಂದ್ರ ಸರಕಾರಕ್ಕೆ ಮನವಿ ಮಾಡಿದರು.

ಕಾವೇರಿ ನದಿ ನೀರು ಹಂಚಿಕೆ ವಿಚಾರವನ್ನೂ ಸದನದಲ್ಲಿ ಪ್ರಸ್ತಾಪಿಸಿದ ದೇವೇಗೌಡರು, ಹಳೇ ಮೈಸೂರು ಮತ್ತು ಬೆಂಗಳೂರು ಭಾಗಕ್ಕೆ ಕಾವೇರಿ ನೀರೇ ಆಧಾರ. ದೇಶದ ಹಣಕಾಸು ಸಚಿವರು ಕರ್ನಾಟಕದಿಂದಲೇ ಆಯ್ಕೆಯಾದವರು. ಬೆಂಗಳೂರಿನ ಸಮಸ್ಯೆಗೆ ಯಾರನ್ನೂ ದೂಷಿಸುವುದಿಲ್ಲ. ಆದರೆ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬೇಕಾದ ಅಗತ್ಯವಿದೆ. ಈ ಸಮಸ್ಯೆ ಪರಿಹರಿಸುತ್ತಾರೆಂಬ ನಿರೀಕ್ಷೆಯಿಂದಲೇ ಎನ್‌ಡಿಎಗೆ ಜನರು ಮತ ಹಾಕಿದ್ದಾರೆ ಎಂದು ಗಮನ ಸೆಳೆದರು. ರಾಜ್ಯ ನೀರಿಲ್ಲದೇ ತತ್ತರಿಸಿದ್ದಾಗಲೂ ತಮಿಳುನಾಡಿಗೆ ನೀರು ಹರಿಸುವಂತೆ ಆದೇಶಿಸಲಾಗಿತ್ತು. ಸದ್ಯ ಮಳೆ ಉತ್ತಮವಾಗಿದ್ದು ನೀರು ಹರಿಸಲಾಗಿದೆ. ಆದರೆ ಬರಗಾಲದಲ್ಲಿ ಏನು ಮಾಡುವುದು? ಶಾಶ್ವತ ಪರಿಹಾರ ಬೇಕಿದೆ ಎಂದರು.

ಉಕ್ರೇನ್ ವಿರುದ್ಧದ ಹೋರಾಟದಲ್ಲಿ ಮಡಿದ ಭಾರತೀಯ ಯುವಕ

ದೆಹಲಿ: ಸಾರಿಗೆ ಕೆಲಸಕ್ಕೆಂದು ರಷ್ಯಾಕ್ಕೆ ತೆರಳಿದ್ದ ಹರಿಯಾಣದ ಯುವಕ ಉಕ್ರೇನ್ ಯುದ್ಧದಲ್ಲಿ ಸಾವನ್ನಪ್ಪಿದ್ದಾರೆ ಎಂದು ತಿಳಿದು ಬಂದಿದೆ. ಈ ಬಗ್ಗೆ ಮೃತ ಯುವಕನ ಕುಟುಂಬಸ್ಥರು ಮಾಹಿತಿ ನೀಡಿದ್ದಾರೆ.

ಮೃತಪಟ್ಟ ಯುವಕನನ್ನ ಹರಿಯಾಣದ ಕೈತಾಲ್ ಜಿಲ್ಲೆಯ ಮಟೌರ್ ನಿವಾಸಿ ರವಿ ಮೌಣ (22) ಎಂದು ಗುರುತಿಸಲಾಗಿದೆ. ರವಿ ಸಾವನ್ನಪ್ಪಿರುವ ಬಗ್ಗೆ ಮಾಸ್ಕೋದ ಭಾರತದ ರಾಯಭಾರಿ ಕಚೇರಿ ಖಚಿತಪಡಿಸಿದೆ.

ಇದೇ ವರ್ಷ ಜನವರಿ 13ರಂದು ರಷ್ಯಾದಲ್ಲಿ ಸಾರಿಗೆ ನೌಕರಿ ಸಿಕ್ಕಿದೆ ಎಂದು ಏಜೆಂಟ್ ಹೇಳಿದ್ದನ್ನು ನಂಬಿ ರವಿ ರಷ್ಯಾಕ್ಕೆ ತೆರಳಿದ್ದರು. ಆದರೆ ಅಲ್ಲಿಗೆ ಹೋದ ಬಳಿಕ ಅವರನ್ನು ಹೆದರಿಸಿ ಸೇನೆಗೆ ಸೇರಿಸಲಾಗಿದೆ. ಉಕ್ರೇನ್ ವಿರುದ್ಧ ಹೋರಾಟದಲ್ಲಿ ಭಾಗವಹಿಸದಿದ್ದರೆ 10 ವರ್ಷ ಜೈಲು ಶಿಕ್ಷೆ ನಿಡಲಾಗುವುದು ಎಂದು ಬೆದರಿಕೆ ಹಾಕಲಾಗಿದೆ ಎಂದು ಕುಟುಂಬಸ್ಥರು ಆರೋಪಿಸಿದ್ದಾರೆ. ರವಿ ಬಗ್ಗೆ ಮಾಹಿತಿ ನೀಡುವಂತೆ ರಾಯಭಾರಿ ಕಚೇರಿಗೆ ಪತ್ರ ಕೂಡ ಬರೆಯಲಾಗಿತ್ತು .

ಮಾರ್ಚ್ 12ರ ವರೆಗೆ ಆತ ಸಂಪರ್ಕದಲ್ಲಿದ್ದ, ತೀವ್ರ ಅಸಮಾಧಾನಗೊಂಡಿದ್ದ ಎಂದು ರವಿ ಸಹೋದರ್ ಅಜಯ್ ಮೌಣ್ ಮಾಹಿತಿ ನೀಡಿದ್ದಾರೆ. ಜಮೀನು ಮಾರಿ ರವಿಯನ್ನು ರಷ್ಯಾಗೆ ಕಳುಹಿಸಿದ್ದೆವು ಈಗ ಆತನ ಮೃತದೇಹ ತರಲು ಹಣವಿಲ್ಲ , ಸರಕಾರ ಸಹಾಯ ಮಾಡಬೇಕು ಎಂದು ಕುಟುಂಬಸ್ಥರು ಮನವಿ ಮಾಡಿದ್ದಾರೆ.

ಸೇನೆಯಲ್ಲಿ ಕೆಲಸ ಮಾಡುತ್ತಿರುವ ಭಾರತೀಯ ಪ್ರಜೆಗಳನ್ನು ವಾಪಸ್ ಕಳುಹಿಸುವಂತೆ ಪ್ರಧಾನಿ ರಷ್ಯಾ ಅಧ್ಯಕ್ಷ ಪುಟಿನ್‌ಗೆ ಮನವಿ ಮಾಡಿದ್ದರು.

ಪರಿಣಾಮಕಾರಿ ನಿಯಂತ್ರಣಕ್ಕೆ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ವಲಯ ಆಯುಕ್ತರಿಗೆ ಸೂಚನೆ

ಫ್ಲೆಕ್ಸ್ ಅಳವಡಿಸಿದರೆ ಕಠಿಣ ಕ್ರಮ

ಬೆಂಗಳೂರು: ಪಾಲಿಕೆ ವ್ಯಾಪ್ತಿಯಲ್ಲಿ ಅನಧಿಕೃತ ಫ್ಲೆಕ್ಸ್/ಬ್ಯಾನರ್ ಅಳವಡಿಸುವವರ ಮೇಲೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು ಎಂದು ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಎಲ್ಲಾ ವಲಯ ಆಯುಕ್ತರಿಗೆ ಸೂಚನೆ ನೀಡಿದರು.

ಬಿಬಿಎಂಪಿ ವ್ಯಾಪ್ತಿಯ ವಿವಿಧ ವಿಷಯಗಳಿಗೆ ಸಂಬಂಧಿಸಿದಂತೆ ನಡೆದ ಸಭೆಯಲ್ಲಿ ಮಾತನಾಡಿ, ಪಾಲಿಕೆ ವ್ಯಾಪ್ತಿಯಲ್ಲಿ ಅನಧಿಕೃತವಾಗಿ ಫ್ಲೆಕ್ಸ್/ಬ್ಯಾನರ್ ಗಳನ್ನು ಅಳವಡಿಸುತ್ತಿದ್ದು, ಅದನ್ನು ಪರಿಣಾಮಕಾರಿಯಾಗಿ ನಿಯಂತ್ರಿಸಬೇಕಿದೆ. ಈ ನಿಟ್ಟಿನಲ್ಲಿ ಆಯಾ ವಲಯ ವ್ಯಾಪ್ತಿಯಲ್ಲಿ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಂಡು ಎಲ್ಲಿಯೂ ಅನಧಿಕೃತ ಜಾಹೀರಾತುಗಳನ್ನು ಅಳವಡಿಸದಂತೆ ಸೂಕ್ತ ಕ್ರಮಗಳನ್ನು ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಅನಧಿಕೃತವಾಗಿ ಅಳವಡಿಸುತ್ತಿರುವ ಫ್ಲೆಕ್ಸ್‌ಗಳನ್ನು ಪಾಲಿಕೆಯಿಂದ ತೆರವುಗೊಳಿಸಿ ಪೊಲೀಸ್ ಠಾಣೆಯಲ್ಲಿ ದೂರು ನೀಡಿ ಎಫ್‌ಐಆರ್ ದಾಖಲಿಸಲಾಗುತ್ತಿದೆ. ಆದರೂ ಸಾರ್ವಜನಿಕ ಸ್ಥಳ, ರಸ್ತೆ ಬದಿ ಫ್ಲೆಕ್ಸ್ ಅಳವಡಿಸುವುದನ್ನು ನಿಯಂತ್ರಿಸಲು ಸಾಧ್ಯವಾಗುತ್ತಿಲ್ಲ. ಆದ್ದರಿಂದ ಪಾಲಿಕೆ ಹಾಗೂ ಪೊಲೀಸ್ ಇಲಾಖೆ ಜಂಟಿ ಕಾರ್ಯಾಚರಣೆ ನಡೆಸಿ ಅನಧಿಕೃತ ಜಾಹೀರಾತು ಅಳವಡಿಕೆಗೆ ನಿಯಂತ್ರಣ ತರಬೇಕು ಎಂದು ಅಧಿಕಾರಿಗಳಿಗೆ ತಿಳಿಸಿದರು.

ಪಾಲಿಕೆ ವ್ಯಾಪ್ತಿಯಲ್ಲಿ ಅನಧಿಕೃತ ಜಾಹೀರಾತುಗಳನ್ನು ರಾತ್ರಿ ವೇಳೆ ಹೆಚ್ಚಾಗಿ ಅಳವಡಿಸು ತ್ತಾರೆ. ಈ ನಿಟ್ಟಿನಲ್ಲಿ ಆಯಾ ವಲಯ ವ್ಯಾಪ್ತಿಯಲ್ಲಿ ಒಂದು ಪ್ರಹರಿ ವಾಹನವನ್ನು ನಿಯೋಜಿಸಿ ಪ್ರಮುಖ ರಸ್ತೆಗಳಲ್ಲಿ ಗಸ್ತು ತಿರುಗುವ ಮೂಲಕ ಪರಿಶೀಲನೆ ಹಾಗೂ ಅನಧಿಕೃತ ಫ್ಲೆಕ್ಸ್, ಬ್ಯಾನರ್ ಅಳವಡಿಸುವುದರ ಮೇಲೆ ನಿಗಾವಹಿಸಬೇಕು.

–ತುಷಾರ್ ಗಿರಿನಾಥ್, ಮುಖ್ಯ ಆಯುಕ್ತ

ಜೀನಿಯಸ್ ಮುತ್ತನಿಗೆ ಚಿನ್ನಾರಿಮುತ್ತ ಸಾಥ್

ಖ್ಯಾತ ನಿರ್ದೇಶಕ ಟಿ.ಎಸ್.ನಾಗಾಭರಣ ಅವರ ಪತ್ನಿ ನಾಗಿಣಿ ಭರಣ ನಿರ್ದೇಶನದ ಮೊದಲ ಚಿತ್ರ ಜೀನಿಯಸ್ ಮುತ್ತ ತೆರೆಗೆ ಬರಲು ಸಿದ್ದವಾಗಿದೆ. ಆಗಸ್ಟ್ ನಲ್ಲಿ ಚಿತ್ರ ರಾಜ್ಯಾದ್ಯಂತ ರಿಲೀಸ್ ಆಗಲಿದೆ. ಜಿ.ಎಸ್ ಲತಾ ಜೈಪ್ರಕಾಶ್ ನಿರ್ಮಾಣದ ಈ ಚಿತ್ರದಲ್ಲಿ ಜೀನಿಯಸ್ ಮುತ್ತ ನಾಗಿ ಮಾಸ್ಟರ್ ಶ್ರೇಯಸ್ ಜೈಪ್ರಕಾಶ್ ನಟಿಸಿದ್ದಾರೆ. ವಿಶೇಷ ಪಾತ್ರದಲ್ಲಿ ಚಿನ್ನಾರಿಮುತ್ತ ಖ್ಯಾತಿಯ ವಿಜಯ ರಾಘವೇಂದ್ರ ಅಭಿನಯಿಸಿದ್ದಾರೆ.

ಮನರಂಜನೆಯ ಜತೆಗೆ ಸಾಮಾಜಿಕ ಸಂದೇಶವೂ ಈ ಚಿತ್ರದಲ್ಲಿದೆ.

ನಾಗಿಣಿ ಭರಣ ಅವರು ನನಗೆ ಹತ್ತು ವರ್ಷಗಳ ಪರಿಚಯ. ನನ್ನ ಮಗನಿಗಾಗಿ ಒಂದೊಳ್ಳೆ ಕಥೆ ಮಾಡಿ ನೀವೇ ನಿರ್ದೇಶನ ಮಾಡಬೇಕೆಂದು ನಾಗಿಣಿ ಭರಣ ಅವರ ಬಳಿ ಹೇಳಿದೆ. ಅವರು ಒಳ್ಳೆಯ ಕಥೆ ಸಿದ್ದ ಮಾಡಿಕೊಂಡು ನನಗೆ ಕಥೆ ಹೇಳಿದರು. ನಂತರ ಜೀನಿಯಸ್ ಮುತ್ತ ಚಿತ್ರ ಆರಂಭವಾ ಯಿತು. ಈಗ ಬಿಡುಗಡೆ ಹಂತ ತಲುಪಿದೆ. ಆಗಸ್ಟ್ ನಲ್ಲಿ ಚಿತ್ರವನ್ನು ತೆರೆಗೆ ತರಲಿದ್ದೇವೆ ಎಂದು ಲತಾ ಜೈಪ್ರಕಾಶ್ ಹೇಳಿದರು. ಆಗಸ್ಟ್ ನಲ್ಲಿ ಚಿತ್ರ ತೆರೆಗೆ ಬರಲಿದೆ.

ನನ್ನ ಸ್ನೇಹಿತರ ತಂಡದೊಂದಿಗೆ ಸೇರಿ ಈ ಚಿತ್ರದ ಕಥೆ ಸಿದ್ದ ಮಾಡಿದೆ. ವಿಭಿನ್ನ ಕಥಾಹಂದರ ಹೊಂದಿರುವ ಈ ಚಿತ್ರದ ಚಿತ್ರೀಕರಣ ಹೆಚ್ಚಾಗಿ ಬಿಳಿಗಿರಿರಂಗನ ಬೆಟ್ಟದಲ್ಲಿ ನಡೆದಿದೆ. ಈಗಾಗಲೇ ಅಂತರರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಪ್ರದರ್ಶನ ಕಂಡು ಮೆಚ್ಚುಗೆ ಪಡೆದಿದೆ

– ನಾಗಿಣಿ ಭರಣ ನಿರ್ದೇಶಕಿ

ನಾನು ನಾಗಾಭರಣ ಸರ್ ಬಳಿ ನಟನೆ ಕಲಿತಿದ್ದೇನೆ. ಈ ಚಿತ್ರದಲ್ಲಿ ಜೀನಿಯಸ್ ಮುತ್ತನಾಗಿ ಅಭಿನಯಿಸಿದ್ದೇನೆ. ಚಿತ್ರ ಎಲ್ಲರಿಗೂ ಇಷ್ಟವಾಗುತ್ತದೆ. ನನಗೆ ಚಿತ್ರದ ಬಗ್ಗೆ ಅಪಾರ ನಿರೀಕ್ಷೆ ಇದೆ.

ಮಾಸ್ಟರ್ ಶ್ರೇಯಸ್ ನಟ

ನಾನು ಯಾವಾಗಲೂ ನಾಗಾಭರಣ ಸರ್ ಅವರಿಗೆ ಆಬಾರಿ. ಏಕೆಂದರೆ ನನ್ನನ್ನು ಎಲ್ಲರು ವಿಜಯ ರಾಘವೇಂದ್ರ ಅನ್ನುವುದಕ್ಕಿಂತ ಚಿನ್ನಾರಿಮುತ್ತ ಎನ್ನುವುದೇ ಹೆಚ್ಚು. ಅಂತಹ ಸೂಪರ್ ಹಿಟ್ ಚಿತ್ರದಲ್ಲಿ ನಟಿಸಲು ನನಗೆ ಅವಕಾಶ ನೀಡಿದವರು ನಾಗಾಭರಣ ಸರ್. ಈಗ ಅವರ ಮೊದಲ ನಿರ್ದೇಶನದಲ್ಲೂ ನಾನು ನಟಿಸಿರುವುದು ಖುಷಿಯಾಗಿದೆ.ನ

ವಿಜಯ ರಾಘವೇಂದ್ರ, ನಟ

ಗಿಚ್ಚಿ ಗಿಲಿಗಿಲಿಯ ರಾಗಿಣಿ

ಕಿರುತೆರೆಯಲ್ಲಿ ಪ್ರಸಾರವಾಗುವ ಗಿಚ್ಚಿಗಿಲಿಗಿಲಿ ಹಾಸ್ಯ ಪ್ರಿಯರ ಅಚ್ಚುಮೆಚ್ಚಿನ ಕಾರ್ಯಕ್ರಮ. ರಾಘವೇಂದ್ರ ಈ ಶೋನ ಕೇಂದ್ರಬಿಂದು, ಅಲ್ಲಲ್ಲಾ.. ರಾಘವೇಂದ್ರ ಎಂದರೆ ತಿಳಿಯೋದು ಕಷ್ಟ. ಅದೇ ರಾಗಿಣಿ ಎಂದರೆ ಥಟ್ಟನೆ ನೆನಪಾಗುತ್ತಾರೆ. ರಾಗಿಣಿಯ ಮುದ್ದಾದ ಮುಖ ನಮ್ಮ ಮುಂದೆ ಪ್ರತ್ಯಕ್ಷವಾಗುತ್ತದೆ. ಗಿಲಿಗಿಲಿ ಎನ್ನುತ್ತಾ ಹುಡುಗಿಯ ವೇಷದಲ್ಲಿ ನಗುವಿನ ಕಚಗುಳಿ ಇಡುತ್ತಾರೆ ರಾಘು.

ಸಾಗರದ ರಾಘವೇಂದ್ರ, ಯಕ್ಷಗಾನ ಆರಾಧಕ. ತಮ್ಮೂರಿನಲ್ಲಿ ಯಕ್ಷಗಾನ ಪ್ರದರ್ಶನವಿದ್ದರೆ ರಾತ್ರಿ ಇಡೀ ಯಕ್ಷಗಾನ ನೋಡಿ ಖುಷಿ

ಪಡುತ್ತಿದ್ದರಂತೆ. ಅದರಲ್ಲಿಯೂ ಅಲ್ಲಿನ ವೇಷಧಾರಿಗಳು ರಾಘವೇಂದ್ರನ ಅಚ್ಚುಮೆಚ್ಚು. ಅಲ್ಲಿಯೂ ಹಾಸ್ಯನಟರೇ ರಾಘುನ ಫೇವರಿಟ್. ಅಲ್ಲಿಂದಲೇ ನಟನೆಯ ಅಭಿರುಚಿ ಇವರನ್ನು ಆವರಿಸಿತು. ಉದಯ ಕಲಾವಿದರ ತಂಡ ಸೇರಿ, ಅಲ್ಲಿಯೂ ಭಸ್ಮಾಸುರನ ವೇಷದಲ್ಲಿಯೇ ಬಣ್ಣಹಚ್ಚಿ ಮನಗೆದ್ದರು. ಆಗಷ್ಟೇ ಆರಂಭವಾಗುತ್ತಿದ್ದ, ಮಜಾಭಾರತ ರಿಯಾಲಿಟಿ ಶೋ ಆಡಿಷನ್‌ನಲ್ಲಿ ಪಾಲ್ಗೊಂಡು ಆಯ್ಕೆಯಾದರು. ಇಲ್ಲಿಂದ ರಾಘು ದಿಕ್ಕೆ ಬದಲಾಯಿತು. ಈ ಕಾರ್ಯಕ್ರಮದಲ್ಲಿ ಅನಿವಾರ್ಯವಾಗಿ ಹುಡುಗಿಯ ವೇಷ ಹಾಕಬೇಕಾಗಿ ಬಂತು, ಮುಂದೆ ಅದೇ ರೂಢಿಯಾಯಿತು.

ಶ್ರದ್ಧೆಯ ಸಂದ ಫಲ

ರಾಘು ಸೀರೆಯುಟ್ಟು ಬಂದರೆ ಇವರನ್ನು ಹುಡುಗ ಎಂದು ಗುರುತಿಸುವುದೂ ಕಷ್ಟ. ಅಷ್ಟರ ಮಟ್ಟಿಗೆ ಆ ಪಾತ್ರಕ್ಕೆ ರಾಘು ಒಗ್ಗಿಕೊಂಡಿದ್ದಾರೆ. ಅದು ಒಬ್ಬ ಕಲಾವಿದನಾಗಿ ತಮ್ಮ ಪಾತ್ರಕ್ಕೆ ತೋರುವ ಶ್ರದ್ಧೆಯೂ ಆಗಿದೆ. ಹಾಗಾಗಿಯೇ ಗಿಚ್ಚಿಗಿಲಿಗಿಲಿ ಮೂರು ಸೀಸನ್‌ನಲ್ಲಿಯೂ ಹುಡುಗಿಯ ಪಾತ್ರದಲ್ಲಿಯೇ ರಾಘು ನಟಿಸಿ ಮನಗೆದ್ದಿದ್ದಾರೆ. ಒಮ್ಮೊಮ್ಮೆ ನೈಜ ಹುಡುಗನ ಪಾತ್ರದಲ್ಲಿಯೂ ಬಣ್ಣಹಚ್ಚಿ ಮನಗೆಲ್ಲುತ್ತಾರೆ.

ಮಯಾಬಜರ್‌ನ ದ್ರೌಪದಿ

ಹಾಸ್ಯ ಪಾತ್ರದಲ್ಲಿ ಮನಗೆದ್ದಿದ್ದ ರಾಘುಗೆ ಸಿನಿಮಾದಲ್ಲಿಯೂ ನಟಿಸುವ ಅವಕಾಶ ಬಂತು, ಪಿಆರ್‌ಕೆ ಪ್ರೊಡಕ್ಷನ್‌ನಲ್ಲಿ ನಿರ್ಮಾಣವಾದ ಮಾಯಾಬಜಾರ್‌ನಲ್ಲಿ ರಾಘು ನಟಿಸಿದರು. ಈ ಚಿತ್ರದಲ್ಲಿ ದ್ರೌಪದಿಯಾಗಿ ಕಾಣಿಸಿಕೊಂಡರು. ಇದು ಚಿಕ್ಕ ಪಾತ್ರವಾದರೂ ರಾಘುಗೆ ಪ್ರಸಿದ್ಧಿ ತಂದುಕೊಟ್ಟಿತು. ಮುಂದೆ ಮತ್ತೆ ರಿಯಾಲಿಟಿ ಶೋನಲ್ಲಿಯೇ ತಮ್ಮ ನಟನೆ ಮುಂದುವರಿಸಿದರು.

ನಾರದನ ಅವತಾರ

ರಾಘು ಹುಡುಗಿಯ ವೇಷಕ್ಕೆ ಸೀಮಿತವಾದರೆ ಎಂದುಕೊಂಡಾಗಲೇ ಊಹುಂ ತಾನು ಒಂದೇ ಪಾತ್ರಕ್ಕೆ ಕಟ್ಟು ಬಿದ್ದಿಲ್ಲ ಎಂಬುದನ್ನು ರಾಘು ತೋರಿಸಿಕೊಟ್ಟರು. ಶ್ರೀದೇವಿ ಮಹಾತ್ಮೆ ಧಾರಾವಾಹಿಯಲ್ಲಿ ರಾಘು, ನಾರದನ ಪಾತ್ರದಲ್ಲಿ ಕಾಣಿಸಿಕೊಂಡು ಅಚ್ಚರಿ ಮೂಡಿಸಿದರು. ಈ ಪಾತ್ರವೂ ಕೂಡ ಯಶಸ್ಸು ತಂದುಕೊಟ್ಟಿತು.

ನಾನು ಹುಡುಗಿಯ ಪಾತ್ರದಲ್ಲಿಯೇ ನಟಿಸಿ ಪ್ರೇಕ್ಷಕರ ಮನಗೆದ್ದಿದ್ದೇನೆ ಎಂದರೆ ಅದಕ್ಕೆ ನಮ್ಮ ಮನೆಯಲ್ಲಿನ ಪ್ರೋತ್ಸಾಹವೇ ಕಾರಣ. ನನ್ನ ಅಮ್ಮ, ನನ್ನ ನಟನೆಗೆ ಬೇಕಾದ ವಸ್ತ್ರಗಳನ್ನು ಸಿದ್ದ ಮಾಡಿಕೊಡುತ್ತಾರೆ. ಅದರಲ್ಲಿಯೂ ನನ್ನ ಸಹೋದರಿ ನಾನು ಇದುವರೆಗೂ ಹಾಕದ ಬಟ್ಟೆಗಳನ್ನು ನೀನು ಧರಿಸಿದ್ದೀಯಾ ಎಂದು ಕಿಚಾಯಿಸುತ್ತಾಳೆ.

ಹಾಸ್ಯ ನಟಿಯರಲ್ಲಿ ಉಮಾಶ್ರೀ ಅಮ್ಮ ನನಗೆ ಅಚ್ಚುಮೆಚ್ಚು. ಪುಟ್ನಂಜ ಚಿತ್ರದಲ್ಲಿನ ಅವರ ಪಾತ್ರ ಕಂಡು ಬೆರಗಾದೆ. ಅವರಂತೆಯೇ ಪಾತ್ರ ಮಾಡಬೇಕು ಎಂದು ಅಂದುಕೊಂಡೆ. ಅವರನ್ನೇ ಅನುಸರಿದಿದೆ, ಅವರು ನಮ್ಮ ಶೋಗೆ ಬಂದಾಗ ಅವರಂತೆಯೇ ನಟಿಸಿ, ಅವರ ಆಶೀರ್ವಾದ ಪಡೆದೆ. ನಿಜವಾಗಿಯೂ ನಾನು ಧನ್ಯ.

ಬಾಲಿವುಡ್‌ಗೆ ರಮೇಶ್ ರೆಡ್ಡಿ

ಸ್ಯಾಂಡಲ್‌ವುಡ್‌ನಲ್ಲಿ ಉಪ್ಪು ಹುಳಿ ಖಾರ, ನಾತಿಚರಾಮಿ, ಪಡ್ಡೆಹುಲಿ, ಗಾಳಿಪಟ 2 ಚಿತ್ರಗಳನ್ನು ನಿರ್ಮಿಸಿರುವ ರಮೇಶ್ ರೆಡ್ಡಿ ಈಗ ಬಾಲಿವುಡ್ ಅಂಗಳಕ್ಕೂ ಎಂಟ್ರಿಕೊಟ್ಟಿದ್ದಾರೆ. ಹಿಂದಿಯ ಘುಸ್ಪೈಥಿಯಾ ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ. ಘುಸ್ಪೈಥಿಯಾ ಕ್ರೈಂ, ಥ್ರಿಲ್ಲರ್ ಕಥೆಯನ್ನು ಒಳಗೊಂಡಿದೆ. ಚಿತ್ರದ ಟ್ರೇಲರ್ ರಿಲೀಸ್ ಆಗಿದ್ದು ಸಖತ್ ಸದ್ದು ಮಾಡುತ್ತಿದೆ. ಸೋಷಿಯಲ್ ಮೀಡಿಯಾದ ಅತಿಯಾದ ಬಳಕೆಯಿಂದ ನಮಗೆ ಅರಿವಿಲ್ಲದಂತೆ ನಮ್ಮ ಮೇಲೆ ಆಗುತ್ತಿರುವ ದುಷ್ಪರಿಣಾಮದ ಬಗ್ಗೆ ಚಿತ್ರದಲ್ಲಿ ಹೇಳಲಾಗಿದೆ. ವಿನೀತ್ ಕುಮಾರ್‌ಸಿಂಗ್, ಊರ್ವಶಿ ರೌಟೇಲಾ, ಅಕ್ಷಯ್ ಒಬೆರಾಯ್ ಮುಂತಾದವರು ತಾರಾಬಳಗದಲ್ಲಿದ್ದಾರೆ. ಸುಸಿ ಗಣೇಶನ್ ಚಿತ್ರ ನಿರ್ದೇಶಿಸಿದ್ದು, ರಮೇಶ್ ರೆಡ್ಡಿ, ಜ್ಯೋತಿಕಾ ಶೆಣೈ ಹಾಗೂ ಮಂಜರಿ ಸುಸಿ ಗಣೇಶನ್ ಒಟ್ಟಾಗಿ ಚಿತ್ರ ನಿರ್ಮಿಸಿದ್ದಾರೆ. ಆಗಸ್ಟ್ 9 ರಂದು ಘುಸ್ಪೈಥಿಯಾ ಬಿಡುಗಡೆಯಾಗಲಿದೆ.

ಪ್ರೇಕ್ಷಕರು ಮೆಚ್ಚುವ ಚಿತ್ರವನ್ನು ನಿರ್ಮಿಸಬೇಕು ಎಂಬುದು ನನ್ನ ಆಸೆ. ಅಂತೆಯೇ ಕನ್ನಡದಲ್ಲಿ ಹಲವು ಸಿನಿಮಾಗಳನ್ನು ನಿರ್ಮಿಸಿದ್ದೇನೆ. ಈಗ ಹಿಂದಿ ಭಾಷೆಯಲ್ಲಿಯೂ ಚಿತ್ರ ನಿರ್ಮಾಣಕ್ಕೂ ಬಂಡ ವಾಳ ಹೂಡಿದ್ದೇನೆ. ಘುಸ್ಪೈಥಿಯಾ ಥ್ರಿಲ್ಲರ್ ಜತೆಗೆ ಉತ್ತಮ ಸಂದೇಶವನ್ನು ಹೊತ್ತು ಬರುತ್ತಿದೆ. ಎಲ್ಲಾ ಪ್ರೇಕ್ಷಕರಿಗೂ ಹಿಡಿಸುವ ಸಿನಿಮಾವಿದು.

-ರಮೇಶ್ ರೆಡ್ಡಿ ನಿರ್ಮಾಪಕ

ಆರಾಮ

ಅನುದಿನ ವಿರಾಮಕ್ಕೆ ಒಂದು ನೆಪ

ಬಿ ಪಾಸಿಟಿವ್

ಸೋಲು ನಿಜವಾದ ಗುರು

ನಮ್ಮೊಳಗಿನ ಸೋಮಾರಿತನ ಮತ್ತು ಆಲಸ್ಯವನ್ನು ಜಯಿಸುವ ಸಾಮರ್ಥ್ಯವೇ ಇಚ್ಛಾಶಕ್ತಿ. ಇಚ್ಛೆ ಎನ್ನುವ ಪದವೇ ನಮ್ಮ ಜೀವನಕ್ಕೆ ಬೆಳಕು ತಂದುಕೊಡುತ್ತದೆ. ಮನಸ್ಸಿನಲ್ಲಿ ತವಕ ಹುಟ್ಟಿಸುತ್ತದೆ. ಇಚ್ಛಾಶಕ್ತಿಯೇ ನಮ್ಮೆಲ್ಲ ಯಶಸ್ಸಿನ ಬೇರು. ಹಾಗೆಯೇ ನಮ್ಮ ಬಯಕೆಗಳ ಪೂರೈಕೆಗೆ ಇರುವ ಕಾಮನ ಬಿಲ್ಲು. ಬದುಕು ನಿರಂತರ ಸಾಗುವ ನದಿಯಂತೆ. ಹರಿಯುವ ನದಿಯ ಜೊತೆಗೆ ನಾವು ಸಹ ಪ್ರಯಾಣ ಮಾಡಿದಾಗಲೇ ಅದಕ್ಕೊಂದು ಅರ್ಥ ಬರುವುದು. ಮುಖ್ಯವಾಗಿ ಬದುಕಿಗೆ ಗುರಿ ಬೇಕು. ಗುರಿಗೆ ತಕ್ಕ ಇಚ್ಛಾಶಕ್ತಿ ಬೇಕೇ ಬೇಕು.

ಯಾವ ವ್ಯಕ್ತಿಯು ತನ್ನ ಹೃದಯದಲ್ಲಿ ಸಕಾರಾತ್ಮಕ ಯೋಚನೆ, ಚಿಂತನೆ ಹೊಂದಿರುತ್ತಾನೋ ಅವನು ಒಂದಲ್ಲ ಒಂದು ದಿನ ಗೆದ್ದೆ ಗೆಲ್ಲುವನು. ಗೆಲುವಿಗಾಗಿ ಹಾತೊರೆದು ಎರಡೂ ಕೈಗಳನ್ನು ಮುಗಿಲೆತ್ತರಕ್ಕೆ ಚಾಚಿ ಆಹ್ವಾನಿಸಲು ತುದಿಗಾಲಲ್ಲೆ ಕಾದು ನಿಂತಿದ್ದೇವೆ. ಆದರೆ ಗೆಲುವಿಗೆ ಬೇಕಾದ ಸಿದ್ಧತೆ ಮತ್ತು ಬದ್ಧತೆಯನ್ನೆ ಮರೆತಿದ್ದೇವೆ. ಒಮ್ಮೊಮ್ಮೆ ಎಲ್ಲವೂ ಇದ್ದಾಗಲೂ ಮತ್ತೆಂದೂ ಪುಟಿದು ಮೇಲೆದ್ದು ಬಾರದಂತೆ ಸೋತು ಕುಸಿದು ಬೀಳುತ್ತೇವೆ. ಇಂತಹ ಸಂದಿಗ್ಧ ಸಮಯದಲ್ಲೂ ಧೀರೋದಾತ್ತನಾಗಿ ಎದ್ದು ನಿಲ್ಲುವ ಶಕ್ತಿ ಕೊಡುವುದೇ ಇಚ್ಛಾಶಕ್ತಿ. ಸೋಲು ನಮಗಂತೂ ಹೊಸದಲ್ಲ. ಪುಂಖಾನುಪುಂಖ ಬಂದ ಸೋಲಿನ ಹೊಡೆತಗಳು ಹೇಳಿಕೊಟ್ಟ, ಕಲಿಸಿಕೊಟ್ಟ ಪಾಠಗಳು ಅಪಾರ. ಖ್ಯಾತ ಉದ್ಯಮಿ ಬಿಲ್‌ಗೇಟ್ಸ್ ಹೇಳುವಂತೆ 'ಗೆಲುವು ಉಪಯೋಗಕ್ಕೆ ಬಾರದ ವಸ್ತುವಿದ್ದಂತೆ. ಜೀವನದ ಕುರಿತು ಏನನ್ನೂ ಹೇಳಿಕೊಡದು. ಸೋಲೇ ಮನುಷ್ಯನ ನಿಜವಾದ ಗುರು' ಎನ್ನುವ ಮಾತು ಅಕ್ಷರಶಃ ಸತ್ಯವಾದದ್ದು. ಒಮ್ಮೊಮ್ಮೆ ಸೋಲಬೇಕು, ಸೋತಾಗಲೇ ನಮಗೆ ಗೆಲುವಿನ ಮಹತ್ವ ತಿಳಿಯುವುದು. ಪ್ರಬಲವಾದ ಇಚ್ಛಾಶಕ್ತಿ ಹೆಮ್ಮರದಂತೆ ಬೆಳೆದು ನಿಲ್ಲುವುದು. ಈ ಪ್ರಪಂಚದಲ್ಲಿ ಹಣ, ಆಸ್ತಿ, ಅಂತಸ್ತು ಇಲ್ಲದವನು ಬಡವನಲ್ಲ. ಇಚ್ಛಾಶಕ್ತಿ ಇಲ್ಲದವನೇ ನಿಜವಾದ ಬಡವ.

• ರಂಗನಾಥ್ ಗುಡಿಮನಿ

ಹೆಲ್ತ್ ಕಾರ್ನರ್

ಏಷಿಯನ್ ಜಿನ್‌ಸೆಂಗ್ ಅಥವಾ ಚೈನೀಸ್ ಜಿನ್‌ಸೆಂಗ್ ಎಂಬ ಸಸ್ಯದ ಬೇರಿನ ಶಕ್ತಿಯ ಕುರಿತು ನಮ್ಮ ದೇಶದಲ್ಲಿ ಅಷ್ಟೊಂದು ಪ್ರಚಾರ ಇಲ್ಲ. ಮೂಲತಃ ಕೊರಿಯಾ ದೇಶದಲ್ಲಿ ಬೆಳೆಯುತ್ತಿದ್ದ ಈ ಸಸ್ಯದ ಬೇರಿನಿಂದ

ತಯಾರಿಸುವ ಜಿನ್‌ಸೆಂಗ್ ಪುಡಿಯು ಅಪಾರ ಶಕ್ತಿ ಹೊಂದಿದೆ ಎಂಬ ನಂಬಿಕೆ ಇದೆ. ಏಷ್ಯಾದಲ್ಲಿ ಸಾವಿರಾರು ವರ್ಷಗಳಿಂದಲೂ ಇದನ್ನು ಸಾಂಪ್ರದಾಯಿಕ ಔಷಧ ಪದ್ಧತಿಯಲ್ಲಿ ಬಳಸಲಾಗುತ್ತಿದೆ. ಇದು ನಮ್ಮ ದೇಹದ ಪ್ರತಿರೋಧ ಶಕ್ತಿಯನ್ನು ಹೆಚ್ಚು ಮಾಡುತ್ತದೆ, ದೈಹಿಕ ಶಕ್ತಿಯನ್ನು ಮತ್ತು ಸ್ನಾಯುಗಳ ಶಕ್ತಿಯನ್ನು ಹೆಚ್ಚಿಸುತ್ತದೆ ಮತ್ತು ವಯಸ್ಸಾಗುವುದನ್ನು ತಡೆಯುತ್ತದೆ ಎಂಬ ನಂಬಿಕೆ ಇದೆ. ಉರಿಯೂತವನ್ನು ತಡೆಯುವ ಶಕ್ತಿಯೂ ಇದಕ್ಕಿದೆ. ಜಿನ್‌ಸೆಂಗ್ ಬೇರಿನ ಪುಡಿಯು ಕ್ಯಾಪ್ಸೂಲ್ ರೂಪದಲ್ಲಿ ಲಭ್ಯವಿದೆ.

ಯುವ ಕಾವ್ಯ

ನೇಸರನುದಯದಿ

ಮುಂಜಾವಿನ ನೇಸರನುದಯದಿ
ಜೀವ ಸಂಕುಲದ ಉಳಿವಿದೆ!
ನಭದಿ ಅವನಿತ್ತ ಬೆಳಕನೋಕುಳಿಗೆ..
ನಿರುತ್ಸಾಹದ ಜಡವು ಕಳೆದಿದೆ!
ಉಷಾಕಾಲದ ಬೆರಗಿನಲಿ
ಬೆಳ್ಳುಗಿಲದು ತಿಳಿಯಾಗಿ ನಲಿದಿದೆ!
ಕಡಲಿನ ಚೆಂದದ ದರ್ಪಣದಿ
ಗಗನದ ಬಿಂಬವದು ಸೆರೆಯಾಗಿದೆ!
ಮುಂಜಾನೆಯ ನವರಂಗಿಗೆ
ಇರುಳಿನ ತಾರೆಗಳು ಮರೆಯಾಗಿದೆ!
ಹೊಂಗಿರಣದ ಬೆಚ್ಚನೆ ಕಾವಿಗೆ
ಧರೆಯು ನಗುತಾ ನಸುನಾಚಿದೆ!
ಭಾಸ್ಕರನುದಯದಲಿ ಜಗ ಬೆಳಗಿ
ಚೈತನ್ಯದ ಸೆಲೆಯು ನೆಲೆಯಾಗಿದೆ!
ಹಿಮಮಣಿಯು ಚೆಂದದಿ ಕರಗಿ
ಜೀವನದಿಯಾಗಿ ಪ್ರವಹಿಸಿದೆ!

• ಸುಮನಾ ರಮಾನಂದ, ಮುಂಬೈ

ನೀವೂ ಬರೆಯಬಹುದು

ನಮ್ಮ ವಿಳಾಸ:
ಪುರವಣಿ ವಿಭಾಗ, ನಂ.1687, ಮೊದಲ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098
ಇ-ಮೇಲ್: vishwavanimagazine@gmail.com

ಸುವರ್ಣ ಅವರು ನಿರ್ಮಿಸಿದ 'ಘಟಶ್ರಾದ್ಧ' ಚಲನಚಿತ್ರದ ಒಂದು ಸನ್ನಿವೇಶ.

ಲೇಖಕಿ ಮತ್ತು ಅನುವಾದಕಿಯಾಗಿರುವ ಪಾರ್ವತಿ ಐತಾಳ್ ಅವರು, ಸದಾನಂದ ಸುವರ್ಣ ಅವರ ಸಜ್ಜನಿಕೆಯನ್ನು ಮತ್ತು ಕೊಡುಗೆಯನ್ನು ಇಲ್ಲಿ ನೆನಪಿಸಿಕೊಂಡಿದ್ದಾರೆ.

ಸದಾನಂದ ಸುವರ್ಣ

ಒಂದು ನೆನಪು

• ಪಾರ್ವತಿ ಐತಾಳ್

ಸದಾನಂದ ಸುವರ್ಣರು ಮತ್ತು ನನ್ನ ನಡುವಿನ ಸ್ನೇಹ ಆರಂಭವಾಗಿದ್ದು 1997ನೇ ಇಸವಿಯಲ್ಲಿ. ಇದಕ್ಕಿಂತ ಹಿಂದೆಯೂ ಅವರು ನಿರ್ಮಾಣ ಮಾಡಿದ 'ಘಟಶ್ರಾದ್ಧ', ನಿರ್ದೇಶಿಸಿದ 'ಕುಬಿ ಮತ್ತು ಇಯಾಲ', 'ಗುಡ್ಡದ ಭೂತ' ಧಾರಾವಾಹಿಗಳನ್ನು ನಾನು ಆಗಲೇ ನೋಡಿ ಮೆಚ್ಚಿಕೊಂಡಿದ್ದೆನಾದರೂ ಅವರೊಂದಿಗೆ ನೇರ ಸಂಪರ್ಕವಿರಲಿಲ್ಲ. 1997ರಲ್ಲಿ ಅವರು ಸ್ವತಃ ರೂಪಾಂತರಿಸಿ ನಿರ್ದೇಶಿಸಿದ ನಾಟಕ 'ಉರುಳು' ನಾಟಕದ ಪ್ರದರ್ಶನ ಉಡುಪಿಯ ಪೂರ್ಣಪ್ರಜ್ಞ ಆಡಿಟೋರಿಯಂನಲ್ಲಿತ್ತು. ಕುಂದಾಪುರದಿಂದ ನನ್ನ ಸ್ನೇಹಿತರು ಹೋಗುವವರು ಇದ್ದುದರಿಂದ ಹೋಗುವ ಅವಕಾಶ ನನಗೂ ಸಿಕ್ಕಿತು. ಮೂರೇ ಮೂರು ಪಾತ್ರಗಳ ಮೂಲಕ ಅಚ್ಚುಕಟ್ಟಾಗಿ ಮಾಡಿದ ಮನ ಮುಟ್ಟುವ ನಾಟಕವದು. ಬಹಳ ಇಷ್ಟವಾಯಿತು. ನಾನು ಆ ನಾಟಕದ ವಿಮರ್ಶೆ ಬರೆದು, ಕರಾವಳಿಯ ಪತ್ರಿಕೆಯೊಂದಕ್ಕೆ ಕಳುಹಿಸಿದೆ. ಅದು ಪ್ರಕಟವಾಗಲಿಲ್ಲ. ನಾನು ಕೊನೆಗೆ ಯಾರಿಂದಲೋ ಸುವರ್ಣರ ವಿಳಾಸ ಪಡೆದು ಅದನ್ನು ಅವರಿಗೆ ಪೋಸ್ಟ್ ಮಾಡಿದೆ. ತಕ್ಷಣವೇ ಅವರ ಉತ್ತರ ಬಂತು.

'ವಿಮರ್ಶೆ ಚೆನ್ನಾಗಿದೆ' ಎಂದು ಬರೆದಿದ್ದರು ಮತ್ತು ನಾನು ವಿಮರ್ಶೆ ಕಳಿಸಿದ ಪತ್ರಿಕೆಯಲ್ಲಿ, ಈ ಕುರಿತು ಆಗಲೇ ಬೇರೆ ಯಾರೋ ಬರೆದಿದ್ದರು ಎಂದೂ ಅವರು ಹೇಳಿದರು. ಅವರ ಅಕ್ಷರ ತುಂಬಾ ಚೆನ್ನಾಗಿತ್ತು. ನಾನು ಮತ್ತೆ ಅವರಿಗೆ ಧನ್ಯವಾದ ಹೇಳಿ ಪತ್ರ ಬರೆದೆ. ಹೀಗೆ ನಮ್ಮ ನಡುವೆ ಪತ್ರ ವಿನಿಮಯ ಶುರುವಾಯಿತು. ನನ್ನ ಸಾಹಿತ್ಯಕ ಚಟುವಟಿಕೆಗಳ ಬಗ್ಗೆ ಬರೆಯುತ್ತಿದ್ದೆ. ಅವರು ನನಗೆ ತಮ್ಮ 'ಚಿನ್ನದ ಗೊಂಬೆ' ಕಥಾ ಸಂಕಲನವನ್ನು ಕಳುಹಿಸಿದರು. ನಾನು ಅದರ ವಿಮರ್ಶೆ ಬರೆದು ಪ್ರಕಟಿಸಿದೆ. 1998ರಲ್ಲಿ ನಮ್ಮ ಗೃಹಪ್ರವೇಶದ

ಆಮಂತ್ರಣವನ್ನು ಅವರಿಗೆ ಕಳಿಸಿದ್ದಕ್ಕೆ ಪ್ರತಿಯಾಗಿ, ಅವರು ಒಂದು ಗಿಫ್ಟ್ ಕೂಡಾ ಕಳಿಸಿದರು. 2006ರಲ್ಲಿ ಮನೋಹರ ಗ್ರಂಥ ಮಾಲಾದವರು ಪ್ರಕಟಿಸಿದ, ನಾನು 'ಇದು ಯುನಿವರ್ಸಿಟಿ!' ಯನ್ನು ಅವರಿಗೆ ಕಳಿಸಿದಾಗ ಅದನ್ನು ತಮ್ಮ 'ರಂಗಸ್ಥಳ' ವೇದಿಕೆ ನಡೆಸಿದ ನಾಟಕ ಶಿಬಿರದಲ್ಲಿ ತರಬೇತಿಗಾಗಿ ಆಯ್ದುಕೊಂಡು ಕೊನೆಯ ದಿವಸ ಪ್ರದರ್ಶನ ನೀಡಿದರು. ಅದರ ಒಂದು ಪ್ರದರ್ಶನವನ್ನು ಬೆಂಗಳೂರಿನಲ್ಲಿಯೂ ನೀಡಿದರು. ತಾವು ನಿರ್ದೇಶಿಸಿದ ಶ್ರೀ ನಾರಾಯಣಗುರು ಕುರಿತಾದ ಡಾಕ್ಯುಮೆಂಟರಿಗೆ ಅಗತ್ಯವಾದ ಹಾಡುಗಳನ್ನು ಮಲೆಯಾಳದಿಂದ ಕನ್ನಡಕ್ಕೆ ಅನುವಾದಿಸುವ ಕೆಲಸವನ್ನೂ ಅವರು ನನಗೆ ವಹಿಸಿದರು. ಕಿರಿಯರನ್ನು ಸದಾ ಪ್ರೋತ್ಸಾಹಿಸುವ ಅವರ ಗುಣವನ್ನು ಎಣಿಸಿ ಈಗಲೂ ನನ್ನ ಹೃದಯ ತುಂಬಿ ಬರುತ್ತದೆ.

ಸುವರ್ಣರು ನನಗೆ ಆಗಾಗ ಪುಸ್ತಕಗಳನ್ನು ಕಳುಹಿಸುತ್ತಿದ್ದರು. ಒಮ್ಮೆ 'ಪಾಸ್ಟ್ ಒನ್ ಒ ಕ್ಲಾಕ್' ಅನ್ನುವ ಇಂಗ್ಲಿಷ್ ನಾಟಕವನ್ನು ಕಳುಹಿಸಿದ್ದರು. ನಾನು ಅನುವಾದಿಸಿದ ಎಂ.ಟಿ.ವಾಸುದೇವನ್ ನಾಯರ್ ಕಾದಂಬರಿ 'ಮಂಜು'ವನ್ನು ನಾನು ಸುವರ್ಣರಿಗೆ ಅರ್ಪಿಸಿದಾಗ ಅವರು ತುಂಬಾ ಸಂಕೋಚ ಪಟ್ಟರು.

ಮುಂದೆ ನಾನು ರೂಪಾಂತರಿಸಿದ ಮಕ್ಕಳ ನಾಟಕ 'ಗುರುದಕ್ಷಿಣೆ'ಗೆ ಅವರ ಹತ್ತಿರ ಮುನ್ನುಡಿ ಬರೆಸಿಕೊಂಡೆ. ನಾನು ಬರಹಗಾರನಲ್ಲ ಎಂದು ಸಂಕೋಚ ಪಟ್ಟುಕೊಂಡೇ ಚೆಂದದ ಮುನ್ನುಡಿ ಬರೆದು ಕಳಿಸಿದರು. ನಾನು ರೂಪಾಂತರಿಸಿದ ಇಂಗ್ಲಿಷ್ ನಾಟಕ ಅದನ್ನು 'ಗಂಟೆ ಒಂದಾಯ್ತು' ಎಂದು ಕನ್ನಡಕ್ಕೆ ಅನುವಾದಿಸಿದೆ. ನಂತರ 'ಘೋಸ್ಟ್ ಟ್ರೇನ್' ಅನ್ನುವ ನಾಟಕವನ್ನು ಕಳುಹಿಸಿ ಅದನ್ನು ರೂಪಾಂತರ ಮಾಡಿ ಕೊಟ್ಟರೆ ಮಂಗಳೂರಿನಲ್ಲಿ ಆಡಿಸುವ ಯೋಚನೆ ಇದೆ ಎಂದು ಹೇಳಿದರು. ನಾನು ಅದನ್ನು 'ರೈಲು ಭೂತ' ಎಂಬ ಹೆಸರಿನ ಬರೆದು ಕಳುಹಿಸಿದೆ. ಆದರೆ ಕಾರಣಾಂತರಗಳಿಂದ ಅದನ್ನು ಆಡಿಸುವುದು ಅವರಿಂದ ಸಾಧ್ಯವಾಗಲಿಲ್ಲ. ಕಳೆದ ವರ್ಷ ಪ್ರದೀಪಚಂದ್ರ ಕುತ್ಪಾಡಿಯವರ ನಿರ್ದೇಶನದಲ್ಲಿ ಪೂರ್ಣಿಮಾ ಸುರೇಶ್ ಅವರ ಹಿರಿಯಡ್ಕದ 'ಅಮೋಘ' ತಂಡದ ಮೂಲಕ ಅದು ರಂಗವೇರಿ ಹತ್ತಕ್ಕೂ ಹೆಚ್ಚು ಪ್ರದರ್ಶನಗಳನ್ನು ಕಂಡ ವಿಚಾರವನ್ನು ಅವರಿಗೆ ತಿಳಿಸಿದಾಗ ತುಂಬಾ ಸಂತೋಷ ಪಟ್ಟರು.

ಕನ್ನಡ ರಂಗಭೂಮಿಯ ಒಳರಾಜಕೀಯದಿಂದ ಮೈಲು ದೂರ ನಿಂತ ಸುವರ್ಣರು ರಂಗಭೂಮಿಯ ಮೇಲಿನ ಪ್ರೀತಿಯಿಂದ ಅತ್ಯಂತ ಪ್ರಾಮಾಣಿಕವಾಗಿ ದುಡಿದರು. ಅಧಿಕಾರ, ಸ್ಥಾನಮಾನ, ಪ್ರಶಸ್ತಿಗಳ ಹಿಂದೆ ಹೋಗದೆ ರಂಗಭೂಮಿಗಾಗಿ ನಿಸ್ವಾರ್ಥವಾಗಿ ದುಡಿದು ರಂಗ ಭೀಷ್ಮರಾದರು. ಅವರು ನಿರ್ದೇಶಿಸಿದ 'ಕೋರ್ಟ್ ಮಾರ್ಷಲ್' ನಾಟಕವಂತೂ ಜನಮಾನಸದಲ್ಲಿ ಅಚ್ಚಳಿಯದೆ ಉಳಿಯುವಂಥದ್ದು. ಅವರ ಕೊನೆಯ ದಿನಗಳಲ್ಲಿ, ವೃದ್ಧಾಶ್ರಮ ಸೇರಿ ಸ್ನೇಹಿತರೊಂದಿಗೆ ಸುಲಭದ ಫೋನ್ ಸಂಪರ್ಕದಿಂದಲೂ ವಂಚಿತರಾದದ್ದು ನಮಗಾದ ನಷ್ಟ. ನಾನು ಅವರನ್ನು 'ಹೊಂಗಿರಣ'ದಲ್ಲಿ ಭೇಟಿಯಾಗಲು ಒಮ್ಮೆಯಷ್ಟೇ ಹೋಗಲು ಸಾಧ್ಯವಾಗಿತ್ತು. ಅವರು 92 ವರ್ಷಗಳ ತುಂಬು ಜೀವನವನ್ನು ನಡೆಸಿದ ಬಗ್ಗೆ ತೃಪ್ತಿಯಿದ್ದರೂ, ಅವರ ನಿಧನವು ನನ್ನ ಹೃದಯದಲ್ಲಿ ಶೂನ್ಯ ಭಾವ ಆವರಿಸುವಂತೆ ಮಾಡಿದೆ. ಅವರ ನೆನಪು ಚಿರಸ್ಥಾಯಿ.



ಕಲಾತ್ಮಕ ಚಿತ್ರಗಳ ಪ್ರೇಮಿ

ಹಿರಿಯ ನಿರ್ದೇಶಕ ಮತ್ತು ರಂಗಭೂಮಿ ಕಲಾವಿದರಾದ ಸದಾನಂದ ಸುವರ್ಣ ಅವರು ನಿಧನರಾಗಿ 14 ದಿನಗಳಾದವು. (31.12.1931-16.7.2024) ಮಂಗಳೂರು ಸಮೀಪದ ಮುಲ್ಕಿಯ ಮೂಲದವರಾದ ಅವರು, ಮುಂಬಯಿಗೆ ಹೋಗಿ, ಅಲ್ಲಿದ್ದುಕೊಂಡೇ ಕನ್ನಡದ ಕೆಲಸ ಮಾಡಿದರು. ಕನ್ನಡ-ತುಳು ನಾಟಕಗಳನ್ನು ಆಡಿದರು, ಆಡಿಸಿದರು. ದೂರದರ್ಶನದಲ್ಲಿ ಪ್ರಸಾರವಾದ 'ಗುಡ್ಡದ ಭೂತ' ಅವರಿಗೆ ಇತ್ತೀಚೆಗೆ ಹೆಚ್ಚು ಹೆಸರು ತಂದು ಕೊಟ್ಟ ನಿರ್ಮಿತಿ. ಇದಕ್ಕೂ ಮುಂಚೆ, ಅವರು 'ಘಟಶ್ರಾದ್ಧ' ಚಿತ್ರವನ್ನು ನಿರ್ಮಿಸಿದ್ದರು; ಆ ಚಲನಚಿತ್ರದ ನಿರ್ದೇಶನ ಮಾಡಿದ್ದ ಗಿರೀಶ್ ಕಾಸರವಳ್ಳಿಯವರು, ಪ್ರಶಸ್ತಿಯನ್ನು ಪಡೆದದ್ದರ ಜತೆ, ಮುಂದೆ ಅಂತಾರಾಷ್ಟ್ರೀಯ ಖ್ಯಾತಿಯ ನಿರ್ದೇಶಕರಾಗಿ ಹೊರಹೊಮ್ಮಿದರು. ತೇಜಸ್ವಿಯವರ ಕಥೆಗಳಾದ 'ಕುಬಿ ಮತ್ತು ಇಯಾಲ', 'ತಬರನ ಕಥೆ'ಗಳನ್ನು ದೃಶ್ಯ ಮಾಧ್ಯಮಕ್ಕೆ ತಂದವರು ಸುವರ್ಣ ಅವರು. ಕನ್ನಡ ಕಲಾತ್ಮಕ ಚಿತ್ರಗಳ ಬೆಳವಣಿಗೆಯ ಇತಿಹಾಸದಲ್ಲಿ ಸದಾನಂದ ಸುವರ್ಣ ಅವರ ಕೊಡುಗೆಯು ಪ್ರಮುಖವಾಗಿ ದಾಖಲಾಗಿದೆ.

-ಶ.ಹಾ.

ಸುತ್ತಲಿನ ಪರಿಸರವು ಹಸುರಿನಿಂದ ತುಂಬಿರುವ ಶ್ರಾವಣ ಮಾಸವು ಜನರಲ್ಲಿ ಸಂತಸ, ಭಕ್ತಿ ಭಾವ ಮೂಡಿಸುವ ಕಾಲ. ಶ್ರಾವಣದ ಸಂದೇಶಗಳು, ಉದ್ದೇಶಗಳು ಹಲವು. ಅವುಗಳನ್ನು ಗ್ರಹಿಸುವ ಪ್ರಯತ್ನ ಮಾಡಬೇಕು

ಶ್ರಾವಣದಲ್ಲಿ ಹೊರಟಿದೆ ಹಬ್ಬಗಳ ದಿಬ್ಬಣ!

• ಶಾರದಾ ಕೌದಿ

ನಮ್ಮ ದೇಶದಲ್ಲಿ ಶ್ರಾವಣ ಮಾಸಕ್ಕೆ ವಿಶೇಷ ಮಹತ್ವ. ಮಳೆಯೊಂದಿಗೆ ಬರುವ ಶ್ರಾವಣ ಜೀವಕ್ಕೆ ಉತ್ಸಾಹ ಚೈತನ್ಯ ನೀಡುತ್ತದೆ. ಪ್ರಕೃತಿಯ ಕಣಕಣದಲ್ಲು ತುಂಬಿದೆ ಶ್ರಾವಣ. ನವವಧುವಿನಂತೆ ಆಗಮಿಸುವ ಶ್ರಾವಣ ಮಾಸದಲ್ಲಿ ಜನರು ಪ್ರಕೃತಿಯನ್ನು ಪೂಜಿಸುತ್ತಾರೆ, ಜತೆಗೆ ದೇವರ ಪೂಜೆ, ವ್ರತ, ಉಪವಾಸ, ನೇಮ ನಿತ್ಯಗಳನ್ನಾಚರಿಸಿ ಪಾರಮಾರ್ಥ ತತ್ವಗಳ ದರ್ಶನ ಮಾಡಿಕೊಳ್ಳುತ್ತಾರೆ. ಶ್ರಾವಣದ ಸಮಯದಲ್ಲಿ ಎಲ್ಲೆಡೆ ಮಳೆಯಾಗಿ, ಸುತ್ತಲೂ ಹಸಿರು ತುಂಬಿರುವ ಕಾಲ. ಇದೇ ಸಮಯದಲ್ಲಿ, ನಾಗ, ಇಲಿ, ಆನೆ ಮುಖದ ಗಣಪತಿ ಇವರಿಗೆಲ್ಲಾ ಪೂಜೆ ಮಾಡುತ್ತಾ, ಪ್ರಕೃತಿ ಮತ್ತು ಮಾನವನ ಸಮತೋಲಿತ ಬದುಕನ್ನು ಗೌರವಿಸುತ್ತಾರೆ.

ನಾಗಪಂಚಮಿ

ಶ್ರಾವಣದ ಮೊದಲ ಹಬ್ಬ ನಾಗಪಂಚಮಿ. ನಾಗಪಂಚಮಿ ಆಚರಣೆ ಕುರಿತಾದ ಕಥೆಯೊಂದು ಹೀಗಿದೆ. ನಾಗಪ್ಪನ ಪೂಜೆಗೆಂದು ಹೂ ತರಲು ಕೇದಿಗೆ ವನಕ್ಕೆ ಹೋದಾಗ ಹಾವೊಂದು ಕಚ್ಚಿ ಸಾಯುತ್ತಾನೆ. ತಂಗಿ ಅಣ್ಣನ ಮೇಲಿಟ್ಟಿರುವ ಅಸಾಧಾರಣ ಪ್ರೀತಿ ಕಂಡು ನಾಗದೇವತೆ ಅವಳಿಚ್ಛೆಯಂತೆ ಪ್ರಾಣದಾನ ಮಾಡುತ್ತಾಳೆ. ನಾಗಪ್ಪನಿಗೆ ಕೃತಜ್ಞತೆಯನ್ನು ಅರ್ಪಿಸಲು ಈ ದಿನ ಹೆಣ್ಣುಮಕ್ಕಳು ಹಾಲನೆರೆದು ಅಣ್ಣನ ಸುರಕ್ಷತೆಗಾಗಿ ಪ್ರಾರ್ಥಿಸುವರು. ಮೊದಲ ದಿನ ಹುತ್ತಿನ ನಾಗಪ್ಪನಿಗೆ ನಂತರ ಬೆಳ್ಳಿನಾಗಪ್ಪನಿಗೆ 'ದೇವರ ಪಾಲ, ದಿಂಡರ ಪಾಲ, ಗುರುಹಿರಿಯರ ಪಾಲ, ತಂದೆ ತಾಯಿ ಪಾಲ, ಅಕ್ಕತಂಗಿಯರ ಪಾಲ, ಅಣ್ಣತಮ್ಮಂದಿರ ಪಾಲ, ಎಲ್ಲರ ಪಾಲ, ನನ್ನಪಾಲ' ಅಂತ ಹೇಳತಾ ಹಾಲನೆರೆಯುವರು. ನಾಗಪ್ಪನಿಗೆ ಅರಳಿಟ್ಟು, ತಂಬಿಟ್ಟು, ಹುರಿದ ಕಡಲೆ, ಎಳೆ ಹುಣಸಿಕಾಯಿ ನೈವೇದ್ಯ ಮಾಡುವರು. ಕುಚ್ಚಿದ ಕಡಬಿನ ನೈವೇದ್ಯ ನಾಗಪ್ಪನಿಗೆ. ಸಣ್ಣ ಮಕ್ಕಳು ಒಣಕೊಬ್ರಿ ಬಟ್ಟಲಿನ ಬುಗುರಿ ಆಡಿಸುವರು. ಹೆಣ್ಣುಮಕ್ಕಳೆಲ್ಲ ಜರತಾರಿ ಲಂಗ, ಸೀರೆ ಉಟ್ಟು, ಜಡೆ ಹೆಣೆದುಕೊಂಡು ದೊಡ್ಡ ದೊಡ್ಡ ಮರಗಳಿಗೆ ಕಟ್ಟಿದ ಜೋಕಾಲಿ ಜೀಕಲು ಹೋಗುವ ಸಂಭ್ರಮ ಹೇಳತೀರದು.

ಗೋಕುಲಾಷ್ಟಮಿ

ಎಲ್ಲರ ಆರಾಧ್ಯ ದೈವ, ಕೃಷ್ಣಪರಮಾತ್ಮನು ಜನಿಸಿದ ದಿನವಿದು. ಮಣ್ಣಿನಿಂದ ಮಾಡಿದ ಕೃಷ್ಣ ಬಲರಾಮರ ಮೂರ್ತಿಯ ಸುತ್ತ ಗೋಕುಲದ ಕಲ್ಪನೆ ಬರುವಂತೆ ಆಕಳು, ಅರಳಿಮರ, ಪುರಾಣ ಹೇಳುವವರು, ಕೇಳುವ ವರು, ಅಷ್ಟೇ ಅಲ್ಲ ನಂದಗೋಪ, ಯಶೋಧೆ, ದೇವಕಿ, ವಾಸುದೇವ ಸುಭದ್ರೆಯರ, ಮತ್ತು ಕೋಟೆಯ ಹೆಬ್ಬಾಗಿಲಿಗೆ ದ್ವಾರಪಾಲಕರ ಮೂರ್ತಿ ಇಡುವರು. ಶ್ರದ್ಧಾ ಭಕ್ತಿಯಿಂದ ಉಪವಾಸವಿದ್ದು ರಾತ್ರಿ ಸಮಯ ದಲ್ಲಿ ಪೂಜೆ ಮಾಡುವರು. ಉಂಡಿ, ಕರಚಿಕಾಯಿ ಇನ್ನಿತರ ಫರಾಳದ ಜೊತೆ ಫಲಗಳ ನೈವೇದ್ಯ ಮಾಡುವದು ವಾಡಿಕೆ. ಕೃಷ್ಣಜನ್ಮಾಷ್ಟಮಿ ಮರುದಿನದ ಲೀಲೋತ್ಸವವು ಸಂಭ್ರಮದಿಂದ ನಡೆಯುವದು.

ಸ್ವಾತಂತ್ರೋತ್ಸವ

ರಾಷ್ಟ್ರೀಯ ಹಬ್ಬವೆನಿಸಿದ ಸ್ವಾತಂತ್ರ ದಿನವೂ ಶ್ರಾವಣದಲ್ಲೆ ಬರುವದು ವಿಶೇಷ. ದೇಶದೆಲ್ಲೆಡೆ ಧ್ವಜಾರೋಹಣದೊಂದಿಗೆ ಸ್ವಾತಂತ್ರೋತ್ಸವದ ಸಂಭ್ರಮಾಚರಣೆ.

ರಕ್ಷಾ ಬಂಧನ

ನಮ್ಮ ದೇಶದಲ್ಲಿ ವಿಶೇಷವಾಗಿ ಉತ್ತರ ಭಾರತದಲ್ಲಿ ರಕ್ಷಾಬಂಧನವು ಜನಸಾಮಾನ್ಯರ ಹಬ್ಬ; ಸಹೋದರ ಸಹೋದರಿಯರ ನಡುವಿನ ಬಾಂಧವ್ಯದ ಸಂಕೇತ. ಇದೇ ಸಮಯದಲ್ಲಿ ಬರುವ ನೂಲಹುಣ್ಣಿಮೆ, ಉಪಾಕರ್ಮ ವಿಶೇಷ. ಇವೆರಡೂ ದಾರ ಅಥವಾ ನೂಲಿನ ಮೂಲಕ ನೆರವೇರುತ್ತವೆ. ಇತ್ತೀಚಿನ ದಿನಗಳಲ್ಲಿ ರಕ್ಷಾಬಂಧನವು ವಿಶ್ವಭ್ರಾತೃತ್ವದ ದಿನ ವಾಗಿದೆ. ಮಂತ್ರಾಲಯದ ರಾಘವೇಂದ್ರ ಸ್ವಾಮಿಗಳ ಆರಾಧನೆ ಕೂಡ ಶ್ರಾವಣದ ಒಂದು ವಿಶೇಷ.

ಶ್ರಾವಣ ಸೋಮವಾರ

ಶ್ರಾವಣ ಸೋಮವಾರಕ್ಕೆ ಸಾಕಷ್ಟು ಮಹತ್ವ ಇದೆ. ಸುರ ಮತ್ತು ಅಸುರರ ನಡುವೆ ನಡೆದ ಸಮುದ್ರ ಮಂಥನದಲ್ಲಿ ಹೊರಹೊಮ್ಮಿದ ಹಾಲಾಹಲವನ್ನು ಶಿವನು ಸೇವಿಸಿದ ಸಮಯವಿದು. ಈಶ್ವರನಿಗೆ ಪಂಚಾಮೃತ ಅಭಿಷೇಕ, ಜಲಾಭಿಷೇಕ, ನಾನಾ ತರದ ಹೂವು ಬಿಲ್ವ ಪತ್ರೆಗಳಿಂದ ವಿಶೇಷ ಅಲಂಕಾರ. ಶ್ರಾವಣ ಸೋಮವಾರ ಉಪವಾಸ ದೊಂದಿಗೆ ಮೌನ ವ್ರತವನ್ನು ಕೂಡ ಮಾಡಿದರೆ ಕೋರಿದ ಇಷ್ಟಾರ್ಥಗಳು ಲಭಿಸುತ್ತದೆ ಎಂಬ ನಂಬಿಕೆ.

ಸೋಳಾ ಸೋಮವಾರ

ಶ್ರಾವಣ ಮಾಸದ ಸೋಮವಾರದಂದು ಪ್ರಾರಂಭಿಸಿ ಹದಿನಾರು ಸೋಮವಾರಗಳವರೆಗೆ ಆಚರಿಸಲಾಗುವ ಸೋಳಾ ಸೋಮವಾರದಂದು ಹುತ್ತದ ಮಣ್ಣಿನಿಂದ ಈಶ್ವರನನ್ನು ಮಾಡಿ 16 ಬಿಲ್ವ ಪತ್ರೆಯಿಂದ ಪೂಜಿಸುವರು. ಉಪವಾಸ ಮತ್ತು ಮೌನ ವ್ರತಾಚರಣೆ ಮಾಡುವರು. ಕಥೆ ಓದುವರು. ಪೂಜಿಸಿದ ಈಶ್ವರ ಮೂರ್ತಿಗಳನ್ನು ನದಿಯಲ್ಲಿ ವಿಸರ್ಜಿಸಿ ವ್ರತ ಸಮಾಪ್ತಿಗೊಳಿಸುವರು.

ಶ್ರಾವಣ ಮಂಗಳವಾರ

ಶ್ರಾವಣದ ಮಂಗಳವಾರಗಳಂದು ಪಾರ್ವತಿ ದೇವಿಯ ಪೂಜೆಯನ್ನು ಮಂಗಳ ಗೌರಿ ವ್ರತವೆಂದು ಆಚರಿಸಲಾಗುತ್ತದೆ. ಅಲ್ಪಾಯುಷಿಯಾದ ರಾಜಕುಮಾರನನ್ನು ಮದುವೆಯಾದ ರಾಜಕುಮಾರಿ ಮದುವೆ ಮಹೂರ್ತಕ್ಕೆ ಸರಿಯಾಗಿ ಶ್ರದ್ಧಾಭಕ್ತಿಯಿಂದ ಮಂಗಳಗೌರಿ ಪೂಜೆ ಮಾಡಿದ್ದರಿಂದ ಪತಿ ದೀರ್ಘಾಯುಷಿಯಾಗುವದರೊಂದಿಗೆ ಎಲ್ಲವು ಸುಖಾಂತ್ಯದಲ್ಲಿ ಕೊನೆಗೊಳ್ಳುವದು.

ಶ್ರಾವಣ ಶುಕ್ರವಾರ

ಇನ್ನು ಸಂಪತ್ ಶುಕ್ರವಾರ ಸಂಪತ್ತಿನ ಅಧಿದೇವತೆಯಾದ ಲಕ್ಷ್ಮೀಯ ವ್ರತಾಚರಣೆ. ಕಲಶ ಪೂಜೆ, ವ್ರತ ಮಹಿಮೆಯ ಕಥಾಶ್ರವಣ, ಹಾಡು ಭಜನೆ ಕೀರ್ತನೆ ಇತ್ಯಾದಿ ನಡೆಯುತ್ತದೆ. ಐದು ವರ್ಷ ಪೂರೈಸಿದವರು ಬಾಗಿಣ ನೀಡಿ ವ್ರತವನ್ನು ಶ್ರಾವಣದಲ್ಲಿ ಸಂಪನ್ನಗೊಳಿಸುವರು. ಶ್ರಾವಣ ಶನಿವಾರದ ದಿನಗಳಲ್ಲಿ ಶನಿ ದೇವರ ಕಲ್ಪೋಕ್ತ ಪೂಜೆ, ಶನಿಮಹಾತ್ಮೆ ಕಥಾಶ್ರವಣಗಳಿಂದ ಶನಿ ದೋಷಗಳು ಪರಿಹಾರ ವಾಗುತ್ತದೆ ಎಂಬ ನಂಬಿಕೆ.

ವರಮಹಾಲಕ್ಷ್ಮಿ ಪೂಜೆ

ಶ್ರಾವಣದ ಎರಡನೇ ಶುಕ್ರವಾರ ಮಾಡುವ ಪೂಜೆಯೇ ವರಮಾಲಕ್ಷ್ಮೀ ಪೂಜೆ. ಕಳಶಕ್ಕೆ ಬೆಳ್ಳಿಯ ಲಕ್ಷ್ಮೀ ಮುಖ ಹಾಕಿ ರೇಷ್ಮೆ ಸೀರೆಯನ್ನು ಉಡಿಸಿ, ವಿವಿಧ ಹೂಗಳಿಂದ ಅಲಂಕರಿಸುವರು. ಇದು ಕೂಡ ಸುಖ ಸಂಪತ್ತಿಗಾಗಿ ಲಕ್ಷ್ಮೀಯನ್ನು ಆರಾಧಿಸುವದಾಗಿದೆ.

ಸಿರಿಯಾಳ ಷಷ್ಠಿ

ಶ್ರಾವಣದ ಕೃಷ್ಣಪಕ್ಷದಲ್ಲಿ ಬರುವ ಈ ದಿನ ಅತ್ಯಂತ ವಿಶೇಷವಾದದ್ದು. ಸಿರಿಯಾಳನ ಭಕ್ತಿಯ ಕುರಿತಾದ ಪೌರಾಣಿಕ ಹಿನ್ನೆಲೆಯಲ್ಲಿ ಆಚರಿಸುವ ವ್ರತ ಇದಾಗಿದೆ. ಚಿಕ್ಕ ಮಕ್ಕಳಿರುವ ಮನೆಗೆ ಕಡುಬು ಹಂಚುವ ವಾಡಿಕೆ ಇದೆ. ಇದೇ ಮಾಸದಲ್ಲಿ ವಚನೋತ್ಸವದ ಮೂಲಕ ಬಸವಣ್ಣ ಮತ್ತು ಇನ್ನುಳಿದ ಶರಣರ ವಚನಗಳ ಪಠಣ ಮತ್ತು ಚಿಂತನೆ ಕೂಡ ಮನೆಮನೆಗಳಲ್ಲಿ ನಡೆಯುತ್ತದೆ. ಶ್ರಾವಣ ಮಾಸದಲ್ಲಿ ಗಂಗಾ ಪೂಜೆ, ಮನೆದೇವರ ದರ್ಶನ, ತೀರ್ಥಕ್ಷೇತ್ರಗಳ ದರ್ಶನ ಮಾಡಿದರೆ ಉತ್ತಮ ಎಂಬ ಭಾವನೆ ಇರುವುದರಿಂದ, ಎಲ್ಲರೂ ದೇವಸ್ಥಾನಗಳಿಗೆ ಹೋಗಿ ಆರಾಧ್ಯ ದೈವದ ದರ್ಶನ, ಆಶೀರ್ವಾದ ಪಡೆಯುವದು ವಾಡಿಕೆ.

ಇದುವೆ ಶ್ರಾವಣದ ವೈಶಿಷ್ಟ್ಯತೆ. ಪ್ರತಿದಿನ ಎಲ್ಲಲ್ಲೂ ಹಬ್ಬದ ಸಡಗರ ಸಂಭ್ರಮ. ಎಲ್ಲ ಮನೆಗಳು, ಮಂದಿರಗಳು, ಮಠಗಳು, ತಳಿರುತೋರಣಗಳಿಂದ ಹೂಗಳಿಂದ ಅಲಂಕಾರಗೊಂಡು, ಅಂಗಳಗಳು ರಂಗೋಲಿಯಿಂದ ಸಾಲಂಕೃತಗೊಂಡು, ವಿದ್ಯುದ್ದೀಪಾಲಂಕಾರದಿಂದ ಕಂಗೊಳಿಸುತ್ತವೆ. ಇವೆಲ್ಲ ಚೈತನ್ಯಾತ್ಮಕ ಶಕ್ತಿ ಮೂಡಿಸುತ್ತವೆ.

ಹೆಚ್ಚು ಒಲಿಂಪಿಕ್ಸ್ ಪದಕ

• ಅಜಯ ಅಂಚೆಪಾಳ್ಯ

ಒಲಿಂಪಿಕ್ಸ್ ಕ್ರೀಡೋತ್ಸವದಲ್ಲಿ, ಇದುವರೆಗೆ ಅತಿ ಹೆಚ್ಚು ಪದಕಗಳನ್ನು ಗಳಿಸಿದ ವ್ಯಕ್ತಿ ಮೈಕೆಲ್ ಫೆಲ್ಪ್ಸ್(2). 1985ರಲ್ಲಿ ಜನಿಸಿದ ಈ ಅಮೆರಿಕನ್ ಕ್ರೀಡಾಳು, ಈಜು ವಿಭಾಗದಲ್ಲಿ ಒಟ್ಟು 28 ಪದಕಗಳನ್ನು ಗಳಿಸಿದ್ದಾನೆ. ಇದರ ಜತೆಯಲ್ಲೇ, ವಿಶ್ವದ ಇತರ ಸ್ಪರ್ಧೆಗಳಲ್ಲಿ ಈತ ಗಳಿಸಿದ ಪದಕಗಳ ಸಂಖ್ಯೆ ನೂರಾರು! 6 ಅಡಿ 4 ಇಂಚು ಎತ್ತರ ಇರುವ ಈತನು, 2004ರ ಒಲಿಂಪಿಕ್ಸ್ ಪಂದ್ಯದಲ್ಲಿ 6 ಚಿನ್ನದ ಪದಕ ಮತ್ತು 2 ಕಂಚಿನ ಪದಕ ಗೆದ್ದನು. 2008ರ ಬೀಜಿಂಗ್ ಒಲಿಂಪಿಕ್ಸ್‌ನಲ್ಲಿ ಈತ 8 ಚಿನ್ನದ ಪದಕ ಗೆದ್ದನು. 2012ರ ಲಂಡನ್ ಒಲಿಂಪಿಕ್ಸ್‌ನಲ್ಲಿ ಈತ ನಾಲ್ಕು ಚಿನ್ನ ಮತ್ತು ಎರಡು ಬೆಳ್ಳಿ ಪದಕ ಗೆದ್ದನು. 2016ರ ಒಲಿಂಪಿಕ್ಸ್‌ನಲ್ಲಿ ಮತ್ತೆ 5 ಚಿನ್ನದ ಪದಕ ಮತ್ತು ಒಂದು ಬೆಳ್ಳಿ ಪದಕ ಗೆದ್ದನು.



ಈಜು ಸ್ಪರ್ಧೆಯ ವಿವಿಧ ವಿಭಾಗಗಳಲ್ಲಿ ಈತ ವಿಶ್ವದಾಖಲೆ ಬರೆದಿದ್ದಾನೆ. 200 ಮೀಟರ್ ಫ್ರೀ ಸ್ಟೈಲ್, 100 ಮೀಟರ್ ಬಟರ್‌ಫ್ಲೈ, 200 ಮೀಟರ್ ಬಟರ್ ಫ್ಲೈ, 200 ಮೀಟರ್ ವೈಯಕ್ತಿಕ ಮಿಡ್ಲೇ, 400 ಮೀಟರ್ ವೈಯಕ್ತಿಕ ಮಿಡ್ಲೇ , ಈ ರೀತಿ ಈತನ ದಾಖಲೆಗಳು ಸಾಗುತ್ತವೆ. ಅಮೆರಿಕದ ಈಜು ಪಟು ಪ್ರಶಸ್ತಿಯನ್ನು ಏಳು ಬಾರಿ ಗೆದ್ದಿದ್ದಾನೆ! ಬಾಲ್ಟಿಮೋರ್, ಮೇರಿಲ್ಯಾಂಡ್‌ನಲ್ಲಿ ಜನಿಸಿದ ಈತನು ಬಾಲಕನಾಗಿದ್ದಾಗಲೇ ಈಜು ತರಬೇತಿ ಪಡೆದನು. ಆತ ಒಂಬತ್ತು ವರ್ಷದವನಾಗಿದ್ದಾಗ, ಆತನ ತಂದೆ ತಾಯಿಯರು ಬೇರಾದರು; ಇದು ತನ್ನ ಮೇಲೆ ತೀರಾ ಕೆಟ್ಟ ಪರಿಣಾಮ ಬೀರಿದೆ ಎಂದು ಆತ ಹೇಳಿಕೊಂಡಿದ್ದಾನೆ.

ಹತ್ತಾರು ಸ್ಪರ್ಧೆಗಳಲ್ಲಿ ಚಿನ್ನದ ಪದಕಗಳನ್ನು ಬಾಚಿಕೊಂಡರೂ, ಈಜಿನಲ್ಲಿ ಈತನನ್ನು ಮೀರುಸುವವರೇ ಇಲ್ಲ ಎಂಬಂತಾದರೂ, ಈತನ ವೈಯಕ್ತಿಕ ಜೀವನ ಎಲ್ಲರಿಗೂ ಆದರ್ಶ ಎನ್ನುವಂತಿಲ್ಲ. ದೈತ್ಯ ಶಕ್ತಿಯ ಈತನು, ದೇಶದ ಕಾನೂನು ಮುರಿಯುವುದರಲ್ಲೂ ಹಿಂದೆ ಮುಂದೆ ನೋಡದ ವ್ಯಕ್ತಿ. 2004ರಲ್ಲಿ, ಅಂದರೆ ಆತ 19 ವರ್ಷದವನಾಗಿದ್ದಾಗ, ಮದ್ಯಪಾನದ ನಶೆಯಲ್ಲಿ ವಾಹನ ಚಲಾಯಿಸಿ, ಕಾನೂನಿನ ಕೈಗೆ ಸಿಕ್ಕಿಬಿದ್ದಿದ್ದ. 2009ರಲ್ಲಿ 'ಬಾಂಗ್' ಡ್ರಗ್ಸ್ ಸೇವಿಸಿ, ಸಿಕ್ಕಿಬಿದ್ದು, ಮೂರು ತಿಂಗಳು ಈಜು ಸ್ಪರ್ಧೆಗೆ ನಿಷೇಧಕ್ಕೆ ಒಳಗಾಗಿದ್ದ. 2014ರಲ್ಲಿ ಪುನಃ ಮದ್ಯಪಾನದ ನಶೆಯಲ್ಲಿ ವಾಹನ ಚಲಾಯಿಸಿ, ಬಾಲ್ಟಿಮೋರ್‌ನ ಪೊಲೀಸರ ಕೈಗೆ ಸಿಕ್ಕಿಬಿದ್ದು, ಆರು ತಿಂಗಳು ಸ್ಪರ್ಧೆಯಿಂದ ನಿಷೇಧಕ್ಕೆ ಒಳಗಾಗಿದ್ದ. ಅಂದರೆ, ಕಾನೂನು ಬಾಹಿರ ಎಂದು ತಿಳಿದಿದ್ದರೂ, ಪದೇ ಪದೇ ತಪ್ಪನ್ನು ಮಾಡಿ ಸಿಕ್ಕಿಬಿದ್ದ ಈತ, ಈಗ ಅಂತಾರಾಷ್ಟ್ರೀಯ ಸ್ಪರ್ಧೆಯಿಂದ ನಿವೃತ್ತನಾಗಿದ್ದಾನೆ.

ಅವೆನ್ಯೂ ರೋಡ್

ನಿತ್ಯದ ವಿಂಡೋ ಶಾಪಿಂಗ್

ವಿಶ್ವವಾಣಿ
30.07.2024 ಮಂಗಳವಾರ
vishwavani.news

ದಿನ ದರ್ಶಿಕೆ

ಆಷಾಢ ಮಾಸ, ಕೃಷ್ಣ ಪಕ್ಷ ಏಕಾದಶಿ ತಿಥಿ, ರೋಹಿಣಿ ನಕ್ಷತ್ರ, ಬವ ಕರಣ, ಕೃಷ್ಣ ಪಕ್ಷ, ಧೃವ ಯೋಗ, ಚಂದ್ರ ರಾಶಿ ವೃಷಭ, ದ್ರಿಕ್ ಋತು ವರ್ಷಾ, 2081 ವಿಕ್ರಮ ಸಂವತ್ಸರ, 1946 ಕ್ರೋಧಿನಾಮ ಸಂವತ್ಸರ.

ಮನೆಮದ್ದು

ಯೂರಿಕ್ ಆಸಿಡ್ ಹೆಚ್ಚಾದರೆ ಪ್ರತಿದಿನ ಪಪ್ಪಾಯಿಯನ್ನು ತಿನ್ನಲು ಶುರುಮಾಡಿ. ಪಪ್ಪಾಯಿಯು ಪಾಪೈನ್ ಎಂಬ ಪ್ರೋಟಿಯೋಲೈಟಿಕ್ ಕಿಣ್ವವನ್ನು ಹೊಂದಿರುತ್ತದೆ. ಇದು ದೇಹದಲ್ಲಿನ ಪ್ರೋಟೀನ್‌ಗಳನ್ನು ಜೀರ್ಣಿಸಿಕೊಳ್ಳಲು ಸಹಾಯ ಮಾಡುತ್ತದೆ. ಇದು ರಕ್ತದಲ್ಲಿನ ಯೂರಿಕ್ ಆಮ್ಲವನ್ನು ನಿಯಂತ್ರಿಸಲು ಸಹಾಯ ಮಾಡುತ್ತದೆ.

ಸೌಂದರ್ಯ

ಬಾಳೆ ಹಣ್ಣಿನಲ್ಲಿ ಸಾಕಷ್ಟು ಪೌಷ್ಟಿಕಾಂಶವಿದೆ. ಜತೆಗೆ ತ್ವಚೆಗೂ ಇದು ಪರಿಣಾಮಕಾರಿ. ಚೆನ್ನಾಗಿ ಮಾಗಿದ ಬಾಳೆ ಹಣ್ಣನ್ನು ಪೇಸ್ಟ್ ಮಾಡಿಕೊಂಡು ಮುಖಕ್ಕೆ ಹಚ್ಚಿ. ಅರ್ಧ ಗಂಟೆ ಬಿಟ್ಟು, ನಂತರ ಮುಖ ತೊಳೆದುಕೊಳ್ಳಿ. ಇದರಿಂದ ತ್ವಚೆ ಆಕರ್ಷಕವಾಗುತ್ತದೆ.

ದಿನ ಭವಿಷ್ಯ

ಮೇಷ: ನೀವು ಬಹುಕಾಲದಿಂದ ಜೀವನದ ಒತ್ತಡಗಳಿಂದ ಶಮನ ಪಡೆಯುತ್ತೀರಿ. ಶಾಶ್ವತವಾಗಿ ದೂರವಿಸಿರಿ ಸಲು ಜೀವನ ಶೈಲಿಯನ್ನು ಬದಲಿಸಿ.

ವೃಷಭ: ವಿಶೇಷವಾಗಿ ಬಿಕ್ಕಟ್ಟಿನ ಸಮಯದಲ್ಲಿ ನಿಮ್ಮ ತಾಳ್ಮೆ ಕಳೆದುಕೊಳ್ಳಬೇಡಿ. ರಿಯಲ್ ಎಸ್ಟೇಟ್, ಆರ್ಥಿಕ ವ್ಯವಹಾರಗಳಿಗೆ ಒಳ್ಳೆಯ ದಿನ.

ಮಿಥುನ: ನಿಮ್ಮ ಬಲವಾದ ಧೃಢತೆ ಮತ್ತು ನಿರ್ಭಯತೆ ನಿಮ್ಮ ಮಾನಸಿಕ ಶಕ್ತಿ ವರ್ಧಿಸುವಲ್ಲಿ ಮಹತ್ತರ ಪಾತ್ರ ವಹಿಸುತ್ತವೆ.

ಕಟಕ: ನಿಮ್ಮ ಸಾಮಾನ್ಯ ಜ್ಞಾನದ ಜತೆಗೆ ನಿರಂತರ ಪ್ರಯತ್ನ ಖಂಡಿತವಾಗಿಯೂ ಯಶಸ್ಸು ತರುತ್ತದೆ. ಹೂಡಿಕೆಯನ್ನು ಉಳಿತಾಯ ಮಾಡಿ.

ಸಿಂಹ: ನೀವು ವಿಶ್ರಾಂತಿ ಪಡೆಯಲು ಸಾಧ್ಯವಾಗುವ ಒಂದು ದಿನ. ನಿಮ್ಮ ಸ್ನಾಯುಗಳಿಗೆ ವಿಶ್ರಾಂತಿ ನೀಡಲು ತೈಲದಿಂದ ನಿಮ್ಮ ದೇಹಕ್ಕೆ ಮಸಾಜ್ ಮಾಡಿಸಿ.

ಕನ್ಯಾ: ನಿಮ್ಮ ಅಪಾರ ವಿಶ್ವಾಸ ಮತ್ತು ಸುಲಭದ ಕೆಲಸದ ವೇಳಾಪಟ್ಟಿ ಇಂದು ವಿಶ್ರಾಂತಿಗೆ ಸಾಕಷ್ಟು ಸಮಯ ನೀಡುತ್ತದೆ.

ತುಲಾ: ನಿಮ್ಮ ಸೃಜನಶಿಲ ಪ್ರತಿಭೆಯನ್ನು ಸರಿಯಾಗಿ ಬಳಸಿದಲ್ಲಿ ಅದು ಅತ್ಯಂತ ಲಾಭದಾಯಕವೆಂದು ಸಾಬೀತಾಗಬಹುದು.

ವೃಶ್ಚಿಕ: ಮನೆಯಲ್ಲಿ ಯಾವುದೇ ಕಾರ್ಯಕ್ರಮ ನಡೆಯುವ ಕಾರಣದಿಂದಾಗಿ ಇಂದು ಸಾಕಷ್ಟು ಹಣವನ್ನು ಖರ್ಚು ಮಾಡಬೇಕಾಗುತ್ತದೆ,

ಧನು: ನಿಮ್ಮ ಸಾಮಾನ್ಯ ಜ್ಞಾನದ ಜತೆಗೆ ನಿರಂತರ ಪ್ರಯತ್ನ ಖಂಡಿತವಾಗಿಯೂ ಯಶಸ್ಸು ತರುವುದರಿಂದ ತಾಳ್ಮೆಯಿಂದಿರಿ.

ಮಕರ: ವ್ಯಾಪಾರವನ್ನು ಬಲಪಡಿಸಲು ಇಂದು ಯಾವುದೇ ಪ್ರಮುಖ ಕ್ರಮಗಳನ್ನು ತೆಗೆದುಕೊಳ್ಳಬಹುದು.

ಕುಂಭ: ಕೆಲಸದಲ್ಲಿ ಹಿರಿಯರಿಂದ ಒತ್ತಡ ಮತ್ತು ಮನೆಯಲ್ಲಿ ಅಪಶ್ರುತಿ ನಿಮ್ಮ ಏಕಾಗ್ರತೆಗೆ ತೊಂದರೆ ತರಬಹುದು. ಹಣಕಾಸು ಪರಿಸ್ಥಿತಿ ಸುಧಾರಿಸುತ್ತವೆ.

ಮೀನ: ನಿಮ್ಮ ಸ್ನೇಹಿತರು ಅಥವಾ ಕುಟುಂಬ ಸದಸ್ಯರೊಂದಿಗಿನ ಸಂತಸದ ಪ್ರಯಾಣ ನಿಮಗೆ ಸಮಾಧಾನ ನೀಡುತ್ತದೆ.

ಈ ದಿನ ಇತಿಹಾಸ



- 1883: ಭಾರತದ ಮೊದಲ ಶಾಸಕಿ, ವೈದ್ಯೆ ಮುತ್ತುಲಕ್ಷ್ಮೀ ರೆಡ್ಡಿ ಅವರ ಜನ್ಮವಾಯಿತು.
- 1836: ಮೊದಲ ಇಂಗ್ಲೀಷ್ ಭಾಷೆಯ ಪತ್ರಿಕೆ ಹವಾಯಿ ಶುರುವಾಯಿತು.
- 1863: ಅಮೆರಿಕದ ಖ್ಯಾತ ಉದ್ಯಮಿ, ಫೋರ್ಡ್ ಕಂಪನಿಯ ಸಂಸ್ಥಾಪಕ ಹನ್ರಿ ಫೋರ್ಡ್ ಅವರ ಜನನ.
- 1947: ಖ್ಯಾತ ಬಾಡಿ ಬಿಲ್ಡರ್ ಅರ್ನಾಲ್ಡ್ ಶ್ವರ್ಜನೆಗ್ಗರ್ ಅವರು ಹುಟ್ಟಿದರು.

ಚಿತ್ರಸ್ಫೂರ್ತಿ

ಉಕ್ರೇನ್ ನಾಗರಿಕರು ಯುದ್ಧದ ಸಮಯದಲ್ಲಿ ಕೀವ್ ನಗರದಿಂದ ಪಲಾಯನ ಮಾಡುತ್ತಿರುವಾಗ ಮುರಿದು ಬಿದ್ದ ಬ್ರಿಜ್ ಕೆಳಗೆ ರಕ್ಷಣೆಯನ್ನು ಒದಗಿಸಿಕೊಳ್ಳುತ್ತಿರುವ ನಾಗರಿಕರು.

ಚಿತ್ರಕೃಪೆ: ಎಮಿಲಿಯೋ ಮೊರೆನಾಟಿ

ಕಾರಾಗೃಹದಲ್ಲಿ ಹನುಮಾನ್ ಚಾಲೀಸಾ ರಚಿಸಿದ ತುಳಸೀದಾಸರು

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ಒಮ್ಮೆ ತುಳಸೀದಾಸರು ಎಲ್ಲೋ ಹೋಗುತ್ತಿದ್ದಾಗ ಒಬ್ಬ ಹೆಂಗಸು ಅವರ ಕಾಲಿಗೆ ಬಂದು ಬಿದ್ದಳು. ಅವರು ಅವಳನ್ನು ಸುಮಂಗಲಿಯಾಗು ಎಂದು ಹರಸಿದರು. ಅದು ಹೇಗೆ ಸಾಧ್ಯ? ನನ್ನ ಪತಿ ಇಂದೇ ತೀರಿಕೊಂಡರು ಎಂದು ಅವಳು ದುಃಖ ಪಟ್ಟಳು. ನನ್ನ ಬಾಯಲ್ಲಿ ಶ್ರೀರಾಮನು ಈ ಮಾತನ್ನು ಹೇಳಿಸಿದರೆ ಅದು ಸುಳ್ಳಾಗುವುದಿಲ್ಲ. ಎಲ್ಲರೂ ಕಣ್ಮುಚ್ಚಿ ಶ್ರೀರಾಮನ ಹೆಸರನ್ನು ಕೂಗಿ! ಎಂದು ತುಳಸೀದಾಸರು ಆದೇಶಿಸಿದರು. ಹೀಗೆ ಮಾಡಿದಾಗ ಸತ್ತಿದ್ದ ವ್ಯಕ್ತಿ ಜೀವಿತನಾದನಂತೆ.

ಈ ವದಂತಿ ಎಲ್ಲ ಕಡೆಗೆ ಹಬ್ಬಿ ಅಕ್ಬರನ ಕಿವಿಯನ್ನೂ ಮುಟ್ಟಿತು. ಅವನು ತುಳಸೀದಾಸರನ್ನು ಬರಹೇಳಿದ. ತಾವು ಕಾವ್ಯರಚನೆಯಲ್ಲಿ ತೊಡಗಿರುವುದರಿಂದ ಬರುವುದು ಸಾಧ್ಯವಿಲ್ಲ ಎಂದು ಅವರು ಹೇಳಿ ಕಳಿಸಿದರು. ಕ್ರುದ್ಧನಾದ ಅಕ್ಬರ್ ಅವರನ್ನು ಬಲವಂತದಿಂದ ಕರೆಸಿಕೊಂಡ. ತನ್ನ ಕಣ್ಣುಗಳ ಮುಂದೆಯೂ ಇಂಥ ಪವಾಡ ಮಾಡಿ ತೋರಿಸಬೇಕೆಂದು ಹಠ ಮಾಡಿದ. ನೀವು ಕೇಳಿದ್ದೆಲ್ಲ ಸುಳ್ಳು. ನನಗೆ ಶ್ರೀರಾಮನನ್ನು ಹೊರತಾಗಿ ಏನೂ ತಿಳಿದಿಲ್ಲ ಎಂದು ದಾಸರು ಹೇಳಿಬಿಟ್ಟರು. ಅಕ್ಬರ್ ನಿಮ್ಮ ರಾಮನನ್ನು ನಾವೂ ನೋಡೋಣ! ಎಂದು ಸವಾಲೆಸೆದು ದಾಸರನ್ನು ಫತೇಹ್‌ಪುರ ಸಿಕ್ರಿಯ ಕಾರಾಗ್ರಹದಲ್ಲಿ ಬಂಧಿಸಿದ.

ಅಲ್ಲಿ ತುಳಸೀದಾಸರು ನಲವತ್ತು ಚರಣಗಳುಳ್ಳ ಹನುಮಾನ್ ಚಾಲೀಸಾ ರಚಿಸಿ ನಲವತ್ತು ದಿವಸ ಪಠಣ ಮಾಡಿದರಂತೆ. ನಲವತ್ತನೇ ದಿವಸ ಕೋತಿಗಳ ದೊಡ್ಡ ಸೈನ್ಯ ನಗರದಲ್ಲಿ ಬಂದಿಳಿದು ಧ್ವಂಸ ಮಾಡಲು ಪ್ರಾರಂಭಿಸಿತು. ಅಕ್ಬರನ ಒಬ್ಬ ಸಲಹೆಗಾರ ಇದು ನೀವು ಬಂಧಿಸಿಟ್ಟ ಫಕೀರನ ಕೆಲಸ! ಎಂದು ತಿಳುವಳಿಕೆ ಹೇಳಿದ. ಅಕ್ಬರನು ದಾಸರನ್ನು ಬಿಡುಗಡೆ ಮಾಡಿದಾಗ ತುಳಸೀದಾಸರು ಹನುಮಂತನನ್ನು ಪ್ರಾರ್ಥಿಸಿ ಕೋತಿಗಳ ಹಾವಳಿಯನ್ನು ಕೊನೆಗೊಳಿಸಿದರು. ಮುಂದೆ ಅಕ್ಬರ್ ದಾಸರ ಸ್ನೇಹ ಸಂಪಾದಿಸಿ ಅವರ ಸಲಹೆಯ ಮೇರೆಗೆ ಫತೇಹ್‌ಪುರ ಸಿಕ್ರಿಯನ್ನು ಬಿಟ್ಟು ದೆಹಲಿಗೆ ಹಿಂತಿರುಗಿದನಂತೆ. ಸಂಗ್ರಹದಲ್ಲಿ ಸಿಗುವ ಈ ಕಥೆ ತುಳಸಿದಾಸರ ಭಕ್ತಿ, ಮತ್ತೆ ಅವರ ಭಕ್ತಿಗೆ ಶ್ರೀರಾಮನೊಲಿದ ಪರಿಯನ್ನು ಮನದಟ್ಟಾಗುವಂತೆ ತಿಳಿಸಿಕೊಡುತ್ತದೆ.

ನಾವು ಯಾರಾದರೂ ಹಿರಿಯರನ್ನ ಭೇಟಿ ಮಾಡಿದಾಗ, ಜ್ಞಾನ ವೃದ್ಧರನ್ನ ಎದುರುಗೊಂಡಾಗ ಅವರ ಕಾಲಿಗೆ ನಮಸ್ಕರಿಸುವಂತೆ ನಮ್ಮ ಹಿರಿಯರು ನಮಗೆ ತಿಳಿಸುತ್ತಾರೆ. ಇದು ನಮ್ಮ ಭಾರತೀಯ ಸತ್ ಸಂಪ್ರದಾಯ. ಆದರೆ ಕೆಲವರು ನಾವು ಅನಗತ್ಯವಾಗಿ ಮತ್ತೊಬ್ಬರ ಕಾಲಿಗೆ ಬೀಳುವುದಿಲ್ಲ, ಎನ್ನುವ ಧೋರಣೆ ಹೊಂದಿರುತ್ತಾರೆ. ವಯೋವೃದ್ಧರಿಗೆ ಮತ್ತು ಜ್ಞಾನ ವೃದ್ಧರಿಗೆ ಇರುವ ಜೀವನಾನುಭವಗಳು, ಅವರ ಬದುಕಿನ ಒಳನೋಟ, ಜೀವನದಲ್ಲಿ ಅವರು ಗಳಿಸಿಕೊಂಡ ಸಾತ್ವಿಕ ವರ್ಚಸ್ಸು ದೊಡ್ಡದು. ಅಂತಹವರು ಆ ವರ್ಚಸನ್ನು ತಮ್ಮ ಆಶೀರ್ವಾದದ ಮೂಲಕ ಅವರ ಕೈಯನ್ನು ನಮ್ಮ ತಲೆಯ ಮೇಲಿಟ್ಟು ನಮಗೆ ಧಾರೆ ಎರೆದಾಗ ಅದರ ಒಂದಷ್ಟು ಒಳಿತು ನಮಗೂ ಆಗುತ್ತದೆ ಎನ್ನುವ ದೃಢವಾದ ನಂಬಿಕೆ. ಇದೇ ನಂಬಿಕೆಯನ್ನು ಮೇಲಿನ ಕಥೆ ಪುಷ್ಟೀಕರಿಸುತ್ತದೆ. ಆದ್ದರಿಂದಲೇ ಪರೀಕ್ಷೆಗೆ ಹೋಗುವ ಮುನ್ನ ಯಾವುದಾದರೂ ಒಳ್ಳೆಯ ಕೆಲಸಕ್ಕೆ ಹೋಗುವ ಮುನ್ನ ದೊಡ್ಡವರಿಗೆ ನಮಸ್ಕಾರ ಮಾಡಿ ಹೋಗಬೇಕು ಎಂದು ಹಿರಿಯರು ಹೇಳುವುದು. ಯಾವುದಾದರೂ ಮುಖ್ಯವಾದ ಕೆಲಸ ಮಾಡಲು ಹೊರಟಾಗ ನಮಗೆ ಬಹಳ ಅಂತಃಶಕ್ತಿಯ ಅಗತ್ಯವಿರುತ್ತದೆ. ಹಿರಿಯರ ನಮ್ಮ ಹಿತೈಷಿಗಳ ಆಶೀರ್ವಾದ ಪಡೆದಾಗ ಅವರ ಸಾತ್ವಿಕ ವರ್ಚಸ್ಸು ನಮಗೂ ಧಾರೆಯರೆದಂತಾಗುತ್ತದೆ. ಅದರಿಂದಲೇ ಮಾಡುವ ಕೆಲಸ ಹೂವೆತ್ತಿದಂತೆ ಹಗುರಾಗುತ್ತದೆ ಎನ್ನುವುದು ನಮ್ಮ ಭಾರತೀಯ ಪರಂಪರೆಯ ನಂಬಿಕೆ.

ಕೆಲವೊಮ್ಮೆ ನಮಗೇ ಇದರ ಅನುಭವವಾಗಿರುತ್ತದೆ. ಬಹಳ ಹೆದರಿಕೊಂಡು ಮುಂದೆನಾಗುತ್ತದೆ ಎಂದು ನಾವು ಕೈಗೊಂಡ ಕೆಲಸ ಹೂವೆತ್ತಿದಂತೆ ಮುಗಿಯುತ್ತದೆ. ಅಲ್ಲಿ ಅನೇಕರ ಆಶೀರ್ವಾದ ಹಾರೈಕೆಗಳ ಫಲ ನಾವು ಗುರುತಿಸಬೇಕು. ನಮ್ಮ ಮನೆಯ ಮಕ್ಕಳಿಗೆ ಇಂತಹ ಉತ್ತಮ ನಡವಳಿಕೆಗಳನ್ನು ವಿವರಿಸಿ ಹೇಳಿದಾಗ ಅವರಿಗೆ ಅದರ ಪ್ರಾಮುಖ್ಯತೆಯ ಬಗ್ಗೆ ಅರಿವಾಗುತ್ತದೆ.

ಪ ದ ಬಂ ಧ



ಎಡದಿಂದ ಬಲಕ್ಕೆ

1. ಫಲಿತಾಂಶ ಅಥವಾ ಪರಿಣಾಮಕ್ಕೆ ಇನ್ನೊಂದು ಹೆಸರು (4)
3. ಕಾಣಿಸಿದಾಗ ಕೊಟ್ಟ ಉಡುಗೊರೆ (3)
4. ಶಯನಕ್ಕೆ ಹೋಗುವಾಗ ಕಾಡಿದ ಸಂದೇಹ (3)
5. ಮೋರೆ ನೋಡಿ ಮಾಡಿದ್ದು ತೇಜೋವಧೆ (4)
7. ಪೂಜಿಸುವವನು ಆ ಕಡೆಯಿಂದ ಬಂದಿದ್ದಾನೆ (3)
10. ಮತ್ತೊಂದು ಎಳ್ಳು (2)
12. ಎಳೆಯ ಸೂರ್ಯ (4)
14. ಮದುವೆಯ ಗಂಡಿನ ಆದಾಯವೇನು (4)
16. ಬೇಡವಾದ ವಸ್ತು (2)
18. ಧಾನ್ಯವನ್ನು ಸಂಗ್ರಹಿಸುವ ಸ್ಥಳ (3)
20. ಈಗಿನ ಕಾಲ (4)
22. ಬಾಗಿಲಿಗೆ ಕಟ್ಟಿದ ಪಲ್ಲವ, ಚಿಗುರು (3)
23. ಒಂದೊಂದೇ ಏರಿ ಹೋದ ಮೆಟ್ಟಿಲು (3)
24. ಪ್ರತಿದಿನದ ಸೂರ್ಯ (4)

ಎಡದಿಂದ ಬಲಕ್ಕೆ

2. ಅಂಕುಶ ಅಥವಾ ಕಡಿವಾಣ (3)
3. ಕೈಲಾಸ ಕಾಣಲು ಮಾಡಬೇಕಾದ ಕೆಲಸ (3)
4. ಸುದ್ದಿ ಅಥವಾ ಸಹವಾಸಕ್ಕೆ ಮತ್ತೊಂದು ಹೆಸರು (3)
6. ಮರುಭೂಮಿಯ ಒಂದು ಒಣ ಹಣ್ಣು (3)
8. ಅವನ ಅತಿಯಾದ ಕೀಳುದೆಸೆ (4)
9. ಲಾಂಗೂಲದೊಂದಿಗೆ ಬಂದಿರುವ ಅನುಯಾಯಿ (4)
11. ಶ್ರೀರಾಮನ ಒಬ್ಬ ಮಗ (2)
13. ಕವನ ಬರೆಯುವಾತ ಮೇಲೇರಿ ಬಂದಿದ್ದಾನೆ (2)
15. ಕೆಡುಕನ್ನುಂಟುಮಾಡುವುದು ತಲೆಕೆಳಗಾಗಿದೆ (3)
17. ಕೈಯಲ್ಲಿ ನೇವರಿಸು (3)
19. ಜೋಪಾನಕ್ಕೆ ಮತ್ತೊಂದು ಹೆಸರು (3)
21. ಮಧ್ಯದಲ್ಲಿ ಉಂಟಾದ ಕಂಪನ (3)

ನಿನ್ನೆಯ ಉತ್ತರ

ಎಡದಿಂದ ಬಲಕ್ಕೆ: 2. ಅಂತರಂಗ 6. ಹವ್ಯಾಸ 8. ರಿಕಾಪು 10. ಮಂತ್ರಾಲಯ 11. ಕೂಲಿ 12. ವಾಸವ 13. ಒರಟ 15. ಕುಜ 18. ಏಕದಂತ 19. ನಾಯಕ 21. ಲಕ್ಷಣ 22. ರಣಭೇರಿ

ಮೇಲಿನಿಂದ ಕೆಳಕ್ಕೆ: 1. ಸಹಕಾರ 3. ತರುಲತೆ 4. ಗರಿ 5. ಕೆಂಪು 7. ಸಮಂಜಸ 9. ಕಾಲಕೂಟ 12. ವಾಜಪೇಯ 14. ರಸಾತಲ 16. ಪ್ರಕರಣ 17. ಪರಿಣಯ 19. ನಾಳೆ 20. ಕರಿ

● ಸಿ. ರವಿಶಂಕರ ಶಾಸ್ತ್ರಿ, ದಂಬೆ

ದಿನಕ್ಕೊಂದು ಮಾಹಿತಿ

ಮಿದುಳು ತಿನ್ನುತ್ತದೆ!



ಮಿದುಳಿನ ಬಗ್ಗೆ ಷ್ಟು ಜನರಿಗೆ ಗೊತ್ತು? ಎಲ್ಲರಿಗೂ ಗೊತ್ತು ಆದರೆ, ಮಿದುಳಿನ ಕೋಶಗಳು ಬೇರೆ ಕೋಶಗಳನ್ನು ತಿನ್ನುತ್ತದೆ ಎಂಬ ವಿಷಯ ಗೊತ್ತೇ? ಇದು ಆಶ್ಚರ್ಯವೆನಿಸಬಹುದು ಆದರೂ ಇದು ಸತ್ಯ! ನಮ್ಮ ದೇಹದ ಮಿದುಳಿನ ಕೋಶಗಳು, ಅದರಲ್ಲಿರುವ ಸಣ್ಣ ಕೋಶಗಳ ಮೇಲೆ ಹೊದಿಕೆಯಾಗಿಯೋ ಅದನ್ನು ತಿಂದೋ ಬೆಳೆಯುತ್ತದೆ. ಇದರಿಂದ ಗಾಬರಿಯಾಗಬೇಕಿಲ್ಲ. ಏಕೆಂದರೆ, ಇದು ಮಿದುಳಿನಿಂದ ಕೆಲವು ಬೇಡವಾದ ಅಣುಗಳನ್ನು ಸಿಸ್ಟಮ್‌ನಿಂದ ಹೊರಹಾಕುವ ಪ್ರಕ್ರಿಯೆ ಅಂತೆ. ಇದು ಒಂದು ಜೈವಿಕ ಪ್ರಕ್ರಿಯೆ, ಇದರಿಂದ ಮಿದುಳಿಗೆ ಏನೂ ಹಾನಿಯಾಗಲ್ಲ, ಬದಲಿಗೆ ಮಿದುಳಿನ ಪ್ರಮುಖ ಅಂಗ ಗ್ರೇ ಮ್ಯಾಟರ್ ಅನ್ನು ರಕ್ಷಿಸುವೆಡೆಗೆ ಇದು ಸಹಕಾರಿ. ಇದಕ್ಕೆ ಫಾಗೊಸಿಟಿಸಿಸ್ ಎಂದೂ ಕರೆಯುತ್ತಾರೆ.

ಪುಸ್ತಕ ಲೋಕ

ಮೇಕ್ ಎಪಿಕ್ ಮನಿ

ಕೂರ್ ವಾರಿಕೋ ಅವರು ಬರೆದಿರುವ 'ಮೇಕ್ ಎಪಿಕ್ ಮನಿ'. ಈ ಪುಸ್ತಕವು ಪ್ರತಿಯೊಬ್ಬನ ಜೀವನದಲ್ಲಿ ಬೇಕಾಗಿ ರುವ ವೈಯಕ್ತಿಕ ಆರ್ಥಿಕತೆಯ ಬಗ್ಗೆ ಮಾತನಾಡುತ್ತದೆ. ದೊಡ್ಡ ದೊಡ್ಡ ಪ್ಯಾರಾಗ್ರಾಫ್‌ಗಳ ಪರಿವೆಯೇ ಇಲ್ಲದ, ಈ ಪುಸ್ತಕದಲ್ಲಿ ಹಣಕಾಸು ವಿಚಾರದ ಬಗ್ಗೆ ಅತೀ ಸರಳ ರೀತಿಯಲ್ಲಿ ಲೇಖಕರು ತಿಳಿಸಿಕೊಟ್ಟಿದ್ದಾರೆ.



ಅತ್ಯಂತ ಸರಳ ರೀತಿಯಲ್ಲಿರುವ ಈ ಪುಸ್ತಕ, ಯಾವುದು ಲಾಭದಾಯಕ, ಯಾವುದು ನಷ್ಟವನ್ನುಂಟುಮಾಡುತ್ತದೆ. ಶ್ರೀಮಂತರು ಯಾವ ರೀತಿಯಲ್ಲಿ ಯೋಚಿಸುತ್ತಾರೆ. ಜೀವನದ ವೆಚ್ಚ ಎಷ್ಟರಲ್ಲಿರಬೇಕು, ಬರೀ ಒಂದೇ ಆದಾಯದ ಮೂಲವನ್ನು ನಂಬಿ ಬದುಕುವುದಕ್ಕಿಂತ ಬೇರೆ ಬೇರೆ ಆದಾಯ ಮೂಲಗಳನ್ನು ಮಾಡಿಕೊಳ್ಳುವುದು ಹೇಗೆ, ನಿವೃತ್ತಿಯಂಚಿನಲ್ಲಿ ಬರುವಷ್ಟರಲ್ಲಿ ಶ್ರೀಮಂತರಾಗುವುದು ಹೇಗೆ, ಹಣವನ್ನು ಉಳಿಸುವ ಮಾರ್ಗ ಸೇರಿದಂತೆ ಇನ್ನು ಎಷ್ಟೋ ಅನೇಕ ಹಣಕಾಸಿನ ವಿಚಾರಗಳನ್ನು ಸರಳವಾಗಿ ವಿವರಿಸಿದ್ದಾರೆ.

ಟ್ವೀಟ್‌ಮೆಂಟ್

ಇಂಡಿಯನ್ ಟೆಕ್ ಆ್ಯಂಡ್ ಇನ್‌ಫ್ರಾ: ಭಾರತದ ಯಾವ ನಗರವು 2036 ರ ಒಲಿಂಪಿಕ್ಸ್ ಆಟಗಳನ್ನು ಅತಿಥೆಯ ಮಾಡುವ ಸಾಮರ್ಥ್ಯ ಹೊಂದಿದೆ.

ಅಶುತೋಷ್ ಶ್ರೀವಾತ್ಸವ: ಬೆಂಗಳೂರು! ಬೇರೆ ಎಲ್ಲ ಟೀಮುಗಳು ಟ್ರಾಫಿಕ್‌ನಲ್ಲಿ ಸಿಲುಕಿಕೊಳ್ಳುತ್ತದೆ. ಭಾರತವು ಎಲ್ಲ ಬಂಗಾರದ ಪದಕಗಳನ್ನು ಗೆಲ್ಲುತ್ತದೆ.

ದಿನಕ್ಕೊಂದು ಪ್ರಶ್ನೆ



● ಎಲ್.ಪಿ.ಕುಲಕರ್ಣಿ, ಬಾದಾಮಿ

● 'ಕಬ್ಬಿಣ ಮತ್ತು ಕಲ್ಲಿದ್ದಲಿನ ಯುಗ' ಎಂದು ಯಾವುದಕ್ಕೆ ಕರೆಯಲಾಗುತ್ತದೆ?

- ಎ. ಆಹಾರ ಕ್ರಾಂತಿ.
- ಬಿ. ನವೋದಯ.
- ಸಿ. ಕೈಗಾರಿಕಾ ಕ್ರಾಂತಿ.
- ಡಿ. ಹಿಂಸಾ ಕ್ರಾಂತಿ.

ಉತ್ತರ: ಸಿ. ಕೈಗಾರಿಕಾ ಕ್ರಾಂತಿ

ಮಾಹಿತಿ

ಅಬ್ರಹಾಂ ಡರ್ಬಿ ಕಬ್ಬಿಣವನ್ನು ಸಂಸ್ಕರಿಸಲು ಕಲ್ಲಿದ್ದಲನ್ನು ಬಳಸಲು ಪ್ರಾರಂಭಿಸಿದರು. ಕೈಗಾರಿಕಾ ಕ್ರಾಂತಿಯ ಸಮಯದಲ್ಲಿ ಕಲ್ಲಿದ್ದಲು ಮತ್ತು ಕಬ್ಬಿಣವು ಉದ್ಯಮದ ಪ್ರಪಂಚವನ್ನು ಕ್ರಾಂತಿಗೊಳಿಸಿತು. ಈ ಆಧುನಿಕ ಯುಗವನ್ನು 'ಕಬ್ಬಿಣ ಮತ್ತು ಕಲ್ಲಿದ್ದಲಿನ ಯುಗ' ಎಂದು ಕರೆಯಲಾಯಿತು.

ಮರೆವು ವರವೇ

● ಚೇತನ ಭಾರ್ಗವ

ಮರೆವು ವರವೇ ಅಥವಾ ಶಾಪವೇ ಇಂತಹ ಒಂದು ಜಿಜ್ಞಾಸೆ ಬಹಳ ಕಾಲದಿಂದ ಮನುಕುಲವನ್ನು ಕಾಡಿದೆ. ಪ್ರಾಣಿಗಳಲ್ಲೇ ವಿಕಸಿತ ಮಿದುಳನ್ನು ಹೊಂದಿರುವ ಮಾನವನಿಗೆ ಇಂದ್ರಿಯಗಳಿಂದ ವಿಚಾರಗಳನ್ನು ಅರಿಯುವ ವಿಶ್ಲೇಷಿಸುವ ಹಾಗೂ ಕಾಲಕ್ಕೆ ತಕ್ಕಂತೆ ಅದನ್ನು ನೆನಪಿಸಿಕೊಂಡು ಅಗತ್ಯಕ್ಕೆ ಬಳಸುವ ಸಾಮರ್ಥ್ಯ ಇತರ ಪ್ರಾಣಿಗಳಿಗಿಂತ ಮೀರಿದುದಾಗಿದೆ. ಹಲವು ಪ್ರಾಣಿಗಳ ಇಂದ್ರಿಯ ಸಾಮರ್ಥ್ಯವು ಮಾನವನಿಗಿಂತ ಹೆಚ್ಚಿದ್ದರೂ ಮಾನವನ ಮೆದುಳು ನರಮಂಡಲ ವಿಕಸಿತಗೊಂಡಂತೆ ತನ್ನ ಇಂದ್ರಿಯಗಳು ಗ್ರಹಿಸುವ ವಿಚಾರಗಳನ್ನು ಸೂಕ್ತವಾಗಿ ವಿಶ್ಲೇಷಿಸಿ ಸಂಗ್ರಹಿಸುವ ಹಾಗೂ ತನ್ನ ಅಸ್ತಿತ್ವಕ್ಕೆ ಬಳಸಿಕೊಳ್ಳುವ ಕಲೆ ಮಾನವರಿಗೆ ಸಿದ್ಧಿಸಿದ್ದೇ. ಆತ ಭೂಮಂಡಲದ ಬುದ್ಧಿಶಾಲಿ ಪ್ರಭೇಧವಾಗಿ ಗುರುತಿಸಿಕೊಂಡಿದ್ದಾನೆ. ಅದರ ಮೂಲಕ ಅಭಿವೃದ್ಧಿಯನ್ನು ಸಾಧಿಸಿದ್ದಾನೆ, ಹಲವು ವಿಕ್ರಮಗಳನ್ನು ಮೆರೆದಿದ್ದಾನೆ.

ಮಾನವನ ನೆನಪಿನ ಶಕ್ತಿ ಸೂಕ್ತ ಸಮಯಕ್ಕೆ ಸಂಗ್ರಹವಾದ ವಿಷಯವನ್ನು ಹೊರತೆಗೆಯುವ ಪ್ರಕ್ರಿಯೆ ಮಾನವ ಪ್ರಭೇದವನ್ನು ಉಳಿಸಿಕೊಂಡು ಬಂತು. ಕ್ರೂರ ಪ್ರಾಣಿಗಳಿಂದ ಅಪಾಯವಿದೆ ಎಂಬ ವಿಚಾರದ ನೆನಪು ಮತ್ತೊಮ್ಮೆ ಅದನ್ನು ಕಂಡಾಕ್ಷಣ ತಾನು ಓಡಬೇಕು ಎಂದು ಪ್ರೇರೇಪಿಸಿತು. ಯಾವ ವಸ್ತುಗಳು ತನಗೆ ಅಪಾಯ ತರುತ್ತದೆ ಹಾಗೂ ಯಾವ ವಸ್ತು ತನಗೆ ಉಪಯೋಗ ಎಂಬ ಮಾನವ ಸಂಘ ಜೀವಿಯಾಗಿ ಕೃಷಿ ಮಾಡಲು ಹಾಗೂ ನಾಗರಿಕತೆಯನ್ನು ಬೆಳೆಸಲು ಸಹಾಯವಾಯಿತು. ಆತನ ವಿಚಾರ ಸಂಗ್ರಹಣಾ ವಿಧಾನ ಹಾಗೂ ಅದನ್ನು ಜ್ಞಾಪಕ ಮಾಡಿ ಬಳಸುವ ಕಲೆಯೇ ಆತನನ್ನು ಇತರೆಲ್ಲ ವರ್ಗದ ಜೀವಿಗಳಿಗಿಂತ ಬೇರೆಯೇ ಆಗಿ ನಿಲ್ಲಿಸಿತು.

ಇದಿಷ್ಟು ಮಾನವರ ವಿಚಾರಗಳ ಜ್ಞಾಪಕಶಕ್ತಿಯ ಪರಿಚಯವಾಯಿತು. ಅಸಲಿಗೆ ಮಾನವನ ಮಿದುಳು ಒಟ್ಟಿಗೆ ಹಲವಾರು ವಿಷಯಗಳನ್ನು ಸಂಗ್ರಹಿಸುವ ಮತ್ತು ಬೇಕಾದಾಗ ಮರುಪೂರೈಸುವ ಸಾಮರ್ಥ್ಯ ಹೊಂದಿದೆ. ಇದನ್ನು ಅವಧಾನ ಮುಂತಾದ ಕಲೆಗಳಲ್ಲಿ ಕಾಣಬಹುದು. ಒಬ್ಬ ವ್ಯಕ್ತಿ ಒಟ್ಟಿಗೆ ನೂರು ಜನರು ಕೇಳುವ ಪ್ರಶ್ನೆಗಳಿಗೆ ನೆನಪಿಟ್ಟು ಹಲವಾರು ಪ್ರಕಾರಗಳಲ್ಲಿ ಉತ್ತರ ಹೇಳುತ್ತಾನೆ. ಕಂಪ್ಯೂಟರ್‌ಗೆ ಹೋಲಿಸಿದರೆ ಮಾನವನ ಮೆದುಳಿನ ಸಾಮರ್ಥ್ಯ ಹಲವು ಪಟ್ಟು ಹಿರಿದಾದುದು. ಹಲವಾರು ಮಕ್ಕಳಲ್ಲಿ ಜ್ಞಾಪಕ ಶಕ್ತಿ ಅತ್ಯದ್ಭುತವಾಗಿರುವುದನ್ನು ನೋಡಿರಬಹುದು. ಅವರಲ್ಲಿ ಜಗತ್ತಿನ ಎಲ್ಲ ವಿಚಾರಗಳ ಬಗ್ಗೆಯೂ ವಿಷಯ ಗೊತ್ತಿದ್ದೂ ಅದನ್ನು ಜ್ಞಾಪಿಸಿಕೊಂಡು ಹೇಳಬಲ್ಲವರಾಗಿರುತ್ತಾರೆ.

ಹೀಗೆ ವಿಚಾರಗಳ ಸಂಗ್ರಹ ಒಂದೆಡೆಯಾದರೆ ಅದರ ಮರುಪೂರಣ ವ್ಯವಸ್ಥೆ ಜ್ಞಾಪಕ ಶಕ್ತಿ. ಇದು ವ್ಯಕ್ತಿಗಳಲ್ಲಿ ಒಂದೊಂದು ಮಟ್ಟಕ್ಕಿರುತ್ತದೆ. ಕೆಲವರು ಒಂದು ಬಾರಿ ಕೇಳಿದ ಅಥವಾ ನೋಡಿದ ವಿಷಯಗಳನ್ನು ವರ್ಷವಾದಮೇಲೂ ಅದೇ ತೆರನಾಗಿಯೇ ಹೇಳಬಲ್ಲರು. ಅವರ ಜ್ಞಾಪಕ ಶಕ್ತಿ ಉಚ್ಚ ಮಟ್ಟದ್ದಾಗಿರುತ್ತದೆ. ಇನ್ನು ಕೆಲವರು ನಿರಂತರ ಹಾಗೂ ವ್ಯವಸ್ಥಿತ ಕಲಿಕೆಯಿಂದ ಜ್ಞಾಪಕ ಶಕ್ತಿಯನ್ನು ಪಡೆಯುತ್ತಾರೆ. ಒಮ್ಮೆ ಕಲಿತ ಸೈಕಲ್ ಅಥವಾ ಈಜಿನ ಹಾಗೆ. ದೇಹಕ್ಕೆ ಅದು ಒಗ್ಗಿ ಯಾವಾಗ ಬೇಕಾದರೂ ಅದು ಜ್ಞಾಪಿಸಿಕೊಳ್ಳಬಲ್ಲದು.

ಆದರೆ ಪ್ರಕೃತಿಯ ವೈಚಿತ್ರ ಅಥವಾ ರಹಸ್ಯವೆಂದರೆ ವಿಚಾರಗಳ ಮರುಪೂರಣ ವ್ಯವಸ್ಥೆ ಕೆಲವರಲ್ಲಿ ಅವ್ಯವಸ್ಥೆಯಿಂದ ಕೂಡಿರುತ್ತದೆ. ಇದನ್ನು ಮರೆವು ಎನ್ನುತ್ತಾರೆ. ಅವರ ಜ್ಞಾಪಕ ಶಕ್ತಿ ಸರಾಸರಿ ಮಟ್ಟಕ್ಕಿಂತ ತುಸು ಕಡಿಮೆ ಇರುತ್ತದೆ. ಕೆಲವರಲ್ಲಿ ಮರೆವು ರೋಗವೇ ಆಗಿರುತ್ತದೆ.

ದೈನಂದಿನ ಹಲವಾರು ವಿಚಾರಗಳಲ್ಲಿ ಮರೆವು ಶಾಪವೇ. ಇದನ್ನು ಎಲ್ಲರೂ ಅನುಭವಿಸಿಯೇ ಇರುತ್ತಾರೆ. ಚೆನ್ನಾಗಿ ಓದಿದ ವಿಚಾರಗಳು ಪರೀಕ್ಷೆಯಲ್ಲಿ ನೆನಪಿಗೆ ಬರದೇ ಮರೆವು ಉಂಟಾಗಿ ನಪಾಸಾಗಿರುತ್ತೇವೆ. ಮನೆಗೆ ಮುಖ್ಯವಾದ ವಸ್ತುಗಳನ್ನು ಕೊಳ್ಳುವಲ್ಲಿ, ನಮ್ಮ ಬೆಲೆಬಾಳುವ ವಸ್ತುಗಳನ್ನು ಎಲ್ಲೆಂದರಲ್ಲಿ ಬಿಟ್ಟು ಕಳೆದುಕೊಳ್ಳುವಲ್ಲಿ. ಹತ್ತಿರದವರೇ ಆದ ಹಲವರ ಹೆಸರೇ ಮರೆಯುವಲ್ಲಿ, ಮುಖ್ಯವಾದ ದಿನಾಂಕಗಳು, ಬಾಸ್ ಹೇಳಿದ ಕೆಲಸ, ಪ್ರೀತಿ ಪಾತ್ರರಿಗೆ ಒಯ್ಯಬೇಕಾದ ತಿನಿಸು, ಅದಲ್ಲದೆ ಆಪರೇಷನ್ ಮಾಡಿ ಕತ್ತರಿಯನ್ನು ರೋಗಿಯ ಹೊಟ್ಟೆಯೊಳಗೆ ಮರೆತು ಸೃಷ್ಟಿಯಾದ ಅವಘಡಗಳಿಗೆ ಲೆಕ್ಕವೇ ಇಲ್ಲ. ಒಟ್ಟಿಗೆ ಮರೆವು ಹಲವಾರು ಸಮಸ್ಯೆಗಳನ್ನು ತಂದಿಡುತ್ತದೆ. ಶಾಪವಾಗಿ ಕಾಡುತ್ತದೆ. ಆಗ ನಮ್ಮ ಅವಸ್ಥೆ ಯಾವುದೇ ಅಲ್ಜೀಮರ್ ರೋಗದಿಂದ ಬಳಲುವ ವ್ಯಕ್ತಿಗಿಂತಲೂ ಕಡಿಮೆ ಇರುವುದಿಲ್ಲ.

ಆದರೆ ಇದು ಮರೆವಿನ ಬಗ್ಗೆ ನಮ್ಮ ದಿನನಿತ್ಯದ ಅಗತ್ಯಗಳ ದೃಷ್ಟಿಯಿಂದ ನೋಡಿದ ಬರಿಯ ಪಾರ್ಶ್ವ ನೋಟವಷ್ಟೇ. ಆದರೆ ಸೂಕ್ಷವಾಗಿ ಅವಲೋಕಿಸಿದರೆ ಮರೆವಿನ ಮೂಲಕ ಪ್ರಕೃತಿಯು ನಮ್ಮ ಮೇಲೆ ಎಸಗಿರುವ ಉಪಕಾರವೂ ಹಲವು. ಸಮಯವು ನಿಧಾನವಾಗಿ ಎಲ್ಲವನ್ನೂ ಮರೆಯುವಂತೆ ಮಾಡುತ್ತದೆ. ಪ್ರೀತಿ ಪಾತ್ರರ ಸಾವು ದಿನಗಳ ಕಾಲ ಕಾಡಿದರೂ ಕ್ರಮೇಣ ಅದರ ಗಾಯ ಮಾಯುತ್ತದೆ. ಅವರ ಅಗಲಿಕೆಯ ನೆನಪು ಮಾಸುತ್ತದೆ. ನಮ್ಮ ದೇಹವು ತಲ ತಲಾಂತರದ ನಮ್ಮ ಹಿರಿಯರ ಬಳುವಳಿ. ನಮ್ಮ ಮುಖದ ಹೋಲಿಕೆ ಪ್ರಾಯಶಃ ನಮ್ಮ ಮುತ್ತಾತನದ್ದಾಗಿರಬಹುದು. ನಮ್ಮ ಚೂಪು ಮೂಗು ಮೂರು ತಲೆಮಾರಿನ ಹಿಂದಿನ ನಮ್ಮ ಅಜ್ಜಿಯದ್ದಾಗಿರಬಹುದು. ದೇಹಕ್ಕೆ ನೆನಪು ಜ್ಞಾಪಕ ಪ್ರಕೃತಿಯೇ ನೀಡಿದೆ. ಆದರೆ ಜಾಣ್ಮೆಯಾಗಿ ಮನಸ್ಸಿನಲ್ಲಿ ವ್ಯಕ್ತಿಗತ ನೆನಪುಗಳನ್ನು ಮಾತ್ರ ಇಟ್ಟಿದೆ. ನಮ್ಮ ಬುದ್ಧಿಗೆ ಮೂರು ತಲೆಮಾರಿನ ಹಿಂದಿನ ಘಟನೆಗಳು ದಾಖಲಾಗಿ ನೆನಪು ಬರುವುದಿಲ್ಲ. ಪ್ರಕೃತಿಯು ಅದನ್ನು ಸಂಗ್ರಹಿಸಿದರೂ ಜಾಣ್ಮೆಯಿಂದ ಮರೆಸಿದೆ. ಇಲ್ಲದಿದ್ದರೆ ಕೆಲವು ವರುಷಗಳ ಹಿಂದಿನ ಘಟನೆಗೆ ಕೊರಗುವ ನಾವು ಜನ್ಮಾಂತರಗಳ ವಿಚಾರವನ್ನು ಭರಿಸಿದರೆ ಹುಚ್ಚರಾಗಿರುತ್ತಿದ್ದೆವು. ಅಷ್ಟರ ಮಟ್ಟಿಗೆ ಪ್ರಕೃತಿ ಮರೆವನ್ನು ವರವಾಗಿಯೇ ನೀಡಿದೆ.

ಮರೆಗುಳಿತನ ಒಂದು ತೆರನಾದ ಸಮಸ್ಯೆ, ಒಪ್ಪಬಹುದು ಆದರೆ ಮರೆವು ಅನ್ನುವ ಪ್ರಕ್ರಿಯೆ ಇಲ್ಲದಿದ್ದರೆ ಜೀವನದಲ್ಲಿ ನಾವಿನ್ಯತೆಯೇ ಇಲ್ಲವಾಗುತ್ತದೆ . ಎಂದೋ ಮಾಡಿದ ಸಣ್ಣ ತಪ್ಪನ್ನು ಮರೆಯದ ನಮಗೆ ಕ್ಷಮೆ ಸಾಧ್ಯವಾಗುವುದಿಲ್ಲ. ಅವಮಾನಗಳು ಮರೆಯದೆ ಹೊಸ ಬಾಂಧವ್ಯ ಮೂಡುವುದಿಲ್ಲ.

ಮನಸ್ಸು ಕ್ಷೋಭೆಗೊಂಡರೆ ಚಿತ್ತದ ಪರದೆ ಗೋಜಲಾಗುತ್ತದೆ. ಇದರಿಂದ ವಿಚಾರಗಳ ಜ್ಞಾಪಿಸಿಕೊಳ್ಳುವ ಸಾಮರ್ಥ್ಯ ಕಡಿಮೆಯಾಗುತ್ತದೆ. ಮನಸ್ಸು ಶಾಂತವಾದಾಗ ನಮ್ಮ ಸಾಮರ್ಥ್ಯ ಅಧಿಕವಾಗುತ್ತದೆ, ವಿಚಾರಗಳ ಮಥನ ಮರುಪೂರಣ ವ್ಯವಸ್ಥೆ ಚೆನ್ನಾಗಿ ಕೆಲಸ ಮಾಡುತ್ತದೆ. ಮರೆವು ದೂರವಾಗುತ್ತದೆ. ಹಲವು ಸಾಧಕರು ಧ್ಯಾನ, ಶಾಂತ ವಾತಾವರಣವನ್ನು ಸೃಷ್ಟಿಸಿಕೊಳ್ಳುವ ಕಲೆ ಸಿದ್ದಿಸಿಕೊಂಡಿರುತ್ತಾರೆ. ಅವರಲ್ಲಿ ಸಹಜವಾಗಿಯೇ ಮರೆವು ಕಮ್ಮಿ. ಒಮ್ಮೆ ನೋಡಿದ್ದರೂ ನಮ್ಮ ಗುರುತು ಹೇಳಿ ಹೆಸರು ಹೇಳುವಷ್ಟು ನೆನಪು ಅವರದಾಗಿರುತ್ತದೆ.

ಮರೆವು ವರವೇ! ಮರೆಗುಳಿತನ ಶಾಪವಾಗಿರಬಹುದು ಆದರೆ ಅದಕ್ಕೆ ಪರಿಹಾರವಿದೆ. ಪ್ರಕೃತಿ ಸಹಜವಾದ ಮರೆವನ್ನು ದೂರದೇ ಅದನ್ನು ವರವಾಗಿ ಬಳಸಿಕೊಳ್ಳುವುದರಲ್ಲಿ ಮಾನವರಾದ ನಮ್ಮ ಜಾಣ್ಮೆ ಅಡಗಿದೆ.

ಹನಿಗವನ

ಸಿಹಿಜೀವಿ ವೆಂಕಟೇಶ್ವರ

ರಾಯಲ್ ಇನ್ ಫೀಲ್ಡ್...

ಬಹುತೇಕ ಯುವಕರು
ಹಾತೊರೆಯುವರು
ಪಡೆಯಲು ರಾಯಲ್ ಎನ್
ಫೀಲ್ಡ್।
ಯಾರಿಗೂ ಇಷ್ಟ ಇಲ್ಲ
ತಮ್ಮ ಹೊಲದಲ್ಲಿ
ದುಡಿಯುತ್ತಾ ಆಗಲು
ರಾಯಲ್ ಇನ್ ಫೀಲ್ಡ್ ॥

ಮರ...

ನೆಟ್ಟು ಬಿಡು
ಕನಿಷ್ಠಪಕ್ಷ ಒಂದು ಮರ।
ಪರಿಸರ ಸಂರಕ್ಷಣಾ
ಕಾರ್ಯಕ್ರಮದಲ್ಲಿ
ನೀನಾಗುವೆ ಅಮರ॥

ದೀಪ...

ಓ ಗುರುವೆ ತೀಡಿದಿರಿ
ಕಗ್ಗಲ್ಲಿಗೊಂದು ರೂಪ।
ತಮದಲ್ಲಿದ್ದವನಿಗೆ ದಾರಿ
ತೋರಿದಿರಿ
ಹಿಡಿದು ದೀಪ॥



ನನಗೆ ತುಂಬಾ ಹೆಮ್ಮೆ ಇದೆ. ಈ ಪಂದ್ಯ ದೇಶಕ್ಕಾಗಿ ನನ್ನ ಕೊನೆಯ ಸ್ಪರ್ಧೆಯಾಗಿದೆ. ನಾನು ಟೆನಿಸ್ ಕೋರ್ಟ್‌ನಿಂದ ನಿರ್ಗಮಿಸಲಿದ್ದೇನೆ ನನಗೆ ಸಹಕಾರ ನೀಡಿದ ಪ್ರತಿಯೊಬ್ಬರಿಗೂ ಧನ್ಯವಾದ.
-ರೋಹನ್ ಬೋಪಣ್ಣ, ಟೆನಿಸ್ ಆಟಗಾರ

ವಿಶ್ವವಾಣಿ
vishwavani.news
30.07.2024
ಮಂಗಳವಾರ

ಪದಕ ಪಟ್ಟಿ

	ಚಿನ್ನ	ಬೆಳ್ಳಿ	ಕಂಚು	ಒಟ್ಟು
ಭಾರತ	0	0	1	1
ದಕ್ಷಿಣ ಕೊರಿಯಾ	5	3	1	9
ಜಪಾನ್	5	2	4	11
ಚೀನಾ	5	2	2	9
ಫ್ರಾನ್ಸ್	4	7	3	14
ಆಸ್ಟ್ರೇಲಿಯಾ	4	3	0	7
ಅಮೆರಿಕ	3	7	4	14
ಗ್ರೇಟ್ ಬ್ರಿಟನ್	2	4	3	9
ಜರ್ಮನಿ	2	0	0	2
ಇಟಲಿ	1	2	3	6

ಮೈಕ್ರೋ ಮಾಹಿತಿ

ಪದಕ ಕಚ್ಚುವುದೇಕೆ?

ಪರಿಶುದ್ಧತೆಗಾಗಿ



ಚಿನ್ನದ ಪರಿಶುದ್ಧತೆಯನ್ನು ಪರಿಶೀಲಿಸಲು ವ್ಯಾಪಾರಿಗಳು ಚಿನ್ನದ ನಾಣ್ಯಗಳನ್ನು ಕಚ್ಚಿ ನೋಡುತ್ತಿದ್ದರು ಎಂದು ಇತಿಹಾಸ ಹೇಳುತ್ತದೆ.

ಚಿನ್ನ ಮೃದು ಲೋಹ

ಹೀಗಾಗಿ ಒಲಿಂಪಿಕ್ಸ್‌ನಲ್ಲಿ ಪದಕ ವಿಜೇತ ಕ್ರೀಡಾಪಟುಗಳು ತಮಗೆ ಸಿಗುವ ಚಿನ್ನದ ಪದಕವನ್ನು ಪರಿಶೀಲಿಸಲು ಹೀಗೆ ಮಾಡುತ್ತಿದ್ದರು.

ಒಲಿಂಪಿಕ್ ಚಾಂಪಿಯನ್‌ಗಳು ತಮ್ಮ ಬಾಯಿಯಲ್ಲಿ ಚಿನ್ನದ ಪದಕವನ್ನು ಕಚ್ಚುವುದು ಈಗ ಶುದ್ಧತೆಯನ್ನು ಪರಿಶೀಲಿಸುವುದಕ್ಕಾಗಿ ಅಲ್ಲ. 1912ರಲ್ಲಿ ಶುದ್ಧ ಚಿನ್ನದ ಪದಕಗಳನ್ನು ನೀಡುವುದನ್ನು ನಿಲ್ಲಿಸಿತ್ತು. ಆದರೆ ಅದರ ಅಭ್ಯಾಸ ಕ್ರಮ ಇನ್ನೂ ಮುಂದುವರಿದಿದೆ.

ಫೋಟೋ ಟ್ರೆಂಡ್‌ಗಾಗಿ ಈಗ ಪದಕ ಕಚ್ಚುತ್ತಾರೆ. ಪತ್ರಕರ್ತರೂ ಇಂತಹ ಫೋಟೋಗಳಿಗಾಗಿ ಡಿಮ್ಯಾಂಡ್ ಇಡುವುದರಿಂದ ಅದು ಈಗಲೂ ಮುಂದುವರಿದಿದೆ.

ಸಮಾಚಾರ ಸಣ್ಣದಲ್ಲ

ಪ್ಯಾರಿಸ್‌ನಲ್ಲಿ ದ್ರಾವಿಡ್

ಪ್ಯಾರಿಸ್: ಭಾರತದ ಕ್ರಿಕೆಟ್ ಮಾಜಿ ಕೋಚ್ ರಾಹುಲ್ ದ್ರಾವಿಡ್ ಕ್ರಿಕೆಟ್ ಕಾರ್ಯಗಳಿಂದ ಮುಕ್ತರಾಗಿದ್ದು, ಒಲಿಂಪಿಕ್ ವೀಕ್ಷಣೆಗೆ ಪ್ಯಾರಿಸ್‌ಗೆ ತೆರಳಿದ್ದಾರೆ. ಅವರು ಭಾರತದ ಪುರುಷರ ಡಬಲ್ಸ್ ಜೋಡಿ ರೋಹನ್ ಬೋಪಣ್ಣ ಮತ್ತು ಎನ್ ಶ್ರೀರಾಮ್ ಬಾಲಾಜಿ ಅವರ ಪಂದ್ಯವನ್ನು ವೀಕ್ಷಿಸಿದ್ದಾರೆ. ಸೋಮವಾರದಂದು ಬಾಲಾಜಿ ಮತ್ತು ಬೋಪಣ್ಣ ಅವರು ರೋಲ್ಯಾಂಡ್ -ಗ್ಯಾರೋಸ್ - ಕೋರ್ಟ್14 ರಲ್ಲಿ ಫ್ರೆಂಚ್ ಜೋಡಿ ಗೇಲ್ ಮೊನ್ಫಿಲ್ಸ್ ಮತ್ತು ಎಡ್ವರ್ಡ್ ರೋಜರ್ ವಾಸೆಲಿನ್ ವಿರುದ್ಧ ಸೆಣಸಿದ್ದಾರೆ. ಈ ಪಂದ್ಯವನ್ನು ರಾಹುಲ್ ದ್ರಾವಿಡ್ ವೀಕ್ಷಿಸಿದ್ದಾರೆ. ಅಲ್ಲದೆ, ದ್ರಾವಿಡ್ ಪ್ಯಾರಿಸ್‌ನಲ್ಲಿರುವ ಇಂಡಿಯಾ ಹೌಸ್‌ಗೆ ಭೇಟಿ ನೀಡಿದ್ದಾರೆ. ಇದು ಭಾರತೀಯ ಅಭಿಮಾನಿಗಳು ಮತ್ತು ಕ್ರೀಡಾಪಟುಗಳಿಗೆ ಫ್ರೆಂಚ್ ರಾಜಧಾನಿಯಲ್ಲಿ ತವರು ದೇಶದ ಅನುಭವ ಪಡೆಯಲು ಒಂದು ತಾಣವಾಗಿದೆ. ತಮ್ಮ ಭೇಟಿಯ ಸಮಯದಲ್ಲಿ, ಮಾಜಿ ಕ್ರಿಕೆಟಿಗ ಕೇಂದ್ರದ ವೈಭವಕ್ಕೆ ಸಾಕ್ಷಿಯಾದರು.

ಇಂದು ಕಣದಲ್ಲಿ

- ಬಿಲ್ಲುಗಾರಿಕೆ: ಪುರುಷರ, ಮಹಿಳೆಯರ ವೈಯಕ್ತಿಕ ಎಲಿಮಿನೇಷನ್
- ಬ್ಯಾಡ್ಮಿಂಟನ್: ಪುರುಷರ, ಮಹಿಳೆಯರ ಸಿಂಗಲ್ಸ್, ಪುರುಷರ ಮಹಿಳೆಯರ ಡಬಲ್ಸ್
- ಶೂಟಿಂಗ್: ಪುರುಷರ ಟ್ರ್ಯಾಪ್ ಅರ್ಹತೆ ಮಹಿಳೆಯರ ಟ್ರ್ಯಾಪ್ ಅರ್ಹತೆ ಮಿಶ್ರ ತಂಡ 10 ಮೀಟರ್ ಏರ್ ಪಿಸ್ತೂಲ್ ಕಂಚಿನ ಪದಕ ಪಂದ್ಯ
- ಟೇಬಲ್ ಟೆನಿಸ್: ಪುರುಷರ, ಮಹಿಳೆಯರ ಸಿಂಗಲ್ಸ್ ಸುತ್ತು
- ರೋಯಿಂಗ್: ಪುರುಷರ ಸಿಂಗಲ್ ಸ್ಕಲ್ಸ್ ಕ್ವಾರ್ಟರ್
- ಬಾಕ್ಸಿಂಗ್: ಪುರುಷರ 51 ಕೆಜಿ, ಮಹಿಳೆಯರ 54, 57 ಕೆಜಿ

ಸಾತ್ವಿಕ್-ಚಿರಾಗ್ ಕ್ವಾ.ಫೈನಲ್‌ಗೆ

ಲಕ್ಷ್ಯ ಸೇನ್‌ಗೆ ಗೆಲುವು ಭಾರತಕ್ಕೆ ಮಿಶ್ರಫಲ

ಪ್ಯಾರಿಸ್: ಭಾರತದ ಜೋಡಿಗಳಾದ ಚಿರಾಗ್ ಶೆಟ್ಟಿ ಮತ್ತು ಸಾತ್ವಿಕ್ ಸಾಯಿರಾಜ್ ರಂಕಿರೆಡ್ಡಿ ಅವರು ಪುರುಷರ ಡಬಲ್ಸ್ ಕ್ವಾರ್ಟರ್ ಫೈನಲ್‌ಗೆ ಅರ್ಹತೆ ಪಡೆದಿದ್ದಾರೆ. ಸೋಮವಾರ ನಡೆಯಬೇಕಿದ್ದ ಪಂದ್ಯದಲ್ಲಿ ಅವರು ಜರ್ಮನಿಯ ಮಾರ್ಕ್ ಲ್ಯಾಮ್ಸ್‌ಫಸ್ ಹಾಗೂ ಮಾರ್ವಿನ್ ಸೀಡೆಲ್ ಅವರನ್ನು ಎದುರಿಸಬೇಕಿತ್ತು. ಈ ಪಂದ್ಯ ರದ್ದುಗೊಂಡಿದ್ದು, ಭಾರತದ ಜೋಡಿಗೆ ಕ್ವಾರ್ಟರ್ ಫೈನಲ್ ಟಿಕೆಟ್ ದೊರೆತಿದೆ. ಜರ್ಮನಿಯ ಮಾರ್ವಿನ್ ಸೀಡೆಲ್ ಮತ್ತು ಮಾರ್ಕ್ ಲ್ಯಾಮ್ಸ್ಫಸ್ ವಿರುದ್ಧದ ಅವರು ಎರಡನೇ ಗುಂಪಿನ ಸಿ ಪಂದ್ಯವನ್ನು ಆಡಬೇಕಿತ್ತು. ಆದರೆ ಮಾರ್ಕ್ ಮೊಣಕಾಲಿನ ಗಾಯದ ಕಾರಣದಿಂದ ಈ ಪಂದ್ಯ ರದ್ದುಗೊಳಿಸ ಲಾಗಿದೆ. ಬ್ಯಾಡ್ಮಿಂಟನ್ ವರ್ಲ್ಡ್ ಫೆಡರೇಶನ್ ಹೇಳಿಕೆಯ ಪ್ರಕಾರ, ಮಾರ್ಕ್ ಲ್ಯಾಮ್ಸ್‌ಫಸ್ ಅವರು ಮೊಣಕಾಲಿನ ಗಾಯದಿಂದಾಗಿ ಒಲಿಂಪಿಕ್ ಗೇಮ್ಸ್ ಪ್ಯಾರಿಸ್ ಬ್ಯಾಡ್ಮಿಂಟನ್ ಸ್ಪರ್ಧೆಯಿಂದ ಹಿಂದೆ ಸರಿದಿದ್ದಾರೆ. ಸಾತ್ವಿಕ್ ಸಾಯಿರಾಜ್ ಮತ್ತು ಚಿರಾಗ್ ಜೋಡಿಯು ಮುಂದೆ ಮಂಗಳವಾರದ ಪಂದ್ಯದಲ್ಲಿ ಇಂಡೋನೇಷ್ಯಾದ ಫಜರ್ ಅಲ್ಫಿಯಾನ್ ಮತ್ತು ಮುಹಮ್ಮದ್ ರಿಯಾನ್ ಅರ್ಡಿಯಾಂಟೊ ಅವರ ವಿರುದ್ಧ ಸೆಣಸಲಿದ್ದಾರೆ.

ಅಗ್ರ ಎರಡರಲ್ಲಿ ಭಾರತದ ಜೋಡಿ

ವಿಶ್ವದ ನಂ. 3 ಜೋಡಿ ಸಾತ್ವಿಕ್ ಹಾಗೂ ಚಿರಾಗ್ ಜೋಡಿಯು ಅಭಿಯಾನವನ್ನು 40ನೇ ಶ್ರೇಯಾಂಕದ ಲುಕಾಸ್ ಕಾರ್ವಿ ಮತ್ತು ರೊನಾನ್ ಲ್ಯಾಬರ್ ಅವರೊಂದಿಗೆ ಗೆಲ್ಲುವ ಮೂಲಕ ಪ್ರಾರಂಭಿಸಿದರು. ಕಾರ್ವಿ ಮತ್ತು ಲ್ಯಾಬರ್ ಮುಹಮ್ಮದ್ ರಿಯಾನ್ ಅರ್ಡಿಯಾಂಟೊ ಮತ್ತು ಫಜರ್ ಅಲ್ಫಿಯಾನ್ ವಿರುದ್ಧ ಸೋಲನುಭವಿಸಿದ್ದಾರೆ. ಈ ಸೋಲಿನೊಂದಿಗೆ ಫ್ರೆಂಚ್ ಜೋಡಿಯು ಹೊರಬಿದ್ದಿದೆ. ಪರಿಣಾಮವಾಗಿ, ಸಿ ಗುಂಪಿನ ಅಗ್ರ ಎರಡು ಸ್ಥಾನಗಳನ್ನು ಚಿರಾಗ್-ಸಾತ್ವಿಕ್ ಮತ್ತು ಅರ್ಡಿಯಾಂಟೊ-ಅಲ್ಫಿಯಾನ್ ಗಳಿಸಿದ್ದು, ಕ್ವಾರ್ಟರ್‌ಫೈನಲ್‌ಗೆ ಲಗ್ಗೆ ಇಟ್ಟಿದ್ದು, ಈ ಸಾಧನೆ ಮಾಡಿದ ಭಾರತದ ಮೊದಲ ಜೋಡಿ ಎನ್ನಿಸಿದ್ದಾರೆ. ಭಾರತ ಮತ್ತು ಇಂಡೋನೇಷ್ಯಾ ಜೋಡಿಗಳು ಮಂಗಳವಾರ ಮುಖಾಮುಖಿಯಾಗಲಿವೆ.

ಲಕ್ಷ್ಯ ಸೇನ್‌ಗೆ ಭಾರೀ ಗೆಲುವು: ಭಾರತೀಯ ಬ್ಯಾಡ್ಮಿಂಟನ್ ಆಟಗಾರ ಲಕ್ಷ್ಯ ಸೇನ್ ಅವರು ಮೊದಲ ಪಂದ್ಯದ ಫಲಿತಾಂಶ ರದ್ದುಗೊಂಡ ನಂತರ ಎರಡನೇ ಪಂದ್ಯದಲ್ಲಿ ಭರ್ಜರಿ ಗೆಲುವು ಸಾಧಿಸಿದ್ದಾರೆ. ವರ್ಷದ ಸೇನ್ ಬೆಲ್ಜಿಯಂನ ಜೂಲಿಯನ್ ಕರಾಗ್ಗಿ ಅವರನ್ನು ನೇರ ಗೇಮ್‌ಗಳಲ್ಲಿ ಸೋಲಿಸಿದರು. ಸೋಮವಾರ, ನಡೆದ ಪಂದ್ಯದಲ್ಲಿ ಲಕ್ಷ್ಯ ಸೇನ್ ವಿಶ್ವ ನಂ. 52, 21-19, 21-14 ರಿಂದ ಗೆಲುವು ಸಾಧಿಸಿದ್ದಾರೆ. ಆ ಮೂಲಕ ಮುನ್ನಡೆ ಸಾಧಿಸಿದ್ದಾರೆ.

ಫಲಿತಾಂಶ ರದ್ದು: ಬ್ಯಾಡ್ಮಿಂಟನ್ ಪುರುಷರ ಸಿಂಗಲ್ಸ್ ಗ್ರೂಪ್ ಎಲ್ ಪಂದ್ಯದಲ್ಲಿ ಗ್ವಾಟೆಮಾಲಾದ ಕೆವಿನ್ ಕಾರ್ಡನ್ ವಿರುದ್ಧ ಭಾರತದ ಷಟ್ಲರ್ ಲಕ್ಷ್ಯ ಸೇನ್ ಅವರು ಭರ್ಜರಿ ಗೆಲುವು ಸಾಧಿಸಿದ್ದಾರೆ. ಆದರೆ ಈ ಗೆಲುವಿನ ನಂತರವೂ ಭಾರತಕ್ಕೆ ಆಘಾತ ಉಂಟಾಗಿದ್ದು, ಲಕ್ಷ್ಯ ಸೇನ್ ಅವರು ಗೆದ್ದ ಫಲಿತಾಂಶವನ್ನು ಒಲಿಂಪಿಕ್ಸ್ ಸಂಸ್ಥೆ ಅಳಿಸಿ ಹಾಕಿದೆ. ಎಡ ಮೊಣಕೈ ಗಾಯದ ಕಾರಣ ಗ್ವಾಟೆಮಾಲಾದ ಕೆವಿನ್ ಕಾರ್ಡನ್ ಸ್ಪರ್ಧೆಯಿಂದ ಹಿಂದೆ ಸರಿದ ಕಾರಣದಿಂದ ಅವರ ವಿರುದ್ಧದ ಲಕ್ಷ್ಯ ಸೇನ್ ಗೆಲುವನ್ನು ಅಳಿಸಲಾಗಿದೆ. ಒಲಿಂಪಿಕ್ಸ್ ಡಾಟ್ ಕಾಮ್ ಪ್ರಕಾರ, ಕಾರ್ಡನ್ ತನ್ನ ಮುಂಬರುವ ಪ್ಯಾರಿಸ್ ಒಲಿಂಪಿಕ್ಸ್ ನಿಂದ ಹಿಂದೆ ಸರಿದಿದ್ದು, ಇದಕ್ಕಾಗಿ ಇಂಡೋನೇಷ್ಯಾದ ಜೊನಾಟನ್ ಕ್ರಿಸ್ಟಿ ಮತ್ತು ಬೆಲ್ಜಿಯಂನ ಜೂಲಿಯನ್ ಕರಾಗ್ಗಿ ವಿರುದ್ಧ ಮುಂಬರುವ ಎಲ್ ಗುಂಪಿನ ಪಂದ್ಯಗಳನ್ನು ಆಡಲಾಗುವುದಿಲ್ಲ. ಗುಂಪು ಹಂತದ ಆಟಕ್ಕಾಗಿ ಬಿಡಬ್ಲ್ಯುಎಫ್ ಸಾಮಾನ್ಯ ಸ್ಪರ್ಧೆಯ ನಿಯಮಾವಳಿಗಳ ಪ್ರಕಾರ, ಲಕ್ಷ್ಯ ಸೇನ್ ಮತ್ತು ಕೆವಿನ್ ಕಾರ್ಡನ್ ನಡುವಿನ ಪಂದ್ಯದ ಫಲಿತಾಂಶವನ್ನು ಅಳಿಸಲಾಗಿದೆ

ಇತಿಹಾಸ ನಿರ್ಮಿಸಿದ ಜೋಡಿ

ಭಾರತದ ಪುರುಷರ ಬ್ಯಾಡ್ಮಿಂಟನ್ ಜೋಡಿ ಸಾತ್ವಿಕ್ ಸಾಯಿರಾಜ್ ರಾಂಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಕ್ವಾರ್ಟರ್ ಫೈನಲ್ಸ್ ತಲುಪಿದ್ದಾರೆ. ಈ ಮೂಲಕ ಅವರು ಒಲಿಂಪಿಕ್ಸ್‌ನಲ್ಲಿ ಎಂಟರ ಘಟ್ಟಕ್ಕೇರಿದ ಮೊದಲ ಭಾರತೀಯ ಜೋಡಿ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಗುಂಪು ಹಂತದಲ್ಲಿ ಇವರಿಬ್ಬರ ಪ್ರಭಾವಶಾಲಿ ಪ್ರದರ್ಶನವು ಪ್ಯಾರಿಸ್ ಒಲಿಂಪಿಕ್ಸ್‌ನ ಕೊನೆಯ ಎಂಟರಲ್ಲಿ ತಮ್ಮ ಸ್ಥಾನ ಭದ್ರಪಡಿಸಿಕೊಂಡಿದ್ದು, ಇತಿಹಾಸ ನಿರ್ಮಿಸಿದೆ.

ಕಂಚಿನ ಪದಕ ಸುತ್ತಿಗೆ ತಲುಪಿದ ಮನು, ಸರಬ್‌ಜೋತ್

ಮತ್ತೊಂದು ಕಂಚಿನತ್ತ ಭಾರತ

ಪ್ಯಾರಿಸ್: ಒಲಿಂಪಿಕ್ಸ್‌ನಲ್ಲಿ ಈ ಬಾರಿ ಭಾರತದ ಶೂಟರ್‌ಗಳು ಭರ್ಜರಿ ಪ್ರದರ್ಶನ ತೋರುತ್ತಿದ್ದು, ಈಗಾಗಲೇ ಮನು ಭಾಕರ್ ಕಂಚಿನ ಪದಕವನ್ನು ಗೆದ್ದಿದ್ದಾರೆ. ಈ ವಿಭಾಗದಲ್ಲಿ ಕಂಚು ಗೆದ್ದ ಭಾರತದ ಮೊದಲ ಮಹಿಳೆ ಎನ್ನಿಸಿದ್ದಾರೆ. ಇದೀಗ ಅವರು ಮತ್ತೊಂದು ಪದಕದ ಮೇಲೆ ಕಣ್ಣಿಟ್ಟಿದ್ದಾರೆ. 10 ಮೀಟರ್ ಏರ್ ಪಿಸ್ತೂಲ್ ಮಿಶ್ರ ತಂಡದ ಅರ್ಹತಾ ಸುತ್ತಿನಲ್ಲಿ ಭಾರತದ ಮನು ಭಾಕರ್ ಮತ್ತು ಸರಬ್‌ಜೋತ್ ಸಿಂಗ್ ಜೋಡಿ 3ನೇ ಸ್ಥಾನ ಪಡೆಯುವ ಮೂಲಕ ಕಂಚಿನ ಪದಕ ಸುತ್ತಿಗೆ ಅರ್ಹತೆ ಪಡೆದಿದ್ದಾರೆ.

ಸಿಂಗಲ್ಸ್ ಸೋಲಿನ ನಂತರ ಮಿಂಚಿದ ಸರಬ್‌ಜೋತ್

ಭಾಕರ್ ಹಾಗೂ ಸಿಂಗ್ 20 ಖಚಿತ ಶಾಟ್‌ಗಳ ಮೂಲಕ 580 ಅಂಕಗಳನ್ನು ಗಳಿಸಿ 10 ಮೀಟರ್ ಏರ್ ಪಿಸ್ತೂಲ್ ಮಿಶ್ರತಂಡದ ಸ್ಪರ್ಧೆಯಲ್ಲಿ ಕಂಚಿನ ಪದಕದ ಸುತ್ತಿಗೆ ಪ್ರವೇಶ ಪಡೆದಿದ್ದಾರೆ. ಮಂಗಳವಾರ ಅವರು ಕೊರಿಯಾದ ಕ್ಯುಯೆ ಲಿ ಹಾಗೂ ವೋನ್ಹೋ ಲೀ ಜತೆ ಸೆಣಸಾಡಲಿದ್ದು, ಈ ಪಂದ್ಯದಲ್ಲಿ ಗೆಲುವು ಸಾಧಿಸಿದರೆ ಮನು ಭಾಕರ್ ಹಾಗೂ ಸರಬ್ಜೋತ್ ಸಿಂಗ್ ಜೋಡಿ ಭಾರತಕ್ಕೆ ಮತ್ತೊಂದು ಪದಕ ತಂದು ಕೊಡಲಿದ್ದಾರೆ.

ಒಟ್ಟು 20 ಶೂಟ್‌ಗಳು

ಮಿಶ್ರ ತಂಡದ 10 ಮೀಟರ್ ಏರ್ ಪಿಸ್ತೂಲ್ ಸ್ಪರ್ಧೆಯ ಅರ್ಹತಾ ಸುತ್ತಿನಲ್ಲಿ, ತಂಡದ ಪ್ರತಿಯೊಬ್ಬ ಸದಸ್ಯರು 30 ನಿಮಿಷಗಳ ಅವಧಿಯಲ್ಲಿ ಒಟ್ಟು 30 ಹೊಡೆತಗಳನ್ನು ಹೊಡೆದರು. ಪ್ರತಿ ಸರಣಿಯ ಹೊಡೆತಗಳಲ್ಲಿ ಪ್ರತಿ ಆಟ ಗಾರನಿಗೆ 10 ಹೊಡೆತಗಳು ಹಾಗೂ ಇಬ್ಬರ ತಂಡಕ್ಕೆ ಒಟ್ಟು 20 ಶೂಟ್ ಅವಕಾಶವಿರುತ್ತದೆ. ಅದರಲ್ಲು ಉತ್ತಮ ಪ್ರದರ್ಶನ ನೀಡಿರುವ ಅಗ್ರ ನಾಲ್ಕು ತಂಡಗಳು ಪದಕ ಸುತ್ತಿಗೆ ಅರ್ಹತೆ ಪಡೆದಿವೆ. ಅಗ್ರ ಎರಡು ತಂಡಗಳು ಚಿನ್ನಕ್ಕಾಗಿ ಆಡಿದರೆ, ಮೂರು ಮತ್ತು ನಾಲ್ಕನೇ ಸ್ಥಾನ ಪಡೆದ ತಂಡಗಳು ಕಂಚಿನ ಪದಕಕ್ಕಾಗಿ ಮತ್ತೊಮ್ಮೆ ಶೂಟ್ ಮಾಡಬೇಕಾಗುತ್ತದೆ. ಮಂಗಳವಾರ ಕಂಚಿನ ಪದಕದ ಪಂದ್ಯ ನಡೆಯಲಿದೆ.

ಏಳನೇ ಸ್ಥಾನದಲ್ಲಿ ರಮಿತಾ



ಭಾರತದ ಇನ್ನೊರ್ವ ಶೂಟರ್ ರಮಿತಾ ಜಿಂದಾಲ್ ಏಳನೇ ಸ್ಥಾನಕ್ಕೆ ತೃಪ್ತಿಪಟ್ಟಿದ್ದಾರೆ. ಸೋಮವಾರ ನಡೆದ 10 ಮೀಟರ್ ಏರ್ ರೈಫಲ್ ಫೈನಲ್‌ನಲ್ಲಿ ಅವರು ನಿರಾಸೆ ಅನುಭವಿಸಿದ್ದಾರೆ. ಭಾನುವಾರ ನಡೆದಿದ್ದ ಶೂಟಿಂಗ್‌ನಲ್ಲಿ ಭರ್ಜರಿ ಪ್ರದರ್ಶನ ನೀಡುವ ಮೂಲಕ ಪದಕದ ಆಸೆ ಮೂಡಿಸಿದ್ದ ಅವರು, ಆರಂಭದಲ್ಲಿ ಭರ್ಜರಿ ಪ್ರದರ್ಶನ ತೋರುವ ಮೂಲಕ ಸ್ಪರ್ಧೆಯಲ್ಲಿದ್ದರು. ಆದರೆ 10ನೇ ಹೊಡೆತದಲ್ಲಿ 9.7 ಅಂಕದೊಂದಿಗೆ ಅವರು ಏಳನೇ ಸ್ಥಾನಕ್ಕೆ ಕುಸಿದರು. ಅಂತಿಮವಾಗಿ, ಅವರು ಫ್ರಾನ್ಸ್‌ನ ಓಸಿಯಾನ್ ಮುಲ್ಲರ್ ವಿರುದ್ಧ ಶೂಟ್-ಆಫ್ ಅನ್ನು ಕಳೆದುಕೊಂಡರು. ರಮಿತಾ 10.5 ದಾಖಲಿಸಿದರೆ, ಮುಲ್ಲರ್ 10.8 ಹೊಡೆದರು. ಬ್ಯಾನ್ ಹ್ಯೋಜಿನ್ ಅವರು ಚಿನ್ನದ ಪದಕ ಗೆದ್ದರೆ, ಯುಟಿಂಗ್ 10.3 ಅಂಕ ಗಳಿಸಿ ಬೆಳ್ಳಿಗೆ ತೃಪ್ತಿಪಟ್ಟರು.

4ನೇ ಸ್ಥಾನಕ್ಕೆ ಬಬುಟಾ

ಮತ್ತೊಂದೆಡೆ ಇತರ ಶೂಟರ್‌ಗಳಿಂದ ಭಾರತಕ್ಕೆ ನಿರಾಶಾದಾಯಕ ಫಲಿತಾಂಶ ಬಂದಿದ್ದು, ಎರಡನೇ ಪದಕ ಗೆಲ್ಲುವ ಅವಕಾಶ ಕಳೆದುಕೊಂಡಿದೆ. ಕ್ರೀಡಾಕೂಟದ ಮೂರನೇ ದಿನದಾಟವಾದ ಸೋಮವಾರ ನಡೆದ ಪುರುಷರ 10 ಮೀಟರ್ ಏರ್ ರೈಫಲ್ ಫೈನಲ್‌ನಲ್ಲಿ ಭಾರತದ ಅರ್ಜುನ್ ಬಬುಟಾ ಕೇವಲ ಒಂದು ಸ್ಥಾನದಿಂದ ಕಂಚಿನ ಪದಕ ಕಳೆದುಕೊಂಡಿದ್ದಾರೆ. ಅಂತಿಮ ಸುತ್ತಿನಲ್ಲಿ ಗುರಿ ಯಿಟ್ಟು ಶೂಟ್ ಮಾಡುತ್ತಿದ್ದ ಅರ್ಜುನ್ ಅಂತಿಮ ಕ್ಷಣದಲ್ಲಿ ಎಡವಿದರು. ಆರಂಭದಿಂದಲೂ ಅಗ್ರ ಮೂರರೊಳಗೆ ಸ್ಥಾನ ಪಡೆ ದಿದ್ದ ಅರ್ಜುನ್ ಕೊನೆಯ ಕ್ಷಣದಲ್ಲಿ ಕ್ರೊವೇಷಿಯಾದ ಎದುರಾಳಿಗೆ ಕಂಚಿನ ಪದಕ ಬಿಟ್ಟುಕೊಟ್ಟರು. ಈ ವಿಭಾಗದಲ್ಲಿ ಚೀನಾದ 19 ವರ್ಷದ ಶೂಟರ್ ಶೆಂಗ್ ಲಿಹಾವೊ ಚಿನ್ನ ಗೆದ್ದರೆ, ಸ್ವೀಡನ್‌ನ ವಿಕ್ಟರ್ ಲಿಂಡ್‌ಗ್ರೆನ್ ಬೆಳ್ಳಿ ಗೆದ್ದರು. ಒಂದು ಹಂತದಲ್ಲಿ 2ನೇ ಸ್ಥಾನ ಪಡೆದು ಬೆಳ್ಳಿ ಪದಕದ ನಿರೀಕ್ಷೆಯಲ್ಲಿದ್ದ ಅರ್ಜುನ್, ಕಂಚು ಗೆಲ್ಲುವುದು ಸಾಧ್ಯವಾಗಲಿಲ್ಲ. ಕೇವಲ ಒಂದು ಸ್ಥಾನದಿಂದ ಪದಕ ವಂಚಿತರಾದರು. 208.4 ಅಂಕ ಗಳೊಂದಿಗೆ, ಬಬುಟಾ ಫೈನಲ್‌ನಲ್ಲಿ 4ನೇ ಸ್ಥಾನ ಪಡೆ ದರು. ಇದರೊಂದಿಗೆ 3ನೇ ದಿನದಾಟದಲ್ಲಿ ಭಾರತದ ಪದಕದ ನಿರೀಕ್ಷೆ ಕಮರಿದೆ.

ಮನು ಎಕ್ಸ್‌ಗೆ ಟವರ್ ಜೋಡನೆ

ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಭಾರತದ ಕಂಚಿನ ಪದಕ ವಿಜೇತ ಮನು ಭಾಕರ್ ಸೇರಿದಂತೆ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಪದಕ ವಿಜೇತರ ಎಕ್ಸ್ ಖಾತೆಯಲ್ಲಿ ಐಫೆಲ್ ಟವರ್ ಲೋಗೋ ನೀಡಲಾಗಿದೆ. ಬ್ಲೂ ಟಿಕ್ ಜತೆಗೆ ಐಫೆಲ್ ಟವರ್‌ನ ಲೋಗೋವನ್ನು ಕೂಡ ಅವರಿಗೆ ನೀಡಲಾಗಿದೆ. ಈ ಲೋಗೋದೊಂದಿಗೆ ಖಾತೆದಾರ ಪ್ಯಾರಿಸ್ 2024 ಪದಕ ವಿಜೇತರು ಎಂಬುದನ್ನು ಸೂಚಿಸುತ್ತದೆ. 1900 ಮತ್ತು 1924 ರ ನಂತರ ಮೂರನೇ ಬಾರಿಗೆ ಒಲಿಂಪಿಕ್ಸ್ ನಡೆಯುತ್ತಿರುವ ಪ್ಯಾರಿಸ್‌ನ ಅತಿದೊಡ್ಡ ಆಕರ್ಷಣೆಗಳಲ್ಲಿ ಐಫೆಲ್ ಟವರ್ ಒಂದಾಗಿದೆ.

ಟೆನಿಸ್ ಲೋಕಕ್ಕೆ ಕನ್ನಡಿಗ ಗುಡ್‌ಬೈ

ಬೋಪಣ್ಣ ನಿವೃತ್ತಿ

ದೆಹಲಿ: ಭಾರತದ ಟೆನಿಸ್ ತಾರೆ ರೋಹನ್ ಬೋಪಣ್ಣ ಟೆನಿಸ್‌ಗೆ ನಿವೃತ್ತಿ ಘೋಷಿಸಿದ್ದಾರೆ. ಪ್ಯಾರಿಸ್ ಒಲಿಂಪಿಕ್ ಡಬಲ್ಸ್‌ನಲ್ಲಿ ಬೋಪಣ್ಣ ಮೊದಲ ಸುತ್ತಿನಲ್ಲಿ ಎನ್. ಶ್ರೀರಾಮ್ ಬಾಲಾಜಿ ವಿರುದ್ಧ ಸೋತರು. ಈ ಸೋಲಿನ ನಂತರ ರೋಹನ್ ಬೋಪಣ್ಣ ಟೆನಿಸ್‌ಗೆ ನಿವೃತ್ತಿ ಘೋಷಿಸಿದರು. ಭಾನುವಾರ ನಡೆದ ಪಂದ್ಯದಲ್ಲಿ ಭಾರತದ ಜೋಡಿ ಫ್ರೆಂಚ್ ಜೋಡಿ ಗೇಲ್ ಮೊನ್ಫಿಲ್ಸ್ ಮತ್ತು ಎಡ್ವರ್ಡ್ ರೋಜರ್ ವಾಸೆಲಿನ್ ವಿರುದ್ಧ 5-7, 2-6 ನೇರ ಸೆಟ್‌ಗಳಲ್ಲಿ ಸೋತಿತು. ಈ ಸೋಲಿನೊಂದಿಗೆ ಪ್ಯಾರಿಸ್ ಒಲಿಂಪಿಕ್ಸ್‌ಗೆ ಭಾರತದ ಟೆನಿಸ್ ಅಭಿಯಾನ ಅಂತ್ಯಗೊಂಡಿದೆ. 1996ರ ಅಟ್ಲಾಂಟಾ ಒಲಿಂಪಿಕ್ಸ್‌ನಲ್ಲಿ ಲಿಯಾಂಡರ್ ಪೇಸ್ ಕಂಚಿನ ಪದಕ ಗೆದ್ದ ಬಳಿಕ ಭಾರತದ ಟೆನಿಸ್‌ನಲ್ಲಿ ಪದಕ ಗೆದ್ದಿಲ್ಲ. ಬೋಪಣ್ಣ 2016 ರಲ್ಲಿ ಪದಕ ಗೆಲ್ಲುವ ಸಮೀಪಕ್ಕೆ ಬಂದರು ಆದರೆ ಮಿಶ್ರ ಸ್ಪರ್ಧೆಯಲ್ಲಿ ಸಾನಿಯಾ ಮಿರ್ಜಾ ಅವರೊಂದಿಗೆ ನಾಲ್ಕನೇ ಸ್ಥಾನ ಪಡೆದರು.

ಹಿರಿಯಣ್ಣನ ಪಯಣ ಅಂತ್ಯ

ಪ್ಯಾರಿಸ್: ಇತ್ತೀಚೆಗೆ ನಡೆದ ಟೂರ್ನಿಗಳಲ್ಲಿ ಭಾರೀ ಪ್ರದರ್ಶನ ನೀಡಿ ನಿರೀಕ್ಷೆ ಮೂಡಿಸಿದ್ದ ಭಾರತದ ಟೆನಿಸ್ ಆಟಗಾರರು ನಿರಾಸೆ ಮೂಡಿಸಿದ್ದರೆ. ಟೆನಿಸ್‌ನಲ್ಲಿ ಮೊದಲ ದಿನದಾಟದಲ್ಲೇ ಭಾರತದ ಪುರುಷರ ಅಭಿಯಾನ ಅಂತ್ಯವಾಗಿದೆ. ಸಿಂಗಲ್ಸ್‌ನಲ್ಲಿ ಸುಮಿತ್ ನಗಾಲ್ ನಿರಾಶಾದಾಯಕ ಸೋಲನುಭವಿಸಿದರೆ, ಪುರುಷರ ಡಬಲ್ಸ್ ಜೋಡಿಯಾದ ಅನುಭವಿ ಆಟಗಾರ ರೋಹನ್ ಬೋಪಣ್ಣ ಮತ್ತು ಎನ್ ಆಶಿರಾಮ್ ಬಾಲಾಜಿ ಅವರು ತಮ್ಮ ಆರಂಭಿಕ ಪಂದ್ಯಗಳಲ್ಲಿ ಫ್ರಾನ್ಸ್ ವಿರುದ್ಧ ಸೋಲು ಅನುಭವಿಸಿದ್ದಾರೆ. ಆ ಮೂಲಕ ಪುರುಷರ ಟೆನಿಸ್ ಅಭಿಯಾನವು ಒಂದೇ ದಿನದಲ್ಲಿ ಅಂತ್ಯವಾಗಿದೆ. ಕನ್ನಡಿಗ ರೋಹನ್ ಭೋಪಣ್ಣ ಹಾಗೂ ಎನ್ ಆಶಿರಾಮ್ ಬಾಲಾಜಿ ಅವರ ಪಂದ್ಯವು ಈ ಹಿಂದೆ ಮಳೆಯಿಂದಾಗಿ ಮುಂದೂಡಿತ್ತು. ಆದರೆ ಇದೀಗ ಈ ಜೋಡಿ ಆಡಿದ ಮೊದಲ ಪಂದ್ಯದಲ್ಲಿ ಸೋಲನುಭವಿಸಿದ್ದಾರೆ. ಸೋಮವಾರ ನಡೆದ ಮೊದಲ ಪಂದ್ಯದಲ್ಲಿ ಅವರು ಫ್ರಾನ್ಸ್ ವಿರುದ್ಧ 7-5, 6-2 ಅಂತರದಿಂದ ಸೋತರು. ಮತ್ತೊಂದೆಡೆ ಸುಮಿತ್ ನಗಾಲ್ ಅವರು ಭಾನುವಾರ ನಡೆದ ಪಂದ್ಯದಲ್ಲಿ ಸೋಲನುಭವಿಸಿದ್ದಾರೆ.

2ನೇ ಪಂದ್ಯದಲ್ಲಿ ಭಾರತ ಡ್ರಾ

ಭಾರತಕ್ಕೆ ಸಿಹಿ-ಕಹಿ

ಪ್ಯಾರಿಸ್: ನಾಯಕ ಹರ್ಮನ್‌ಪ್ರೀತ್ ಸಿಂಗ್ ಕೊನೆಯ ನಿಮಿಷದಲ್ಲಿ ಬಾರಿಸಿದ ಗೋಲಿನಿಂದಾಗಿ ಮೊದಲ ಪಂದ್ಯದಲ್ಲಿ ಭರ್ಜರಿ ಗೆಲುವು ಸಾಧಿಸಿ ಆತ್ಮ ವಿಶ್ವಾಸ ಪಡೆದುಕೊಂಡಿದ್ದ ಭಾರತೀಯ ಹಾಕಿ ತಂಡಕ್ಕೆ ಇದೀಗ ಎರಡನೇ ಪಂದದ್ಯದಲ್ಲಿ ಸಿಹಿ-ಕಹಿ ಫಲಿತಾಂಶ ಸಿಕ್ಕಿದೆ. ಇತ್ತೀಚೆಗೆ ನಡೆದ ಹಾಕಿ ಟೂರ್ನಿಗಳಲ್ಲಿ ಭರ್ಜರಿ ಪ್ರದಶರ್ದನ ನೀಡಿತ್ತು. ಕಳೆದ ಬಾರಿ ಕಂಚು ಗೆದ್ದು ಬೀಗಿದ್ದ ಭಾರತ ತಂಡದ ಮೇಲೆ ನಿರೀಕ್ಷೆ ಇಡಲಾಗಿದೆ. ಅದರಂತೆ ಒಲಿಂಪಿಕ್ಸ್‌ನಲ್ಲಿ ಭಾರತ ಭರ್ಜರಿ ಪ್ರದರ್ಶನ ತೋರುತ್ತಿದೆ. ಸೋಮವಾರ ನಡೆದ ಒಲಿಂಪಿಕ್ಸ್‌ನಲ್ಲಿ ಪೂಲ್ ಬಿ ಗುಂಪಿನ ತಮ್ಮ ಎರಡನೇ ಪಂದ್ಯದಲ್ಲಿ ಅರ್ಜೆಂಟೀನಾ ವಿರುದ್ಧ ಭಾರತೀಯ ಪುರುಷರ ಹಾಕಿ ತಂಡವು 1-1 ಅಂತರದಲ್ಲಿ ಡ್ರಾ ಸಾಧಿಸಿದೆ.

ಭಾರತಕ್ಕೆ ಆರಂಭಿಕ ಹಿನ್ನಡೆ: ಪಂದ್ಯದ ಆರಂಭಿಕ ಹಂತದಲ್ಲಿ ಭಾರತ ಸಮಬಲ ಪೈಪೋಟಿ ಮಾಡುತ್ತಿತ್ತು. ಆದರೆ ಸಾಂಘಿಕ ಪ್ರದರ್ಶನ ತೋರಿದ ಅರ್ಜೆಂಟೀನಾ ಮೊದಲ ಗೋಲ್ ಬಾರಿಸಲು ಯಶಸ್ವಿಯಾಯಿತು. ಇದರೊಂದಿಗೆ ಭಾರತ 1-0 ಅಂಕದಿಂದ ಹಿನ್ನಡೆ ಸಾಧಿಸಿತ್ತು. ಪಂದ್ಯದ ಮಧ್ಯದಲ್ಲಿ ಹಲವು ಅವಕಾಶ ಸಿಕ್ಕರೂ ಭಾರತ ಅದನ್ನು ಬಳಸಿಕೊಳ್ಳಲಿಲ್ಲ. ಹಾಗಾಗಿ ಪಂದ್ಯದ ಕೊನೆಯವರಗೂ ಅರ್ಜೆಂಟಿನಾ ಸೋಲುವಂತೆ ಬಿಂಬಿಸುತ್ತಿತ್ತು. ಆದರೆ ಹರ್ಮನ್‌ಪ್ರೀತ್ ಸಿಂಗ್ ಅವರ ಕೊನೆಯ ಕ್ಷಣದ ಸಾಹಸವು, ಸೋಲಿನ ಕಡೆ ಮುಖ ಮಾಡಿದ್ದ ಭಾರತ ತಂಡವನ್ನು ರಕ್ಷಿಸಿತು. ಈ ಮೂಲಕ ಪಂದ್ಯಾವಳಿಯಲ್ಲಿ ಅಜೇಯ ಓಟವನ್ನು ಮುಂದುವರೆಸಿತು.

ಒತ್ತಡದಲ್ಲಿ ಸಿಲುಕಿದ್ದ ಭಾರತ: ಅರ್ಜೆಂಟೀನಾ ತಂಡ ಎರಡನೇ ಕ್ವಾರ್ಟರ್ 22ನೇ ನಿಮಿಷದಲ್ಲಿ ಲುಕಾಸ್ ಮಾರ್ಟಿನೆಜ್ ಅವರ ಫೀಲ್ಡ್ ಗೋಲ್‌ನೊಂದಿಗೆ ಮುನ್ನಡೆ ಸಾಧಿಸಿತು. ಭಾರತ ತಂಡದಿಂದ ತೀವ್ರ ಒತ್ತಡದ ನಡುವೆಯೂ ಹರ್ಮನ್‌ಪ್ರೀತ್ ಸಿಂಗ್ ಪಂದ್ಯದ ಕೊನೆಯ ಎರಡು ನಿಮಿಷಗಳಲ್ಲಿ ಸಮಬಲ ಸಾಧಿಸುವಲ್ಲಿ ಯಶಸ್ವಿಯಾದರು. ಈ ಡ್ರಾ ಹಾಕಿ ಇತಿಹಾಸದಲ್ಲಿ ಎರಡನೇ ಬಾರಿಗೆ ಭಾರತ ಮತ್ತು ಅರ್ಜೆಂಟೀನಾ ಪಂದ್ಯವನ್ನು ಟೈನಲ್ಲಿ ಕೊನೆಗೊಳಿಸಿತು. ಈ ಮೊದಲು 2004ರಲ್ಲಿ ಸಂಭವಿಸಿತ್ತು.

ಅಶ್ವಿನಿ ಜೋಡಿಗೆ ಸೋಲು

ಪ್ಯಾರಿಸ್: ಮಹಿಳೆಯರ ಡಬಲ್ಸ್ ಬ್ಯಾಡ್ಮಿಂಟನ್‌ನಲ್ಲಿ ಕನ್ನಡತಿ ಅಶ್ವಿನಿ ಪೊನ್ನಪ್ಪ ಮತ್ತು ತನಿಶಾ ಕ್ರಾಸ್ಟೊ ಜೋಡಿಯು ಗುಂಪು ಹಂತದಲ್ಲಿ ಸತತ 2ನೇ ಸೋಲು ಅನುಭವಿಸಿದ್ದು, ಹೀಗಾಗಿ ಒಲಿಂಪಿಕ್ಸ್‌ನಿಂದ ಹೊರನಡೆದಿದೆ. ಸಿ ಗುಂಪಿನ ಪಂದ್ಯದಲ್ಲಿ ಭಾರತೀಯ ಜೋಡಿಯು ವಿಶ್ವದ ನಾಲ್ಕನೇ ಶ್ರೇಯಾಂಕದ ಜಪಾನಿನ ಜೋಡಿ ಯಾದ ನಮಿ ಮತ್ಸುಯಾಮಾ ಮತ್ತು ಚಿಹಾರು ಶಿದಾ ವಿರುದ್ಧ ಸೋತರು.

ಬೆದರಿಕೆ: ತನಿಖೆ ಆರಂಭ

ಪ್ಯಾರಿಸ್: ಒಲಿಂಪಿಕ್ಸ್‌ನಲ್ಲಿ ಭಾಗವಹಿಸಿದ್ದ ಮೂವರು ಇಸ್ರೇಲಿ ಅಥ್ಲೀಟ್‌ಗಳಿಗೆ ಜೀವ ಬೆದರಿಕೆಗಳು ಬಂದಿದ್ದು, ಈ ಬಗ್ಗೆ ಫ್ರೆಂಚ್ ಪೊಲೀಸರು ತನಿಖೆ ಆರಂಭಿಸಿದ್ದಾರೆ ಎಂದು ಪ್ಯಾರಿಸ್ ಪ್ರಾಸಿಕ್ಯೂಟರ್‌ಗಳ ಕಚೇರಿ ಭಾನುವಾರ ತಿಳಿಸಿದೆ. ಸೈಬರ್ ಕ್ರೈಂ ವಿರೋಧಿ ಅಧಿಕಾರಿಗಳು ಶುಕ್ರವಾರ ಸಾಮಾಜಿಕ ನೆಟ್‌ವರ್ಕ್‌ಗಳಲ್ಲಿ ಕ್ರೀಡಾಪಟುಗಳ ವೈಯಕ್ತಿಕ ಡೇಟಾವನ್ನು ಬಿಡುಗಡೆ ಮಾಡಿದ ಬಗ್ಗೆ ತನಿಖೆ ನಡೆಸುತ್ತಿದ್ದಾರೆ. ಅದನ್ನು ತೆಗೆದುಹಾಕಲು ಪ್ರಯತ್ನಿಸುತ್ತಿದ್ದಾರೆ ಎಂದು ಪ್ರಾಸಿಕ್ಯೂಟರ್‌ಗಳು ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಆರ್ಚರಿ: ವನಿತೆಯರಿಗೂ, ಪುರುಷರಿಗೂ ಸೋಲು

ಪ್ಯಾರಿಸ್: ಒಲಿಂಪಿಕ್ಸ್‌ನಲ್ಲಿ ಭಾರತೀಯ ಆರ್ಚರಿ ಮಹಿಳಾ ತಂಡವೂ ನಿರಾಸೆ ಅನುಭವಿಸಿದೆ. ಇತ್ತೀಚೆಗೆ ನಡೆದಿದ್ದ ವಿಶ್ವಕಪ್‌ಗಳಲ್ಲಿ ಭಾರೀ ಪ್ರದರ್ಶನ ತೋರುವ ಮೂಲಕ ಸತತ ಮೂರು ವಿಶ್ವಕಪ್‌ಗಳನ್ನು ಗೆದ್ದಿದ್ದ ಮಹಿಳಾ ಆರ್ಚರಿ ತಂಡವು ಭಾರತೀಯರಲ್ಲಿ ಭರವಸೆ ಮೂಡಿಸಿತ್ತು. ಆದರೆ ಇದೀಗ ಒಲಿಂಪಿಕ್ಸ್‌ನಲ್ಲಿ ಕ್ವಾರ್ಟರ್‌ಫೈನಲ್‌ನಲ್ಲಿ ಸೋಲವ ಮೂಲಕ ನಿರಾಸೆ ಮೂಡಿಸಿದೆ.ಭಾನುವಾರ ನಡೆದ ನೆದರ್ಲೆಂಡ್ಸ್ ವಿರುದ್ಧದ ಪಂದ್ಯದಲ್ಲಿ ಮಹಿಳೆಯರು 0-6 ರಿಂದ ಸೋತಿದ್ದಾರೆ.

ಪ್ಯಾರಿಸ್: ನಿರೀಕ್ಷೆ ಮೂಡಿಸಿದ್ದ ಭಾರತದ ಪುರುಷರ ಆರ್ಚರಿ ತಂಡವು ಪ್ಯಾರಿಸ್ ಒಲಿಂಪಿಕ್ಸ್‌ನ ಸ್ಪರ್ಧೆಯಿಂದ ಹೊರಬಿದ್ದಿದೆ. ಮೊದಲ ಪಂದ್ಯಗಳಲ್ಲಿ ಭರ್ಜರಿ ಗೆಲುವು ಸಾಧಿಸಿದ್ದ ಪುರುಷರ ಆರ್ಚರಿ ತಂಡ ಕ್ವಾರ್ಟರ್‌ಫೈನಲ್‌ನಲ್ಲಿ ಸೋಲನುಭವಿಸಿದೆ. ಸೋಮವಾರ ನಡೆದ ಪಂದ್ಯದಲ್ಲಿ ಭಾರತವು ಟರ್ಕಿ ವಿರುದ್ಧ 2-6 ರಿಂದ ಹೀನಾಯ ಸೋಲನುಭವಿಸಿತ್ತು. ಆರಂಭಿಕ ಹಿನ್ನಡೆಯ ನಂತರ ಅಲ್ಪ ಪ್ರತಿರೋಧ ತೋರಿದರೂ ಟರ್ಕಿ ಆಟಗಾರರು ಅವಕಾಶ ನೀಡದೆ ಗೆಲುವು ಸಾಧಿಸಿದ್ದಾರೆ.

ಎ.ಸಿ ಕೂಡಿಸಲು ಬೇಡಿಕೆ

ಪ್ಯಾರಿಸ್: ಒಲಿಂಪಿಕ್ಸ್ ಕ್ರೀಡಾಕೂಟದಲ್ಲಿ ಒಟ್ಟು 206 ದೇಶಗಳ 10 ಸಾವಿರಕ್ಕೂ ಅಧಿಕ ಕ್ರೀಡಾಪಟುಗಳು ಭಾಗವಹಿಸಿದ್ದಾರೆ. ಈ ಬಾರಿಯ ಒಲಿಂಪಿಕ್ಸ್‌ನಲ್ಲಿ ಯಾವುದೇ ಹವಾನಿಯಂತ್ರಣ ಘಟಕಗಳನ್ನು ಸ್ಥಾಪಿಸಲಾಗಿಲ್ಲ. ಈಗ ಕ್ರೀಡಾಪಟುಗಳು ಸಂಕಷ್ಟಕ್ಕೆ ಸಿಲುಕಿದ್ದಾರೆ. ಒಂದೆಡೆ ಪ್ಯಾರಿಸ್ ಒಲಿಂಪಿಕ್ಸ್‌ನ ಕಾವೇರಿದರೆ, ಮತ್ತೊಂದೆಡೆ ಕ್ರೀಡಾಪಟುಗಳು ಬೇಸಿಗೆಯ ಬೇಗೆಯಿಂದ ಕಂಗೆಟ್ಟಿದ್ದಾರೆ. ಇದಕ್ಕೆ ಮುಖ್ಯ ಕಾರಣ ಕ್ರೀಡಾಪಟುಗಳಿಗೆ ಏರ್ ಕಂಡೀಷನ್ ಸೌಲಭ್ಯ ಒದಗಿಸದಿರುವುದು. ಅಂದರೆ ಕ್ರೀಡಾಗ್ರಾಮದಲ್ಲಿ ಎಸಿ ವ್ಯವಸ್ಥೆಯನ್ನು ಮಾಡಲಾಗಿಲ್ಲ.